ಹೈದ್ರಾಬಾದ್ ಕರ್ನಾಟಕದ ವೈಶ್ಯರ ಜಾನಪದ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ
ಕೊಟ್ರೇಶ್. ಎಸ್.

ಮಾರ್ಗದರ್ಶಕರು
ಡಾ. ಸ. ಚಿ. ರಮೇಶ್
ಪ್ರಾಧ್ಯಾಪಕರು

ಜಾನಪದ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೮

ಹೈದ್ರಾಬಾದ್ ಕರ್ನಾಟಕದ ವೈಶ್ಯರ ಜಾನಪದ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ

ಕೊಟ್ರೇಶ್. ಎಸ್.

ಮಾರ್ಗದರ್ಶಕರು

ಡಾ. ಸ. ಚಿ. ರಮೇಶ್

ಪ್ರಾಧ್ಯಾಪಕರು

ಜಾನಪದ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮

ದೃಢೀಕರಣ ಪತ್ರ

ಕೊಟ್ರೇಶ್ ಎಸ್. ಇವರು **ಹೈದ್ರಾಬಾದ್ ಕರ್ನಾಟಕದ ವೈಶ್ಯರ ಜಾನಪದ ಅಧ್ಯಯನ** ಎಂಬ ಶೀರ್ಷಿಕೆಯ ಪಿಎಚ್.ಡಿ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೨.೧೧.೨೦೦೮

(ಡಾ.ಸ.ಚಿ.ರಮೇಶ್)
ಮಾರ್ಗದರ್ಶಕರು

ಪ್ರಮಾಣ ಪತ್ರ

ಹೈದ್ರಾಬಾದ್ ಕರ್ನಾಟಕದ ವೈಶ್ಯರ ಜಾನಪದ ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾ ಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ. ಸ.ಚಿ.ರಮೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಕೊಟ್ರೇಶ್ ಎಸ್.

(ಕೊಟ್ರೇಶ್. ಎಸ್.)
ಸಂಶೋಧನಾ ವಿದ್ಯಾರ್ಥಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೨.೧೧.೨೦೦೮

[illegible]

[illegible]

[illegible]

[illegible] [illegible]

[illegible] [illegible]

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶ ವ್ಯಾಪ್ತಿ

೧.೩. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧. ಪೀಠಿಕೆ

ಮಾನವ ಸಂಘಜೀವಿ, ಸಮಾಜಜೀವಿ, ಜಗತ್ತಿನ ಜೀವ ಸಂಕುಲಗಳಲ್ಲೆಲ್ಲಾ ಅತ್ಯುನ್ನತ ಸ್ಥಾನ ಮಾನವನದು. ಆತನು ಭೌತಿಕ ಮತ್ತು ಸಾಮಾಜಿಕ ಜ್ಞಾನವನ್ನು ವಿಕಸಿಸುತ್ತಾ ರೂಢಿಸಿಕೊಂಡಿರುವುದೇ ಸಂಸ್ಕೃತಿ. ಸರಳವಾಗಿ ಹೇಳುವುದಾದರೆ ವ್ಯವಸ್ಥಿತವಾಗಿರುವ ಜನರ ಗುಂಪೇ ಸಮಾಜ. ಆ ಸಮಾಜದ ಜನರು ವರ್ತಿಸುವ, ಬದುಕುವ ರೀತಿಯೇ ಸಂಸ್ಕೃತಿ, ಜಗತ್ತಿನ ಎಂತಹ ಕಗ್ಗಂಟಾದ ಪ್ರದೇಶದಲ್ಲಿದ್ದರೂ ಮಾನವ ಜನಾಂಗ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿರುವುದು ನಿಜವಾಗಿದೆ, ಅದು ಹೊರ ನೋಟಕ್ಕೆ ಪ್ರತ್ಯಕ್ಷವಾಗಿ ಕಾಣದಿದ್ದರೂ ಪರೋಕ್ಷವಾಗಿ ಜೀವನದಲ್ಲಿ ಅಡಗಿರುತ್ತದೆ. ಜಗತ್ತಿನ ಕೋಟ್ಯಾಂತರ ಜೀವವೈವಿಧ್ಯದಲ್ಲಿ ಮನುಷ್ಯ ಪ್ರತ್ಯೇಕವಾಗಿ, ವಿಶಿಷ್ಟವಾಗಿ ಕಾಣಲು ಈ ಸಂಸ್ಕೃತಿಯೇ ಕಾರಣವಾಗಿದೆ. ಇತರೆ ಜೀವಿಗಳು ಜೈವಿಕ ಆಧಾರದಲ್ಲಿ ಸಾಮಾಜಿಕ ಸ್ವರೂಪವಿದ್ದರೆ ಮಾನವನಲ್ಲಿ ಸಮಾಜ ಜೈವಿಕತೆಗಿಂತ ಹೆಚ್ಚಾಗಿ ಸಾಂಸ್ಕೃತಿಕವಾಗಿ ಗುರುತಿಸಲಾಗುತ್ತದೆ.

ಮಾನವನ ವಿಕಾಸದ ನಂತರ ಅಲೆಮಾರಿಯಾದ, ಒಬ್ಬಂಟಿಯಾದ, ತದನಂತರದಲ್ಲಿ ಸಂಘಜೀವನ ಪ್ರಾರಂಭಿಸಿದ ಮೇಲೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘರ್ಷಗಳು ನಡೆದಿವೆ, ಸಂಘರ್ಷದಿಂದಾಗಿ ಅನೇಕ ಬದಲಾವಣೆಗಳಾಗಿವೆ, ಭಾರತದಂತಹ ದೇಶದಲ್ಲಿ ಅನೇಕ ಸಮುದಾಯಗಳು ವಾಸಿಸುತ್ತಿವೆ. ಈ ಮಣ್ಣಿನಲ್ಲಿ ಹುಟ್ಟಿ ಬೆಳೆದ ಮೂಲ ನಿವಾಸಿಗಳಿದ್ದಾರೆ, ಹೊರದೇಶದಿಂದ ಬಂದು ಇಲ್ಲಿನ ಸಂಸ್ಕೃತಿಗೆ ಹೊಂದಿಕೊಂಡವರಿದ್ದಾರೆ. ಈ ದೇಶದಲ್ಲಿ ಯಾವುದೇ ಜನಾಂಗದ ಅಧ್ಯಯನವು ಸಂಕೀರ್ಣ ಸ್ವರೂಪದ್ದಾಗಿರುತ್ತದೆ, ಇಲ್ಲಿಯ ಜನರು ಅನೇಕ ಭಾಷೆ, ಜಾತಿ, ಧರ್ಮ, ವೃತ್ತಿಗಳಿಗೆ ಸೇರಿದವರಾಗಿದ್ದಾರೆ. ಭಾರತದ ಉತ್ತರದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ಪ್ರಾದೇಶಿಕ ಭಿನ್ನತೆಯಿಂದಾಗಿ ಅನೇಕ ಜನ ಸಮುದಾಯಗಳು ವೈವಿಧ್ಯತೆಯನ್ನು ಹೊಂದಿವೆ.

ಪ್ರತಿಯೊಂದು ಸಮುದಾಯ ಜಾತಿಗಳಲ್ಲಿ ಸಾಮ್ಯವಿರುವಂತೆ ಕಂಡು ಬಂದರೂ ಅನೇಕ ವ್ಯತ್ಯಾಸಗಳಿವೆ. ತಮ್ಮದೇ ಆದ ಅನನ್ಯತೆಗಳಿವೆ. ಇದಕ್ಕೆ ಕಾರಣ ಭೌಗೋಳಿಕ ಪರಿಸರ, ಭಾಷೆ, ವೃತ್ತಿ ಮುಂತಾದವು. ಇಲ್ಲಿಯ ಜಾತಿಯ ವ್ಯವಸ್ಥೆಯು ಅತ್ಯಂತ ಜಟಿಲವಾಗಿದೆ, ಮಾನವನ ಉಗಮದ ಬಗ್ಗೆ ಡಾರ್ವಿನ್‌ನ ವಿಕಾಸವಾದ

ವೈಜ್ಞಾನಿಕವಾಗಿ ಸ್ಪಷ್ಟಪಡಿಸುತ್ತದೆ. ಸೂಕ್ಷ್ಮಾಣುವಿನಿಂದ ಅನೇಕ ಜೀವಿಗಳ ಸೃಷ್ಟಿನಂತರ ಮಾನವನ ಸೃಷ್ಟಿಯಾಯಿತು. ಆದರೆ ಜಾತಿಯ ಉಗಮದ ಬಗ್ಗೆ ಖಚಿತ ಆಧಾರಗಳಿಲ್ಲ. ಮೂಲ ನಿವಾಸಿಗಳಿಗೂ ವಿದೇಶಿಯರಿಗೂ ಮುಖಾ ಮುಖಿಯಾದಾಗ ಜಾತಿಪದ್ಧತಿಗೆ ನಾಂದಿ ಹಾಡಿರಬೇಕು. ಭಾರತದಲ್ಲಿ ಜಾತಿ ವ್ಯವಸ್ಥೆ ಏಣಿಶ್ರೇಣಿಯಿಂದ ಕೂಡಿದೆ. ಅತ್ಯಂತ ಕೆಳಸ್ತರದಲ್ಲಿ ಹಿಂದುಳಿದ ಜಾತಿ, ಬುಡಕಟ್ಟುಗಳು ಬರುತ್ತವೆ. ಜಾತಿಯ ಬಗ್ಗೆ ವೇದಗಳಲ್ಲಿ ಸ್ಪಷ್ಟವಾಗಿ ಗುರುತಿಸಿದ್ದಾರೆ. ಋಗ್ವೇದದ ಕಾಲದಲ್ಲಿರುವ ಬ್ರಾಹ್ಮಣ, ಕ್ಷತ್ರಿಯ ಎಂಬ ಎರಡು ಜಾತಿಗಳು ನಂತರ ಪುರುಷ ಸೂಕ್ತದಲ್ಲಿ 'ವೈಶ್ಯ', ಶೂದ್ರ ಎಂಬ ಇನ್ನೆರಡು ವರ್ಗಗಳು ಸೇರಿದವು. ಸೃಷ್ಟಿಕರ್ತನ ಒಂದೊಂದು ಅಂಗದಿಂದ ಒಂದು ಜಾತಿ ಸೃಷ್ಟಿಯಾಯಿತು ಎಂದು ತೈತ್ತೀರಿಯಾದ ಕಲ್ಪನೆ ಚಾತುರ್ವರ್ಣದಲ್ಲಿ ಅಸಮಾನತೆಯನ್ನು ಹುಟ್ಟುಹಾಕಿತೆಂದು ಕಾಣುತ್ತದೆ. ಸೃಷ್ಟಿಕರ್ತನ ಮುಖದಿಂದ ಬ್ರಾಹ್ಮಣ, ಭುಜದಿಂದ ಕ್ಷತ್ರಿಯ, ಹೊಟ್ಟೆಯಿಂದ ವೈಶ್ಯ, ಕಾಲಿನಿಂದ ಶೂದ್ರ ಜನಿಸಿದರೆಂಬ ವಿವರಣೆಯಿದೆ. ಆದರೆ ಶೂದ್ರವರ್ಗದ ನಂತರದ ಜಾತಿಗಳ ಪ್ರಸ್ತಾಪವಿಲ್ಲ. ಜಾತಿಯ ಬಗೆಗಿನ ಉಲ್ಲೇಖವನ್ನು ಕ್ರಿ.ಪೂ.೨೦೦ ದಲ್ಲಿ ಚಂದ್ರಗುಪ್ತನ ಆಸ್ಥಾನಕ್ಕೆ ರಾಯಬಾರಿಯಾಗಿ ಬಂದಿದ್ದ ಮೆಗಸ್ತಾನೀಸನು ಭಾರತದಲ್ಲಿ ಏಳು ಜಾತಿಗಳಿವೆ ಯೆಂಬುದನ್ನು ಹೇಳಿದ್ದಾನೆ. ಈ ಜಾತಿಗಳಲ್ಲಿ ಪರಸ್ಪರ ಸಹಭೋಜನ ಕೊಡು ಕೊಡುಗೆಗಳು ನಿಷಿದ್ಧವೆಂದು ಹೇಳಿದ್ದಾನೆ. ಬೇರೆ ವಿಷಯಗಳ ಪ್ರಸ್ತಾಪವಿಲ್ಲ.

ಕೆಲದಶಕಗಳಿಂದೀಚೆಗೆ ಕರ್ನಾಟಕದಲ್ಲಿ ಸಂಸ್ಕೃತಿ ಅಧ್ಯಯನ ಕುರಿತು ಅನೇಕ ಅಧ್ಯಯನಗಳು ನಡೆದಿವೆ. ಈಗಲೂ ನಡೆಯುತ್ತಲೇ ಇವೆ. ಇದೊಂದು ಮಹತ್ವದ ಬೆಳವಣಿಗೆಯಾಗಿದೆ. ಜನಾಂಗಗಳ ಜೀವನ ಕ್ರಮವನ್ನು ಕುರಿತ ಅಧ್ಯಯನ ಬಹಳ ಜಟಿಲವಾದುದು. ಕಾರಣ ಭೌಗೋಳಿಕ ವಿನ್ಯಾಸವೇ ಅನೇಕ ಸಮಸ್ಯೆಗಳನ್ನು ಸೃಷ್ಟಿ ಮಾಡುತ್ತದೆ. ಇಂದು ಒಂದು ಜನಾಂಗವು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ವಲಯ ಗಳಲ್ಲಿ ಬದಲಾವಣೆ ಒಂದು ಸಹಜ ಪ್ರಕ್ರಿಯೆ. ಆದರೆ ಒಂದು ಜನಾಂಗದ ಸಂಸ್ಕೃತಿ ಬೇರೊಂದು ಜನಾಂಗದ ಸಂಸ್ಕೃತಿಗಿಂತ ಬೇರೆಯಾಗಿರುತ್ತದೆ. ಒಂದು ವ್ಯಕ್ತಿಯ ಅಂತರಂಗದ ನೆಲೆಗಳನ್ನು ಕೇಂದ್ರವಾಗಿಟ್ಟುಕೊಂಡು ವ್ಯಾಖ್ಯಾನಗಳು ಸಂಸ್ಕೃತಿಯನ್ನು ಹಳೆಯ ಆಕೃತಿಗಳಾಗಿ ಸ್ವೀಕರಿಸುವುದುಂಟು. ಎರಡನೆಯದು ವ್ಯಕ್ತಿಯ ಬಹಿರಂಗ ನೆಲೆಯನ್ನು ಪ್ರಧಾನವಾಗಿ ಪರಿಗಣಿಸಿದ ವ್ಯಾಖ್ಯಾನಗಳು ವಸ್ತು ಸಂಸ್ಕೃತಿಯ ವಿವರಗಳನ್ನು ಒಳ ಗೊಂಡಿರುತ್ತದೆ.

ಜನಾಂಗಗಳ ಸಾಂಸ್ಕೃತಿಕ ಇತಿಹಾಸವನ್ನು ಗುರುತಿಸುವಾಗ ಪ್ರಮುಖವಾಗಿ ಲಿಖಿತ ಆಕರಗಳು ಮತ್ತು ಮೌಖಿಕ ಆಕರಗಳನ್ನು ಆಧರಿಸಿಕೊಳ್ಳಬೇಕಾಗುತ್ತದೆ. ನಾಗರಿಕ ಲೇಖಕರು ಹೇಳಲು ಧೈರ್ಯ ಮಾಡಿರುವ ಅಮುಖ್ಯವೆಂದು ಕೈ ಬಿಟ್ಟಿರಬಹುದಾದ ಅನೇಕ ಮುಖ್ಯ ಸಂಗತಿಗಳನ್ನು ಜಾನಪದರು ಎಷ್ಟೇ ವ್ಯತ್ಯಾಸವಾದರೂ ಧ್ವನಿರೂಪದಲ್ಲಿ ಆಚರಣೆಯ ರೂಪದಲ್ಲಿ ರಕ್ಷಿಸುತ್ತಾ ಬಂದಿದ್ದಾರೆ. ಇವುಗಳನ್ನು ಇತಿಹಾಸ ಪುನರಚನಾ ಪ್ರಸಂಗದಲ್ಲಿ ಆಧಾರ ಸಾಮಗ್ರಿಯೆಂದು ಎಚ್ಚರಿಕೆಯಿಂದ ಬಳಸಿಕೊಂಡು ಇತಿಹಾಸ ಬರೆಯುವ ಕಂಠಸ್ಥ

ಇತಿಹಾಸಕಾರರ ತಂಡವೆ ಇಂದು ಬೆಳೆದು ಬರಬೇಕಾಗಿದೆ"(ಕಲಬುರ್ಗಿ ಎಂ.ಎಂ., ೧೯೧೬ ಪು. ೬೨). ಮೌಖಿಕ ಆಕರ ಅಂದರೆ ಕಂಠಸ್ಥ ಆಕರ ಎಷ್ಟು ಪ್ರಮುಖವಾದುದು ಮತ್ತು ಸಂಶೋಧಕ ಹೇಗೆ ಬಳಸಿಕೊಳ್ಳಬೇಕು ಎಂದು ಎಚ್ಚರಿಸಿದ್ದಾರೆ. ಇಲ್ಲಿ ಲಿಖಿತ ಆಕರಗಳಿಗಿರುವಷ್ಟೇ ಪ್ರಾಮುಖ್ಯತೆ ಮೌಖಿಕ ಆಕರಗಳಿಗಿದೆ. ಇಲ್ಲಿಯ ಗ್ರಹಿಕೆಗಳೆಲ್ಲಾ ಶಿಷ್ಟ ಪರಂಪರೆ ಎಂದು ಪರಿಗಣಿತವಾಗಿರುವ ಪುರೋಹಿತಶಾಹಿ ಮತ್ತು ಪಾಶ್ಚಾತ್ಯ ವಸಾಹತುಶಾಹಿ ಮನೋಧರ್ಮದಿಂದ ಗ್ರಹಿಸಿರುವಂತಹದ್ದಾಗಿದೆ. ನಮ್ಮಲ್ಲಿಯ ಇತಿಹಾಸ ಅಧ್ಯಯನವೆಂದರೆ ಪುರಾಣ, ಉಪನಿಷತ್ತು, ವೇದ ಸ್ಮೃತಿಗಳು ಮತ್ತು ಕಾವ್ಯಗಳು ಇವುಗಳ ಆಧಾರದಿಂದಲೇ ಅಧ್ಯಯನವನ್ನು ಮಾಡಬೇಕಾಗಿತ್ತು. ಇವು ಒಂದು ನಿರ್ಧಿಷ್ಟ ಜನರ ಆಶಯ ಆಕಾಂಕ್ಷೆಯನ್ನು ಮತ್ತು ಒಳಿತನ್ನು ಪ್ರತಿಬಿಂಬಿಸುತ್ತವೆಯೇ ಹೊರತು ಸಮಷ್ಠಿಯನ್ನಲ್ಲ, ಇದಕ್ಕೆ ಮುಖ್ಯ ಕಾರಣ ವಿದ್ಯೆಯ ಕೇಂದ್ರೀಕರಣ ಮತ್ತು ಅದು ಪರರಿಗೆ ಸೇರಬಾರದೆಂಬ ಗೌಪ್ಯ ಸಂರಕ್ಷಣೆ. ಈ ರೀತಿಯ ವ್ಯವಸ್ಥೆ ಭಾರತದ ಬಹುದೊಡ್ಡ ಜನ ಸಮೂಹವನ್ನು ಶಿಕ್ಷಣದಿಂದ ದೂರವಿರಿಸಿತು. ಇದರಿಂದಾಗಿ ಈ ಜನ ಸಮೂಹ ಆ ಸಾಹಿತ್ಯದಲ್ಲಿ ಏನಿದೆ ಎಂಬುದನ್ನು ತಿಳಿಯುವ ಅವಕಾಶವೇ ಇಲ್ಲದಾಯಿತು. ಅವುಗಳನ್ನೆಲ್ಲಾ ಭಯ ಭಕ್ತಿಯಿಂದ ನೋಡುವ ಸ್ಥಿತಿ ನಿರ್ಮಾಣವಾಯಿತು. ಈ ದೂರವಿರಿಸುವ ಕ್ರಮದಿಂದಾಗಿ ನಮ್ಮ ಜನ ಸಮೂಹದ ಮೌಖಿಕ ಸಾಹಿತ್ಯ ಸಂಪತ್ತು ಬೃಹದಾಕಾರವಾಗಿ ಬೆಳೆಯಲು ಕಾರಣವಾಯಿತು. ಹಾಗೂ ಸಂಸ್ಕೃತಿಯಲ್ಲಿ ಕಲಬೆರಕೆಯ ಪ್ರಮಾಣ ಕಡಿಮೆಯಾಯಿತೇನೋ ಎನ್ನಬಹುದು. ಸಮುದಾಯಗಳು ಉಳಿಯಲು ಬೆಳೆಯಲು ಕಾರಣವಾಯಿತು. ಶಿಷ್ಟ ಪರಂಪರೆಯ ಆಕರಗಳಲ್ಲಿ ಸಾಮಾನ್ಯ ಜೀವನ ವಿಧಾನವನ್ನು ಪ್ರತಿಪಾಧಿಸಿದರೆ ಅತೀತವಾದ ವಿಧಾನ ಮತ್ತು ಮೌಲ್ಯಗಳನ್ನು ಪ್ರತಿಪಾದಿಸಿದವು. ತೈತ್ತೇರಿಯೋಪನಿಷತ್ತಿನಲ್ಲಿ ಅವಾಸ್ತವದ ಜಾತಿಗಳ ಹುಟ್ಟಿನ ಕಥೆ ಹೆಣೆಯಲಾಗಿದ್ದು ಬರಿ ಅಸತ್ಯಗಳ ಅವೈಜ್ಞಾನಿಕ ಚಿಂತನೆಗಳ, ಶಿಷ್ಟ ಪರಂಪರೆಯ ಪ್ರತಿಪಾದನೆಗಳಾಗಿವೆ. ತಲೆಯಿಂದ ಹುಟ್ಟಿದವರ ವೃತ್ತಿ ಮತ್ತು ಅವರಿಂದ ಸೃಷ್ಟಿಯಾದ ಸಾಹಿತ್ಯಗಳು ಒಂದಕ್ಕೊಂದು ಸಂಬಂಧವಿದೆ. ಇಹಪರ ಕಲ್ಪನೆಯ ಸಾಹಿತ್ಯವೇ ಅಂದಿನ ಕಾಲದ ವಿಶಿಷ್ಟತೆಗಳು. ಜನ ಸಾಮಾನ್ಯ ಮತ್ತು ಶಿಷ್ಟರ ಮಧ್ಯೆ ಒಂದು ದೊಡ್ಡ ಕಂದರವೇ ಏರ್ಪಟ್ಟಿತ್ತು. ಇದಕ್ಕೆ ಕಾರಣ ಅಂದಿನ 'ರಾಜ ವ್ಯವಸ್ಥೆ' ರಾಜನ ಆಸ್ಥಾನದ ಕವಿ ಇತಿಹಾಸಕಾರರೆಲ್ಲಾ ರಾಜನ ಸುತ್ತ ಗಿರಕಿ ಹೊಡೆದ ಜನಸಾಮಾನ್ಯನ ಬದುಕಿನ ಮೌಲ್ಯಗಳಿಗೆ ಯಾವುದೇ ಮನ್ನಣೆಗಳನ್ನು ಕೊಡದಿರುವುದನ್ನು ಕಾಣುತ್ತೇವೆ. ಇತಿಹಾಸದುದ್ದಕ್ಕೂ ಯುದ್ಧ, ದರ್ಭಾರಿನ ವೈಭವ. ರಾಜನನ್ನು ನಾಯಕನನ್ನಾಗಿ ಇಟ್ಟುಕೊಂಡ ಸಾಹಿತ್ಯ ಮುಂತಾದ ಚಿತ್ರಣಗಳನ್ನು ಕಾಣುತ್ತೇವೆ. ಜನಪದರ ಸಂಸ್ಕೃತಿಗೆ ಅಲ್ಲಿ ಸ್ಥಾನಮಾನಗಳೇನು? ಇವರ ಮೌಖಿಕ ಸಾಹಿತ್ಯದ ವಿಶಿಷ್ಟತೆಗಳೇನು ಎಂಬ ಚಿಂತನೆ ಎಲ್ಲೂ ಕಂಡು ಬರುವುದಿಲ್ಲ.

ಜಾನಪದದಲ್ಲಿ ಯಾವುದೇ ಸಂಸ್ಕೃತಿಯ ಬಗೆಗಿನ ಕಲ್ಪನೆಯನ್ನು ಇಟ್ಟುಕೊಳ್ಳದೇ ಜಾತಿಗಳ ಅಧ್ಯಯನದ ಮೂಲಕ ಒಂದು ಸಂಸ್ಕೃತಿಯ ಚಿತ್ರಣವನ್ನು ನೀಡಲು ಪ್ರಯತ್ನಿಸಲಾಗುತ್ತದೆ. ಈ ರೀತಿಯ ಅಧ್ಯಯನ

ಇಂದು ಅನಿವಾರ್ಯ ಮತ್ತು ಅಗತ್ಯವಾಗಿ ಆಗಬೇಕಾದುದು, ಏಕೆಂದರೆ ಏಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಾವು ಮಾತನಾಡಿದಾಗ ಹಲವಾರು ಜಾತಿಗಳ ಮೌಲ್ಯಗಳನ್ನೇ ಕಡೆಗಣಿಸುತ್ತೇವೆ, ಮತ್ತು ಏಕ ಸಂಸ್ಕೃತಿಯ ಕಲ್ಪನೆ ಭಾರತದಲ್ಲಿ ಹಲವಾರು ಸಂಸ್ಕೃತಿಗಳ ತಿರಸ್ಕಾರಕ್ಕೂ ಕಾರಣವಾಗುತ್ತದೆ. ಭಾರತದಲ್ಲಿ ಸಂಸ್ಕೃತಿ ಮತ್ತು ರಾಷ್ಟ್ರೀಯತೆಗಳ ಕಲ್ಪನೆಯಲ್ಲಿ ಇಂದು ಗಂಭೀರವಾದ ಚಿಂತನೆಗಳು ನಡೆಯುತ್ತಿರಬೇಕಾದರೆ ಈ ರೀತಿಯ ಕೆಳ ಸಂಸ್ಕೃತಿಗಳ ಅಧ್ಯಯನ, ಅವುಗಳಿಗೊಂದು ಪರಿಹಾರವನ್ನು ಸೂಚಿಸಲು ಸಮರ್ಥವಾಗುತ್ತದೆ. ಬೃಹತ್ ನಾಗರೀಕತೆಗಳನ್ನು ಸಂಕೀರ್ಣವಾದ ಸಂಸ್ಕೃತಿಯನ್ನು ಪಡೆದಿರುವ ಸಮಾಜಗಳಲ್ಲಿ ಮೂಲಭೂತ ಸಾಮಾಜಿಕ ಅಂಶಗಳೂ ಆಳದಲ್ಲಿ ಮರೆಯಾಗಿ ಅಡಗಿ ಕುಳಿತಿರುತ್ತವೆ. ಸರಳ ಹಾಗೂ ಮಿತವಾದ ಜನಾಂಗಗಳಲ್ಲಿ ಈ ಸಾಮಾಜಿಕ ಸಂಗತಿಗಳು ಸ್ಫುಟವಾಗಿ ನಿಚ್ಚಳವಾಗಿ ಕಂಡು ಬರುತ್ತದೆ. ಸರಳ ಸಮಾಜಗಳಲ್ಲಿ ಸಾಮಾಜಿಕ ಜೀವನ, ಅದರ ನಡೆ, ಹಿಂಜರಿಕೆ, ಏಳು-ಬೀಳುಗಳು ಇವೆಲ್ಲವನ್ನು ಗುರುತಿಸಿಕೊಳ್ಳಬಹುದು. ಜನಾಂಗಗಳ ಅಧ್ಯಯನದಿಂದ ಸಮಾಜಗಳು ರೂಢಿಸಿಕೊಂಡಿರುವ ಸಂಸ್ಕೃತಿ ಮತ್ತು ಸಮಾಜ ವ್ಯವಸ್ಥೆಗಳ ವೈಶಿಷ್ಟ್ಯಗಳನ್ನು ಗುರುತಿಸಬಹುದು. ಬೇರೆ ಬೇರೆ ಸಮಾಜಗಳ ಜೀವನದ ಮಹತ್ವದ ನಡುವಿನ ಸಂಬಂಧ ನೋಡಬಹುದಾಗಿದೆ.

ಭಾರತೀಯ ಜನಾಂಗಗಳ ಮೇಲೆ ಆಧುನಿಕತೆಯ ಪರಿಣಾಮಗಳ ಅಧ್ಯಯನ ಬಹಳ ಮುಖ್ಯವಾದುದು. ಜನಾಂಗಗಳು ಆಧುನಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುವುದರಿಂದ ಅನೇಕ ಬದಲಾವಣೆಗಳನ್ನು ನೋಡಬಹುದಾಗಿದೆ, ಇದಕ್ಕೆಲ್ಲಾ ಕಾರಣ ಮನುಷ್ಯ ಇತರ ಜೀವಿಗಳಿಗಿಂತ ಭಿನ್ನವಾಗಿದ್ದಾನೆ. ಈತ ಸಂಸ್ಕೃತಿ ಮತ್ತು ಸಮಾಜವನ್ನು ರೂಢಿಸಿಕೊಂಡಿರುವುದರಿಂದ ಪಲ್ಲಟಗಳು ಅನಿವಾರ್ಯವಾಗಿದೆ. ಅನೇಕ ಬಗೆಯ ಸಂಸ್ಕೃತಿಯನ್ನು ಬೇರೆ ಬೇರೆ ಗುಣ ಲಕ್ಷಣಗಳನ್ನು ಹೊಂದಿದ ಜನಾಂಗಗಳಿವೆ. ಎಲ್ಲಾ ಸಂಸ್ಕೃತಿಗಳು ವೈವಿಧ್ಯಮಯ ವಿಭಿನ್ನತೆಗಳನ್ನು ಹೊಂದಿರುವುದು ಒಂದು ವಿಶೇಷ ಎನ್ನಬಹುದು.

ಪಾಶ್ಚಾತ್ಯರು ಭಾರತಕ್ಕೆ ಬರುವ ಮುಂಚೆ ಇಲ್ಲಿ ಜನಪದ ಸಂಸ್ಕೃತಿಯ ಬಗೆಗೆ ಇದ್ದ ಪೂರ್ವಾಗ್ರಹಗಳು ಬ್ರಿಟೀಷರ ಆಗಮನದಿಂದ ಏನೇನು ಬದಲಾಗಲಿಲ್ಲ. ಇವರ ಆಳ್ವಿಕೆಯೊಂದಿಗೆ ಅಲ್ಲಿಯ ಶಿಕ್ಷಣ, ನ್ಯಾಯ ಪದ್ಧತಿ, ಆಡಳಿತ ಪದ್ಧತಿ ಎಲ್ಲವನ್ನೂ ತಂದರು. ಬ್ರಿಟಿಷರು ಭಾರತದಲ್ಲಿ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಿದರು. ಅವರ ಮೂಲ ಉದ್ದೇಶವೇ ಬೇರೆಯಾಗಿತ್ತು. ಅವರ ಆಡಳಿತಕ್ಕೆ ಕಾರಕೂನರ ಅಗತ್ಯತೆ ಕಾರಣವಾಗಿತ್ತು. ಈ ವಿದ್ಯಾಭ್ಯಾಸಕ್ಕೆ ಮೊದಲು ಪ್ರವೇಶ ಪಡೆದವರು ಬ್ರಾಹ್ಮಣರು. ಇವರ ಮೂಲಕ ಆಡಳಿತ ನಿಯಂತ್ರಣ ಮಾಡುವುದು ಸುಲಭವಾಗಿತ್ತು. ಕೆಳವರ್ಗಗಳು ಇದರಿಂದ ವಂಚಿತವಾದವು. ಈ ವರ್ಗಗಳು ಸಮಾಜದ ಪ್ರಮುಖವಾಹಿನಿಗೆ ಬರಲಾಗಲಿಲ್ಲ. ವೈಶ್ಯ ಜನಾಂಗದವರ ಇತಿಹಾಸ ಕೆದಕಿದರೆ ಇವರಲ್ಲಿ ಹೆಚ್ಚಾಗಿ ವಿದ್ಯಾವಂತರನ್ನು ಕಾಣಬಹುದು. ವ್ಯಾಪಾರದ ದೃಷ್ಟಿಯಿಂದ ಪ್ರತಿಯೊಂದು ಕುಟುಂಬದಲ್ಲಿಯೂ ಒಬ್ಬರಿಬ್ಬರು ಅಕ್ಷರಸ್ಥರು ಇದ್ದೇ ಇರುತ್ತಾರೆ.

ಬ್ರಿಟಿಷ್ ಶಿಕ್ಷಣ ಪದ್ಧತಿ ಸೀಮಿತ ದೃಷ್ಟಿಕೋನ ಹೊಂದಿತ್ತು. ಶಿಕ್ಷಣ ಪದ್ಧತಿಯಲ್ಲಿ ಶಿಷ್ಟ ಪರಂಪರೆಯ ಸಾಹಿತ್ಯವಿತ್ತು ವಿನಃ ಸಾಂಸ್ಕೃತಿಕ ಮಹತ್ವ ಇರಲಿಲ್ಲ. ಜನಪದ ಸಂಸ್ಕೃತಿಯ ಭಾಗಗಳು ಶಿಕ್ಷಣದಲ್ಲಿ ಶಿಸ್ತೀಯ ಅಧ್ಯಯನಕ್ಕೆ ಒಳಪಡಲಿಲ್ಲ, ಪರಿಚಯಿಸುವ ಉದ್ದೇಶವು ಯಾರಿಗೂ ಇರಲಿಲ್ಲ. ಆದರೆ ಕೆಲ ಆಂಗ್ಲ ಅಧಿಕಾರಿಗಳು ಜನಾಂಗದ ಪೂರ್ವಾಪರದ ಬಗ್ಗೆ ಆಸಕ್ತಿಯನ್ನು ಹೊಂದಿದ್ದರು. ಸ್ವಾತಂತ್ರ್ಯ ಶಿಕ್ಷಣ ಕೂಡ, ವಸಾಹತುಶಾಹಿ ಮನೋಧರ್ಮದ ಶಿಕ್ಷಣ ಮುಂದುವರೆಯುತ್ತಾ ಬಂದಿದೆ. ಈ ಪದ್ಧತಿಯಿಂದ ಹೊರ ಬರದೆ ಪುರೋಹಿತಶಾಹೀ ಮೌಲ್ಯಗಳನ್ನು ಒಳಗೊಂಡ ವಸಾಹತುಶಾಹಿ ಶಿಕ್ಷಣ ಮುಂದುವರೆದು ಭಾರತದ ರಾಷ್ಟ್ರೀಯತೆ ಮತ್ತು ಸಾಂಸ್ಕೃತಿಕ ಅನನ್ಯತೆಯ ಪ್ರಶ್ನೆಗಳು ಉದ್ಭವಿಸುವಂತೆ ಮಾಡಿದವು. ಭಾರತದಲ್ಲಿ ಈ ಎರಡು ಪರಂಪರೆಗಳು ಭಾರತೀಯ ಸಾಮಾಜಿಕ ಮತ್ತು ಬೌದ್ಧಿಕ ನೆಲೆಗಳ ಮೇಲೆ ಅಪಾರ ಪರಿಣಾಮವನ್ನುಂಟು ಮಾಡಿ ಭಾರತದ ಒಳಗಡೆ ಇರುವ ಸಂಸ್ಕೃತಿಗಳನ್ನು ನೋಡುವಿಕೆಯಲ್ಲಿ ಒಂದು ಸೀಮಿತ ದೃಷ್ಟಿಕೋನವನ್ನು ತಂದು ಕೊಟ್ಟವು. ಜನಾಂಗಗಳ ಅಧ್ಯಯನವನ್ನು ಪ್ರತಿಯೊಂದು ಜನಾಂಗಗಳ ಸಂಸ್ಕೃತಿ ತಿಳಿಯುವುದಕ್ಕಾಗಿ ಮತ್ತು ಒಟ್ಟಾರೆ ಮಾನವ ಸಂಸ್ಕೃತಿಯ ಸ್ವರೂಪವೇನು ಎಂಬುದನ್ನು ತಿಳಿಯುವ ಉದ್ದೇಶದಿಂದ ಮಾಡಲಾಗುತ್ತದೆ. ಅಧ್ಯಯನದಿಂದ ಸಂಸ್ಕೃತಿಯ ಸ್ವರೂಪ ಕಾರ್ಯ ವ್ಯಾಪ್ತಿಯನ್ನು ಅರಿಯಲು ಸಾಧ್ಯ.

ಶಿಷ್ಟ ಸಾಹಿತ್ಯ ಪರಂಪರೆಯು ಮೇಲ್ವರ್ಗ ಮತ್ತು ರಾಜ ಮಹಾರಾಜರುಗಳ ಭವ್ಯ ಭೋಗದ ನೆಲೆಯಲ್ಲಿ ಸೃಷ್ಟಿಯಾಗಿ, ಅವರನ್ನೇ ಉದಾತ್ತೀಕರಿಸುವ ಕೆಲಸವನ್ನು ಮಾಡಿವೆ. ಅಲ್ಲಿ ಜನ ಸಾಮಾನ್ಯರ ಜೀವನದ ರೀತಿ ನೀತಿಗಳ, ಸಾಹಿತ್ಯ ಸಂಸ್ಕೃತಿಗಳ ಉಲ್ಲೇಖಗಳು ದೊರೆಯುವುದಿಲ್ಲ. ಆದುದರಿಂದಲೇ ನಮ್ಮ ಸಾಹಿತ್ಯಗಳಲ್ಲೇ ಒಂದು ವರ್ಗದ ಮನೋವೃತ್ತಿಯನ್ನು ತಿಳಿಸುವ ಸಾಹಿತ್ಯ ಮತ್ತು ಸಂಸ್ಕೃತಿಗಳಾಗಿ ಪರಿಗಣಿತವಾಗಿದೆ. ಇದಕ್ಕೆ ಆಧಾರವಾಗಿ ನಮ್ಮಲ್ಲಿ ದೊರೆಯುವ ಶಾಸನಗಳನ್ನು ಕೂಡಾ ನೀಡಬಹುದು. ಈ ಶಾಸನಗಳೆಲ್ಲ ಮುಖ್ಯವಾಗಿ ಯುದ್ಧ, ಬಲಿದಾನ, ತ್ಯಾಗ ದಾನಗಳಿಗೆ ಸಂಬಂಧಪಟ್ಟಿರುವವುಗಳು. ಜನಸಾಮಾನ್ಯರಲ್ಲಿ ಯಾರಾದರೊಬ್ಬರು ಅಸಮಾನ್ಯ ಸಾಧನೆಯನ್ನು ಮಾಡಿ ಪ್ರಾಣ ತ್ಯಾಗವನ್ನು ಮಾಡಿದರೆ ಅವರ ಬಲಿದಾನದ ಕುರಿತಾದ ಉಲ್ಲೇಖ ಸಿಗುತ್ತದೆಯೇ ಹೊರತು ಅವನ ತ್ಯಾಗದ ಹಿಂದಿನ ಮನಸ್ಸನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಕ್ಕೆ ತೊಡಗಲಿಲ್ಲ. ಹೀಗೆ ದೇಶದ ಇತಿಹಾಸ, ಸಾಹಿತ್ಯ ಶಾಸನಗಳಲ್ಲಿ ಕೇವಲ ಒಂದು ಪಾರ್ಶ್ವದ ದಾಖಲೆಗಳಾಗಿವೆ. ಈ ರೀತಿಯ ಜೀವನಕ್ಕೆ ಭಿನ್ನವಾಗಿ ಬದುಕಿದ ಜನ ಅನಾದಿ ಕಾಲದಿಂದಲೂ ಇದ್ದರು. ಅವರ ಜೀವನ ಚರಿತ್ರೆಯನ್ನಾಗಲಿ, ಅವರ ಸಾಹಿತ್ಯವನ್ನಾಗಲಿ ಅವರ ಸಂಸ್ಕೃತಿಯನ್ನಾಗಲೀ ಗಮನಿಸಿದಂತೆ ಕಂಡು ಬರುವುದಿಲ್ಲ. ಈ ಕಡೆಗಣಿಸಿರುವ ಸಂಸ್ಕೃತಿಯನ್ನು ಅರಿಯಬೇಕಾದರೆ ನಾವಿಂದು ಜನರ ಬದುಕಿನ ಕಡೆಗೆ ನೋಡಬೇಕಾಗಿದೆ. ಅಲ್ಲಿ ಅವರು ಬದುಕಿರುವುದು ಬದುಕುತ್ತಿರುವುದು ವಾಸ್ತವ. ಆ ವಾಸ್ತವದ ಮುಖವನ್ನು ಪರಿಚಯ ಮಾಡಿಕೊಳ್ಳಬೇಕಾದರೆ ಭಾರತದಲ್ಲಿ ಕಡೆಗಣಿಸಲ್ಪಟ್ಟ ಜಾತಿಗಳ ಸಾಂಸ್ಕೃತಿಕ ಅಧ್ಯಯನವನ್ನು ಮಾಡಬೇಕಾಗು ತ್ತದೆ. ಪರಂಪರಾಗತವಾಗಿ ಹರಿದು ಬಂದಿರುವ ಈ ಸಂಸ್ಕೃತಿ, ಸಂಪ್ರದಾಯ ಬಗೆಗಿನ ಕಲ್ಪನೆಗಳೇ ಬೇರೆಯಾಗು

ತ್ರವೆ ಮತ್ತು ಮೇಲ್ಜಾತಿಯ ಸಂಸ್ಕೃತಿಗಳ ಬಗೆಗಿನ ಕಲ್ಪನೆಗಳೇ ಬೇರೆಯಾಗುತ್ತವೆ. ಈ ಅಲಿಖಿತ ಇತಿಹಾಸ ಹೊಂದಿರುವ ಸಂಸ್ಕೃತಿಯ ಅಧ್ಯಯನದ ಒಂದು ಭಾಗವಾಗಿರುವ 'ಹೈದ್ರಾಬಾದ್ ಕರ್ನಾಟಕದ ವೈಶ್ಯರ ಜಾನಪದ ಅಧ್ಯಯನ' ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ನಮ್ಮ ಚರಿತ್ರೆಯನ್ನು ಗಮನಿಸಿದರೆ ಅನೇಕ ಆಕ್ರಮಣ, ದಬ್ಬಾಳಿಕೆ, ಸಂಘರ್ಷಗಳು ಕಂಡು ಬರುತ್ತವೆ. ಮೂಲನಿವಾಸಿಗಳ ಮೇಲೆ ದ್ರಾವಿಡರ ಆಕ್ರಮಣ, ನಂತರ ಆರ್ಯರು, ಮಂಗೋಲಿಯನ್ನರು, ಮುಸ್ಲಿಮರು, ಆಂಗ್ಲರು, ಡಚ್ಚರು, ಪೋರ್ಚುಗೀಸರು ಹೀಗೆ ಅನೇಕರ ದಾಳಿಗೆ ಈ ನೆಲ ಪ್ರತ್ಯಕ್ಷ ಮೂಕ ಸಾಕ್ಷಿಯಂತಿತ್ತು. ಭಾರತದ ಸಾಂಸ್ಕೃತಿಕ ಚರಿತ್ರೆಯಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆ ಮತ್ತು ಇಪ್ಪತ್ತನೆಯ ಶತಮಾನದ ಆರಂಭದ ಕೆಲ ದಶಕಗಳವರೆಗೆ ಭಾರತೀಯ ಜನಾಂಗಗಳ ಮೇಲೆ ಬರೀ ದಾಳಿಯೊಂದೇ ಅಲ್ಲದೆ ರಾಜಕೀಯ ಆಡಳಿತವು ಬ್ರಿಟಿಷರಿಂದ ಹೇರಲ್ಪಟ್ಟಿತು. ಪ್ರಾದೇಶಿಕವಾಗಿ ಭಿನ್ನವಾಗಿ ಬೇರೆ ಬೇರೆ ಆಡಳಿತಕ್ಕೆ ಒಳಪಟ್ಟಿದ್ದ ದೇಶೀಯ ಆಡಳಿತ ಮತ್ತು ಭಾರತೀಯ ಜನಾಂಗವು ಒಂದು ಹೊರಗಿನ ಶಕ್ತಿಯ ಹಿಡಿತಕ್ಕೆ ಸಿಲುಕಿತು. ಹೀಗಾಗಿ ಭಾರತೀಯ ಜೀವನ ಕ್ರಮ ಅನೇಕ ಹೊಸ ಹೊಸ ಸ್ವರೂಪಗಳನ್ನು ಪಡೆದುಕೊಂಡಿತ್ತು. ಬ್ರಿಟೀಷರ ರಾಜಕೀಯ ವಿಸ್ತಾರಕ್ಕೆ ಭಾರತದಲ್ಲಿ ತೊಡರುಗಾಲು ಹಾಕಿದವರು ನಿವಾಸಿಗಳು. ಅನೇಕ ಯುದ್ಧಗಳಲ್ಲಿ ಬ್ರಿಟಿಷ್ ಸೈನ್ಯ ಆದಿವಾಸಿಗಳ ಯುದ್ಧ ನೈಪುಣ್ಯತೆಯಿಂದ ಸೋಲಬೇಕಾಯಿತು. ಇವರ ಯುದ್ಧ ತಂತ್ರ ಬ್ರಿಟಿಷರನ್ನು ಚಕಿತಗೊಳಿಸಿತು. ಇದಕ್ಕೆಲ್ಲಾ ಈ ಜನಾಂಗಗಳು ರೂಢಿಸಿಕೊಂಡು ಬಂದಿದ್ದ ಜೀವನ ಕ್ರಮ, ಅರಣ್ಯದೊಂದಿಗಿನ ಅವರ ನಿಕಟ ಸಂಬಂಧ ಮುಂತಾದವು ಬದುಕನ್ನು ಗಟ್ಟಿಗೊಳಿಸಿದವು.

ವೈಶ್ಯ ಜನಾಂಗದ ಮೇಲೆ ಇತ್ತೀಚಿನ ದಿನಗಳಲ್ಲಿ ಕೈಗಾರೀಕರಣ, ಬಂಡವಾಳಶಾಹಿ ವ್ಯವಸ್ಥೆ, ಮೀಸಲಾತಿ, ಮುಂತಾದ ಅನೇಕ ಬಗೆಯ ಆವಿಷ್ಕಾರಗಳು ಸಹ ಇವರ ಸಾಂಪ್ರದಾಯಿಕ ಜೀವನಕ್ರಮದ ಮೇಲೆ ಬದಲಾವಣೆಯನ್ನು ತಂದಿತು. ಸರಳ ಜೀವನ, ಸುಂದರ ಬದುಕು ಎಂಬ ವ್ಯವಸ್ಥೆಯಲ್ಲಿದ್ದ ಇವರು ಆರ್ಥಿಕ ಅಭಿವೃದ್ಧಿ ಎಂಬ ಮರೀಚಿಕೆಯ ಕರಾಳ ಹಸ್ತಕ್ಕೆ ಸಿಲುಕಿ ಜೀವನ ಕ್ರಮದಲ್ಲಿ ಅಗಾಧ ಬದಲಾವಣೆಯಾಯಿತು. ಬಂಡವಾಳಶಾಹಿ ಜಗತ್ತಿನಲ್ಲಿ ಮನುಷ್ಯ ಸಹ ಯಂತ್ರವಾಗುತ್ತಾನೆ. ಅವನನ್ನು ಭೌತಿಕ ವಸ್ತು ಎಂದು ಪರಿಗಣಿಸಲಾಗುತ್ತದೆ. ಶಿಕ್ಷಣ ಮತ್ತು ರಾಜಕೀಯಕ್ಕೆ ವಸಾಹತು ಅಡಿಪಾಯವಿದೆ. ಹೀಗೆ ಆಧುನಿಕತೆ, ಬಂಡವಾಳಶಾಹಿ ವ್ಯವಸ್ಥೆ, ರಾಜಕೀಯ ವ್ಯವಸ್ಥೆ ಇವುಗಳೆಲ್ಲ ಭಾರತೀಯ ಸಮಾಜಕ್ಕೆ ಪ್ರವೇಶಿಸಿದ ನಂತರದಲ್ಲಿ 'ವೈಶ್ಯರ' ಸ್ಥಿತಿಗತಿ ಏನು? ಸಂಸ್ಕೃತಿ ಸಂಪ್ರದಾಯ, ಶಿಕ್ಷಣ, ಉದ್ಯೋಗದಲ್ಲಿ ವಾಣಿಜ್ಯ ಕ್ಷೇತ್ರದಲ್ಲಿ ಆದ ಬದಲಾವಣೆ ಏನು? ಎಂಬ ವಿಷಯಗಳ ಬಗ್ಗೆ ಅಧ್ಯಯನ ಮಾಡಬೇಕಾಗುತ್ತದೆ. ಈ ಎಲ್ಲಾ ಹಿನ್ನೆಲೆ ಜನಾಂಗೀಯ ಅಧ್ಯಯನಕ್ಕೆ ಪ್ರಸ್ತುತವಾಗಿದೆ.

ಈ ಸಮುದಾಯಗಳ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳುವ ಸಂದರ್ಭದಲ್ಲಿ ಮೊತ್ತ ಮೊದಲನೆಯದಾಗಿ ಬಳಕೆಯಾಗುವ ಕೆಲವು ಪದಗಳನ್ನು ಕುರಿತಂತೆ ಖಚಿತತೆಗೆ ಬರುವುದು ಕಷ್ಟಸಾಧ್ಯವಾಗಿದೆ. ಜಾತಿ,

[illegible]

ಜನಾಂಗ, ವರ್ಗ, ಸಮುದಾಯ ಇತ್ಯಾದಿ ಪದಗಳನ್ನು ಬಳಸುವಲ್ಲಿ ಗೊಂದಲವೇ ಸೃಷ್ಟಿಯಾಗಿದೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು ಕಂಡು ಬರುತ್ತವೆ. ಅವುಗಳಲ್ಲಿನ 'ವೈಶ್ಯ'ರನ್ನು ನನ್ನ ಅಧ್ಯಯನದಲ್ಲಿ ಒಂದು 'ಸಮುದಾಯ' ಎಂದು ಕರೆದಿರುವುದಾಗಿ ಇಲ್ಲಿ ಸ್ಪಷ್ಟಪಡಿಸುತಿದ್ದೇನೆ. 'ಜನಾಂಗ' ಎಂಬುದು ಇಂಗ್ಲೀಷ್‌ನ RACEಗೆ ಸಮಾನವಾದ ಪದ. ಇದರ ವ್ಯಾಪ್ತಿ ಬಹಳ ವಿಸ್ತಾರವಾದದು.

ಪ್ರಸ್ತುತ ಈ ಅಧ್ಯಯನದ ಶೀರ್ಷಿಕೆ "ಹೈದ್ರಾಬಾದ್ ಕರ್ನಾಟಕದ ವೈಶ್ಯರ ಅಧ್ಯಯನ" ಎಂಬುದಾಗಿದೆ. ಈ ಮುಂದೆಯೇ ಹೇಳಿದಂತೆ ವೈಶ್ಯರ ಜನಪದ ಕಲೆಗಳ ಸಾಹಿತ್ಯ ಸಹಿತ ಒಟ್ಟು ಜೀವನದ ಜಾನಪದೀಯ ಅಂಶಗಳ ಬಗೆಗೆ ಹೆಚ್ಚು ಒತ್ತು ಕೊಡಲಾಗಿದೆ. ಅವರ ಸಂಪ್ರದಾಯ ನಂಬಿಕೆಗಳ ಹಿಂದಿರುವ ಆಶಯಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಇಲ್ಲಿ 'ಜಾನಪದ' ಎಂಬ ಶೀರ್ಷಿಕೆಯ ಬಗ್ಗೆ ವಿವರಣೆ ಅಗತ್ಯ ಎಂದು ನನ್ನ ಅನಿಸಿಕೆ. ಜಾನಪದ ಶಬ್ದದ ಮೂಲ ಜನಪದ. ಜನಪದ ಅಂದರೆ ನಿರ್ದಿಷ್ಟ ಸಂಸ್ಕೃತಿಯ ಆಡಳಿತಕ್ಕೆ ಒಳಪಟ್ಟ ಜನರ ಪ್ರದೇಶ. ಡಾ.ಎಂ.ಚಿದಾನಂದ ಮೂರ್ತಿಯವರ ಪ್ರಕಾರ ಜನ ಎಂದರೆ ಬರಿಯ Men ಎಂದರ್ಥ.[೨] ಅವರಿರುವ ಪ್ರದೇಶ ಜನಪದ. ಆದರೆ ಜನ ಇರುವ ಭಾಗ ಜನಪದ ಅಲ್ಲ".

ಜನಪದ ಎಂಬುದು ಮೂಲಾರ್ಥದಲ್ಲಿ ಆಂಗ್ಲ ಭಾಷೆಯ Folk ಎಂಬುದಕ್ಕೆ ಸಂವಾದಿಯಾದದು. Folk ಮತ್ತು Lore ಸೇರಿ Folklore ಆಗುತ್ತದೆ. Folkloreಗೆ ಸಂವಾದಿಯಾಗಿ ಕನ್ನಡದಲ್ಲಿ ಜಾನಪದ ಎಂದು ಕರೆಯಬೇಕೆಂದು ಡಾ.ಹಾ.ಮಾ.ನಾಯಕರು ಸೂಚಿಸಿದ್ದಾರೆ. ಜಾನಪದಕ್ಕೆ ಯಾವುದೇ ರೀತಿಯ ಚೌಕಟ್ಟು ಇಲ್ಲ. ಸರ್ವಾಂತರ್ಯಾಮಿಯಾದದು. ಜಾನಪದ ಅಧ್ಯಯನವು ಸಾಂಪ್ರದಾಯಿಕವಾದ ಸಂಗ್ರಹ (Collection) ಸಂಶ್ಲೇಷಣೆ (Comprehensione) ವರ್ಗೀಕರಣ (Classification) ವಿಶ್ಲೇಷಣೆ (Interpretation) ಮತ್ತು ತೀರ್ಮಾನಗಳಿಗೆ ಸೀಮಿತವಾಗಿದ್ದ ಪರಿಕಲ್ಪನೆಯಾಚೆಗೂ ತನ್ನ ಬಾಹುಗಳನ್ನು ವಿಸ್ತರಿಸಿಕೊಳ್ಳುತ್ತಾ ಬಂದಿರುವುದನ್ನು ಕಾಣುತ್ತೇವೆ. ಹಾಗಾಗಿ ಜಾನಪದ ಇಂದು ಎಲ್ಲರಿಗೂ ಬೇಕಾದ, ಆಸಕ್ತಿಯ ಕುತೂಹಲದ ವಿಷಯಗಳಲ್ಲಿ ಒಂದಾಗಿದೆ. ಜಾನಪದ ಅನಕ್ಷರಸ್ಥ ಸಮಾಜದ ಕೊಡುಗೆ ಎಂದು ಈ ಮೊದಲು ಹೇಳಿದರೂ ಅತ್ಯಂತ ಸಾಕ್ಷರರ, ಸುಶೀಕ್ಷಿತ ಸಮಾಜದಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿದೆ ಎಂದು ದೃಢಪಟ್ಟಿದೆ.

ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕದ ವರ್ಣಗಳಲ್ಲಿ ಒಂದಾದ 'ವೈಶ್ಯ'ರನ್ನು ಕುರಿತಂತೆ ವಿಸ್ತಾರವಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ. ವೈಶ್ಯರು ಪ್ರಮುಖವಾಗಿ ಹೈದ್ರಾಬಾದ್ ಕರ್ನಾಟಕದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ವ್ಯಾಪಕವಾಗಿ ವೈಶ್ಯರು ನೆಲಸಿರುವ ಬಳ್ಳಾರಿ, ರಾಯಚೂರು ಜಿಲ್ಲೆಗಳನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ. ಹಾಗೆಯೇ ಇತರ ಜಿಲ್ಲೆಗಳಲ್ಲಿಯೂ

ಪೂರ್ಣ ಪ್ರಮಾಣವಲ್ಲದ ಕ್ಷೇತ್ರಕಾರ್ಯದ ಮೂಲಕ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯ ಸಂಡೂರು, ಬಳ್ಳಾರಿ, ಕೂಡ್ಲಿಗಿ, ಸಿರುಗುಪ್ಪ, ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳಲ್ಲಿ ಕ್ಷೇತ್ರಕಾರ್ಯ ವಿಧಾನದಿಂದ ಅಧ್ಯಯನಕ್ಕೆ ಬೇಕಾದ ಆಕರಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ವೈಶ್ಯರ ಆಚರಣೆ ಸಂಪ್ರದಾಯಗಳನ್ನು, ವಿಧಿ ವಿಧಾನಗಳನ್ನು ಆಯಾ ಸಂದರ್ಭಗಳಲ್ಲಿ ವೀಕ್ಷಿಸಿ ವಕ್ತೃಗಳನ್ನು ಸಂದರ್ಶಿಸಿ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ. ಅಧ್ಯಯನದ ದೃಷ್ಟಿಯಿಂದ ಅಗತ್ಯವೆನಿಸಿದ ಭಾವ ಚಿತ್ರಗಳನ್ನು ತೆಗೆದುಕೊಂಡು ವ್ಯಾಪಕ ಸಂಗ್ರಹ ಕಾರ್ಯ ಮಾಡಲಾಗಿದೆ. ಲಿಖಿತ, ಗ್ರಂಥಸ್ಥ ಮಾಹಿತಿಗಳು ವಿರಳವಾಗಿರುವುದರಿಂದ ಸಂಪೂರ್ಣವಾಗಿ ಕ್ಷೇತ್ರಕಾರ್ಯವನ್ನೇ ನೆಚ್ಚಿಕೊಂಡು ಅಧ್ಯಯನ ಮಾಡಲಾಗಿದೆ.

೧.೨. ಅಧ್ಯಯನದ ಉದ್ದೇಶ ವ್ಯಾಪ್ತಿ

ಯಾವುದೇ ಒಂದು ಸಮುದಾಯದ ಸಾಂಸ್ಕೃತಿಕ ಅಧ್ಯಯನದ ಮೂಲ ಉದ್ದೇಶವೆಂದರೆ ಜನಾಂಗದ ಸಂಸ್ಕೃತಿಯ ಮೂಲ ಸ್ವರೂಪವನ್ನು ಕಂಡುಕೊಳ್ಳುವುದೇ ಆಗಿದೆ. ಸಮುದಾಯ ಇರುವ ಭೌಗೋಳಿಕ ನೆಲೆ, ಅವರ ಪರಂಪರೆ, ಸಾಂಪ್ರದಾಯಿಕ ಇತಿಹಾಸ, ಸಾಂಪ್ರದಾಯಿಕ ಆಚರಣೆಗಳು ಹೀಗೆ ಅವರ ಜೀವನವನ್ನು ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ ಒಟ್ಟು ಸಂಸ್ಕೃತಿಯನ್ನು ಅನಾವರಣಗೊಳಿಸುವುದಾಗಿದೆ. ಅಧ್ಯಯನದ ಮುಖೇನ ಒಂದು ಸಮುದಾಯದ ಇರುವಿಕೆಯನ್ನು ಗುರುತಿಸಿದಂತಾಗುತ್ತದೆ.

ಒಂದು ದೇಶದ, ಒಂದು ರಾಜ್ಯದ ಮೂಲ ಪರಂಪರೆಯಿರುವುದು ಸಮುದಾಯಗಳಲ್ಲಿ. ಸಮುದಾಯದ ಸಮೂಹಗಳಲ್ಲಿ ಪುರಾತನ ಕಾಲದಿಂದಲೂ ಉಳಿದುಕೊಂಡು ಬಂದ ಆದರ್ಶಗಳಿವೆ. ಸರಳವಾದ ಬದುಕಿದೆ, ಮಾನವೀಯತೆಗಳಿವೆ. ಇವುಗಳನ್ನೆಲ್ಲಾ ಅಧ್ಯಯನಕ್ಕೆ ಒಳಪಡಿಸಿ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವಂತಾಗಬೇಕು. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ತಡೆಯೊಡ್ಡುವ ಜಾಗತೀಕರಣದಂಥ ಅಸ್ತ್ರಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಿದೆ. ಆದ್ದರಿಂದ ಭಾರತೀಯ ಮೂಲ ಪರಂಪರೆಯನ್ನು ತಿಳಿಯುವುದರ ಮೂಲಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಸೆಡ್ಡುಹೊಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ವೈಶ್ಯರ ಅಧ್ಯಯನ ಪ್ರಸ್ತುತ ಅಗತ್ಯಗಳಲ್ಲಿ ಒಂದು.

ಕರ್ನಾಟಕವು ಅನೇಕ ಮೂಲ ಸಮುದಾಯಗಳೊಂದಿಗೆ ವಲಸೆ ಸಮುದಾಯಗಳೂ ಒಳಗೊಂಡಿರುವ ಒಂದು ರಾಜ್ಯ. ಅನೇಕ ಸಮುದಾಯಗಳು ತಮ್ಮ ಮೂಲ ನೆಲೆಯನ್ನು ಬಿಟ್ಟು ಜೀವನದ ನೆಲೆಯಲ್ಲಿ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಾ ಬಂದಿವೆ. ಮೂಲತಃ ಆಂಧ್ರದವರೆಂದು ಕರೆಯಲ್ಪಡುವ ವೈಶ್ಯರು ಆ ನೆಲದವರೋ? ಅಥವಾ ಇನ್ನಾವುದೋ ಪ್ರದೇಶದಿಂದ ಬಂದವರೋ ಎಂಬುದನ್ನು ಜನಪದರ ಮೌಖಿಕ ಮಾಹಿತಿಗಳನ್ನು ಆಧರಿಸಿ ತಿಳಿಯುವುದು ಉದ್ದೇಶಗಳಲ್ಲೊಂದು. ಹೈಟೆಕ್ ಯುಗದಲ್ಲಿ ಬದಲಾದ ಸಮಾಜದ

ನೆಲೆಯಲ್ಲಿ ಒಂದು ಸಮುದಾಯ ತನ್ನನ್ನು ಹೇಗೆ ಪರಿವರ್ತನೆಗೆ ತೆರದಿಟ್ಟಿದೆ? ಅದರಿಂದಾಗುವ ಗುಣಾವಗುಣಗಳನ್ನು, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ನೆಲೆಯಲ್ಲಿ ಕಂಡುಕೊಳ್ಳುವುದು ಅಧ್ಯಯನದ ಉದ್ದೇಶವಾಗಿದೆ.

೧.೩. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಕರ್ನಾಟಕದ ವರ್ಣಗಳಲ್ಲಿ ಒಂದಾದ ವೈಶ್ಯರು, ಇದುವರೆಗೆ ವೈಶ್ಯರ ಬಗ್ಗೆ ಯಾವುದೇ ರೀತಿಯ ಒಟ್ಟು ಅವರ ಜೀವನ ವಿಧಾನ ಸಾಂಸ್ಕೃತಿಕ ಬದುಕನ್ನು ಕುರಿತಂತೆ ಯಾವುದೇ ಸಂಶೋಧನಾತ್ಮಕ ವಿವರಗಳು ದಾಖಲಾಗಿರುವುದಿಲ್ಲ. ಅಯ್ಯರವರು ತಮ್ಮ The Mysore Tribes and Castes ನಲ್ಲಿ ವೈಶ್ಯ ಸಮುದಾಯದ ಪರಿಚಯವನ್ನು ನೀಡಿದ್ದಾರೆ. ಎನ್.ಜಿ.ವೆಂಕಟ ಕೃಷ್ಣಯ್ಯ ಶೆಟ್ಟಿ ಅವರು ಆರ್ಯ ವೈಶ್ಯ ಮಾರ್ಗದರ್ಶಿಯಲ್ಲಿ ಆರ್ಯ ವೈಶ್ಯ ಗೋತ್ರ ಪ್ರವರಗಳ ವಿವರವನ್ನು ನೀಡಿದ್ದಾರೆ.

ಇತ್ತೀಚೆಗೆ ರಾ.ಲ.ಪುರುಷೋತ್ತಮರವರ 'ಯುವ ನುಡಿ' ಸಂಪುಟದಲ್ಲಿ 'ವೈಶ್ಯರ ಪೂರ್ವೇತಿಹಾಸ'ವನ್ನು ಪರಿಚಯಿಸಿದ್ದಾರೆ.

ಜನಪ್ರಿಯ ವೈಶ್ಯ ಪತ್ರಿಕೆಯಲ್ಲಿ ಕೆ.ಎಂ.ರಾಧಕೃಷ್ಣ ಶೆಟ್ಟಿ ಬೆಂಗಳೂರು ಇವರು 'ವೈಶ್ಯ ಪರಂಪರೆ'ಯನ್ನು ಇದರಲ್ಲಿ ವ್ಯಕ್ತಪಡಿಸಿದ್ದಾರೆ.

ಗುರುಮೂರ್ತಿ ಪೆಂಡಕೂರು ಅವರ ಶ್ರೀ ಸ್ಕಾಂದ ಪುರಾಣದ ಉತ್ತರ ಖಂಡದ ಸನಸ್ಸುಜಾತ ಸಂಹಿತೆಯಲ್ಲಿ ಅಡಕವಾದ ಊರು ಜೋಪಖ್ಯಾನ, ಇದರ ಅನುವಾದ ಶ್ರೀ ಕನ್ನಿಕಾಪರಮೇಶ್ವರಿ ಪುರಾಣದಲ್ಲಿ ವರ್ಣವಿಭಾಗ, ವರ್ಣತ್ರಯ ಋಷಿಗಳು, ಆಗಿನ ಗೋತ್ರಗಳ ಸಂಖ್ಯೆ, ಬ್ರಾಹ್ಮಣ ದೋಷಣೆ ವಿಪಶ್ರಾಪ: ೧೦೨ ಗೋತ್ರಗಳ ಅಗ್ನಿ ಪ್ರವೇಶ ವಿಷಯ, ಶ್ರೀ ಅಮ್ಮನವರ ಜನ್ಮ ಸಂಗತಿ ಇವುಗಳ ಅನುವಾದವನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಶ್ರೀಮತಿ ಗಾಯತ್ರಿ ಆರ್.ಕೃಷ್ಣರವರ ವೈಶ್ಯ ಕುಲೋದ್ಧಾರಿಣಿ ಶ್ರೀವಾಸವಿ ಎಂಬ ಕಿರುಹೊತ್ತಿಗೆಯಲ್ಲಿ ವೈಶ್ಯ ಕುಲ ಚರಿತ್ರೆಯನ್ನು ವ್ಯಕ್ತಪಡಿಸಿದ್ದಾರೆ.

ಟೀಕಾ ವೆಂಕಟಾಚಲ ಗುಪ್ತ ೧೯೮೫ ಗೋತ್ರ ಪ್ರವರ ದರ್ಪಣ ಗ್ರಂಥದಲ್ಲಿ ವೈಶ್ಯರ ೧೦೨ ಗೋತ್ರಗಳ ಸಂಕ್ಷಿಪ್ತ ವಿವರವನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಹಾಗೂ ವಾಸವಿ ಕನ್ಯಕಾ ಖಡ್ಗಗಳು, ಸುಪ್ರಭಾತ, ವೈಶ್ಯ ಜಾತಿಯ ವಿಕಾಸ, ವಾಸವಿ ಚರಿತ್ರೆ ವಾಸವಿಯೊಂದಿಗೆ ವೈಶ್ಯರ ಅಗ್ನಿ ಪ್ರವೇಶ, ವಾಸವಿ ನಾಮಾವಳಿ ಇವುಗಳ ಸಂಕ್ಷಿಪ್ತ ಪರಿಚಯವನ್ನು ನೀಡಿದ್ದಾರೆ.

ರಾ.ಲ.ಪುರುಷೋತ್ತಮರವರು ಯುವ ನುಡಿ ಸರ್ವೋದಯ ಇತ್ತೀಚಿನ ವೈಶ್ಯರ ಪದನಿಷ್ಪತ್ತಿಯ ಮಾಹಿತಿಯನ್ನು ನೀಡಿದ್ದಾರೆ.

ಮಹರ್ಷಿ ದಯಾನಂದ ಸರಸ್ವತೀ ಮೂಲ ಲೇಖಕರು ಇವರ 'ವೈದಿಕ ವಿವಾಹ ಸಂಸ್ಕಾರವಿಧಿ' ಅನುವಾದವನ್ನು ಪಂಡಿತ ಸುಧಾಕರ ಜೀ ಇವರು ಮಾಡಿದ್ದಾರೆ. ಇದರಲ್ಲಿ ವೈಶ್ಯರ ಸಂಪೂರ್ಣ ಮದುವೆ ಸಂಪ್ರದಾಯಗಳ ವಿವರವನ್ನು ಪರಿಚಯಿಸಿದ್ದಾರೆ.

ಟಿ.ವಿ.ಸುರೇಶಗುಪ್ತ ವೈಶ್ಯ ರತ್ನಗಳು ಎಂಬ ಗ್ರಂಥದಲ್ಲಿ ಹತ್ತು ವೈಶ್ಯ ಮಹನೀಯರ ಬಗ್ಗೆ ತಿಳಿಸಿದ್ದಾರೆ.

ಗುರುಮೂರ್ತಿ ಪೆಂಡಕೂರು 'ಆರ್ಯ ವೈಶ್ಯ ಮಾರ್ಗದರ್ಶಿ'ಯಲ್ಲಿ ಆರ್ಯ ವೈಶ್ಯ ಧರ್ಮದ ಬಗ್ಗೆ ವಿವರವನ್ನು ನೀಡಿದ್ದಾರೆ.

ಒಟ್ಟಾರೆಯಾಗಿ ಹೈದ್ರಾಬಾದ್ ಕರ್ನಾಟಕದ ವೈಶ್ಯರ ಬಗ್ಗೆ ಪರಿಚಯಾತ್ಮಕ ಲೇಖನಗಳು, ಪ್ರಬಂಧಗಳು ನಡೆದಿವೆಯೇ ವಿನಃ ಸಂಶೋಧನೆಗಳು ನಡೆದಿಲ್ಲ. ಈ ಅಧ್ಯಯನವು ಮುಖ್ಯವಾಗಿ ಕ್ಷೇತ್ರಕಾರ್ಯದ ಮಾಹಿತಿಗಳ ಆಧಾರದ ಮೇಲೆ ನಡೆದಿದೆ ಮತ್ತು ಈ ಮೇಲಿನ ಆಕರ ಗ್ರಂಥಗಳನ್ನು ಪರಾಮರ್ಶನೆ ಮಾಡಲಾಗಿದೆ.

ಅಡಿಟಿಪ್ಪಣಿ

೧. ಕಲಬುರ್ಗಿ ಎಂ.ಎಂ., ೧೯೧೬ ಪು. ೬೨

೨. ಚಿದಾನಂದಮೂರ್ತಿ ಎಂ., ೧೯೩೬, ಪು. ೭೬

ಅಧ್ಯಾಯ ೨

ವೈಶ್ಯ ಜನಾಂಗದ ಪರಿಚಯ

ಅಧ್ಯಾಯ ೨

ವೈಶ್ಯ ಜನಾಂಗದ ಪರಿಚಯ

ಆರ್ಯ ವೈಶ್ಯರು ಬಹಳ ಹಿಂದಿನ ಕಾಲದಿಂದಲೂ ವೈಭವ ಪೂರಿತವಾಗಿ ಜೀವನ ನಡೆಸುತ್ತಿದ್ದಾರೆ. ದಾನ ಧರ್ಮಗಳಿಗೆ, ಔದಾರ್ಯಕ್ಕೆ ಧೈರ್ಯ, ಸಾಹಸಗಳಿಗೆ ಹೆಸರಾಗಿದ್ದಾರೆ. ಒಂದು ದೇಶದ ಸಂಪತ್ತೆಂದರೆ ಅಲ್ಲಿನ ಇತಿಹಾಸ ಸಂಸ್ಕೃತಿಯೇ ಹೊರತು ಅಲ್ಲಿಯ ಕಲ್ಲು, ನೆಲ, ಜಲ ಮಾತ್ರವೇ ಅಲ್ಲ. ಆರ್ಯ ವೈಶ್ಯರು ತಮ್ಮ ಪೂರ್ವಿಕರ ಇತಿಹಾಸ ಹಿರಿಮೆಗಳನ್ನು ತಿಳಿಯುವುದು ಅವಶ್ಯ. ಈ ನಿಟ್ಟಿನಲ್ಲಿ ವೈಶ್ಯ ಸಮುದಾಯದ ಇತಿಹಾಸ ಮತ್ತು ಹಿರಿಮೆಗಳನ್ನು ಪರಿಚಯಿಸುವುದೇ ಆಗಿದೆ.

ವೈಶ್ಯರು, ಆರ್ಯವೈಶ್ಯರು, ಶ್ರೇಷ್ಠಿಗಳು, ಶೆಟ್ಟರು, ಕೋಮಟಿ, ಗುಪ್ತರು ಎಂಬ ಪದನಾಮದಿಂದ ಕರೆಯಲ್ಪಡುವ ವೈಶ್ಯ ಜನಾಂಗದವರಿಗೆ ಈ ಪದಗಳ ಅರ್ಥ ಹುಟ್ಟು ಬೆಳವಣಿಗೆಯಾಗಿದೆ. ವೈಶ್ಯರಿಗೆ ತಮ್ಮದೇ ಆದ ಇತಿಹಾಸವಿಲ್ಲ. ಇಂದಿನ ಈ ಕಾಲದಲ್ಲೂ ಇನ್ನೂ ಸಾಂಸ್ಕೃತಿಕವಾಗಿ ಸಮಾಜದಲ್ಲಿ ಬೇರೆಯವರೊಂದಿಗೆ ಬೆರೆಯದ ಜನಾಂಗ ವೈಶ್ಯರದು. ತಮ್ಮನ್ನು ತಾವೇ ಸಂಕುಚಿತರನ್ನಾಗಿಸಿಕೊಂಡಿರುವ ಸ್ವಯಂಕೃತಾಪರಾಧಿಗಳು ವೈಶ್ಯರಾಗಿದ್ದಾರೆ. "ಕೋಮಟಿ" ಪದವನ್ನು "ಗೋಮತಿ" ಎಂದು ಅರ್ಥೈಸಿದ್ದಾರೆ. ಅಂದರೆ ಹಸುವಿನ ಬುದ್ಧಿಯವರು ಎಂದರ್ಥ. ಒಂದು ದೃಷ್ಟಿಯಿಂದಷ್ಟೇ ಇದು ನಿಜವಾಗಿದೆ. ಹುಲ್ಲನ್ನು ತಿಂದು ಅನ್ಯರಿಗೆ ಹಾಲನ್ನು ಕೊಡುವ ಹಸು-ನಂತರದಲ್ಲಿ ಚಾಟಿಯ ಏಟು ತಿನ್ನುವ ಹಾಗೆ. ಹಸುವನ್ನು ಕರೆದೊಯ್ದು ಪೂಜಿಸಿ-ನಮಸ್ಕರಿಸಿ ನಂತರ ಕೋಲಿನಿಂದ ಒದ್ದು ಓಡಿಸುವಾಗ ಹಾಗೆ. ಹಿಂದಿನ-ಇಂದಿನ ಸಮಾಜ ವೈಶ್ಯರನ್ನು ಈ ರೀತಿ ನಡೆಸಿಕೊಂಡು ಬಂದಿದೆ ಎನ್ನುತ್ತಾರೆ ಅವರು. ಹಾಗಾಗಿ ಈ ದೃಷ್ಟಿಯಿಂದಷ್ಟೇ "ಗೋಮತಿ"ಗಳು ಎಂದು ಒಪ್ಪಿ ಕರೆದುಕೊಳ್ಳುತ್ತಿದ್ದಾರೆ (ರಾ.ಲ.ಪು. ೨೦೦೭, ಪು. ೩೭).

ಇಂದಿನ ಭಾರತದಲ್ಲಲ್ಲ ಇಡೀ ಆರ್ಯವರ್ತದಲ್ಲಿ ಸನಾತನ ಧರ್ಮದಲ್ಲಿ ಎಲ್ಲಾ ಗುರುಕುಲಾಶ್ರಮಗಳಲ್ಲಿ ಇದ್ದ ನಾಲ್ಕು ಹಂತಗಳ ಶಿಕ್ಷಣ ಪದ್ಧತಿಯಲ್ಲಿ ಓದುತಿದ್ದ ಕ್ರಮವನ್ನು ಕ್ರಮಾನುಸಾರವಾಗಿ ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಶೂದ್ರ ಎಂಬ ನಾಲ್ಕು ಹಂತಗಳೇ ಮುಂದೆ ಯಾವುದೇ ಕಾಲದಲ್ಲಿ ಯಾರಿಂದಲೋ 'ಚಾತುರ್ವರ್ಣ' ಗಳಾಗಿ ಮಾರ್ಪಟ್ಟಿತು. ಇವುಗಳೇ ಮುಂದೆ ಜಾತಿಗಳಿಂದಾಗಿ ಅನೇಕ ಕವಲುಗಳನ್ನು ಪಡೆಯಿತು. ಅದರಲ್ಲಿ 'ವೈಶ್ಯ' ಒಂದು ಪರಿಪೂರ್ಣ ವರ್ಣವಾಗಿ ರೂಪಿತಗೊಂಡು ಬಾಳಿ, ಬೆಳೆಯುತ್ತಾ ಬಂದಿದೆ. ವೈಶ್ಯ ಸಮುದಾಯದ ಉಗಮಕ್ಕೆ ಅವರದೇ ಆದಂತಹ ಪೌರಾಣಿಕ ಚರಿತ್ರೆಯನ್ನು ನೋಡಬಹುದು.

[illegible]

[illegible]

[illegible]

[illegible]

ಭರತ ಖಂಡವು ಎಲ್ಲಾ ಪುರಾಣಗಳ ಉಗಮಸ್ಥಾನ, ಬ್ರಹ್ಮನಿಂದ ನಿರ್ಮಿತವಾದ ವಿಮಾನವು ವನಪ್ರಾಂತದಲ್ಲಿ ಸಂಚರಿಸುತ್ತಿದ್ದಾಗ ಅದರ ನೇಮಿ ಭಂಗವಾಯಿತು. ಮುರಿದ ಆ ನೇಮಿ(ಚಕ್ರದ ಪಟ್ಟೆ)ಯು ಒಂದು ಕಾಡಿನಲ್ಲಿ ಬಿದ್ದಿತು. ಅಂದಿನಿಂದ ಆ ವನಕ್ಕೆ ನೈಮಿಷಾರಣ್ಯವೆಂದು ಹೆಸರಾಯಿತು. ನೈಮಿಷಾರಣ್ಯವು ಭಾರತದ ಪುರಾಣಗಳಲ್ಲಿ ಪ್ರಸಿದ್ಧವಾದುದು. ನೈಮಿಷಾರಣ್ಯವು ವಿಶೇಷವಾದ ಫಲ ಪುಷ್ಪಭರಿತವಾದ ಮರ ಗಿಡ ಬಳ್ಳಿಗಳು ಋಷ್ಯಾಶ್ರಮಗಳು, ಪ್ರಾಣಿ ಪಕ್ಷಿಗಳಿಂದ ಕೂಡಿ ಸಂಪದ್ಭರಿತವಾಗಿತ್ತು.

ನೈಮಿಷಾರಣ್ಯದಲ್ಲಿ, ಗೋಮತೀ ನದಿಯ ದಡದಲ್ಲಿ ಪವಿತ್ರವಾದ ಆಶ್ರಮವಿದ್ದಿತು. ಆ ಆಶ್ರಮದಲ್ಲಿ ಅನೇಕ ಋಷಿಗಳು ತಪಸ್ಸು ಮಾಡಿಕೊಂಡು ವೇದಾಂತ ಪರವಾದ ಚರ್ಚೆಗಳನ್ನು ಅನೇಕ ಯಜ್ಞಗಳನ್ನು ಮಾಡಿಕೊಂಡಿದ್ದರು. ಪುರಾಣಿಕೋತ್ತಮರಾದ ಸೂತ ಮಹರ್ಷಿಗಳು ಅಂಥದೇ ಒಂದು ಆಶ್ರಮದಲ್ಲಿ ತಪಸ್ಸು ಮಾಡಿಕೊಂಡಿದ್ದು, ಅನೇಕ ಶಿಷ್ಯರಿಗೆ ಮಾರ್ಗದರ್ಶಕರಾಗಿದ್ದರು. ಇವರು ಮಂತ್ರವೇತ್ತರಲ್ಲಿ ಶ್ರೇಷ್ಠರಾಗಿದ್ದರು. ಸೂತರು, ವೇದವ್ಯಾಸರು, ಶಿಷ್ಯರು, ಅವರಿಗೆ 'ಉಗ್ರಶ್ರವ' ಎಂಬ ಹೆಸರೂ ಇದೆ. ಅವರ ತಂದೆಯ ಹೆಸರು ಲೋಮಹರ್ಷಣ ಎಂದು. ಪ್ರವಚನಕ್ಕಾಗಿ, ವಿಷ್ಣುವಿನ ಅಂಶದಿಂದ ಅವರು ಹುಟ್ಟಿದವರೆಂದು, ಸ್ಕಾಂದ ಪುರಾಣದ ಪ್ರಭಾವ ಖಂಡದಲ್ಲಿ ಹೇಳಿದೆ. ಅವರಲ್ಲಿ ಜ್ಞಾನವು ಯಾವಾಗಲೂ ಪ್ರಕಾಶಿಸುತ್ತಿದ್ದುದರಿಂದ ಅವರಿಗೆ 'ಸೂತ' ಎಂಬ ಹೆಸರು ಬಂದಿತು. ಪುರಾಣ ಪ್ರವಚನ ಮಾಡುತ್ತಿದ್ದುದರಿಂದ, ಪುರಾಣಿಕರೆಂದು ಪ್ರಸಿದ್ಧರಾದರು. ಆ ಮಹರ್ಷಿಯು ನೆಲಸಿದ ಪುಣ್ಯಭೂಮಿಯು ಸೂತಾಶ್ರಮವೆಂದು ಖ್ಯಾತಿಗಳಿಸಿತ್ತು. ಸೂತ ಪುರಾಣಿಕರಿಗೆ ತಿಳಿಯದ ವಿಚಾರವಿಲ್ಲ. ಅವರು ಅರಿಯದ ವಿಷಯವಿರಲಿಲ್ಲ. ವೇದ ಇತಿಹಾಸ ಪುರಾಣಾದಿಗಳ ಜ್ಞಾನ ಭಂಡಾರವಾದ ಅವರು ಪೌರಾಣಿಕ ವಿಶ್ವಕೋಶದಂತಿದ್ದರು. ಅವರು ೧೮ ಪುರಾಣಗಳನ್ನು ಪ್ರವಚನ ಮಾಡುವಂತಹವರಾಗಿದ್ದರು. ಆಷಾಢ ಶುದ್ಧ ದ್ವಾದಶಿಯಂದು ಸೂತರ ಪುಣ್ಯ ತಿಥಿಯನ್ನು ಆಚರಿಸುತ್ತಾರೆ.

ಒಮ್ಮೆ ಲೋಕ ಕಲ್ಯಾಣಾರ್ಥಕವಾಗಿ ಸೂತರ ಆಶ್ರಮದಲ್ಲಿ ಒಂದು ಮಹಾಯಾಗವನ್ನು ಆಚರಿಸಲಾಯಿತು. ಆ ಮಹಾಯಾಗದಲ್ಲಿ ಭಾಗವಹಿಸುವ ಸಲುವಾಗಿ ಮಹರ್ಷಿಗಳು ಬ್ರಹ್ಮಜ್ಞಾನಿಗಳು, ತಪಸ್ವಿಗಳು, ವೇದ ವೇದಾಂತ ವಿಶಾರದರು, ತತ್ವಜ್ಞಾನಿಗಳು ಮೊದಲಾದವರೆಲ್ಲಾ ಬಂದಿದ್ದರು. ಆ ಮಹಾಯಾಗವು ಸಾಂಗವಾಗಿ ನೆರವೇರಿತು, ಸಮಾರಾಧನೆಯ ಊಟವಾದ ಮೇಲೆ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದ ಮೇಲೆ, ಶೌನಕಾದಿ ಮುನಿಗಳು ಸೂತ ಪುರಾಣಿಕರನ್ನು ಕುರಿತು ಚಾತುರ್ವರ್ಣದವರಲ್ಲಿ ಒಬ್ಬರಾದ ವೈಶ್ಯರ ಬಗ್ಗೆ ತಿಳಿಯುವ ಕುತೂಹಲವಾಗಿದೆ ಎಂದರು. ಅವಶ್ಯಕವಾಗಿ ನಿಮ್ಮ ಕುತೂಹಲವನ್ನು ಪರಿಹಾರ ಮಾಡುತ್ತೇನೆ. ಶ್ರದ್ಧಾಸಕ್ತಿಗಳಿಂದ ಕೇಳಿ ಎಂದು ಸೂತರು ಪ್ರಾರಂಭಿಸಿದರು.

ಇಡೀ ದಕ್ಷಿಣ ಭಾರತದಲ್ಲಿ ಅತಿ ದೊಡ್ಡ ನದಿ ಗೋದಾವರಿ ನದಿ. ಗೋದಾವರಿ ನದಿಯ ದಡದಲ್ಲಿ ನಯನ ಮನೋಹರವಾದ ಒಂದು ಋಷ್ಯಾಶ್ರಮವಿತ್ತು. ಆ ಆಶ್ರಮಕ್ಕೆ 'ಸಾಲಂಕಾಯನ' ಮಹರ್ಷಿಗಳು ಒಡೆಯರಾಗಿದ್ದರು. ಅವರು ಸರ್ವವೇದ ವೇದಪಾರಂಗತರಾಗಿದ್ದರು. ಅಲ್ಲಿ ಅನೇಕ ಜನ ಶಿಷ್ಯರು

ತಪೋನುಷ್ಠಾನ ಮತ್ತು ವಿವಿಧ ಶಾಸ್ತ್ರಾಭ್ಯಾಸ ಮಾಡುತ್ತಿದ್ದರು. ಒಮ್ಮೆ ಮಹಾನುಭಾವರೂ, ಸತ್ಯಸಂಧರೂ, ವೇದಾಧ್ಯಯನ ಸಂಪನ್ನರೂ ಆದ ಮಣಿಗುಪ್ತ ಮುಂತಾದ ವೈಶ್ಯೋತ್ತಮರು, ಸಾಲಂಕಾಯನ ಮಹರ್ಷಿಯ ಆಶ್ರಮಕ್ಕೆ ಬಂದರು. ಆಗ ಸಾಲಂಕಾಯನರು ಅರ್ಘ್ಯಪಾದ್ಯಾದಿಗಳಿಂದ ಅವರನ್ನು ಸತ್ಕರಿಸಿ ಕುಶಲ ಪ್ರಶ್ನೆಗಳೊಡನೆ ಉಚಿತಾಸನಗಳಲ್ಲಿ ಕುಳ್ಳಿರಿಸಿ ಪ್ರೀತಿ ಪೂರ್ವಕವಾಗಿ ತಮ್ಮ ಆಗಮನದ ಕಾರಣವನ್ನು ತಿಳಿಸಬೇಕೆಂದು ಕೇಳಿದರು. ಆಗ ಆ ವೈಶ್ಯೋತ್ತಮರು, ನಾವು ಗಂಗಾದಿ ಪುಣ್ಯ ತೀರ್ಥಗಳಲ್ಲಿ ಸ್ನಾನಮಾಡಿ ಮಹಾಮಂತ್ರಗಳ ಜಪವನ್ನು ಮಾಡಿದೆವು. ಬದರಿ, ಕೇದಾರ, ಕಾಶಿ ಮೊದಲಾದ ಪುಣ್ಯಕ್ಷೇತ್ರಗಳ ಯಾತ್ರೆಯನ್ನು ಮಾಡಿಕೊಂಡು ತಮ್ಮ ದರ್ಶನಕ್ಕಾಗಿ ಇಲ್ಲಿಗೆ ಬಂದೆವು ಎಂದು ತಿಳಿಸಿದರು. ದಿವ್ಯ ಜ್ಞಾನಿಗಳಾದ ತಮ್ಮಿಂದ 'ವೈಶ್ಯರ ಪೂರ್ವ ಚರಿತ್ರೆ'ಯನ್ನು ನಿಮಗೆ ಹೇಳುತ್ತೇನೆ ಸಾವಧಾನಚಿತ್ತರಾಗಿ ಆಲಿಸಿ ಎಂದು ವೈಶ್ಯರ ಪೂರ್ವೇತಿಹಾಸವನ್ನು ಹೇಳಲಾರಂಭಿಸಿದರು.

ಅನಂತ ಜೀವರಾಶಿಗಳ ಉದ್ಧಾರಕ್ಕಾಗಿ ಬ್ರಹ್ಮನಿಂದ ಜಗತ್ತು ಸೃಷ್ಟಿಯಾಗಿದೆ. ವಿಷ್ಣುವು ಲೋಕ ರಕ್ಷಕನು, ಮಹೇಶ್ವರನು ಲೋಕದ ಲಯಕ್ಕೆ ಕಾರಣನು. ಬ್ರಹ್ಮನ ತೊಡೆಯಿಂದ ವೈಶ್ಯರು ಹುಟ್ಟಿದರು.

ಪ್ರತಿಷ್ಠಾನು ಪುರವೆಂಬುದು ನರ್ಮದಾ ನದಿಯ ತೀರದಲ್ಲಿನ ಒಂದು ಸುಂದರ ನಗರ. ಆ ನಗರದಲ್ಲಿ ಮೈತ್ರೇಯಸ ಸೇರಿದ ಚೂಡಾಮಣಿ ಎಂಬ ವೈಶ್ಯನು ವಾಸವಾಗಿದ್ದನು. ಅವನು ಸತ್ಯಸಂಧ, ಸದಾಚಾರಿ, ನಿತ್ಯವೂ ಧಾನಧರ್ಮಗಳಲ್ಲಿ ನಿರತನಾಗಿದ್ದನು. ಚೂಡಾಮಣಿಯು ಧರ್ಮಿಷ್ಠನಾಗಿದ್ದುದರಿಂದ ಜನರು ಅವನನ್ನು 'ಧರ್ಮಗುಪ್ತ' ಎಂದು ಕರೆಯುತ್ತಿದ್ದರು. ಧರ್ಮಗುಪ್ತನಿಗೆ ಬಹಳಕಾಲ ಮಕ್ಕಳಾಗಲಿಲ್ಲ. ಅವನು ಬ್ರಹ್ಮಜ್ಞಾನಿಯಾಗಿದ್ದರೂ, ಅವನ ಧರ್ಮಪತ್ನಿಯು ಮಕ್ಕಳಿಲ್ಲದ ಚಿಂತೆಯಿಂದ ಕೊರಗುತ್ತಿದ್ದಳು. ಧರ್ಮ ಗುಪ್ತನಿಗೆ ಭೂಮಿಂಜಯನೆಂಬ ಮಹರ್ಷಿಯ ದರ್ಶನವಾಯಿತು. ಶ್ರೀ ಲಕ್ಷ್ಮೀನಾರಾಯಣರ ಪೂಜಾ ವ್ರತದಿಂದ ಸಂತಾನವಿಲ್ಲದ ತನ್ನ ಕೊರಗು ನಿವಾರಣೆ ಆಗುವುದೆಂದು ಮಹರ್ಷಿಯ ಅಪ್ಪಣೆಯಾಯಿತು. ಕಾರ್ತೀಕ ಮಾಸದಿಂದ ಲಕ್ಷ್ಮೀನಾರಾಯಣರ ವ್ರತವನ್ನು ಪ್ರಾರಂಭಿಸಿದನು. ಬಹಳ ಕಾಲ ಈ ವ್ರತವನ್ನು ಆಚರಿಸುತ್ತಾ ಬಂದನು. ಈ ವ್ರತದಿಂದ ಲಕ್ಷ್ಮೀನಾರಾಯಣರು ಪ್ರಸನ್ನರಾದರು. ಇವರ ಅನುಗ್ರಹದಿಂದ ಧರ್ಮಗುಪ್ತನ ಹೆಂಡತಿಯು ಗರ್ಭಿಣಿಯಾದಳು. ನವಮಾಸಗಳು ತುಂಬಲು ಆಕೆಯು ಗಂಡು ಮಗುವಿಗೆ ಜನ್ಮವಿತ್ತಳು. ಗುರುಗಳ ಅಣತಿಯಂತೆ ಮಗುವಿಗೆ 'ಧರ್ಮನಂದನ' ಎಂದು ನಾಮಕರಣ ಮಾಡಿದರು.

ಧರ್ಮನಂದನನು ತಂದೆ ತಾಯಿಯರ ಕಣ್ಮಣಿಯಾಗಿ ಬೆಳೆಯುತ್ತಿದ್ದನು. ಅವನಿಗೆ ೧೨ನೇ ವಯಸ್ಸಿನಲ್ಲಿ ಉಪನಯನವನ್ನು ಮಾಡಿದರು. ಚ್ಯವನ ಮಹರ್ಷಿಯ ಬಳಿ ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಸೇರಿಸಿದರು. ಧರ್ಮನಂದನನು ಗುರುಕುಲದಲ್ಲಿ ಅತಿ ಶ್ರದ್ಧಾಭಕ್ತಿಗಳಿಂದ ಗುರುಸೇವೆಯನ್ನು ಮಾಡಿಕೊಂಡು ವಿದ್ಯಾಭ್ಯಾಸವನ್ನು ಮಾಡುತ್ತಿದ್ದನು. ಒಂದು ದಿನ ಧರ್ಮನಂದನನು ಫಲ, ಪುಷ್ಪ, ಸಮಿತ್ತು ದರ್ಭೆಗಳನ್ನು ತರಲು ಕಾಡಿನಲ್ಲಿ ಸಂಚರಿಸುತ್ತಿದ್ದಾಗ "ಕಾಪಾಡಿ ಕಾಪಾಡಿ ......ಎಂಬ ಆರ್ತನಾದ ಕೇಳಿ ಬಂತು.

ಧರ್ಮನಂದನನು ಕೂಡಲೇ ಆರ್ತನಾದ ಬಂದ ಕಡೆಗೆ ಹೋದನು. ಅಂಗೀರಸನೆಂಬ ಒಬ್ಬ ಯಾತ್ರಿಕ ಪುಣ್ಯಕ್ಷೇತ್ರಗಳ ಯಾತ್ರೆಗಾಗಿ ಈ ಅರಣ್ಯದ ಮೂಲಕ ಹೋಗುತ್ತಿದ್ದನು. ಬೇಡನೊಬ್ಬ ತನ್ನ ಇಷ್ಟ ದೇವತೆಗೆ ಬಲಿಕೊಡಲು ಅಂಗೀರಸನನ್ನು ಹಿಡಿದುಕೊಂಡಿದ್ದನು. ಅವನಿಂದ ಬಿಡಿಸಿಕೊಳ್ಳಲು ಅಂಗೀರಸ ಬಹುವಾಗಿ ಹೆಣಗುತ್ತಿದ್ದರೂ ಬೇಡನು ಅವನನ್ನು ಬಿಡದೇ ಬಲಿಪೀಠದತ್ತ ಬಲವಂತವಾಗಿ ಎಳೆದೊಯ್ಯುತ್ತಿದ್ದನು. ಅಂಗೀರಸ ಪ್ರಾಣಭಯದಿಂದ ಚೀರುತ್ತಿದ್ದನು. ಆ ದೃಶ್ಯವನ್ನು ಧರ್ಮನಂದನನು ನೋಡಿ ಬೇಡನು ಅತ್ಯಂತ ಬಲಶಾಲಿಯಾಗಿರುವುದರಿಂದ ಅವನೊಡನೆ ಕಾದಾಡಿದರೆ ಇಬ್ಬರ ಪ್ರಾಣಕ್ಕೂ ಅಪಾಯವೆಂದರಿತನು. ಧರ್ಮನಂದನನು ಬೇಡನನ್ನು ಕುರಿತು "ಯಾತ್ರಿಕನನ್ನು ಹಿಂಸಿಸಬೇಡ ಬಿಟ್ಟು ಬಿಡು" ಎಂದನು. ಆಗ ಬೇಡನು "ಏ ಬಾಲಕ, ಭಯವಿಲ್ಲದೆ ಮಾತನಾಡುತ್ತಿರುವೆಯಲ್ಲಾ, ಮರುಮಾತನಾಡಿದರೆ ನಿನ್ನನ್ನೇ ನನ್ನ ಇಷ್ಟದೇವತೆಯಾದ ವಿಂಧ್ಯವಾಸಿನಿಗೆ ಬಲಿಕೊಡುವೆನು" ಎಂದನು. "ಅಯ್ಯಾ ವ್ಯಾಧಾ, ನೀನು ಕೇಳಿದಷ್ಟು ಧನಕನಕಾದಿಗಳನ್ನು ಕೊಡುತ್ತೇನೆ. ದಯವಿಟ್ಟು ಈ ಯಾತ್ರಿಕನನ್ನು ಬಿಟ್ಟು ಬಿಡು" ಎಂದು ಮತ್ತೆ ಧರ್ಮನಂದನನು ಕೇಳಿಕೊಂಡನು. ಬೇಡನು "ಬಿಡುವುದಿಲ್ಲ" ಎಂದನು ಸರಿ, ನಿನಗೆ ಬೇಕಾಗಿರುವುದು ಬಲಿ ತಾನೇ, ಅವನನ್ನು ಬಿಟ್ಟು ಬಿಡು, ಅವನಿಗೆ ಬದಲಾಗಿ ನನ್ನನ್ನು ಕರೆದುಕೊಂಡು ಹೋಗು" ಎಂದು ಧರ್ಮನಂದನನು ಹೇಳಿದನು.

ಆಗ ಬೇಡನು ಒಂದರಗಳಿಗೆ ಯೋಚಿಸಿ ಬಲಿಕೊಡಲು ಯಾರಾದರೇನು? ಎಂದು ತೀರ್ಮಾನಿಸಿ ಯಾತ್ರಿಕನನ್ನು ಬಿಟ್ಟು ಧರ್ಮನಂದನನನ್ನು ಕರೆದುಕೊಂಡು ಹೊರಟನು. ಅದೇ ಸಮಯದಲ್ಲಿ ಭದ್ರಕನೆಂಬ ರಾಜನು ಮೃಗಯಾ ವಿಹಾರಕ್ಕೆಂದು ಅದೇ ಕಾಡಿಗೆ ತನ್ನ ಸೈನ್ಯದೊಡನೆ ಬಂದಿದ್ದನು. ರಾಜನ ಸೈನ್ಯವನ್ನೂ, ಕೋಲಾಹಲವನ್ನೂ ಕಂಡ ಬೇಡನು ಭಯ ವಿಹ್ವಲನಾಗಿ ಧರ್ಮನಂದನನನ್ನು ಒಂದು ಗವಿಯೊಳಗೆ ನೂಕಿದನು. ಅನಂತರ ಬಂಡೆಯಿಂದ ಗವಿಯ ಬಾಗಿಲನ್ನು ಮುಚ್ಚಿ ತಾನೊಂದು ಮರವನ್ನು ಹತ್ತಿ ಕುಳಿತುಕೊಂಡನು.

ಬೇಟೆಯಾಗಿ ಆಯಾಸಗೊಂಡ ರಾಜನು, ವಿಶ್ರಮಿಸಿಕೊಳ್ಳಲು ಅದೇ ಮರದ ಬುಡಕ್ಕೆ ಬಂದನು. ಆಕಸ್ಮಿಕವಾಗಿ ರಾಜನು ಮೇಲೆ ನೋಡಿದನು. ಹೆದರಿ ನಡುಗುತ್ತಿರುವ ಕ್ರೂರ ಬೇಡನು ಕಾಣಿಸಿದನು. ಮರದ ಮೇಲೆ ಕುಳಿತಿರುವ ಭಯಂಕರಾಕಾರನಾದ ಬೇಡನನ್ನು ದರೋಡೆಕೋರನೆಂದುಕೊಂಡು, ರಾಜನು ತನ್ನ ಸೈನಿಕರಿಂದ ಅವನನ್ನು ಕೊಲ್ಲಿಸಿದನು. ಇತ್ತ ಬೇಡನಿಂದ ಗವಿಯಲ್ಲಿ ತಳ್ಳಲ್ಪಟ್ಟ ಧರ್ಮನಂದನನು ತದೇಕ ಚಿತ್ತದಿಂದ ಭಗವಂತನನ್ನು ಕುರಿತು ಧ್ಯಾನ ಮಾಡತೊಡಗಿದನು. ಅವನಿಗೆ ಹೊರಪ್ರಪಂಚದ ಕಡೆ ಗಮನವೇ ಇರಲಿಲ್ಲ. ಚ್ಯವನ ಮಹರ್ಷಿಯ ಆಕ್ರಮಣದಿಂದ ಹೊರಗೆ ಹೋಗಿದ್ದ ಶಿಷ್ಯರೆಲ್ಲಾ ಸೂರ್ಯಾಸ್ತವಾಗುತ್ತಲೇ ಹಿಂದಿರುಗಿದರು. ಆದರೆ ಎಷ್ಟು ಹೊತ್ತಾದರೂ ಧರ್ಮನಂದನನು ಹಿಂದಿರುಗಲಿಲ್ಲ. ವ್ಯಾಕುಲಗೊಂಡ ಚ್ಯವನರು ದಿವ್ಯದೃಷ್ಟಿಯಿಂದ ಧರ್ಮನಂದನನ ಇರುವಿಕೆ, ಅವನ ಪರಿಸ್ಥಿತಿಯನ್ನು ನೋಡಿದರು. ಧರ್ಮನಂದನನಿಗೆ ಇದ್ದಲ್ಲಿಂದಲೇ ಶ್ರೇಯಸ್ಸನ್ನು ಕೋರಿದರು.

ಶಿವನ ಕಂಠಾಭರಣನಾದ ವಾಸುಕಿಯು ಆದಿಶೇಷನನ್ನು ನೋಡಲು ಪಾತಾಳ ಲೋಕಕ್ಕೆ ಹೋಗಬೇಕೆಂದು ಇದೇ ಗವಿಯೊಳಕ್ಕೆ ಆಗಮಿಸಿದನು. ಗವಿಯಲ್ಲಿ ಬಾಹ್ಯಜ್ಞಾನವಿಲ್ಲದೆ ಧ್ಯಾನಾಸಕ್ತನಾಗಿರುವ ಯುವಕನನ್ನು ಕಂಡು ವಾಸುಕಿಯು ಆಶ್ಚರ್ಯಗೊಂಡನು. ಆ ಯುವಕನನ್ನು ಎಚ್ಚರಗೊಳಿಸಿದನು. ಪರಸ್ಪರ ಪರಿಚಯ ವಾಯಿತು. ಅದು ಪಾತಾಳಲೋಕದ ದ್ವಾರವೆಂದು ಬೇಡನಿಗಾಗಲಿ, ಧರ್ಮನಂದನಿಗಾಗಲಿ ತಿಳಿದಿರಲಿಲ್ಲ.

ವಾಸುಕಿಯು ಪಾತಾಳಲೋಕಕ್ಕೆ ಹೋದನು. ಆದಿಶೇಷನ ಆಣತಿಯಂತೆ ವೈಶ್ಯ ತಪಸ್ವಿಯನ್ನು ಪಾತಾಳಲೋಕಕ್ಕೆ ಕರೆದನು. 'ನಾನು ಬೇಡನ ಅಧೀನ, ಇಲ್ಲಿಂದ ಕದಲಲಾರೆ' ಎಂದು ಧರ್ಮನಂದನನು ತಿಳಿಸಿದನು. ಬೇಡನು ನಾಶವಾದ ವಿಷಯವನ್ನು ವಾಸುಕಿಯು ದಿವ್ಯದೃಷ್ಟಿಯಿಂದ ತಿಳಿದು, ಧರ್ಮನಂದನನಿಗೆ ತಿಳಿಸಿದನು. ಅನಂತರ ಧರ್ಮನಂದನನು ವಾಸುಕಿಯೊಂದಿಗೆ ಪಾತಾಳದಲ್ಲಿರುವ ನಾಗಲೋಕಕ್ಕೆ ಹೋದನು. ನಾಗಲೋಕದಲ್ಲಿ ಆದಿಶೇಷನೇ ಮೊದಲಾದ ನಾಗರುಗಳು ಅತ್ಯಾದರದಿಂದ ಆಹ್ವಾನಿಸಿ, ಉಪಚರಿಸಿ, ಹೇರಳವಾದ ಅಮೂಲ್ಯ ರತ್ನಾಭರಣಗಳನ್ನು ಕೊಟ್ಟು ಅನುಗ್ರಹಿಸಿದರು. ಧರ್ಮನಂದನನು ಅವೆಲ್ಲವನ್ನೂ ಸ್ವೀಕರಿಸಿದನು. ಅವರ ಆದರಾತಿಥ್ಯಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದನು. ಆದಿಶೇಷನನ್ನು ಕುರಿತು ವೈಶ್ಯರ ಪೂರ್ವ ಚರಿತ್ರೆಯನ್ನು ಕೃಪೆಮಾಡಿ ತಿಳಿಸಬೇಕೆಂದು ಕೋರಿದನು. ಆಗ ಆದಿಶೇಷನು ಪ್ರಸನ್ನ ಚಿತ್ತದಿಂದ ಧರ್ಮನಂದನನಿಗೆ ವೈಶ್ಯಕುಲ ಚರಿತ್ರೆಯನ್ನು ತಿಳಿಸಿದರು.

ವೈಶ್ಯರ ಚರಿತ್ರೆಯನ್ನು ಶ್ರದ್ಧೆಯಿಂದ ಕೇಳಿ ಧನ್ಯನಾದ ಧರ್ಮನಂದನನ ಕೊರಳಿಗೆ ಆದಿಶೇಷನು ಬಾಡದಿರುವ ಕಮಲಗಳ ಮಾಲೆಯನ್ನು ಹಾಕಿ "ಇಚ್ಛಾಮರಣಿಯಾಗು" ಎಂದು ಹರಸಿದನು.[೨] ನಾಗದೂತರು ಆದಿಶೇಷನ ಅಪ್ಪಣೆಯಂತೆ ಧರ್ಮನಂದನನನ್ನು ಭೂಲೋಕದವರೆಗೂ ಬಿಟ್ಟು ಬಂದರು.

ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ವೈಶ್ಯರ ಮೂಲ ಪುರುಷರು ಸತ್ಯಲೋಕದಲ್ಲಿ ಹಲವು ಕಾಲ ಇದ್ದು, ಅಲ್ಲಿಂದ ಕರ್ಮಭೂಮಿಯಾದ ಭೂಲೋಕಕ್ಕೆ ಯೋಗಶಕ್ತಿಯಿಂದ ಬಂದರು. ಸತ್ಯಧರ್ಮಗಳಿಂದ ಜೀವನ ನಡೆಸುತ್ತಿದ್ದರು. ಭೂಲೋಕದಲ್ಲಿ ಬರುಬರುತ್ತಾ ಅನ್ಯಾಯ, ಅಧರ್ಮಗಳು ಜಾಸ್ತಿಯಾಗುತ್ತಿದ್ದವು. ಅದನ್ನು ಕಂಡು ಬೆಸತ್ತ ವೈಶ್ಯರ ಮೂಲಪುರುಷರು ತಪಸ್ಸು ಮಾಡಲು ಮೇರು ಪರ್ವತಕ್ಕೆ ಹೋದರು. ಅಲ್ಲಿ ಎಲ್ಲರೂ ಪರಶಿವನನ್ನು ಕುರಿತು ಘೋರವಾದ ತಪಸ್ಸನ್ನು ಆಚರಿಸಿದರು. ಭಕ್ತರ ತಪಸ್ಸಿಗೆ ಮೆಚ್ಚಿದ ಪರಮೇಶ್ವರನು ಪ್ರತ್ಯಕ್ಷನಾಗಿ ಅವರ ಕೋರಿಕೆ ಏನೆಂದು ಕೇಳಿದನು. ವೈಶ್ಯ ಮಹಾಪುರುಷರು ಪರಮ ವೈರಾಗ್ಯಶಾಲಿಗಳಾದ್ದು ದರಿಂದ ಶಿವನ ಸಾನಿಧ್ಯವನ್ನು ಅನುಗ್ರಹಿಸುವಂತೆ ಕೇಳಿದರು. "ತಥಾಸ್ತು" ಎಂದು ಹೇಳಿ ಶಿವನು ಅಂತರ್ಧಾನನಾದನು.

ಪರಶಿವನ ವರದಿಂದ ವೈಶ್ಯ ಮಹಾಪುರುಷರು ಕೈಲಾಸವನ್ನು ತಲುಪಿದರು. ಅಲ್ಲಿ ಅವರು ಕೆಲವು ಕಾಲ ಉಮಾಶಂಕರರನ್ನು ಆರಾಧಿಸಿದರು. ಬಳಿಕ ಸತ್ಯಲೋಕಕ್ಕೆ ಹೋಗಿ ಅಲ್ಲಿ ಅವರು ಸರಸ್ವತೀ ಬ್ರಹ್ಮರನ್ನು ಆರಾಧಿಸಿದರು. ಹಾಗೆಯೇ ವೈಕುಂಠಕ್ಕೆ ಹೋಗಿ ಅಲ್ಲಿ ಲಕ್ಷ್ಮೀನಾರಾಯಣರನ್ನು ಆರಾಧಿಸಿದರು. ಹೀಗೆ ಆ

ವೈಶ್ಯ ಮಹಾಪುರುಷರು ತ್ರಿಮೂರ್ತಿಗಳನ್ನು ಭಕ್ತಿಯಿಂದ ಆರಾಧಿಸುತ್ತಾ ಎಷ್ಟೋ ಕಾಲವನ್ನು ಆನಂದದಿಂದ ಕಳೆದರು.

ಇತ್ತ ಭೂಲೋಕದಲ್ಲಿ ಕೃಷಿ, ವಾಣಿಜ್ಯ, ಪಶುಪಾಲನಾ ವೃತ್ತಿಗಳನ್ನು ಅನುಸರಿಸುತ್ತಿದ್ದ ವೈಶ್ಯರು ಇಲ್ಲದೆ ಜನರಿಗೆ ಬಹಳ ತೊಂದರೆಯಾಯಿತು. ಈ ಸಮಾಚಾರವು ನಾರದರ ಮೂಲಕ ಬ್ರಹ್ಮನಿಗೆ ತಿಳಿಯಿತು. ಆಗ ಬ್ರಹ್ಮನು ವೈಶ್ಯ ಮಹಾಪುರುಷರನ್ನು ಕುರಿತು ಮಹಾಪುರುಷರೇ, ನೀವು ಮರಳಿ ಭೂಲೋಕಕ್ಕೆ ಹೋಗಿ, ಲೋಕ ಕಲ್ಯಾಣಾರ್ಥವಾಗಿ ಸ್ವಕರ್ಮ ಪರಿಪಾಲಕರಾಗಿ ಸಕಲ ಪ್ರಾಪಂಚಿಕ ಸುಖವನ್ನು ಅನುಭವಿಸಿಕೊಂಡಿದ್ದು, ನಿಮ್ಮ ನಡವಳಿಕೆಯನ್ನು ಇತರರಿಗೂ ಉಪದೇಶಿಸಿ, ಅವರೂ ನಿಮ್ಮಂತೆಯೇ ಸ್ವಕರ್ಮ ನಿರತರಾಗುವಂತೆ ಮಾಡಿ ಕೊನೆಗಾಲಕ್ಕೆ ತನ್ನ ಸನ್ನಿಧಿಗೆ ಬನ್ನಿ ಎಂದು ಅಪ್ಪಣೆ ಮಾಡಿದನು. ಒಮ್ಮೆ ವೈಶ್ಯ ಮಹಾಪುರುಷರು ಕಾರ್ಯಾರ್ಥವಾಗಿ ಭೂಲೋಕಕ್ಕೆ ಬರುತ್ತಿದ್ದಾಗ ದಾರಿಯಲ್ಲಿ ಗೌತಮ ಋಷಿಯು ಆಶ್ರಮವನ್ನು ನೋಡದೇ ದಾಟಿ ಹೋದರು. ಆ ಮಹಾಪುರುಷನನ್ನು ಕಂಡು ಗೌತಮರು ಕೋಪದಿಂದ "ನೀವು ಅಂತರಿಕ್ಷದಿಂದ ಪತನವಾಗಿ ಭೂಮಿಯನ್ನು ಸೇರಿ ವೇದಕರ್ಮರಹಿತರಾಗಿ" ಎಂದು ಶಪಿಸಿದರು. ಕೂಡಲೇ ವೈಶ್ಯ ಮಹಾ ಪುರುಷರು ಗೌತಮರನ್ನು ತಮ್ಮದು ತಪ್ಪಾಯಿತು ಕ್ಷಮಿಸಬೇಕೆಂದರು ಆದರೆ ಗೌತಮರು ಮಾತನಾಡದೇ ಆಶ್ರಮಕ್ಕೆ ಹೊರಟು ಹೋದರು. ತೇಜೋಹೀನರಾದ ವೈಶ್ಯ ಮಹಾಪುರುಷರು ವ್ಯಥೆಯಿಂದ ಗೋ ಬಿಲ ಪ್ರವೇಶ ಮಾಡಿದರು. ಬಹಳ ಕಾಲ ಮರಳಿ ಬರಲಿಲ್ಲ. ಈ ವಿಷಯ ತಿಳಿದ ನಾರದರು ರಜತಾದ್ರಿಯಲ್ಲಿ ವಿಹರಿಸುತ್ತಿದ್ದ ಹಲವು ವೈಶ್ಯರನ್ನು ಕಂಡು ಈ ವೃತ್ತಾಂತವನ್ನು ತಿಳಿಸಿದರು. ಆಗ ಆ ವೈಶ್ಯ ಮಹಾಪುರುಷರು ಗೋ ಬಿಲದ ವೈಶ್ಯರ ನಿರ್ಗಮನಕ್ಕೆ ನಾವೇನು ಮಾಡಬೇಕು ಎಂದರು.

ಆಗ ನಾರದರು "ನಿಮ್ಮ ತಪೋರಾಶಿ ಪ್ರಭಾವದಿಂದ ಅವರು ವಿನಿಷ್ಪತಿಯನ್ನು ಹೊಂದಬಲ್ಲರು" ಎಂದರು. ಆ ಮಹಾಪುರುಷರು ತಕ್ಷಣ ಗೋ ಬಿಲವನ್ನು ಪ್ರವೇಶಿಸಿದರು. ಅಲ್ಲಿ ತಮ್ಮ ವಂಶೀಯರಾದ ವೈಶ್ಯರನ್ನು ಕಂಡು ತಮ್ಮ ತಪೋರಾಶಿಯಿಂದ ವೈಶ್ಯ ಮಹಾಪುರುಷರನ್ನು ಉದ್ಧರಿಸಿದರು. ಈ ವೃತ್ತಾಂತವನ್ನು ಈಶ್ವರನಿಗೆ ತಿಳಿಸಲು ಕೈಲಾಸಕ್ಕೆ ಬಂದರು.

ಕೈಲಾಸದಲ್ಲಿ ನಂದೀಶ್ವರನು ಬ್ರಹ್ಮೇಂದ್ರಾದಿಗಳೊಂದಿಗೆ ತಾಂಡವೋತ್ಸವದಿಂದ ಶಿವನನ್ನು ಓಲೈಸು ತ್ತಿದ್ದನು. ಈಶ್ವರನು ತಾಂಡವವನ್ನು ಮೆಚ್ಚಿ ನಂದೀಶ್ವರನನ್ನು ಬಹುವಾಗಿ ಸನ್ಮಾನಿಸಿದನು. ಬ್ರಹ್ಮಾದಿಗಳಿಗೆ ದುರ್ಲಭವಾದ ಆ ಸನ್ಮಾನದಿಂದ ಗರ್ವಿತನಾದ ನಂದೀಶ್ವರನು, ಪಾರ್ವತಿದೇವಿಯನ್ನು ಹೊರತುಪಡಿಸಿ ಈಶ್ವರನಿಗೆ ಮಾತ್ರ ಪ್ರದಕ್ಷಿಣೆ ಮಾಡಿ ನಮಸ್ಕರಿಸಿದನು. ಆಗ ಪಾರ್ವತಿಯೂ ಕೋಪೋದ್ರಿಕ್ತಳಾಗಿ ನಂದೀಶ್ವರನನ್ನು ನೋಡಿ ಅಲ್ಪನೇ! ನೀನು ಪಾಪಪೀಡಿತನಾಗಿ ಭೂಲೋಕ ಪತಿತನಾಗು ಎಂದು ಶಪಿಸಿದಳು. ಆಗ ನಂದೀಶ್ವರನು ಕೋಪದಿಂದ ನಿರಪರಾದಿಯೂ ಬ್ರಾಹ್ಮಣನೂ ಆದ ನನ್ನನ್ನು ಶಪಿಸಿದ ನೀನು ನನ್ನೊಂದಿಗೇ ಭೂಮಿಯಲ್ಲಿ ಹುಟ್ಟಿ ಪತಿತಳಾಗಿ ಅಗ್ನಿಯಲ್ಲಿದಗ್ಧಳಾಗು ಎಂದು ಪ್ರತಿಶಾಪವನ್ನು ಕೊಟ್ಟನು.

ಊರ್ವರ ಶಾಪ ಪ್ರತಿಶಾಪಗಳನ್ನು ಕೇಳಿದ ಈಶ್ವರನು ಮುಂದೆ ಜರುಗಲಿರುವುದನ್ನು ಯೋಚಿಸಿ ಮೌನವಹಿಸಿದನು.

"ವೈಶ್ಯ ಮಹಾಪುರುಷರು ಭೂಲೋಕಕ್ಕೆ ಬರಲು ಅಪೇಕ್ಷೆ ಇಲ್ಲ" ಎಂದರು. ಆಗ ಬ್ರಹ್ಮನು ತಾನೂ ಭೂಲೋಕದಲ್ಲಿ ಹುಟ್ಟಿ ವೈಶ್ಯರ ಮಾರ್ಗದರ್ಶಕನಾಗುವೆನೆಂದು ಅಭಯವನ್ನಿತ್ತನು. ಅದರಂತೆ ಬ್ರಹ್ಮನು ಭೃಗುವಂಶದಲ್ಲಿ ಭಾಸ್ಕರಾಚಾರ್ಯರಾಗಿ ಜನಿಸಿ ವೈಶ್ಯ ಕುಲಗುರುಗಳಾದರು.

"ಆದಿಪರಾಶಕ್ತಿಯು ಭೂಲೋಕದಲ್ಲಿ ಅವತರಿಸಿ ವೈಶ್ಯಕುಲವನ್ನು ಉದ್ಧಾರ ಮಾಡುವಳು. ನೀವು ಆಕೆಯ ದರ್ಶನ, ಉಪದೇಶಗಳಿಂದ ಪುನೀತರಾಗಿ" ಎಂದು ತಿಳಿಸಿದನು.[೩] ವೈಶ್ಯ ಮಹಾಪುರುಷರು ಯೋನಿ ಜನನ ಅಸಹ್ಯವೆಂದರು. ಅದಕ್ಕೆ ಬ್ರಹ್ಮನು "ಗೋ ಲೋಕದಲ್ಲಿರುವ ಕಾಮಧೇನುವನ್ನು ತಪಸ್ಸಿನಿಂದ ಒಲಿಸಿಕೊಂಡು ಆ ದೇವ ದೇನುವಿನ ಅನುಗ್ರಹದಿಂದ ಅದರ ಕರ್ಣದಿಂದ ಜನಿಸಿರಿ" ಎಂದು ಹೇಳಿದನು. ವೈಶ್ಯ ಯೋಗಿಗಳು ತಪಸ್ಸಿನಿಂದ ಕಾಮಧೇನುವನ್ನು ಒಲಿಸಿಕೊಂಡು ಗೋಗರ್ಭ ಸೇರಿ, ದಿವ್ಯ ಸಂಜ್ಞ ಸಂವತ್ಸರ ಕಾಲ ಗೋಗರ್ಭದಲ್ಲಿ ವೈಶ್ಯರನ್ನು ಧರಿಸಿದ ಕಾರಣ ಅವರಿಗೆ ಗೋಮಠರು ಎಂಬ ಹೆಸರು ಬಂತು. ಕಾಲಕ್ರಮೇಣ ಗೋಮಠಿ, ಕೋಮಠಿಯಾಗಿ ವೈಶ್ಯರು ಪ್ರಸಿದ್ಧರಾಗಿದ್ದಾರೆ.

ಒಂದು ಸಾರಿ ಬ್ರಹ್ಮನು ಲೌಕಿಕ ವ್ಯವಹಾರವನ್ನರಿಯಲು ಭೂಲೋಕದ ಮುಖಂಡರನ್ನು ತನ್ನಲ್ಲಿಗೆ ಕರೆಯಿಸಿಕೊಂಡನು. ಬ್ರಾಹ್ಮಣ ಪ್ರಮುಖನಾದ ದೂರ್ವಾಸ ಋಷಿಯು ಈ ರೀತಿಯಾಗಿ ಹೇಳಿದನು. ಅಧ್ಯಾಪನ (ಅಧ್ಯಯನ ಮಾಡುವುದು) ಯಾಜನ (ಯಾಗ ಮಾಡಿಸುವುದು) ಪ್ರತಿಗ್ರಹ (ದಾನ ತೆಗೆದುಕೊಳ್ಳುವುದು) ಇವು ಮೂರು ಬ್ರಾಹ್ಮಣರ ವಿಶೇಷ ವೃತ್ತಿಗಳು. ರಾಜ್ಯವಾಳುವುದು, ದುಷ್ಟರನ್ನು ಶಿಕ್ಷಿಸುವುದು, ಶಿಷ್ಟಪರಿಪಾಲನೆ ಇವು ಕ್ಷತ್ರಿಯರ ವಿಶೇಷ ವೃತ್ತಿಗಳು, ಪಶುಪಾಲನೆ, ವ್ಯವಸಾಯ, ವ್ಯಾಪಾರ ಇವು ವೈಶ್ಯರ ವಿಶೇಷ ವೃತ್ತಿಗಳು. ಇವರೆಲ್ಲರ ಸೇವೆ ಮಾಡುವುದು ಶೂದ್ರರ ವೃತ್ತಿ" ಎಂದು ತಿಳಿಸಿದನು. ಎಲ್ಲಾ ವರ್ಣಗಳವರು ತಮ್ಮ ತಮ್ಮ ಕುಲವೃತ್ತಿಯಲ್ಲಿ ನಿರತರಾಗಿ ಭೂಲೋಕದಲ್ಲಿ ಎಷ್ಟೋ ಕಾಲದಿಂದ ಸುಖವಾಗಿ ಮತ್ತು ಪರಸ್ಪರ ಸೌಹಾರ್ದದಿಂದಿರುವರು. ತಮ್ಮ ಸೂಚನೆಯಂತೆ ಬೇರೆ ಬೇರೆ ಗೋತ್ರ, ಸೂತ್ರ, ಪ್ರವರಗಳನ್ನು ಕಲ್ಪಿಸಿಕೊಂಡು ಸಂಬಂಧ ಬಾಂಧವ್ಯವನ್ನು ಮಾಡುತ್ತಿದ್ದಾರೆ ಎಂದು ತಿಳಿಸಿದನು.

ಬ್ರಾಹ್ಮಣರಲ್ಲಿ ೧೦೭ ಗೋತ್ರಗಳಿವೆ. ಅವುಗಳಲ್ಲಿ ೧೮ ಗೋತ್ರಗಳು ಪ್ರಸಿದ್ಧವಾಗಿವೆ ಎಂದನು. ಕ್ಷತ್ರಿಯರ ಪ್ರತಿನಿಧಿಯಾದ ಧನಂಜಯ ಮಹಾರಾಜರು ನಮ್ಮಲ್ಲಿ ೭ ಗೋತ್ರಗಳಿವೆ. ಅವೆಲ್ಲಾ ಪ್ರಸಿದ್ಧವಾಗಿವೆ ಎಂದನು. ವೈಶ್ಯ ಶ್ರೇಷ್ಠನಾದ ಸಮಾಧಿಯು ನಮ್ಮಲ್ಲಿ ೭೧೪ ಗೋತ್ರಗಳಿವೆ ಎಂದು ಭಿನ್ನವಿಸಿಕೊಂಡನು.

ಸ್ವಧರ್ಮ ನಿರತರಾದ ಎಲ್ಲಾ ವರ್ಣದವರನ್ನು ಅಭಿನಂದಿಸಿ, ಬ್ರಹ್ಮನು ಈ ರೀತಿಯಾಗಿ ಹೇಳಿದನು. ಬ್ರಾಹ್ಮಣರ ಮತ್ತು ಕ್ಷತ್ರಿಯರ ಪ್ರಸಿದ್ಧವಾದ ಗೋತ್ರಗಳ ಸಂಖ್ಯೆಯು ತಿಳಿಯಿತು. ಆದರೆ ವೈಶ್ಯರ

[illegible]

ಗೋತ್ರಗಳಲ್ಲಿ ಪ್ರಸಿದ್ಧವಾದವುಗಳು ಎಷ್ಟು ಎಂಬುದು ತಿಳಿಯಲಿಲ್ಲ. ಈಗ ಅದನ್ನು ನಾನು ತಿಳಿಸುತ್ತೇನೆ ಎಂದನು.

ಮುಂದೆ ಕುಸುಮ ಶ್ರೇಷ್ಠಿ ಎಂಬುವನು ವೈಶ್ಯರ ನಾಯಕನಾಗುವನು. ಅವನಿಗೆ ವಿಶೇಷ ಸೌಂದರ್ಯವುಳ್ಳ ಸಕಲ ಗುಣ ಸಂಪನ್ನೆಯಾದ ದೈವಾಂಶ ಸಂಭೂತಳಾದ ಪುತ್ರಿಯು ಹುಟ್ಟುವಳು. ಅವಳನ್ನು ಓರ್ವ ರಾಜನು ಮೋಹಿಸುವನು. ಅವನನ್ನು ಮದುವೆಯಾಗಲು ಕನ್ಯೆಯು ಒಪ್ಪುವುದಿಲ್ಲ. ತಂದೆ-ತಾಯಿ, ಬಂಧು-ಬಳಗ, ಪರಿವಾರದವರು ರಾಜನ ಅಭಿಮತಕ್ಕೆ ವಿರೋಧಿಗಳಾಗುವರು. ರಾಜನು ಪ್ರಬಲನಾದುದರಿಂದ ಕನ್ಯೆಯನ್ನು ಅಪಹರಿಸಲು ಬಲಪ್ರಯೋಗ ಮಾಡಲು ಸಿದ್ಧನಾಗುವನು. ಆಗ ೧೦೨ ಗೋತ್ರದವರು ಮಾತ್ರ ಧರ್ಮಕ್ಕಾಗಿ ಎಲ್ಲಾ ವಿಧವಾದ ತ್ಯಾಗಕ್ಕೂ ಸಿದ್ಧರಾಗಿ ಆ ಕನ್ಯೆಯ ಅನುಚರರಾಗುವರು. ಪರಾಶಕ್ತಿಯ ಅವತಾರವಾದ ಆ ಕನ್ಯೆಯು ಅವರೊಂದಿಗೆ ಅಗ್ನಿ ಪ್ರವೇಶ ಮಾಡುವ ಮೂಲಕ ಆ ಗೋತ್ರದವರನ್ನು ಉದ್ಧಾರ ಮಾಡುವಳು. ಉಳಿದವರು ರಾಜನಿಗೆ ಹೆದರಿ ಕರ್ತವ್ಯ ಭ್ರಷ್ಠರಾಗಿ ಧರ್ಮ ಭ್ರಷ್ಠರಾಗಿ ದಿಕ್ಕಾಪಾಲಾಗುವರು. ೭೧೪ ಗೋತ್ರ ಗಳಲ್ಲಿ ೧೦೨ ಗೋತ್ರಗಳು ಮಾತ್ರ ಲೋಕದಲ್ಲಿ ಪ್ರಸಿದ್ಧವಾಗುವವು. ಹೀಗೆ ಬ್ರಹ್ಮವಾಣಿಯು ಮುಗಿದ ಬಳಿಕ ಎಲ್ಲರೂ ಚತುರ್ಮುಖನನ್ನು ಭಕ್ತಿಯಿಂದ ವಂದಿಸಿ ಅವರ ಗುಣಗಾನವನ್ನು ಮಾಡುತ್ತಾ ಭೂಲೋಕಕ್ಕೆ ಹಿಂದಿರುಗಿದರು.

ವೈಶ್ಯರ ಪೂರ್ವ ಚರಿತ್ರೆಯಾದ ಈ ಕಥೆಯನ್ನು ಮೊದಲು ಬ್ರಹ್ಮನು ಆದಿಶೇಷನಿಗೆ ಹೇಳಿದನು. ಆದಿಶೇಷನು ಧರ್ಮನಂದನನಿಗೆ ಹೇಳಿದನು. ಈ ವಿಷಯ ನಾರದರಿಂದ ಸಾಲಂಕಾಯನ ಋಷಿಗೆ ತಿಳಿಯಿತು. ಸಾಲಂಕಾಯನರು ವೈಶ್ಯ ಋಷಿಗಳಿಗೆ ಹೇಳಿದರು. ಇದನ್ನೇ ಸೂತ ಪುರಾಣಿಕರು ಶೌನಕಾದಿ ಮುನಿಗಳಿಗೆ ಹೇಳಿದರು.

೨.೧. ಅರ್ಥ ಮತ್ತು ಪ್ರಾಚೀನತೆ

ಕನ್ನಡ ರತ್ನಕೋಶದಲ್ಲಿ ವೈಶ್ಯ Vai'sya ಎಂದರೆ Member of the third of the four great hindu castes or that third caste.

ವೈದಿಕ ಸಂಪ್ರದಾಯದ ನಾಲ್ಕು ವರ್ಣಗಳಲ್ಲಿ ಮೂರನೆಯದಾದ ವೈಶ್ಯ ವರ್ಣಕ್ಕೆ ಸೇರಿದ ವೈಶ್ಯವರ್ಣ ಎಂದು ಭಾರದ್ವಜ ಕೋಶದಿಂದ ತಿಳಿದು ಬಂದಿದೆ. ವೈಶ್ಯರು, ಆರ್ಯವೈಶ್ಯರು, ಶ್ರೇಷ್ಠಿಗಳು, ಶೆಟ್ಟರು, ಕೋಮಟಿ, ಗುಪ್ತರು ಎನ್ನುವ ಪದನಾಮಗಳಿಂದ ಇವರನ್ನು ಕರೆಯುತ್ತಾರೆ. ಈ ಜನಾಂಗದವರು "ಕೋಮಟಿ" ಪದವನ್ನು ಗೋಮತಿ ಎಂದು ಅರ್ಥೈಸಿದ್ದಾರೆ.[೪] ಗೋಮತಿ ಅಂದರೆ ಹಸುವಿನ ಬುದ್ಧಿಯವರು ಎಂದರ್ಥ. ಇದು ಒಂದು ದೃಷ್ಟಿಯಿಂದಷ್ಟೇ ನಿಜ. ಹುಲ್ಲನ್ನು ತಿಂದು ಅನ್ಯರಿಗೆ ಹಾಲನ್ನು ಕೊಡುವ ಹಸು. ನಂತರದಲ್ಲಿ ಚಾಟಿಯ ಏಟು ತಿನ್ನುವ ಹಾಗೆ, ಹಸುವನ್ನು ಕರೆದೊಯ್ದು ಪೂಜಿಸಿ-ನಮಸ್ಕರಿಸಿ ನಂತರ ಕೋಲಿನಿಂದ ಒದ್ದು

ಓಡಿಸುವ ಹಾಗೆ. ಹಿಂದಿನ-ಇಂದಿನ ಸಮಾಜ ವೈಶ್ಯರನ್ನು ಈ ರೀತಿ ನಡೆಸಿಕೊಂಡಿದೆ. ಈ ದೃಷ್ಟಿಯಿಂದಷ್ಟೇ "ಗೋಮತಿ"ಗಳೂ ಎಂದೂ ಒಪ್ಪಿಕೊಂಡಿದ್ದಾರೆ.

ಪುರಾಣ ಕಾಲದಿಂದಲೂ ಬಂದಂತಹ ಈ ಚತುರ್ವರ್ಣಗಳಲ್ಲಿ ಈ ಜನಾಂಗವೂ ಒಂದಾಗಿದೆ. ಬ್ರಹ್ಮನ ಮುಖದಿಂದ ಬ್ರಾಹ್ಮಣರು, ಭುಜದಿಂದ ಕ್ಷತ್ರಿಯರು, ತೊಡೆಗಳಿಂದ ವೈಶ್ಯರು, ಪಾದಗಳಿಂದ ಶೂದ್ರರು ಹುಟ್ಟಿದರೆಂದು ವೇದ ಪುರಾಣಗಳು ಹೇಳುತ್ತವೆ. ತರುವಾಯ ವೇದ ಪಾಲನೆಯಲ್ಲಿ ಬ್ರಾಹ್ಮಣರನ್ನು, ಪ್ರಜಾರಕ್ಷಣೆಯಲ್ಲಿ ಕ್ಷತ್ರಿಯರನ್ನೂ, ವ್ಯಾಪಾರ, ಕೃಷಿ ಪಶು ಸಂಗೋಪನೆಯಲ್ಲಿ ವೈಶ್ಯರನ್ನು ಸಮುಷ್ಠಿಯಾದ ಈ ಬ್ರಾಹ್ಮಣ, ಕ್ಷತ್ರಿಯ ವೈಶ್ಯರ ಅನುಸರಣೆಯಲ್ಲಿ ಶೂದ್ರರನ್ನು ನೇಮಿಸಿದನೆಂದು ಈ ಪುರಾಣಗಳು ಹೇಳುತ್ತವೆ. ಅನಂತರ ತನ್ನ ಜೇಷ್ಠ ಪುತ್ರನಾದ ಅಂಗೀರಸನನ್ನು ಬ್ರಾಹ್ಮಣ ಗುರುಗಳಾಗಿಯೂ ತನ್ನ ಮಾನವ ಪುತ್ರ ವಸಿಷ್ಠನನ್ನು ಕ್ಷತ್ರಿಯ ಗುರುವಾಗಿಯೂ ತನ್ನ ಮತ್ತೊಬ್ಬ ಮಾನವ ಪುತ್ರನಾದ ಅಪರಾರ್ಕನನ್ನು "ವೈಶ್ಯ ಶಿಕ್ಷಕ" ನನ್ನಾಗಿಯೂ ನಿಯಮಿಸಿ ಕರ್ಮ ಭೂಮಿಗೆ ಹೋಗಿ ತಮ್ಮ ತಮ್ಮ ಕೆಲಸಗಳನ್ನು ನಿರ್ವಹಿಸಲು ಆಜ್ಞಾಪಿಸಿದರು. ಈ ರೀತಿ ವೈಶ್ಯರು ಬ್ರಹ್ಮನ ಮಾನಸ ಪುತ್ರನಾದ ಅಪರಾರ್ಕ ಋಷಿಯನ್ನು ಶಿಕ್ಷಕರಾಗಿ ಪಡೆದು ಕೀರ್ತಿವಂತರಾದರಂತೆ. ಬ್ರಾಹ್ಮಣ, ಕ್ಷತ್ರಿಯ, ಗೋತ್ರಕ್ಕಿಂತಲೂ ವೈಶ್ಯರ ಗೋತ್ರಗಳು ಹೆಚ್ಚಾಗಿವೆ ಯೆಂದು ಪುರಾಣಗಳಿಂದ ತಿಳಿಯಬಹುದು. ಅಪರಾರ್ಕ ಮುನಿಗಳ ಮಾರ್ಗದರ್ಶನದಂತೆ ವೈಶ್ಯರ ಕುಲವೃತ್ತಿ ಗಳೆಂದರೆ ಕೃಷಿ, ಪಶುಸಂಗೋಪನೆ ಮತ್ತು ಮುಖ್ಯವಾಗಿ ವ್ಯಾಪಾರವಾಗಿತ್ತು.

ವೈಶ್ಯರು ಗೋವು ಮತ್ತು ಬ್ರಾಹ್ಮಣರ ರಕ್ಷಕರಾಗಿರುತ್ತಾರೆ. ವೈಶ್ಯರಿಗೆ ಕೋವಟಿ ಎಂಬ ಹೆಸರಿದೆ. "ಕೋಮಟಿ" ಶಬ್ದವು ಗೋಮತಿ ಶಬ್ದದಿಂದ ಹುಟ್ಟಿದೆ. ಗೋ ಮತಿರವ ಮತಿಃಯೇಷಾಂತೇ ಗೋಮತಿಯಃ ಅಂದರೆ ವೈಶ್ಯರು ಗೋವಿನಂತಹ ಬುದ್ಧಿಯುಳ್ಳವರೆಂದೂ ವೈಶ್ಯರಿಗೂ ಗೋವುಗಳಿಗೂ ಸಾಮ್ಯವಿರುವುದೆಂದೂ ತಿಳಿದು ಬರುತ್ತದೆ. ಬ್ರಹ್ಮನು ವೈಶ್ಯರ ಜೊತೆಗೆ ಗೋವನ್ನು ಸೃಷ್ಟಿ ಮಾಡಿದನೆಂದು ವೇದ ಹೇಳುತ್ತದೆ. ಜೋತಿಷ್ಯ ಗ್ರಂಥಗಳಲ್ಲಿ ನವಗ್ರಹಗಳಲ್ಲಿರುವ ಬುಧ ಚಂದ್ರರು ವೈಶ್ಯರೆಂದು ತಿಳಿದು ಬಂದಿದೆ.

ಈ ಜನಾಂಗದವರಲ್ಲಿ ಎರಡು ಪಂಗಡಗಳನ್ನು ಕಾಣಬಹುದು. ಎಣ್ಣೆ ಕೋಮಟಿ ಮತ್ತು ತುಪ್ಪದ ಕೋಮಟಿ ಎಂಬ ಎರಡು ಉಪ ಪಂಗಡಗಳನ್ನು ಹೊಂದಿದ್ದಾರೆ.

೨.೨. ಭೌಗೋಳಿಕ ಪರಿಸರ

ಹೈದ್ರಾಬಾದ್ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ವೈಶ್ಯರು ವಾಸಿಸುತ್ತಾರೆ. ಹೈದ್ರಾಬಾದ್ ಕರ್ನಾಟಕಕ್ಕೆ ಸಂಬಂಧಿಸಿದ ಹಾಗೆ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಈ ಎಲ್ಲಾ ಜಿಲ್ಲೆಗಳಲ್ಲಿಯೂ ವೈಶ್ಯರನ್ನು ಕಾಣಬಹುದಾಗಿದೆ. ಅಂದಾಜು ಸುಮಾರು ೬೫ರಿಂದ ೭೦ ಸಾವಿರ ಜನರು ವಾಸಿಸುತ್ತಿದ್ದಾರೆ. ಹೈದ್ರಾಬಾದ್ ಕರ್ನಾಟಕದ ಕೆಲವು ಗಡಿ ಭಾಗದ ವೈಶ್ಯರು ಹೆಚ್ಚಾಗಿ ತೆಲುಗು ಮಾತನಾಡು

ತ್ತಾರೆ. ಏಕೆಂದರೆ ಕ್ಷೇತ್ರ ಕಾರ್ಯದಲ್ಲಿ ಸಿಕ್ಕಿರುವ ಮಾಹಿತಿಯ ಪ್ರಕಾರ ಇವರ ಆರಾಧ್ಯ ದೇವತೆ ಶ್ರೀ ವಾಸವಿ ಕನ್ನಿಕಾಪರಮೇಶ್ವರಿಯ ವಾಸಸ್ಥಾನ ಆಂಧ್ರ ಪ್ರದೇಶದ ಪೆನಗೊಂಡ ಆಗಿರುವುದರಿಂದ ತೆಲಗನ್ನೇ ತಮ್ಮ ಮಾತೃ ಭಾಷೆಯನ್ನಾಗಿ ಅಳವಡಿಸಿಕೊಂಡಿದ್ದಾರೆ. ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳನ್ನು ಮಾತನಾಡುವವರು, ಹಾಗೂ ಆಂಧ್ರ ಪ್ರದೇಶದ ವೈಶ್ಯರು ಬಂದು ಇಲ್ಲಿ ನೆಲಸಿರುವುದು ಹೆಚ್ಚು. ಆಂಧ್ರ ಪ್ರದೇಶದ ವೈಶ್ಯರಿಗೂ ಕರ್ನಾಟಕದ ವೈಶ್ಯರಿಗೂ ಹೆಚ್ಚಿನ ವೈವಾಹಿಕ ಸಂಬಂಧವಿದೆ. ಹಾಗೂ ಇನ್ನೂ ಕೆಲವು ಸಮೀಕ್ಷೆಯ ಆಧಾರದ ಮೇಲೆ ವೈಶ್ಯರ ಮಾತೃ ಭಾಷೆ ಯಾವುದು ಎಂದರೆ ವೈಶ್ಯಕುಲದೇವತೆ ವಾಸವಿಯು ಜನಿಸಿದ ಸ್ಥಳ ಪೆನಗೊಂಡೆಯು ತೆಲುಗು ಪ್ರದೇಶ. ಅದಕ್ಕಾಗಿ ವಾಸವಿಯ ಭಾಷೆ ತೆಲುಗು ಆಗಿತ್ತು. ಇದೇ ಕಾರಣದಿಂದಾಗಿ ವೈಶ್ಯರಿಗೂ ತೆಲುಗು ಮಾತೃ ಭಾಷೆಯಾಗಿದೆ ಎನ್ನುವವರೂ ಬಹಳ ಇದ್ದಾರೆ. ವಾಸವಿಯು ಜನಿಸಿದ ಸ್ಥಳದ ಭಾಷೆಯು ತೆಲುಗು ಆಗಿದ್ದ ಕಾರಣ ಆ ತಾಯಿಯ ಆರಾಧಕರೆಲ್ಲಾ ತೆಲುಗರೇ ಆಗಿರಬೇಂಕೆದಿಲ್ಲ. ಅಥವಾ ಆ ತಾಯಿಯ ಆರಾಧಕರೆಲ್ಲಾ ತೆಲುಗರೇ ಆಗಿರಬೇಕೆಂದಿಲ್ಲ ಅಥವಾ ಇವರೆಲ್ಲಾ ತೆಲುಗನ್ನೇ ಮಾತನಾಡಬೇಕೆಂಬ ನಿಯಮವೂ ಇಲ್ಲ. ಆಯಾಯ ಪ್ರದೇಶದ ಆಡುಭಾಷೆಯು ಅಲ್ಲಿ ವಾಸಿಸುವವರ ಮಾತೃ ಭಾಷೆಯಾಗಿತ್ತು. ಎಂದಿಗೂ ಆರ್ಯಾವರ್ತದ ಎಲ್ಲಡೆಯೂ ವಾಸಿಸುವ ಒಂದೊಂದು ವರ್ಣದವರಿಗೆ ಒಂದೊಂದು ಭಾಷೆ ಎಂಬುದಾಗಿ ಇರಲೇ ಇಲ್ಲ.

೨.೩ ಪೌರಾಣಿಕ ಹಿನ್ನೆಲೆ ಮತ್ತು ವಾಸವಿ ಚರಿತ್ರೆ

ಭೂಮಿಯಲ್ಲಿ ಅಜ್ಞಾನ ಅಂಧಕಾರ ಹೆಚ್ಚಿದಾಗ ದೇವರು ಜನರ ಉದ್ಧಾರಕ್ಕಾಗಿ ಒಂದೊಂದು ಅವತಾರವನ್ನು ಎತ್ತುತ್ತಾನೆ. ಹರಿಯು ಹೇಗೆ ದಶಾವತಾರವನ್ನು ಎತ್ತಿ ಜನತೆಯನ್ನು ಉದ್ಧರಿಸಿ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದ್ದಾನೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಹೇಳಿದಂತೆ ಧರ್ಮ ಸಂಸ್ಥಾಪನಾರ್ಚಾರ್ಯ ಸಂಭವಾಮಿ ಯುಗೇ ಯುಗೇ ಅಂದರೆ ಸತ್ಯ ಧರ್ಮಗಳ ಪುನರುತ್ಥಾನಕ್ಕಾಗಿ ನಾನು ಯುಗ ಯುಗದಲ್ಲೂ ಅವತರಿಸುತ್ತೇನೆ. ಅದೇ ರೀತಿ ದ್ವಾಪರ ಯುಗದಲ್ಲಿ ದ್ರೌಪದಿಯಾಗಿ ತ್ರೇತ್ರಾಯುಗದಲ್ಲಿ ಜಾನಕಿಯಾಗಿ ಕಲಿಯುಗದಲ್ಲಿ ಕನ್ನಿಕಾ ಪರಮೇಶ್ವರಿಯಾಗಿ ಜನಿಸಿ ಮೂಢರನ್ನು ಸನ್ಮಾರ್ಗಿಯನ್ನಾಗಿ ಮಾಡಿ ಉದ್ಧರಿಸಿದ ಮಾತೆ. ಮೋಹಂದಕಾರವು ಜಗತ್ತಿನಲ್ಲಿ ತೃಣ ಸಮಾನವೆಂದು ಮುಕ್ತಿಯೇ ಜೀವನದ ಮುಖ್ಯಗುರಿ ಎಂದು ತೋರಿಸಿದ ಮಾತೆ. ಆರ್ಯ ವೈಶ್ಯಕುಲದವರಾದ ಮಹತ್ಮಾಗಾಂಧೀಜಿಯವರು ಸ್ವಾತಂತ್ರ್ಯಕ್ಕಾಗಿ ಅಹಿಂಸೆಯ ದಾರಿಯಲ್ಲಿ ನಡೆದರು. ಅಖಿಲಾಂಡಕೋಟಿ ಬ್ರಹ್ಮಾಂಡ ಜನನಿಯಾದ ಶ್ರೀ ಕನ್ನಿಕಾಪರಮೇಶ್ವರಿಯಂತೆ, ಸತ್ಯ, ಧರ್ಮ, ಅಹಿಂಸೆಯೇ ಗಾಂಧೀಜಿಯವರ ಉಸಿರಾಗಿತ್ತು ಬಹುಶಃ ವಾಸವಿಯೇ ಗಾಂಧೀಜಿಯವರ ಆದರ್ಶವಾಗಿರಬಹುದು.

ಪೆನಗೊಂಡೆಯೂ ಸೇರಿ ೧೮ ಪಟ್ಟಣಗಳಲ್ಲಿ ನೆಲಸಿದ ೭೧೪ ಗೋತ್ರಗಳ ಮೂಲ ಪುರುಷರಲ್ಲಿ ಪ್ರಮುಖವಾಗಿ ಅವರೆಲ್ಲರ ರಕ್ಷಣೆಯ ಭಾರವನ್ನು ಹೊತ್ತವರು ಪ್ರಭಾತಸ (ಪೆಂಡ್ಲಿಕುಲ) ಗೋತ್ರದ ಉದ್ವಾಹ ಉದ್ವಾಹನ ಮಘು, ಮಘುನ ಮಗ ಮಧುವಂತ, ಮಧುವಂತನಿಗೆ ಮಣಿಮಾನ್ ಕೀರ್ತಿಮಾನ್, ಶ್ವೇತ,

ಮುಚುಕುಂದ, ವಿರೋಚನರೆಂಬ ೫ ಜನ ಗಂಡು ಮಕ್ಕಳು. ವಿರೋಚನನಿಗೆ ಕುಲಾಧರ, ಮಣಿಧರ ಎಂಬ ಇಬ್ಬರು ಮಕ್ಕಳು, ಕುಲಾಧರನ ಮಗ ಮಣಿಗ್ರೀವ, ಮಣಿಗ್ರೀವನ ಮಗ ಜಟಿಲ, ಜಟಿಲನ ಮಗ ಭದ್ರ, ಭದ್ರನ ಮಗ ಹಯಗ್ರೀವ, ಹಯಗ್ರೀವನ ಮಗ ಪದ್ಮಾಕ್ಷ, ಪದ್ಮಾಕ್ಷನ ಮಗ ಹೇಮವರ್ಮ, ಹೇಮವರ್ಮನ ಮಗ ಶಿವ, ಶಿವನ ಮಗ ಗೋಮುಖ, ಗೋಮುಖನ ಮಗ ಕುಮಕ, ಕುಮಕನ ಮಗ ಕಲ್ಹಾರ, ಕಲ್ಹಾರನ ಮಗನೇ ವಾಸವಿ ದೇವಿಯ ತಂದೆಯಾದ ಕುಸುಮ ಶ್ರೇಷ್ಠಿ. ಇವರು ಹಿಂದಿನ ಜನ್ಮದಲ್ಲಿ "ಸಮಾಧಿ" ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದ್ದನಂತೆ.

ಸಮಾಧಿಯ ಹೆಂಡತಿ ಮಕ್ಕಳ ಹಾಗೂ ಪ್ರಾಪಂಚಿಕ ಭೋಗ ಭಾಗ್ಯಗಳ ವಿಷಯವಾಗಿ ವೈರಾಗ್ಯವನ್ನು ಹೊಂದಿ ತಪಸ್ಸು ಮಾಡಲು ಹೋದನಂತೆ. ಅವನು ಆದಿ ಪರಾಶಕ್ತಿಯ ಉಪಾಸನೆಯನ್ನು ಮಾಡುತ್ತಾ ಹಲವು ಸಂವತ್ಸರಗಳು ಉಗ್ರವಾದ ತಪಸ್ಸನ್ನು ಮಾಡಿದನು. ಅವನ ತಪಸ್ಸಿಗೆ ಮೆಚ್ಚಿ ದೇವಿಯು ಪ್ರತ್ಯಕ್ಷಳಾದಳು. "ಭಕ್ತಾ ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ. ನಿನ್ನ ಕೋರಿಗೆ ಏನು ಎಂದು ಕೇಳಿದಳು. ಜ್ಞಾನಿಯಾದ ಸಮಾಧಿಯು ದೇವಿಗೆ ವಂದಿಸಿ, ಸ್ತೋತ್ರ ಮಾಡಿ 'ಜಗಜ್ಜನನೀ ನನ್ನ ವಂಶಕ್ಕೆ ಸೇರಿದ ಎಲ್ಲಾ ಬಂಧುಬಳಗದವರಿಗೂ, ನನಗೂ ಮೋಕ್ಷವನ್ನು ಅನುಗ್ರಹಿಸು ಎಂದು ಬೇಡಿಕೊಂಡನಂತೆ. ಸಮಾಧಿಯೇ ನಿನ್ನ ವಿಶಾಲವಾದ ಭಾವನೆ ಅಪಾರವಾದ ಭಕ್ತಿ ಅದ್ಭುತವಾದ ತಪಸ್ಸು ಇವನ್ನು ಮೆಚ್ಚಿರುವೆನು. ಮುಂದಿನ ಜನ್ಮದಲ್ಲಿ ನಿನ್ನ ಇಷ್ಟಾರ್ಥವು ನೆರವೇರುವುದು" ಎಂದು ಹೇಳಿ ದೇವಿಯು ಅಂತರ್ಧನಳಾದಳು. ಸಮಾಧಿಯೇ ಮರು ಜನ್ಮದಲ್ಲಿ ವಾಸವನಾಗಿ ಜನ್ಮ ತಾಳಿ ಕುಸುಮ ಶ್ರೇಷ್ಠಿ ಎಂಬ ಹೆಸರಿನಿಂದ ಪ್ರಖ್ಯಾತನಾದವನು. ವಾಸವ ಶ್ರೇಷ್ಠಿಯ ವಿದ್ಯಾ ಗುರುಗಳು ಬ್ರಹ್ಮನ ಅಂಶ ಸಂಭೂತರಾದ ಭಾಸ್ಕರಾಚಾರ್ಯರು. ವಾಸವ ಶ್ರೇಷ್ಠಿಯು ಬೆಳೆದು ಯೌವನಾವಸ್ಥನಾದನು. ಕಲ್ಹಾರನ ಮಗನಾದ ವಾಸವ ಶ್ರೇಷ್ಠಿಗೆ ಮೈತ್ರೇಯಸ ಗೋತ್ರದ (ಮಿಥುನ ಕುಲ) ಮಣಿಕುಂಡಲನ ಮಗಳಾದ ಕಾವೇರಿ ಎಂಬ ಕನ್ಯೆಯೊಡನೆ ವಿವಾಹವು ವಿಜೃಂಭಣೆಯಿಂದ ನೆರವೇರಿತು.

ಕಾವೇರಿ ಮತ್ತು ವಾಸವ ಎಂಬ ಈ ರಾಜ ದಂಪತಿಗಳು ಪ್ರತಿದಿನವೂ ದೇವರಿಗೆ ಕುಸುಮಾರ್ಚನೆಯನ್ನು ಶ್ರದ್ಧಾಭಕ್ತಿಗಳಿಂದ ಮಾಡುತ್ತಿದ್ದುದರಿಂದ ಅವರಿಗೆ "ಕುಸುಮಾಂಬಾ" ಮತ್ತು ಕುಸುಮ ಶ್ರೇಷ್ಠಿ ಎಂಬ ಹೆಸರು ಅನ್ವರ್ಥನಾಮವಾಗಿ ಬಂದಿತು ಎಂಬ ಪ್ರತೀತಿ ಇದೆ. ಹಲವು ಗ್ರಂಥಗಳಲ್ಲಿ ಕುಸುಮ ಶ್ರೇಷ್ಠಿ ಮತ್ತು ಕುಸುಮಾಂಬೆಯ ಹೆಸರು ಕುಸುಮಾಖ್ಯ ಮತ್ತು ಕೌಸುಂಭಿ ಎಂಬುದಾಗಿಯೂ ಇದೆ.

ಕಲ್ಹಾರನು ಕಾಲಗತಿಯನ್ನು ಹೊಂದಿದ ನಂತರ ೧೮ ನಗರಗಳ ಪ್ರಮುಖರು ಸಮಾಲೋಚಿಸಿ ಕುಸುಮ ಶ್ರೇಷ್ಠಿಗೆ ಪಟ್ಟಾಭಿಷೇಕವನು ಮಾಡಿದರು. ಪೆನಗೊಂಡೆಯೇ ಅವನ ರಾಜಧಾನಿ. ಸತ್ಯ, ಧರ್ಮ, ಪರೋಪಕಾರ, ದಕ್ಷತೆ, ಭಗವದ್ಭಕ್ತಿ ಮೊದಲಾದ ಗುಣಗಳಿಂದ ಅವನು ಪ್ರಜಾನುರಾಗಿಯಾಗಿ ರಾಜ್ಯವಾಳುತ್ತಿದ್ದನು. ಕುಸುಮಾಂಬೆಯು ಕುಸುಮ ಶ್ರೇಷ್ಠಿಗೆ ತಕ್ಕ ಹೆಂಡತಿಯಾಗಿದ್ದರು.

ಒಂದು ದಿನ ರಾತ್ರಿ ಪರಮಾತ್ಮನು ಕುಸುಮ ಶ್ರೇಷ್ಠಿಯ ಕನಸಿನಲ್ಲಿ ಕಾಣಿಸಿಕೊಂಡು ರಾಜೋದ್ಯಾನದ ಹುತ್ತದಲ್ಲಿ ಸುಂದರವಾದ ದೇವತಾ ವಿಗ್ರಹಗಳಿವೆ. ಆ ಪುರಾತನ ಮೂರ್ತಿಗಳನ್ನು ಮಾಂಡವ್ಯರು ಮತ್ತು ಮಾರ್ಕಂಡೇಯರು ಹಿಂದೆ ಪೂಜಿಸುತ್ತಿದ್ದರು. ಈಗ ನೀನು ಆ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿಸಿ ಪೂಜಿಸಿದರೆ ನಿನಗೂ ನಿನ್ನ ಕುಲಕ್ಕೂ ಒಳ್ಳೆಯದಾಗುವುದು"[೫] ಎಂದು ಹೇಳಿ ಅಂತರ್ಧನನಾದನು. ಈ ಆದೇಶದಂತೆ ರಾಜನ ಉದ್ಯಾನವನದ ಒಂದು ಹುತ್ತದಲ್ಲಿ ದೊರೆತ 'ನಗರೇಶ್ವರ' ಮತ್ತು 'ಜನಾರ್ಧನ' ಮೂರ್ತಿಗಳನ್ನು ತಂದು ಕುಸುಮಶ್ರೇಷ್ಠಿಯು ಭವ್ಯವಾದ ಮಂದಿರಗಳನ್ನು ನಿರ್ಮಿಸಿ ಅವುಗಳನ್ನು ಪ್ರತಿಷ್ಠಾಪಿಸಿ ನಿತ್ಯಾರ್ಚನೆ ನಡೆಯುವಂತೆ ಏರ್ಪಾಡು ಮಾಡಿದನು.

ಬಹು ಕಾಲವಾದರೂ ಕುಸುಮಶ್ರೇಷ್ಠಿಗೆ ಸಂತಾನವಾಗಲಿಲ್ಲ. ಆ ಚಿಂತೆಯು ರಾಜ ದಂಪತಿಗಳನ್ನು ಬಹಳವಾಗಿ ಪೀಡಿಸುತ್ತಿತ್ತು. ಕುಲಗುರುಗಳಾದ ಬಾಸ್ಕರಾಚಾರ್ಯರ ಸಲಹೆಯಂತೆ, ಕುಸುಮಶ್ರೇಷ್ಠಿಯು 'ಪುತ್ರಕಾಮೇಷ್ಠಿ' ಎಂಬ ಮಹಾಯಾಗವನ್ನು ಮಾಡಲು ನಿರ್ಧರಿಸಿದನು. ರಾಜ ದಂಪತಿಗಳು ಯಾಗ ದೀಕ್ಷೆಯನು ವಹಿಸಿದರು. ವೇದ ವೇದಾಂಗ ಪಾರಂಗತರಾದ ಋತ್ವಿಜರಿಂದ ರಾಜ ದಂಪತಿಗಳು ವಿಧಿವತ್ತಾಗಿ ಯಾಗವನ್ನು ಮಾಡಿದರು. ಆಗ ದಿವ್ಯ ತೇಜಸ್ಸಿನಿಂದ ಕೂಡಿದ ಯಜ್ಞ ಪುರುಷನು ಅವಿರ್ಭವಿಸಿ ಪಾಯಸ ತುಂಬಿದ ಚಿನ್ನದ ಪಾತ್ರೆಯನ್ನು ಕುಸುಮಶ್ರೇಷ್ಠಿಯ ಕೈಗಿತ್ತು ಆಶೀರ್ವದಿಸಿ ಅಂತರ್ಧನನಾದನು.

ಅನಂತರ ಕುಸುಮ ದಂಪತಿಗಳು ಯಜ್ಞೇಶ್ವರನು ಕೊಟ್ಟ ಪಾಯಸವನ್ನು ಸೇವಿಸಿದರು. ಯಾಗದ ಫಲದಿಂದ ರಾಣಿಯು ಗರ್ಭವತಿಯಾದಳು. ಶುಕ್ಲಪಕ್ಷದ ಚಂದ್ರನಂತೆ ರಾಣಿಯ ಗರ್ಭವು ದಿನ ದಿನಕ್ಕೆ ಬೆಳೆಯಿತು. ರಾಣಿಗೆ ಎರಡನೆಯ ತಿಂಗಳಿನಲ್ಲಿ ಪುಂಸವನ ಕಾರ್ಯವು ಮತ್ತು ಆರನೇ ತಿಂಗಳಲ್ಲಿ ಸೀಮಂತೋನ್ನಯನ ಕಾರ್ಯವು ವಿಜೃಂಭಣೆಯಿಂದ ವಿಧಿವತ್ತಾಗಿ ನಡೆದವು. ನವಮಾಸಗಳು ತುಂಬಿದವು, ವಸಂತ ಋತುವಿನ ವೈಶಾಖ ಶುದ್ಧ ದಶಮಿ, ಶುಕ್ರವಾರದಂದು ಗೋಧೂಳಿಯ ಸಮಯದಲ್ಲಿ, ಉತ್ತರಾ ನಕ್ಷತ್ರ ಕನ್ಯಾ ಲಗ್ನದಲ್ಲಿ ಕುಸುಮಾಂಬೆಯು ಅವಳಿ ಮಕ್ಕಳಿಗೆ ಜನ್ಮ ಕೊಟ್ಟಳು. ಮೊದಲು ಗಂಡು ಮಗುವು ಅನಂತರ ಹೆಣ್ಣು ಮಗುವಿನ ಜನನವಾಯಿತು. ಕುಸುಮ ಶ್ರೇಷ್ಠಿಯು ಜನಿಸಿದ ಶಿಶುಗಳನ್ನು ನೋಡುತ್ತಾ ಆನಂದಪರವಶ ನಾಗಿದ್ದನು. ಜನಿಸಿದ ಕಂದಮ್ಮಗಳನ್ನು ನೋಡುತ್ತಿದ್ದಂತೆಯೇ ಹೆಣ್ಣು ಮಗುವಿನ ಜನನವಾಯಿತು. ಕುಸುಮ ಶ್ರೇಷ್ಠಿಯು ಜನಿಸಿದ ಶಿಶುಗಳನ್ನು ನೋಡುತ್ತಾ ಆನಂದಪರವಶನಾಗಿದ್ದನು. ಜನಿಸಿದ ಕಂದಮ್ಮಗಳನ್ನು ನೋಡುತ್ತಿದ್ದಂತೆಯೇ ಹೆಣ್ಣು ಶಿಶುವಿನ ಸುತ್ತ ಪ್ರಭಾಮಂಡಲ ಮೂಡಿತು. ಅದರಲ್ಲಿ ಆದಿಪರಾಶಕ್ತಿಯ ವಿಶ್ವರೂಪವೇ ಕಾಣಿಸಿತು. ಮಾತೆಯ ದಿವ್ಯ ಮಂಗಳ ರೂಪವನ್ನು ನೋಡಿ ತಂದೆ ತಾಯಿಯರು ಸಂತೋಷ ಆಶ್ಚರ್ಯಗಳಲ್ಲಿ ಮುಳುಗಿದರು. ಕುಸುಮ ಶ್ರೇಷ್ಠಿಯು ಭಕ್ತಿಯಿಂದ ಆಕೆಗೆ ನಮಸ್ಕರಿಸಿ. ಸ್ತುತಿಸಿ ಸಾಷ್ಟಾಂಗ ನಮಸ್ಕಾರ ಮಾಡಿ ಪ್ರಾರ್ಥಿಸಿದನು. ಆಗ ದೇವಿಯು ನಿನ್ನ ಪೂರ್ವ ಜನ್ಮದಲ್ಲಿ ಸಮಾಧಿ ಎಂಬ ಋಷಿಯಾಗಿದ್ದೆ. ನಿನ್ನ ತಪಃ ಪ್ರಭಾವದಿಂದ ನನ್ನನ್ನು ನಿನ್ನ ಮಗಳಾಗಿ ಪಡೆದಿರುವೆ. ನನ್ನನ್ನು ಅಂದು ಆರಾಧಿಸಿದ ಫಲವು

[illegible]

ನಿನಗೆ ಈಗ ಸಿಗುತ್ತದೆ ಎಂದು ಹೇಳಿದಳು. ಅನಂತರ ದೇವಿಯ ವಿಶ್ವರೂಪವು ಉಪಸಂಹಾರವಾಗಿ ಮಾನವ ರೂಪದಲ್ಲಿ ಶಿಶುವು ಸಮಸ್ತರಿಗೂ ಕಾಣಿಸಿಕೊಂಡಿತು.

ಕುಸುಮ ಶ್ರೇಷ್ಠಿಯು ಮಗನಿಗೆ ವಿರುಪಾಕ್ಷನೆಂದು ನಾಮಕರಣ ಮಾಡಿದನು. ಈತನೇ ಹಿಂದೆ ಪಾರ್ವತಿಯಿಂದ ಶಾಪಗ್ರಸ್ತನಾದ ನಂದಿ, ಮಗಳಿಗೆ ನಾಮಕರಣ ಮಾಡುವ ಸಂದರ್ಭದಲ್ಲಿ "ಪೂರ್ವದಲ್ಲಿ ಈಕೆ ವಿಷ್ಣುವಿನ ಸೋದರಿ ಆದ್ದರಿಂದ ವಾಸವಿ ಎಂಬ ಹೆಸರಿನಿಂದ ಪ್ರಸಿದ್ಧಳಾಗುವಳು. ಈಕೆಯನ್ನು ವಿಷ್ಣುವು 'ಕನ್ನಿಕೆ' ಎಂದೂ ಬ್ರಹ್ಮಚಾರಿಣಿ ಎಂದೂ ಹೊಗಳಿದನು. ಆದ್ದರಿಂದ ನಿನ್ನ ಮಗಳು 'ಕನ್ನಿಕೆ' ಎಂಬ ಹೆಸರಿನಿಂದಲೂ ಪ್ರಖ್ಯಾತಳಾಗುವಳು" ಎಂದು ಅಶರೀರವಾಣಿಯಾಯಿತು. ಈ ಮಾತನ್ನು ಕೇಳಿದ ಗುರು ಹಿರಿಯರು ಹೆಣ್ಣು ಮಗುವಿಗೆ "ವಾಸವಿ" ಎಂದು ನಾಮಕರಣ ಮಾಡಿದರು.

ವಿರುಪಾಕ್ಷ ಮತ್ತು ವಾಸವಿಯರು ಬಾಸ್ಕರಾಚಾರ್ಯರ ಬಳಿ ವಿದ್ಯಾಭ್ಯಾಸ ಮಾಡಿದರು. ವಾಸವಿಯು ಲಲಿತ ಕಲೆಗಳನ್ನು ತನ್ನ ತಾಯಿಯಿಂದ ಕಲಿತುಕೊಂಡಳು. ವಸು ಎಂದರೆ ಬಗೆ ಬಗೆಯ ಸಂಪತ್ತಿಗೆ ತಾಯಿಯಾದ ಭೂಮಾತೆ. ಭೂಮಾತೆಯ ಮಗಳು ಸೀತಾದೇವಿಯಂತೆ ವಾಸವಿಯು ಧರ್ಮ, ಜ್ಞಾನ, ವೈರಾಗ್ಯದ ಖನಿಯಾಗಿದ್ದಳು. ವಿರುಪಾಕ್ಷನು ಬೇರೆ ಗುರುಗಳ ಬಳಿ ಸಮರ ವಿದ್ಯೆಯನ್ನು ಕಲಿತನು. ಕುಸುಮ ಶ್ರೇಷ್ಠಿಯು ವಿರುಪಾಕ್ಷನಿಗೆ ೧೨ನೇ ವಯಸ್ಸಿನಲ್ಲಿ ವೇದೋಕ್ತವಾಗಿ ಉಪನಯನ ಮಾಡಿದನು. ಯೌವನವನ್ನು ಹೊಂದಿದ ಅವಳಿ ಮಕ್ಕಳ ಬೆಳವಣಿಗೆಯು ಒಂದೇ ರೀತಿಯಾಗಿದ್ದಿತು.

ಏಲೂರು ನಗರ ಪ್ರಮುಖನಾದ ಆತ್ರೇಯಸ ಗೋತ್ರಕ್ಕೆ ಸೇರಿದ ಅರಿದಿ ಶ್ರೇಷ್ಠಿಯು ಒಂದು ದಿನ ಕುಸುಮ ಶ್ರೇಷ್ಠಿಯನ್ನು ಬೇಟಿಯಾದನು. ತನ್ನ ಮಗಳಾದ ರತ್ನವತಿಗೆ ವಿರೂಪಾಕ್ಷನು ತಕ್ಕ ವರನೆಂದು ಭಾವಿಸಿ ಕುಸುಮ ಶ್ರೇಷ್ಠಿಯೊಂದಿಗೆ ಬಂಧುತ್ವ ಬೆಳೆಸುವ ಪ್ರಸ್ತಾಪ ಮಾಡಿದನು. ಈರ್ವರಿಗೂ ಈ ಸಂಬಂಧ ಒಪ್ಪಿಗೆಯಾಯಿತು. ಶುಭ ಮಹೂರ್ತದಲ್ಲಿ ರತ್ನವತಿ ವಿರೂಪಾಕ್ಷರ ಮದುವೆಯು ವೈಭವದಿಂದ ನಡೆಯಿತು. ಕ್ಷತ್ರಿಯರಲ್ಲಿ ಸೂರ್ಯವಂಶ ಮತ್ತು ಚಂದ್ರವಂಶಗಳೆಂಬ ಎರಡು ವಂಶಗಳು ಪ್ರಸಿದ್ಧವಾಗಿವೆ. ಪಾಂಡವರು ಚಂದ್ರವಂಶಕ್ಕೆ ಸೇರಿದವರು ಲೋಕ ವಿಖ್ಯಾತನಾದ ಅರ್ಜುನನು ಪಾಂಡವರಲ್ಲಿ ಒಬ್ಬನು. ಇವನ ಮಗ ಅಭಿಮನ್ಯು ಅಭಿಮನ್ಯುವಿನ ಮಗ ಪರೀಕ್ಷಿತ, ಪರೀಕ್ಷಿತನ ಮಗ ಜನಮೇಜಯ, ಜನಮೇಜಯನ ಮಗ ಶತಾನಂದ, ಶತಾನಂದನ ಮಗ ಕ್ಷೇಮ, ಕ್ಷೇಮನ ಮಗ ವಿಜಯಾರ್ಕ, ವಿಜಯಾರ್ಕನ ಮಗನೇ ವಿಷ್ಣುವರ್ಧನ. ವಿಷ್ಣುವರ್ಧನನು ಹಿಂದಿನ ಜನ್ಮದಲ್ಲಿ ಚಿತ್ರ ಕಂಠನೆಂಬ ಗಂಧರ್ವನಾಗಿದ್ದನು. ವಿಷ್ಣುವರ್ಧನನು ೪ ವೇದಗಳನ್ನೂ ೬ ಶಾಸ್ತ್ರಗಳನ್ನೂ, ಧನುರ್ವಿದ್ಯೆಯನ್ನು ಕಲಿತಿದ್ದು ಎಲ್ಲಾ ಕಲೆಗಳಲ್ಲೂ ಪರಿಣಿತೆ ಹೊಂದಿದ್ದನು ಮಹಾ ಪರಾಕ್ರಮಿಯಾಗಿದ್ದನು.

ರಾಜೇಂದ್ರ ಚೋಳನ ತಂಗಿಯಾದ "ಕುಂದವಳ"ಳೊಡನೆ ವಿಷ್ಣುವರ್ಧನನ ವಿವಾಹವಾಗಿತ್ತು. ವಿಷ್ಣುವರ್ಧನನ ಮಹಾರಾಜರು ರಾಜಮಹೇಂದ್ರವರನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು

ಸಮರ್ಥವಾಗಿ ರಾಜ್ಯವಾಳುತ್ತಿದ್ದನು. ರಾಜ್ಯದಲ್ಲಿ ಸುಭೀಕ್ಷೆ ಮತ್ತು ನಿರ್ಭಯತೆಯು ಮೂಡಿತ್ತು. ರಾಜ್ಯ ವಿಸ್ತರಣೆ ಮಾಡುವ ಸಲುವಾಗಿ ಅಶ್ವಯುಜ ಮಾಸದ ವಿಜಯದಶಮಿಯ ದಿನ ದೊಡ್ಡ ಸೈನ್ಯದೊಂದಿಗೆ ಹೊರಟು ಅನೇಕ ರಾಜರನ್ನು ಯುದ್ಧದಲ್ಲಿ ಗೆದ್ದು ಪೆನಗೊಂಡೆಗೆ ಬಂದನು. ವಿಷ್ಣುವರ್ಧನ ಮಹಾರಾಜನು ತನ್ನ ಪಟ್ಟಣಕ್ಕೆ ಬರುತ್ತಿರುವುದನ್ನು ತಿಳಿದು ಅವನನ್ನು ಸ್ವಾಗತಿಸುವುದಕ್ಕಾಗಿ ಕುಸುಮ ಶ್ರೇಷ್ಠಿಯು ಪೆನಗೊಂಡ ನಗರವನ್ನು ಅಲಂಕರಿಸಿದನು. ಅನಂತರ ಸಾಮಂತ ರಾಜನಾದ ಕುಸುಮಶ್ರೇಷ್ಠಿಯು ತನ್ನ ಮಂತ್ರಿಗಳು ಹಾಗೂ ಪುರ ಪ್ರಮುಖರೊಡನೆ ವಿಷ್ಣುವರ್ಧನ ಮಹಾರಾಜನನ್ನು ಎದುರ್ಗೊಂಡು ಪೆನಗೊಂಡೆ ನಗರದ ಹೆಬ್ಬಾಗಿಲಿನಲ್ಲಿ ರಾಜ ಮರ್ಯಾದೆಗಳೊಂದಿಗೆ ಸ್ವಾಗತಿಸಿದನು.

ರಾಜನು ವೈಭವವಾಗಿ ಪುರ ಪ್ರವೇಶ ಮಾಡಿದನು. ಸಾಮಂತರಾಜನಾದ ಕುಸುಮ ಶ್ರೇಷ್ಠಿಯು ವಿಷ್ಣುವರ್ಧನ ಮಹಾರಾಜನನ್ನು ಆದರದಿಂದ ಬರಮಾಡಿಕೊಂಡು, ಸಕಲ ರಾಜ ಮರ್ಯಾದೆಗಳಿಂದ ಸತ್ಕರಿಸಿದನು.

ವಿಷ್ಣುವರ್ಧನ ಮಹಾರಾಜನ ಮೆರವಣಿಗೆಯು ಕುಸುಮಶ್ರೇಷ್ಠಿಯ ಅರಮನೆಯ ಮುಂದೆ ಬಂದಿತು. ಅಲ್ಲಿ ವಾಸವಿಯು ಹಾಡುತ್ತಿರಲು, ಮಂಗಳಾಂಗನೆಯರು ಮಹಾರಾಜನಿಗೆ ಆರತಿ ಬೆಳಗಿದರು. ರಾಜನು ಸಂತುಷ್ಟನಾದನು. ಅಲ್ಲಿನ ಮಹಿಳಾ ಸಮೂಹದಲ್ಲಿ ಕಲಶ ಪ್ರಾಯಳಾಗಿ ಶೋಭಿಸುತ್ತಿದ್ದ ನಯನ ಮನೋಹರ ಳಾದ ವಾಸವಿಯನ್ನು ಕಂಡು ಮೋಹ ಪರವಶನಾದನು. ಮಹಾ ಪರಾಕ್ರಮಿಯಾದ ವಿಷ್ಣುವರ್ಧನನು ಎಷ್ಟೋ ಶತ್ರುಗಳನ್ನು ಗೆದ್ದಿದ್ದರೂ, ಅಂತರಂಗ ಶತ್ರುಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳಾದ ಅರಿಷಡ್ವರ್ಗಗಳನ್ನು ಗೆದ್ದಿರಲಿಲ್ಲ. ವಾಸವಿಯ ಸೌಂದರ್ಯದಿಂದ ಮರುಳಾದ ವಿಷ್ಣುವರ್ಧನ ಮಹಾರಾಜನಿಗೆ ಊಟ ಉಪಚಾರಗಳೊಂದೂ ರುಚಿಸಲಿಲ್ಲ. ಅವಳನ್ನು ಮದುವೆಯಾಗಲೇ ಬೇಕೆಂದುಕೊಂಡು ಕಾಮವಿಕೋಪಗಳಿಗೊಳಗಾದನು. ತನ್ನ ಸೇವೆಗೆಂದು ನಿಯೋಜಿಸಲಾಗಿದ್ದ ವಯೋವೃದ್ಧನಿಂದ ವಾಸವಿಯ ಬಗ್ಗೆ ಎಲ್ಲಾ ವಿವರಗಳನ್ನು ತಿಳಿದುಕೊಂಡನು. ವಿಷ್ಣುವರ್ಧನನ ಆಪ್ತ ಮಂತ್ರಿಗಳಲ್ಲಿ ಒಬ್ಬನಾದ ವಿಜಯಸಿಂಹನು ರಾಜನ ಚಿಂತೆಗೆ ಕಾರಣವೇನೆಂದು ಕೇಳಿದನು. ಅದಕ್ಕೆ ವಿಷ್ಣುವರ್ಧನನು "ವಾಸವಿಯ ರೂಪ ಲಾವಣ್ಯ ಸಿರಿಯನ್ನು ಕಂಡು ಸೋತು ಹೋಗಿದ್ದೇನೆ. ಆ ವಾಸವಿಯು ನನ್ನವಳಾಗುವವರೆಗೂ ನನಗೆ ಶಾಂತಿಯಿಲ್ಲ. ನಾನು ಬದುಕಿರಲಾರೆ ಎಂದು ಹೇಳಿದನು". ಮಹಾರಾಜನ ಮಾತುಗಳನ್ನು ಕೇಳಿದ ಮಂತ್ರಿಯು "ಆಗಲಿ ಪ್ರಯತ್ನಿಸೋಣ" ಎಂದು ಸಮಾಧಾನದ ನುಡಿಗಳನ್ನಾಡಿದನು. ಮಂತ್ರಿಯು ತನ್ನ ಬಿಡದಿಗೆ ಬಂದು ಇತರ ಮಂತ್ರಿಗಳೊಂದಿಗೆ ಸಮಾಲೋಚಿಸಿ ಕುಸುಮಶ್ರೇಷ್ಠಿಯ ಬಳಿಹೋಗಿ ಚರ್ಚಿಸಬೇಕೆಂದು ತೀರ್ಮಾನಿ ಸಿದನು. ರಾಜನಾದವನು ಸಾಮಂತರಾಜರ ಸಂಬಂಧ ಬೆಳೆಸುವುದು ಹೊಸತೇನಲ್ಲ ಎಂದು ನಿರ್ಧರಿಸಿ ಎಲ್ಲರೂ ಕುಸುಮಶ್ರೇಷ್ಠಿಯ ಬಳಿಗೆ ಹೋದರು.

ಕುಸುಮ ಶ್ರೇಷ್ಠಿಯು ತನ್ನ ಬಳಿಗೆ ಬಂದ ಮಹಾರಾಜನ ಮಂತ್ರಿವರ್ಯರನ್ನು ಕಂಡು ಆಶ್ಚರ್ಯಗೊಂಡನು. ಅವರಿಗೆ ಸ್ವಾಗತೋಪಚಾರ ಮಾಡಿ ಆದರಿಸಿದನು. ಮಂತ್ರಿವರ್ಯರು ಬಂದಿರುವ ಹಿನ್ನೆಲೆಯಾದರೂ

ಏನಿರಬಹುದೆಂದು ಯೋಚಿಸಿ, ತನ್ನಿಂದ ಏನಾಗಬೇಕೆಂದು ಕೇಳಿದನು. ಅದಕ್ಕೆ ಮಂತ್ರಿ ವಿಜಯಸಿಂಹನು "ನಮ್ಮ ಮಹಾರಾಜರು ತಮ್ಮ ಪುತ್ರಿಯಾದ ವಾಸವಿಯಲ್ಲಿ ಅನುರಕ್ತರಾಗಿರುವರು. ಆಕೆಯನ್ನು ನಮ್ಮ ಮಹಾರಾಜರಿಗೆ ಕೊಟ್ಟು ವಿವಾಹ ಮಾಡಿಕೊಟ್ಟರೆ ಇಬ್ಬರಿಗೂ ಶ್ರೇಯಸ್ಸಾಗುವುದು" ಎಂದು ವಿನಂತಿಸಿಕೊಂಡನು. ಕುಸುಮ ಶ್ರೇಷ್ಠಿಯು ಸ್ವಲ್ಪ ಕಾಲ ಯೋಚನಾಮಗ್ನನಾದನು. ಅನಂತರ ಮಂತ್ರಿಗಳಿಗೆ ವಂದನೆಗಳನ್ನು ತಿಳಿಸಿ ನಿಮ್ಮ ರಾಜನೊಡನೆ ಬಾಂಧವ್ಯವನ್ನು ಬೆಳೆಸುವ ವಿಷಯ ಸಾಮಾನ್ಯವಾದುದಲ್ಲ. ಈ ಬಗ್ಗೆ ಬಂಧು ಬಳಗ ಆಪ್ತೇಷ್ಟರೊಂದಿಗೆ ಸಮಾಲೋಚಿಸಿ ನಿರ್ಧಾರಕ್ಕೆ ಬರಲು ನನಗೆ ಒಂದೆರಡು ವಾರಗಳ ಕಾಲಾವಕಾಶ ಬೇಕಾಗಿದೆ" ಎಂದನು. ಅದಕ್ಕೆ ಮಂತ್ರಿಯು ಸಾವಕಾಶ ಮಾಡದೆ ನಿಮ್ಮ ಒಪ್ಪಿಗೆಯನ್ನು ತಿಳಿಸಬೇಕು ಎಂದು ಹೇಳಿ ಕುಸುಮ ಶ್ರೇಷ್ಠಿಯಿಂದ ಬೀಳ್ಕೊಂಡು ರಾಜನಲ್ಲಿಗೆ ಬಂದು ನಡೆದ ವಿಷಯವನ್ನು ತಿಳಿಸಿದನು.

ನಾನು ಚಕ್ರವರ್ತಿ ನನ್ನೊಂದಿಗೆ ಸಂಬಂಧ ಬೆಳೆಸಲು ಯೋಚಿಸಬೇಕೆ? ಕಾಲಾವಕಾಶ ಬೇಕೇ? ಎಂದು ರಾಜನು ಕೋಪಗೊಂಡನು. ಮಹಾರಾಜನ ಮಂತ್ರಿಯು "ಬಾಂಧವ್ಯ ಬೆಳೆಸುವಾಗ ಸೌಹಾರ್ದಯುತ ವಾಗಿರಬೇಕು. ಬಲವಂತ, ಬಲ ಪ್ರದರ್ಶನ, ವಿರಸಭಾವವಿರಬಾರದು. ಅಲ್ಲದೇ ಈಗ ಶೂನ್ಯಮಾಸ, ಶೂನ್ಯಮಾಸ ಎಂದರೆ ಪುಷ್ಯಮಾಸ. ಈಗಾಗಲೇ ತಾವು ರಾಜ್ಯವನ್ನು ಬಿಟ್ಟು ಆಶ್ವಯುಜ ಮಾಸದಿಂದ ಇಲ್ಲಿಯವರೆಗೆ ಮೂರು ತಿಂಗಳಾಗಿವೆ. ರಾಜಧಾನಿಗೆ ಹೋಗಿ ಮತ್ತೆ ಬರೋಣ. ಶೂನ್ಯಮಾಸದಲ್ಲಿ ಮಂಗಳ ಕಾರ್ಯಗಳನ್ನು ಮಾಡಬಾರದು. ಕುಸುಮ ಶ್ರೇಷ್ಠಿಯವರು ಹೇಳಿದಂತೆ ಸ್ವಲ್ಪದಿನಗಳ ನಂತರ ಮಾಘಮಾಸ ಬರುತ್ತದೆ. ವಿವಾಹ ನಡೆಸಲು ಶುಭ ಪ್ರದವಾದ ಕಾಲ ಎಂದು ಹೇಳಿ ಮಹಾರಾಜನನ್ನು ಸಮಾಧಾನಗೊಳಿಸಿದನು.

ಮಂತ್ರಿಗಳ ಹಿತೋಕ್ತಿಗಳಿಂದ ಸಮಾಧಾನಗೊಂಡ ವಿಷ್ಣುವರ್ಧನ ಮಹಾರಾಜನು ಕುಸುಮಶ್ರೇಷ್ಠಿ ಮುಂತಾದ ವೈಶ್ಯ ಶ್ರೇಷ್ಠರನ್ನು ತನ್ನ ಬಿಡಾರಕ್ಕೆ ಕರೆಯಿಸಿಕೊಂಡು ಉಚಿತ ರೀತಿಯಲ್ಲಿ ಸತ್ಕರಿಸಿ, ನಂತರ ತನ್ನ ಪ್ರಯಾಣದ ಬಗ್ಗೆ ಹೇಳಿದನು. ನಾಳೆ ನನ್ನ ಪರಿವಾರ, ಸೇನೆಯೊಂದಿಗೆ ನನ್ನ ರಾಜಧಾನಿಗೆ ಹೊರಡು ತ್ತಿದ್ದೇನೆ. ವಾಸವಿಯನ್ನು ನನಗೆ ಕೊಟ್ಟು ವಿವಾಹ ಮಾಡುವ ಬಗ್ಗೆ ಪ್ರಯತ್ನಿಸಿ" ಎಂದು ಮಹಾರಾಜನು ಅಲ್ಲಿ ನೆರೆದಿದ್ದವರಿಗೆಲ್ಲಾ ತಿಳಿಸಿದನು. ವಾಸವಿಯೊಂದಿಗೆ ತನ್ನ ವಿವಾಹವಾಗುವುದೋ, ಇಲ್ಲವೋ ಎಂಬ ಅನುಮಾನ, ಚಿಂತೆಯ ಭಾರವನ್ನು ಹೊತ್ತು, ವಿಷ್ಣುವರ್ಧನ ಮಹಾರಾಜನು ತನ್ನ ರಾಜಧಾನಿಗೆ ಹಿಂದಿರು ಗಿದನು. ತನ್ನ ರಾಜ್ಯಕ್ಕೆ ಹಿಂದಿರುಗಿದ ನಂತರವೂ, ಕಾಮಾತುರನಾದ ಮಹಾರಾಜನು, ನಿದ್ರಾಹಾರಗಳತ್ತ ಗಮನವೀಯದೆ, ವಾಸವಿಯ ಚಿಂತೆಯಲ್ಲೇ ಕೊರಗುತ್ತಿದ್ದನು.

ಕುಸುಮ ಶ್ರೇಷ್ಠಿಯು ತನ್ನ ಬಂಧುಬಳಗದವರನ್ನೂ, ಪೆನುಗೊಂಡೆಯ ಗಣ್ಯವೈಶ್ಯರನ್ನು ತನ್ನ ಅರಮನೆಗೆ ಕರೆಯಿಸಿಕೊಂಡು ವಿಷ್ಣುವರ್ಧನ ಮಹಾರಾಜನೊಂದಿಗೆ ಬಾಂಧವ್ಯವನ್ನು ಬೆಳೆಸುವ ಬಗ್ಗೆ ಚರ್ಚಿಸಿದನು. ದೀರ್ಘ ಚರ್ಚೆಯಾದ ನಂತರ ಸಭಿಕರು ಈ ಬಗ್ಗೆ ವಾಸವಿಯ ಅಭಿಪ್ರಾಯವು ಅವಶ್ಯವೆಂದು ತಿಳಿಸಿದರು. ಅವರ ಸೂಚನೆಯಂತೆ ಕುಸುಮಶ್ರೇಷ್ಠಿಯು ಮಗಳ ಅಭಿಪ್ರಾಯವನ್ನು ಕೇಳಿದನು. ವಾಸವಿಯು "ನಾನು ಆ

ಜನ್ಮ ಬ್ರಹ್ಮಚಾರಿಣಿಯಾಗಿರುವೆ. ಮದುವೆ ಮಾಡಿಕೊಳ್ಳುವುದಿಲ್ಲ" ಎಂದು ಹೇಳಿದಳಂತೆ. ಕುಸುಮಾಂಬೆಯು, "ಕನ್ಯೆ ಇಷ್ಟಪಡದಿದ್ದ ಮೇಲೆ ಬಲಾತ್ಕಾರವಾಗಿ ಮದುವೆ ಮಾಡಲು ಸಾಧ್ಯವಿಲ್ಲ" ಎಂದಳು.

ಪರಾಕ್ರಮಿಯಾದ ವಿಷ್ಣುವರ್ಧನ ಮಹಾರಾಜನೊಂದಿಗೆ ವಾಸವಿಯ ಮದುವೆ ಮಾಡದಿದ್ದರೆ ತಮಗೆಲ್ಲಾ ಏನು ಕೇಡಾಗುವುದೋ? ಎಂಬ ಚಿಂತೆಯೊಂದು ಕಡೆ, ಪ್ರಾಪಂಚಿಕ ಸುಖ ಭೋಗಗಳನ್ನು ತೃಣೀಕರಿಸಿ ಪರಮ ವಿರಕ್ತಳೂ ತತ್ತ್ವಜ್ಞಾನಿಯೂ ಆದ ತನ್ನ ಮಗಳ ಸ್ಥಿರವಾದ ಅಂತರಂಗವನ್ನು ಭಂಗಗೊಳಿಸುವಂತೆಯೂ ಇಲ್ಲದ ಸ್ಥಿತಿ ಮತ್ತೊಂದು ಕಡೆ. ಈ ದ್ವಂದ್ವ ಯೋಚನೆಗಳಿಂದಾಗಿ, ಕುಸುಮಶ್ರೇಷ್ಠಿಯು ಧರ್ಮಸಂಕಟಕ್ಕೆ ಸಿಲುಕಿದನು. ಕುಸುಮಾಂಬೆಯೂ ಮಹಾರಾಜನ ಸಂಬಂಧ ಬೆಳೆಸಲು ವಿರೋಧವಾಗಿದ್ದಳು. "ಮಹಾರಾಜನಿಗೆ ಮದುವೆಯೂ ಆಗಿ, ಮಕ್ಕಳಿದ್ದಾರೆ. ವಯಸ್ಸಿನ ಅಂತರವೂ ಇದೆ. ಆದ್ದರಿಂದ ವಾಸವಿಯನ್ನು ಮಹಾರಾಜನಿಗೆ ಕೊಡುವುದು ಸೂಕ್ತವಲ್ಲ" ಎಂದು ಬಂಧು ಬಳಗದವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. "ಸರಿ ನಿಮ್ಮೆಲ್ಲರ ಇಷ್ಟದಂತೆಯೇ ಆಗಲಿ" ಎಂದು ಹೇಳಿ ಕುಸುಮಶ್ರೇಷ್ಠಿಯು ಅಂದಿನ ಸಭೆಯನ್ನು ಮುಕ್ತಾಯ ಗೊಳಿಸಿದನು. ವಿಷ್ಣುವರ್ಧನನು ಪೆನುಗೊಂಡೆಯ ಮೇಲೆ ದಾಳಿಮಾಡಬಹುದು ಎಂದು ಕುಸುಮಶ್ರೇಷ್ಠಿಯು ವೈಶ್ಯರಿಗೆ ಎಚ್ಚರಿಕೆ ಇತ್ತನು. ಪೆನುಗೊಂಡೆಯ ಸೈನಿಕರು ಕೋಟೆ ಕೊತ್ತಲಗಳನ್ನು ಭದ್ರಪಡಿಸಿದರು. ಬಾಲವೈಶ್ಯರು ಯುದ್ಧಮಾಡಿಯಾದರೂ ನಮ್ಮ ಸೋದರಿಯಾದ ವಾಸವಿಯನ್ನು ರಕ್ಷಿಸಲೇಬೇಕು ಎಂದು ತಮ್ಮಲ್ಲೆ ತೀರ್ಮಾನಿಸಿದರು. ನಗರದ ರಕ್ಷಣೆಗಾಗಿ ಎಲ್ಲಾ ಜಾತಿಯವರು ಕುಸಮಶ್ರೇಷ್ಠಿಗೆ ಸಹಾಯಕರಾದರು. ಕುಸುಮ ಶ್ರೇಷ್ಠಿಯು ಬಂಧು ಬಳಗದವರ ಅಭಿಪ್ರಾಯಗಳನ್ನು ತನ್ನ ಆಪ್ತಕಾರ್ಯದರ್ಶಿಯ ಮೂಲಕ ಮಹಾರಾಜನಿಗೆ ಪತ್ರ ಮುಖೇನ ತಿಳಿಸಿದನು.

ಪತ್ರದ ಒಕ್ಕಣೆ ಹೀಗಿತ್ತು "ನಾನು ಸಾಮಂತರಾಜನಾಗಿದ್ದುಕೊಂಡು, ಪ್ರತಿವರ್ಷವೂ ತಪ್ಪದೇ ಕಪ್ಪ ಕಾಣಿಕೆಗಳನ್ನು ಸಲ್ಲಿಸುತ್ತಾ ಬಂದಿದ್ದೇನೆ. ನಿಮ್ಮೊಡನೆ ವಾಸವಿ ಮದುವೆಯಾಗುವುದು ಯಾರಿಗೂ ಇಷ್ಟವಿಲ್ಲ. ಅಲ್ಲದೆ ನನ್ನ ಮಗಳಿಗೆ ವಿವಾಹ ಮಾಡಿಕೊಂಡು, ಸಂಸಾರ ಸುಖವನ್ನು ಅನುಭವಿಸುವ ಅಭಿಲಾಷೆಯೇ ಇಲ್ಲ. ಕುಲಾಚಾರ ಮತ್ತು ಧರ್ಮಬಾಹಿರವಾದ ಈ ಮದುವೆಯು ನ್ಯಾಯವಾದುದಲ್ಲ. ಆದ್ದರಿಂದ ಇಂತಹ ಆಸಕ್ತಿಯನ್ನು ತಾವು ಬಿಡುವುದೊಳ್ಳೆಯದು. ಎಂದಿನಂತೆ ಸಾಮಂತರಾಜನಾಗಿದ್ದು, ಒಳ್ಳೆಯ ಕೆಲಸದಲ್ಲಿ ತಮಗೆ ಸಂಪೂರ್ಣ ಸಹಾಯ ಸಹಕಾರವನ್ನು ನೀಡುವೆನು".

ಕುಸುಮ ಶ್ರೇಷ್ಠಿಯ ಪತ್ರವನ್ನೋದಿದ ಮಹಾರಾಜನು ಅತಿಯಾದ ಕೋಪದಿಂದ ಪತ್ರವನ್ನು ತಂದ ದೂತನನ್ನು ಶೂಲಕ್ಕೆ ಹಾಕಿರಿ ಎಂದು ಘರ್ಜಿಸಿದನು. ದೂತರನ್ನು ಶೂಲಕ್ಕೇರಿಸುವುದು ರಾಜನೀತಿಯಲ್ಲ ಎಂದು ಮಂತ್ರಿಯು ಹೇಳಿ ದೂತನ ಪ್ರಾಣವನ್ನು ಉಳಿಸಿದನು.

ಕುಸುಮಶ್ರೇಷ್ಠಿಯ ಆಪ್ತಕಾರ್ಯದರ್ಶಿಯು ರಾಜಮಹೇಂದ್ರವರಲ್ಲಿ ನಡೆದ ವಿಷಯವನ್ನೆಲ್ಲಾ ತನ್ನ ಒಡೆಯನಿಗೆ ತಿಳಿಸಿದನು. ವಿಷ್ಣುವರ್ಧನ ಮಹಾರಾಜನು ಸೇನಾಪತಿಯನ್ನು ಕರೆದು "ವಾಸವಿಯನ್ನು

ಬಲಾತ್ಕಾರದಿಂದ ಎಳೆದುಕೊಂಡು ಬನ್ನಿ" ಎಂದು ಆಜ್ಞೆ ಮಾಡಿದನು. ಅಡ್ಡ ಬಂದವರನ್ನು ಸದೆ ಬಡಿಯು ವಂತೆಯು ಕಟ್ಟಪ್ಪಣೆ ಮಾಡಿದನು. ಕುಸುಮ ಶ್ರೇಷ್ಠಿಯು ಸಾಮಾನ್ಯನಾದ ಆಶ್ರಿತ ರಾಜನೆಂಬ ತಾತ್ಸಾರದಿಂದ ಮಹಾರಾಜನು ಪೆನುಗೊಂಡೆಗೆ ಚಿಕ್ಕ ಸೈನ್ಯವನ್ನು ಕಳುಹಿಸಿದನು.

ರಾಜನ ಸೇನೆಯು ಪೆನಗೊಂಡೆಯತ್ತ ಪಯಣ ಬೆಳಸಿ ನಗರದ ಹೊರವಲಯದಲ್ಲಿ ಬೀಡುಬಿಟ್ಟಿತು. "ಘರ್ಷಣೆ ಬಲವಂತಗಳ ಪ್ರಯೋಗ ಮಾಡದೇ ಕನ್ಯೆಯನ್ನು ಪಡೆಯಲು ಪ್ರಯತ್ನಿಸೋಣ ಕುಸಮ ಶ್ರೇಷ್ಠಿ ಮನಗೊಡದಿದ್ದರೆ ಬಲತ್ಕಾರ ಪ್ರಯೋಗ ಮಾಡೋಣ" ಎಂದು ಸೇನಾಪತಿ ಶಕ್ತಿವರ್ಮನು ಸೇನೆಯ ಕಾರ್ಯಾಚರಣೆಯನ್ನು ತಡೆದು ವಿಚಾರ ವಿನಿಮಯಕ್ಕೆ ಅವಕಾಶ ಮಾಡಿದನು. ಆದರೆ ಪೆನಗೊಂಡೆಯು ಸೈನಿಕರು ಸಾಮ, ದಾನ, ಭೇದ, ದಂಡಗಳೆಂಬ ಚತುರೋಪಾಯಗಳನ್ನು ಪ್ರಯೋಗಿಸಿ ಮಹಾರಾಜನ ಸೈನ್ಯವು ಹಿಂದಿರುಗುವಂತೆ ಮಾಡಿದರು. ಈ ಉಪಾಯಗಳಿಗೆ ವಶರಾಗದ, ಮಹಾರಾಜನ ಉಳಿದ ಸೈನಿಕರನ್ನು ಪೆನುಗೊಂಡೆಯ ಸೈನಿಕರು ಶೌರ್ಯಸಾಹಸಗಳಿಂದ ಸದೆಬಡಿದರು. ತಪ್ಪಿಸಿಕೊಂಡ ಕೆಲವು ಸೈನಿಕರು ರಾಜಮಹೇಂದ್ರವರದ ಕಡೆ ಓಡಿ ಹೋದರು. ಪೆನುಗೊಂಡೆಯಲ್ಲಿ ನಡೆದ ಸಂಗತಿಯನ್ನು ತಮ್ಮ ರಾಜಧಾನಿಗೆ ಯಥಾವತ್ತಾಗಿ ಹೇಳಿದರು.

ತಾತ್ಕಾಲಿಕವಾಗಿ ಪೀಡೆ ತಪ್ಪಿತಾದರೂ, ರಾಜನಿಂದ ಭಯತಪ್ಪಿದ್ದಲ್ಲವೆಂದು ಪೆನುಗೊಂಡೆಯ ವೈಶ್ಯರು ಆ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಕುಸುಮಶ್ರೇಷ್ಠಿಯು ೧೮ ನಗರಗಳ ವೈಶ್ಯರೆಲ್ಲಾ ಸೇರಿ ಸಭೆಯನ್ನು ನಡೆಸಬೇಕೆಂದು ತನ್ನ ಸೇವಕರ ಮೂಲಕ ಈ ೧೮ ನಗರಗಳ ವೈಶ್ಯರಿಗೆ ಕರೆ ಕಳುಹಿಸಿದನು. ೧. ಏಲಾಪುರ ೨.ನಾರಾಯಣಾಪುರ ೩. ವಿಶಾಲನಗರ ೪. ಶಿವಪುರ ೫. ಅಚಂಟನಗರ ೬. ಧನದಪುರ ೭. ಧರ್ಮಪುರ ೮. ಪಾಲಕುಂಡಪುರ ೯. ಜಗನ್ನಾಥಪುರ ೧೦. ಕಳಿಂಗ ೧೧. ಪಾಂಚಾಲ ೧೨. ಭೀಮವರ ೧೩. ತ್ರಿಗುಣನಗರ ೧೪. ಘಂಟಸಾಲಪುರ ೧೫. ನರಸಾಪುರ ೧೬. ಪೀಠಾಪುರ ೧೭. ನಿರವಧ್ಯಕ ೧೮. ಪೆನುಗೊಂಡ.

ಈ ೧೮ ಪಟ್ಟಣಗಳ ೭೧೪ ಗೋತ್ರಗಳಿಗೆ ಸೇರಿದ ವೈಶ್ಯರೆಲ್ಲರೂ ಪೆನುಗೊಂಡಗೆ ಬಂದರೂ ಪರಸ್ಥಳದಿಂದ ಬಂದ ಅಭ್ಯಾಗತರಿಗೆ ಒಂದೊಂದು ನಗರದವರಿಗೆ ಒಂದೊಂದು ಬಿಡಾರವನ್ನು ಏರ್ಪಡಿಸಿದ್ದರು. ಎಲ್ಲಾ ಬಿಡಾರಗಳಲ್ಲಿಯೂ ಎಲ್ಲಾ ವಿಧವಾದ ಉಪಚಾರಗಳನ್ನು ಮಾಡಲು ಸೇವಾದಳದವರನ್ನು ಏರ್ಪಡಿಸಿದ್ದರು. ಪೆನಗೊಂಡ ನಗರವು ಮಿತಿ ಮೀರಿದ ಜನಸಮೂಹದಿಂದ ತುಂಬಿತುಳುಕಾಡಿತು. ಅವರೆಲ್ಲರು ಭಕ್ಷ್ಯ ಭೋಜನವನ್ನು ಮಾಡಿ, ಅಂದು ರಾತ್ರಿ ಎಲ್ಲರೂ ವಿಶ್ರಾಂತಿ ಪಡೆದರು. ಮರುದಿನ ಅಂದರೆ ಪುಷ್ಯ ಬಹುಳ ತ್ರಯೋದಶಿಯ ದಿನ ಬೆಳಿಗ್ಗೆ ಅವರೆಲ್ಲರೂ ನಿತ್ಯಕರ್ಮಗಳನ್ನು ಮಾಡಿ ನಗರೇಶ್ವರ ಮಂಟಪಕ್ಕೆ ಬಂದರು ನಗರೇಶ್ವರ ಮತ್ತು ಜನಾರ್ಧನ ಸ್ವಾಮಿಯವರಿಗೆ ಪೂಜೆ ಹಾಗೂ ಮಂಗಳಾರತಿಯಾಯಿತು. ನಂತರ ಪ್ರಥಮ ಮಹಾಸಭೆಯ ಅಧಿವೇಶನವು ಪ್ರಾರಂಭವಾಯಿತು. ಕುಸುಮ ಶ್ರೇಷ್ಠಿಯು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದನು.

ನಾವೂ ಯಾವಾಗಲೂ ಧರ್ಮದಿಂದ ನಡೆಯುವವರು. ಸಂಪ್ರದಾಯಸ್ಥರು, ದೈವ ಭಕ್ತರು, ಜನಾರ್ಧನ ಮತ್ತು ನಗರೇಶ್ವರ ಸ್ವಾಮಿಯ ಅನುಗ್ರಹದಿಂದ ಆಗರ್ಭ ಶ್ರೀಮಂತರಾಗಿ ದಾನ, ಧರ್ಮ ಮತ್ತು ಪರೋಪಕಾರಗಳನ್ನು ಮಾಡುತ್ತಾ ಸುಖವಾಗಿದ್ದೇವೆ. ನಮಗೆ ಯಾವ ಮತದವರ ಮೇಲೂ ದ್ವೇಷವಿಲ್ಲ. ಇದುವರೆಗೆ ವಿಷ್ಣುವರ್ಧನ ಮಹಾರಾಜರೊಂದಿಗೆ ಸ್ನೇಹ ಸೌಹಾರ್ದತೆಯಿಂದಲೇ ಇದ್ದೇವೆ. ನನ್ನ ಮಗಳಾದ ವಾಸವಿಯನ್ನು ಬಲಾತ್ಕಾರದಿಂದ ಮದುವೆಯಾಗಬೇಕೆಂದು ರಾಜನು ನಮ್ಮ ನಗರಕ್ಕೆ ಮುತ್ತಿಗೆ ಹಾಕಿದ್ದ, ಅವನ ಸೇನೆಯನ್ನು ನಮ್ಮ ಸೇನೆಯು ಚತುರೋಪಾಯಗಳಿಂದ ಹಿಮ್ಮೆಟ್ಟಿಸಿತು. ಮತ್ತೊಮ್ಮೆ ನಮ್ಮ ರಾಜ್ಯವು ಅವನ ಬಲವಾದ ಅಕ್ರಮಣಕ್ಕೆ ಒಳಗಾಗಬಹುದು. ಅನ್ಯ ಜಾತಿಯ ವಿವಾಹ ಸಂಬಂಧ ನಮಗೆ ಹೊಸ ಸಂಪ್ರದಾಯ, ಹಾಗೂ ಮಹಾರಾಜನಿಗೆ ಮದುವೆಯಾಗಿ ಮಗನಿದ್ದಾನೆ. ಆದ್ದರಿಂದ ವೈಶ್ಯ ಕುಲದ ೭೧೪ ಗೋತ್ರಗಳಿಗೆ ಸೇರಿದ ವೈಶ್ಯರನ್ನು ಸಮಾಲೋಚನೆಗಾಗಿ ಮಹಾಸಭೆಗೆ ಆಹ್ವಾನಿಸಿದ್ದಾರೆ.

ನಿಮ್ಮಲ್ಲಿ ಬುದ್ಧಿವಂತರು. ವಿದ್ಯಾವಂತರು, ದೂರದೃಷ್ಟಿಯುಳ್ಳವರು, ಧರ್ಮಾಭಿಮಾನಿಗಳು, ಪಂಡಿತರು, ದೈವಭಕ್ತರು, ವ್ಯವಹಾರ ಕುಶಲಿಗಳು, ರಾಜನೀತಿ ನಿಪುಣರು ಇರುವರು. ನೀವುಗಳು ಈ ಗಂಭೀರವಾದ ವಿಷಯದ ಬಗ್ಗೆ ಪರ್ಯಾಲೋಚಿಸಿ, ಒಮ್ಮುಖವಾದ ಅಭಿಪ್ರಾಯವನ್ನು ಸೂಚಿಸಿದರೆ ನಮಗೆ ಒದಗಲಿರುವ ವಿಪತ್ತನ್ನು ಪರಿಹಾರ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಈ ವಿಷಯದಲ್ಲಿ ಎಲ್ಲರ ಸಹಕಾರವೂ ಇರಲಿ ಎಂದು ಕುಸುಮ ಶ್ರೇಷ್ಠಿಯು ತಿಳಿಸಿದನು.

ವಿಷ್ಣುವರ್ಧನ ಮಹಾರಾಜನಿಗೆ ಮದುವೆಯಾಗಿದೆ. ಮಗನೂ ಇದ್ದಾನೆ ಅಂತಹವನಿಗೆ ವಾಸವಿಯೊಂದಿಗೆ ಮದುವೆ ಮಾಡುವುದು ಸರಿಯಲ್ಲ ಎಂದು ಮಹಾಸಭೆಯಲ್ಲೂ ಸಹಾ ಕೆಲವರು ಅಭಿಪ್ರಾಯಪಟ್ಟರು. ವಿಷ್ಣುವರ್ಧನನಿಗೆ ಮದುವೆಯಾಗಿರಬಹುದು. ಮಗನೂ ಇರಬಹುದು. "ರಾಜನೋ ಬಹುವಲ್ಲಭಾ" ಎಂಬಂತೆ, ರಾಜನು ಬಹುಪತ್ನಿಯರನ್ನು ಹೊಂದಿರುತ್ತಾನೆ. ಆದ್ದರಿಂದ ವಾಸವಿಯೊಂದಿಗೆ ಮದುವೆ ಮಾಡುವುದು ತಪ್ಪೇನಲ್ಲ ಎಂದು ಕೆಲವರು ಅಭಿಪ್ರಾಯಪಟ್ಟರು. ವಿದ್ಯಾವಂತರು, ದಡ್ಡರೊಂದಿಗೆ, ಪ್ರಬಲರು ದುರ್ಬಲರೊಂದಿಗೆ ಹೀಗೆ ಸಮಾನಸ್ಕಂದತೆ ಇಲ್ಲದವರೊಂದಿಗೆ ಬಾಂಧವ್ಯ ಬೆಳೆಸುವುದು ಸೂಕ್ತವಲ್ಲ ಎಂದು ಹಲವರು ಅಭಿಪ್ರಾಯಪಟ್ಟರು. ಹೀಗೆ ಮಹಾಸಭೆಯಲ್ಲಿ ಕೆಲವರು ವಾಸವಿಯು ವಿಷ್ಣುವರ್ಧನನೊಂದಿಗೆ ಮದುವೆಯಾಗಬಹುದೆಂದೂ, ಕೆಲವರು ಆಗಬಾರದೆಂದೂ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರು. ಆ ಸಭೆಯಲ್ಲಿ ಬಹುಮತವಾದ ಅಭಿಪ್ರಾಯವು ಖಚಿವಾಗಿ ಮೂಡಿಬರಲಿಲ್ಲ. ವಾದ ವಿವಾದಗಳನ್ನು ಕೇಳಿದ ಸಭಾಧ್ಯಕ್ಷರು "ವಿಷ್ಣುವರ್ಧನ ಮಹಾರಾಜನೊಂದಿಗೆ ವಾಸವಿಯ ಮದುವೆ ಮಾಡುವುದಿಲ್ಲ. ಇದಕ್ಕಾಗಿ ಎಲ್ಲರೂ ಪ್ರತಿಭಟಿಸಬೇಕು" ಎಂದರು. ಕೇವಲ ಒಂದು ಹೆಣ್ಣಿಗಾಗಿ ಸರ್ವನಾಶವಾಗುವುದು ಸರಿಯಲ್ಲವೆಂದು ಹೇಳಿ ಕುಪ್ಪಯ್ಯ ಶ್ರೇಷ್ಠಿಯು ಸಭಾತ್ಯಾಗ ಮಾಡಿದನು. ೬೧೨ ಗೋತ್ರದವರು ಸಭಾದ್ಯಕ್ಷರ ಹೇಳಿಕೆಯನ್ನು ಪುರಸ್ಕರಿಸಿ ೧೦೨ ಗೋತ್ರದವರು ಸಭೆಯಲ್ಲಿ ಉಳಿದರು. ಆ ಮಹಾಸಭೆಯಲ್ಲಿ ಸರ್ವಸಮ್ಮತವಾಗಿ

ಅಂಗೀಕರಿಸಿದ ಅಧಿಕೃತವಾದ ನಿರ್ಣಯವಲ್ಲದೆ, ಸ್ವೀಕೃತವಾದ ಇತರ ತೀರ್ಮಾನಗಳಿವು. ಕುಸುಮ ಶ್ರೇಷ್ಠಿಯ ನಾಯಕತ್ವದಲ್ಲಿ ಎಂದಿನಂತೆ ಸಂಪೂರ್ಣ ವಿಶ್ವಾಸವಿಡುವುದು. ವಾಸವಿಗಾಗಿ ಉಸಿರು ಇರುವವರೆಗೂ ಹೋರಾಡುವುದು, ಸಭಾತ್ಯಾಗ ಮಾಡಿ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದವರೊಡನೆ ಸಂಬಂಧ ತೊರೆಯುವುದು, ಸಂಕೇತನಾಮಗಳನ್ನು ಬಳಸುವುದು.

ಸಭಾತ್ಯಾಗ ಮಾಡಿ ಬಂದ ೬೧೨ ಗೋತ್ರಗಳ ವೈಶ್ಯರು ಹಿಪ್ಪೆಯ ಮರದ ತೋಪಿನಲ್ಲಿ ಸಭೆ ಸೇರಿದರು. ಆ ಸಭೆಯಲ್ಲಿ ಹಲವು ವಿಷಯಗಳನ್ನು ತೀರ್ಮಾನಿಸಿದರು. ಯಾವುದೆಂದರೆ ೧೦೨ ಗೋತ್ರದವರು ನಮ್ಮನ್ನು ಬಹಿಷ್ಕರಿಸುವುದರಿಂದ ಪ್ರಾಣವನ್ನು ಉಳಿಸಿಕೊಳ್ಳಲು ದೂರವಾಗಿ ಹೊರಟು ಹೋಗುವುದು. ೧೦೨ ಗೋತ್ರದವರ ರಹಸ್ಯಗಳನ್ನು ವಿಷ್ಣುವರ್ಧನನಿಗೆ ತಿಳಿಸುವುದು. ವಿಷ್ಣುವರ್ಧನನಿಗೆ ಸಹಾಯ ಮಾಡುವುದರಿಂದ ನಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಬಹುದು ಹಾಗೂ ಈ ರಾಜ್ಯದಲ್ಲೇ ಸುಖವಾಗಿ ನಿಶ್ಚಿಂತರಾಗಿರಬಹುದು. ಏನಾದರೂ ನಮಗೆ ಪ್ರಾಣಭಯವಿದೆ. ಆದ್ದರಿಂದ ನಾವು ಪೆನಗೊಂಡೆಯನ್ನು ಬಿಟ್ಟು ದೇಶದ ನಾನಾ ಕಡೆಗಳಲ್ಲಿ ನೆಲೆಸೋಣ. ಅನಂತರ ಆ ೬೧೨ ಗೋತ್ರಗಳಿಗೆ ಸೇರಿದ ವೈಶ್ಯರು ಪ್ರಾಣ ಭಯದಿಂದ ಪೆನಗೊಂಡೆಯನ್ನು ಬಿಟ್ಟು ದೇಶದ ನಾನಾ ಕಡೆಗಳಲ್ಲಿ ನೆಲೆಸಿದರು.

೭೧೪ ಗೋತ್ರಗಳ ವೈಶ್ಯರಲ್ಲಿ ೨ ಗುಂಪುಗಳಾದವು. ಈ ಎಲ್ಲಾ ವಿಷಯಗಳೂ ವಾಸವಿಗೆ ತಿಳಿದವು. ವಿಷ್ಣುವರ್ಧನನ ತಾಮಸ ಗುಣದ ಬಗ್ಗೆ ಮರುಗಿದಳು. ಅನಂತರ "ರಕ್ತಪಾತದ ಯುದ್ಧ ನನಗಿಷ್ಟವಿಲ್ಲ ಅಹಿಂಸೆ ಹಾಗೂ ಆತ್ಮ ಬಲಿದಾನದಿಂದ ಈ ರಕ್ತಪಾತವನ್ನು ತಡೆಗಟ್ಟಬಹುದು" ಎಂಬ ಅಭಿಪ್ರಾಯವನ್ನು ತನ್ನ ತಂದೆಗೆ ತಿಳಿಸಿದಳು.

ಮಹಾಸಭೆ ನಡೆದ ಮರುದಿನ ೧೦೨ ಗೋತ್ರಗಳ ವೈಶ್ಯರು ನಗರೇಶ್ವರ ಮಂಟಪದಲ್ಲಿ ಸೇರಿದರು. ಅಲ್ಲಿಗೆ ವಾಸವಿಯು ಕುಸುಮಶ್ರೇಷ್ಠಿಯೊಂದಿಗೆ ಬಂದಳು. ಕುಲಗುರುಗಳಾದ ಭಾಸ್ಕರಾಚಾರ್ಯರೊಂದಿಗೆ ವಂದಿಸಿ ವೈಶ್ಯರನ್ನು ಕುರಿತು ಹೀಗೆಂದಳು. "ಆಚಾರ ಪ್ರಥಮೋ ಧರ್ಮ" ಪ್ರತಿಯೊಬ್ಬರು ಧರ್ಮವನ್ನು ಆಚರಿಸಬೇಕು. ಧರ್ಮವನ್ನು ಯಾರು ಆಚರಿಸುವರೋ ಅವರನ್ನು ಧರ್ಮವು ರಕ್ಷಿಸುತ್ತದೆ. ನಮ್ಮ ಪೂರ್ವಜರು ತಪಸ್ಸನ್ನಾಚರಿಸಿ ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದಿರುವರು. ಪ್ರತಿಯೊಂದು ವರ್ಣದವರೂ ಆಚರಿಸಬೇಕಾದ ಧರ್ಮಗಳನ್ನು ನಿರ್ಣಯ ಮಾಡಿರುವರು. ಲೋಕದಲ್ಲಿ ಜನಿಸಿದ ಸಮಸ್ತ ಪ್ರಾಣಿಗಳೂ ಆಹಾರ, ನಿದ್ರಾ ಮೈಥುನದಲ್ಲಿ ಆಸಕ್ತಿವುಳ್ಳವರಾಗಿರುವುದು ಸಾಮಾನ್ಯವಾಗಿ ಕಾಣಬರುತ್ತದೆ. ಆದರೆ ಮನುಷ್ಯನಿಗೆ ವಿಚಾರ ಮಾಡುವ ಶಕ್ತಿಯನ್ನು ಭಗವಂತನು ಕೊಟ್ಟಿರುವುದರಿಂದ, ಹಸಿವು ಬಾಯಾರಿಕೆ ಸುಖ ದುಃಖದಿಂದ ಹುಟ್ಟು ಸಾವು ತಪ್ಪುವುದಿಲ್ಲ. ಅಲ್ಲದೇ ಬದುಕಿರುವಾಗಲೇ ಪರಮ ತತ್ವವನ್ನು ತಿಳಿದು ಪರೋಪಕಾರ ಮಾಡುವುದರಿಂದ ಚಿತ್ತಶುದ್ಧಿ ಉಂಟಾಗುವುದು. ನಿರ್ಮಲವಾದ ಹೃದಯದಲ್ಲಿ ಸರ್ವವ್ಯಾಪಕನಾದ ಭಗವಂತನನ್ನು ದರ್ಶನ ಮಾಡಬಹುದು. ದೈವ ಸಾಕ್ಷಾತ್ಕಾರದಿಂದ ಪುನರ್ಜನ್ಮವಿಲ್ಲದ ಮೋಕ್ಷ

ಪ್ರಾಪ್ತಿ" ಎಂಬುದನ್ನು ತಿಳಿಯಿರಿ. ಎಲ್ಲರಲ್ಲೂ ಮಾತೆಯನ್ನೇ ಕಂಡಂತಾಗಿರುವುದರಿಂದ 'ಮದುವೆ' ಎಂಬ ಮಾತೇ ಬರುವುದಿಲ್ಲ. ದೇಹಭಾವವನ್ನು ಮೀರಿ ದೇವೀ ಜ್ಞಾನದಲ್ಲಿ ನೆಲೆ ನಿಂತವಳಿಗೆ ದೇಹವಿದ್ದರೇನು? ಅಗ್ನಿಯಲ್ಲಿ ದಹಿಸಿ ಹೋದರೇನು, ಇಂದ್ರಿಯ ಅಂತಃಕರಣಗಳನ್ನು ಅನ್ಯಭಾವನೆಯಿಂದ ಕಾಮದಾಹಕ್ಕೆ ಬಲಿಕೊಡಲಾರೆನು. ದೇಹವನ್ನು ಬೇಕಾದರೂ ಬಿಡುತ್ತೇನೆ. ಪರಾಶಕ್ತಿ ಆಗಿರಲಾರೆನು ಎಂದಳು.

ವಾಸವಿಯ ಮಾತುಗಳನ್ನು ವೈಶ್ಯರೆಲ್ಲಾ ಮಂತ್ರ ಮುಗ್ಧರಾದಂತೆ ಕೇಳಿದರು. ಕುಸುಮಾಂಬೆ ಕುಸುಮ ಶ್ರೇಷ್ಠಿಯ ದಂಪತಿಗಳ ಹೃದಯ ತುಂಬಿ ಬಂತು. ಕಂಠ ಗದ್ಗದವಾಯಿತು. ಆನಂದ ಬಾಷ್ಪಗಳು ಉದುರಿದವು. ಆ ಆದರ್ಶ ದಂಪತಿಗಳು ತಮ್ಮ ಸಂಕಲ್ಪವನ್ನು ಅಲ್ಲಿ ನೆರೆದಿದ್ದ ವೈಶ್ಯರಿಗೆ ಹೀಗೆಂದು ತಿಳಿಸಿದರು. "ಇದುವರೆಗೂ ಜೀವನದ ಪರಮೋದ್ದೇಶವನ್ನು ನಮ್ಮ ಪುತ್ರಿಯು ತಮಗೆ ತಿಳಿಸಿದುದನ್ನು ಕೇಳಿರುವಿರಿ. ನಾವೀರ್ವರೂ ಅಗ್ನಿ ಪ್ರವೇಶಮಾಡಿ ಜನ್ಮಸಾರ್ಥಕಮಾಡಿಕೊಳ್ಳುವೆವು. ಆ ಧರ್ಮವನ್ನು ಆಚರಿಸುವುದಕ್ಕಿಂತ ಭಗವತಿಯ ಪ್ರೀತ್ಯರ್ಥವಾಗಿ ಆತ್ಮಾರ್ಪಣೆ ಮಾಡಿಕೊಳ್ಳುವುದು ಶ್ರೇಯಸ್ಕರ"[೬](ವೈಶ್ಯ ಮಾರ್ಗದರ್ಶಿ, ೨೦೦೩, ಪು. ೨೨೨).

ಇದುವರೆಗೂ ಎಲ್ಲವನ್ನೂ ಕೇಳುತ್ತಾ ಕುಳಿತಿದ್ದ ವೈಶ್ಯರ ಹೃದಯ ಕಲಕಿದಂತಾಯಿತು. ಒಳಗಣ್ಣು ತೆರೆಯಿತು. ಆರ್ಯವೈಶ್ಯರ ಆದರ್ಶವೆಂದರೆ ಆಧ್ಯಾತ್ಮ ತತ್ವ ದರ್ಶನ, ಆರ್ಯಧರ್ಮ ಪರಿಪಾಲನೆ ಎಂಬ ಜ್ಞಾನೋದಯವಾಯಿತು. ೧೦೨ ಗೋತ್ರದವರು ವಾಸವಾಂಬೆಯ ಸಂಕಲ್ಪವನ್ನು ಪರಿಪಾಲಿಸುವುದೇ ತಮ್ಮ ಕರ್ತವ್ಯವೆಂದು ನುಡಿದರು. "ದೇಹ ದೇಶಕ್ಕಿಂತ ದೇವರು ದೊಡ್ಡವನು. ದೈವಾಜ್ಞೆಗೆ ಮೀರಿದುದು ಮಿಗಿಲಾದದ್ದು ಮತ್ತೊಂದಿಲ್ಲವೆಂದು ನಿಶ್ಚಯ ಮಾಡಿದರು. ವಾಸವಿಯ ದೃಢ ನಿರ್ಧಾರವನ್ನು ಆಜ್ಞೆಯೆಂದು ಭಾವಿಸಿ ನಾವೂ ಸಹ ನಿಮ್ಮೊಂದಿಗೆ ಆತ್ಮಾಹುತಿಗೆ ಸಿದ್ಧರಾಗಿದ್ದೇವೆ ಎಂದು ಒಮ್ಮತದಿಂದ ಹೇಳಿದರು. ಅನಂತರ ಭಾಸ್ಕರಾಚಾರ್ಯರು ೧೦೨ ಗೋತ್ರದವರಿಗೆ ಹೀಗೆಂದು ಹೇಳಿದರು. ಸತ್ಯವಂತರೂ ಧರ್ಮನಿಷ್ಠರೂ ಆದ ನೀವುಗಳು ಕೈಗೊಂಡ ತೀರ್ಮಾನವು ಪರಮಾತ್ಮನ ಸಂಕಲ್ಪ ಎಂದು ತಿಳಿದಿದ್ದೇವೆ. ಸೂರ್ಯನು ಪ್ರತ್ಯಕ್ಷದೇವತೆ, ಅವನ ಆರಾಧನೆಯು ಪ್ರತಿವರ್ಷ ಮಾಘಮಾಸದಲ್ಲಿ ಆಚರಿಸಲ್ಪಡಲಾಗುತ್ತದೆ. ನಿಮ್ಮೆಲ್ಲರ ಆತ್ಮ ಸಮರ್ಪಣೆಯು ಮಾಘಮಾಸದಲ್ಲಿ ನಡೆಯುವುದು. ಆದ್ದರಿಂದ ಅಲ್ಲಿಯವರೆಗೆ ನೀವೆಲ್ಲರೂ ಭಗವಂತನ ಪೂಜೆ, ಜಪ, ಧ್ಯಾನದಲ್ಲಿ ನಿರ್ಮಲಭಾವದಿಂದ ನಿರತರಾಗಿ ಶ್ರೀ ವಾಸವಿಯ ನುಡಿಗಳನ್ನು ಆಗಿಂದಾಗ್ಗೆ ನೆನಪಿಸಿಕೊಳ್ಳುತ್ತೀರಿ. ಆದರಿಂದ ದೇಹಾಭಿಮಾನ ಇಂದ್ರಿಯ ಚಾಪಲ್ಯವು ಅಡಗಿ ವೀರರಾಗಿ ಬಲಿದಾನವಾಗಲು ಅರ್ಹತೆಯುಂಟಾಗುವುದು"[೭](ವೈಶ್ಯ ಮಾರ್ಗದರ್ಶಿ, ೨೦೦೩, ಪು. ೧೩).

ವಾಸವಿಯ ಅಪೇಕ್ಷೆಯಂತೆ ನಗರದ ಎಲ್ಲಾ ಮನೆಗಳು ಸುಣ್ಣ ಬಣ್ಣಗಳಿಂದ ಕಂಗೊಳಿಸಿದವು. ತಳಿರು ತೋರಣಗಳಿಂದ ಪಟ್ಟಣವು ಅಲಂಕರಿಸ್ಪಟ್ಟಿತು. ನಗರದ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದುವು. ೧೦೨ ಗೋತ್ರಗಳ ವೈಶ್ಯರು ಧನಕನಕ ವಸ್ತ್ರವಾಹನಾದಿಗಳನ್ನು ಯಥೋಚಿತವಾಗಿ ದಾನ ಮಾಡಿದರು.

[illegible]

[illegible]

[illegible]

ಬ್ರಹ್ಮಕುಂಡ ಎಂಬುದು ಗೋದಾವರಿ ನದಿಯ ದಡದಲ್ಲಿರುವ ಪವಿತ್ರವಾದ ಕ್ಷೇತ್ರ. ವಾಸವಿಯು ಬ್ರಹ್ಮಕುಂಡ ಎಂಬ ಕ್ಷೇತ್ರದಲ್ಲಿ ಅಗ್ನಿಕುಂಡಗಳನ್ನು ಈ ರೀತಿಯಾಗಿ ನಿರ್ಮಿಸುವಂತೆ ಅಪ್ಪಣೆ ಮಾಡಿದಳು. ಮಧ್ಯಭಾಗದಲ್ಲಿ ಪ್ರಧಾನಕುಂಡ, ಅದರ ಬಲಭಾಗದಲ್ಲಿ ೯ ಕುಂಡಗಳು, ಎಡಭಾಗದಲ್ಲಿ ೮ ಕುಂಡಗಳು ಮೇಲ್ಭಾಗದಲ್ಲಿ ೧ ಕುಂಡ ಅದರ ಸುತ್ತ ೧೩ ಕುಂಡಗಳು. ೪ ಮೂಲೆಗಳಲ್ಲಿ ಒಂದೊಂದು ಮೂಲೆಗೆ ೧೬ ಕುಂಡಗಳನ್ನು ನಿರ್ಮಿಸಿದರು. ಕುಂಡಗಳನ್ನು ನಿರ್ಮಿಸಿದವರಿಗೆ ವೈಶ್ಯರು ಕೃಷಿ ಭೂಮಿಯನ್ನು ಸಂಭಾವನೆಯಾಗಿ ಕೊಟ್ಟರು.

ಇತ್ತ ಬಾಸ್ಕರಾಚಾರ್ಯರು ಸೇವಕರನ್ನು ಕರೆದು "ನಗರದ ಬೀದಿಗಳಲ್ಲಿ ಕಲ್ಯಾಣ ಮಹೋತ್ಸವವೆಂದು ಸಾರಿರಿ" ಎಂದು ಹೇಳಿದರು. ಸೇವಕರು ಸಂತೋಷಿತರಾಗಿ ಪೆನಗೊಂಡೆಯನ್ನು ಅಲಂಕರಿಸಿ ವಿವಾಹ ವಿಷಯವನ್ನು ಡಂಗುರ ಹೊಡೆದರು. ಪೆನಗೊಂಡೆಯಲ್ಲಿ ಉಳಿದುಕೊಂಡಿದ್ದ ವಿಷ್ಣುವರ್ಧನನ ಕೆಲವು ಸೈನಿಕರು ಪೆನುಗೊಂಡೆಯ ಅಲಂಕಾರವನ್ನು ಹಾಗೂ ಡಂಗುರವನ್ನು ಕೇಳಿ ವಾಸವಿ ಮದುವೆಯ ಏರ್ಪಾಡುಗಳಾಗುತ್ತಿದೆ ಎಂದು ಸಂತೋಷಪಟ್ಟರು. ೧೦೨ ಗೋತ್ರಗಳ ವೈಶ್ಯ ದಂಪತಿಗಳು ಸ್ನಾನ, ಪೂಜೆ, ಸಂಧ್ಯಾವಂದನೆ ಮಾಡಿ ನಗರೇಶ್ವರ ದೇವಾಲಯದ ಬಳಿ ಬಂದರು. ಭಾಸ್ಕರಾಚಾರ್ಯರು ದಂಪತಿಗಳಿಗೆ ಕಂಕಣವನ್ನು ಕಟ್ಟಿದರು. ಅವರೆಲ್ಲಾ ಮಂಗಳ ವಾದ್ಯಗಳೊಂದಿಗೆ ವೀರಯೋಧರಂತೆ ಹೊರಟರು. ವಾಸವಿಯು ಮುಂದೆ ಬರುತ್ತಿದ್ದಳು. ೧೦೨ ಗೋತ್ರದ ದಂಪತಿಗಳು ವಾಸವಿಯನ್ನು ಅನುಸರಿಸುತ್ತಿದ್ದರು. ಪೆನುಗೊಂಡೆಯು ಬಂಧು ಬಳಗದವರಿಂದ ತುಂಬಿ ತುಳುಕುತ್ತಿತ್ತು. ಎಲ್ಲರೂ ಇವರನ್ನು ಹಿಂಬಾಲಿಸಿ ಬ್ರಹ್ಮಕುಂಡದ ಹತ್ತಿರ ಬಂದರು. ವಾಸವಿಯು ಮಧ್ಯಭಾಗದಲ್ಲಿರುವ ಪ್ರಧಾನ ಕುಂಡದ ಮುಂದೆ ನಿಂತಳು. ಹಾಗೆಯೇ ಒಂದೊಂದು ಗೋತ್ರದ ದಂಪತಿಗಳು ಒಂದೊಂದು ಕುಂಡದ ಹತ್ತಿರ ಬಂದು ನಿಂತರು. ದಂಪತಿಗಳು ವಿಧಿವತ್ತಾಗಿ ಆ ಕುಂಡಗಳಿಗೆ ಪೂಜೆ ಮಾಡಿ ಅವುಗಳಲ್ಲಿ ಅಗ್ನಿಯನ್ನು ಸ್ಥಾಪಿಸಿದರು. ೧೦೩ ಕುಂಡಗಳು ಧಗಧಗನೆ ಉರಿಯಲಾರಂಭಿಸಿದವು.

ವಾಸವಿಯ ದಿವ್ಯತೇಜಸ್ಸು ಹಾಗೂ ಅಪೂರ್ವವಾದ ವ್ಯಕ್ತಿತ್ವವನ್ನು ಕಂಡ ವೈಶ್ಯರು ಅವಳನ್ನು ಕುರಿತು "ಅಮ್ಮಾ ನೀನು ಮಾನವಳಾಗಿ ಹುಟ್ಟಿದ ದೇವತೆಯಾಗಿರಬೇಕು. ನಿನ್ನ ನಿಜ ಸ್ವರೂಪವನ್ನು ನಮಗೆ ತೋರಿಸಿ ಅನುಗ್ರಹಿಸಬೇಕು" ಎಂದು ಪ್ರಾರ್ಥಿಸಿದರು. ವಾಸವಿಯು ತನ್ನ ವಿಶ್ವರೂಪವನ್ನು ತೋರಿಸಿದಳು. ಕೋಟಿ ಸೂರ್ಯರಿಗೆ ಸಮಾನವಾದ ಕಾಂತಿಯುಳ್ಳ ಅವಳನ್ನು ನೋಡಲಾರದೆ ಜನರು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಆಗ ದೇವಿಯು ಅವರಿಗೆ ದಿವ್ಯದೃಷ್ಟಿಯನ್ನು ಇತ್ತಳು. ಅನಂತರ ಅವರು ದೇವಿಯ ವಿಶ್ವರೂಪದ ದರ್ಶನ ಭಾಗ್ಯವನ್ನು ಪಡೆದರು. ಅವಳಿಗೆ ೪ ಕೈಗಳಿದ್ದವು. ವಿಶಾಲವಾದ ನೇತ್ರಗಳಿಂದ ಮಮತೆ ಹೊರಸೂಸುತ್ತಿತ್ತು. ದಿವ್ಯಾಭರಣಗಳನ್ನು ಧರಿಸಿದ್ದಳು. ಅವಳ ಮುಖದಲ್ಲಿ ಕಿರುನಗೆ ಇತ್ತು. ಸುಂದರಮತಿ ಯಾದ ಆ ತಾಯಿಯಿಂದ ಹೊರ ಹೊಮ್ಮಿದ ಕಾಂತಿಯು ದಶ ದಿಕ್ಕುಗಳಿಗೂ ಹರಡಿತ್ತು. ದೇವಾನು ದೇವತೆಗಳು ಗಗನ ಮಾರ್ಗದಲ್ಲಿ ಬಂದು ದೇವಿಯನ್ನು ಸ್ತುತಿಸಿದರು. ವೈಶ್ಯ ಭಕ್ತರು ಭಯ -ಭಕ್ತಿಗಳಿಂದ ದೇವಿಗೆ

[illegible]

ಸಾಷ್ಟಾಂಗ ಪ್ರಣಾಮ ಮಾಡಿದರು. ಅಲ್ಲಿ ನೆರದ ಜನಸ್ತೋಮವು ದೇವಿಯನ್ನು ಕಂಡು ಆಶ್ಚರ್ಯಚಕಿತರಾಗಿ ಸಾಷ್ಟಾಂಗ ಪ್ರಣಾಮ ಮಾಡಿ ಸ್ತೋತ್ರ ಮಾಡಿತು. ವಿಶ್ವರೂಪವನ್ನು ನೋಡಿದ ರಾಜಸೈನಿಕರು ಆಕೆಯ ಭಕ್ತರಾಗಿ "ಖಡ್ಗ"ಗಳನ್ನು ಹಾಡಿದರು. ಅವರೇ ಇಂದಿನವರೆಗೂ ಅಮ್ಮನವರ ಕಥೆಗಳನ್ನು ಹೇಳುವ "ವೀರಮುಷ್ಠಿಗಳು" ಅವರೆಲ್ಲರ ಭಕ್ತಿಯಿಂದ ಸಂತೃಪ್ತಳಾದ ದೇವಿಯು ನನಗೆ ತಾಯಿ, ತಂದೆ, ಬಂಧು-ಬಳಗ ಶತ್ರುಗಳು ಯಾರು ಇಲ್ಲ. ಆದಿಪರಾಶಕ್ತಿಯಾದ ನಾನೇ ಸಕಲ ಲೋಕಗಳ ತಾಯಿಯಾಗಿದ್ದೇನೆ. ಎಲ್ಲಾ ಯುಗಗಳಲ್ಲಿಯೂ ಅವತರಿಸಿದ್ದೇನೆ. ಕಲಿಯುಗದಲ್ಲಿ "ಆರ್ಯವೈಶ್ಯ" ಕುಲವನ್ನು ಉದ್ಧಾರ ಮಾಡುವ ಸಲುವಾಗಿ "ಕನ್ನಿಕಾ ಪರಮೇಶ್ವರಿ"ಯಾಗಿ ಅವತರಿಸಿದ್ದೇನೆ. ದುಷ್ಟನಾದ ಮಹಾರಾಜನ ಪಾಪದೃಷ್ಟಿಯಿಂದ ನನ್ನ ಭೌತಿಕ ದೇಹವು ಅಪವಿತ್ರವಾಗಿದೆ ಪರಮ ಪವಿತ್ರವಾದ ಅಗ್ನಿಯಲ್ಲಿ ಈ ಶರೀರವನ್ನು ಅರ್ಪಿಸಿ, ನಿತ್ಯವಾದ ನನ್ನ ಲೋಕವನ್ನು ಸೇರುವೆನು. ಇದಕ್ಕಾಗಿ ನೀವು ವಿಷಾದಿಸಬೇಕಾಗಿಲ್ಲ. ನಾನು ಅಗ್ನಿಪ್ರವೇಶ ಮಾಡಿದ ಸುದ್ದಿಯನ್ನು ಕೇಳಿದ ಕೂಡಲೆ ವಿಷ್ಣುವರ್ಧನನು ಸಾಯುವನು. ಕ್ಷುಲ್ಲಕನಾದ ವಿಷ್ಣುವರ್ಧನನ ವಧೆಗಾಗಿ ನೀವು ಯುದ್ಧ ಮಾಡಬೇಕಾಗಿಲ್ಲ. ಸಮಾಧಿಯು ಹಿಂದಿನ ಜನ್ಮದಲ್ಲಿ ಬಂಧುಗಳೊಂದಿಗೆ ಮೋಕ್ಷವನ್ನು ಬೇಡಿದ್ದನು. ಅದರಂತೆಯೇ ಈಗ ಕುಸಮಶ್ರೇಷ್ಠಿಯಾಗಿ ನಿಮ್ಮೆಲ್ಲರೊಡನೆ ಅವನು ಮೋಕ್ಷವನ್ನು ಹೊಂದುವನು" ಎಂದು ಹೇಳಿದಳು. ವೈಶ್ಯರೆಲ್ಲಾ "ನಮ್ಮ ವಂಶವು ಉದ್ಧಾರವಾಗುವಂತೆ ಅನುಗ್ರಹಿಸಿ ಹರಸು" ಎಂದು ಬೇಡಿದರು. ಧರ್ಮಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡುವ ಪ್ರಾಣವನ್ನು ಕೂಡ ಬಲಿದಾನವಾಗಿ ಅರ್ಪಿಸುವ ನಿಮ್ಮ ಉದಾತ್ತ ಧ್ಯೇಯವನ್ನು ಧೈರ್ಯ ಸಾಹಸಗಳನ್ನು ನಾನು ಬಹುವಾಗಿ ಮೆಚ್ಚಿರುವೆನು. ಆತ್ಮ ಬಲಿದಾನ ರೂಪವಾದ ಈ ಸತ್ಯಾಗ್ರಹ ಯುದ್ಧದಿಂದ ನಿಮಗೆ ಜಯವಾಗುತ್ತದೆ ಎಂದು ಆಶೀರ್ವದಿಸಿ ಕೆಲವು ಹಿತನುಡಿ ಗಳನ್ನು ಹೇಳಿದಳು.

ತಾಯಿಗೆ ಸಮಾನವಾದ ಗೋವುಗಳ ರಕ್ಷಣೆ ಮಾಡಿರಿ. ಅಂತರಂಗ ಶತ್ರುಗಳಾದ ಅರಿಷಡ್ವರ್ಗಗಳನ್ನು ನಿಗ್ರಹಿಸಿ. ದೇವರೊಬ್ಬನೇ ಆದರೂ ದುಷ್ಟಶಿಕ್ಷೆ ಶಿಷ್ಟ ಪರಿಪಾಲನೆಗಾಗಿ ಅನೇಕ ಅವತಾರಗಳನ್ನು ತಾಳಿರುವನು. ಆದ್ದರಿಂದ ನಿಮಗೆ ಪ್ರಿಯವಾದ ನಾಮರೂಪಗಳಿಂದ ದೇವರನ್ನು ಭಜಿಸಿರಿ. ಗುರು ಹಿರಿಯರನ್ನು ಗೌರವಿಸಿ, ದಯೆ, ದಾನ, ಪರೋಪಕಾರ, ಪರಮಾರ್ಥ ವಿಚಾರವನ್ನು ತಪ್ಪದೆ ದಿನವೂ ಮಾಡುತ್ತಿರಿ, ಪ್ರತಿಯೊಂದು ಮಾತನ್ನು ವಿವೇಕದಿಂದ ಆಡಿ. ಯಾರನ್ನೂ ನೋಯಿಸಬೇಡಿ, ಯಾವುದರಲ್ಲೂ ಮೋಹಗೊಳ್ಳಬೇಡಿ, ಜಗನ್ಮಾತೆಯೊಬ್ಬಳೇ ಸತ್ಯಸ್ವರೂಪಳು, ಜ್ಞಾನನಿಧಿ, ಆನಂದಧಾಯಿನಿ ಎಂದು ತಿಳಿದುಕೊಳ್ಳಿ, ನನ್ನ ಭಕ್ತರಾದ ನೀವೆಲ್ಲರೂ ಒಮ್ಮನಸ್ಸಿನಿಂದ ಒಗ್ಗಟ್ಟಾಗಿದ್ದು ಎಲ್ಲರ ಬಾಳು ಬೆಳಗುವಂತೆ ಮಾಡಿ, ಸತ್ಯವನ್ನು ನುಡಿಯಿರಿ. ಧರ್ಮವನ್ನು ಆಚರಿಸಿ. ತ್ಯಾಗಕ್ಕೆ ಸಿದ್ಧರಾಗಿ ದಾನಶೀಲರಾಗಿ ಭಗವಂತನಲ್ಲಿ ಭಕ್ತಿಯನ್ನು ಬೆಳಸಿಕೊಳ್ಳಿ, ಪರಿಶುದ್ಧವಾದ ಜೀವನವನ್ನು ನಡೆಸಿ ಸದಾ ಸುಸಂಘಟಿತರಾಗಿ, ಕುಲದೇವತೆಯ ನಿತ್ಯಪೂಜೆಯಿಂದ ಧರ್ಮವೃದ್ಧಿ ಪರೋಪಕಾರ ನಿರತರಾಗಿ ಸಮಾಜದಲ್ಲಿ ಎಲ್ಲ ವರ್ಗದವರಿಗೂ ಆಶ್ರಯವನ್ನು ಕೊಡುವಂತವರಾಗಿ,

[illegible]

ಸಮಯದಲ್ಲಿ ಸಂರಕ್ಷಿಸಬಲ್ಲ ಬಲಿಷ್ಟ ವರ್ಗದವರಾಗಿ ಒಬ್ಬರನ್ನೊಬ್ಬರು ಭಾವಿಸುತ್ತಿದ್ದರೆ ಪರಮ ಶ್ರೇಯಸ್ಸನ್ನು ಪಡೆಯುವಿರಿ. ಕಾಶ್ಯಪ ಗೋತ್ರಕ್ಕೆ ಸೇರಿದ ನಾರೀಮಣಿ ನಾಗಾಖ್ಯರೆಂಬ ದಂಪತಿಗಳು ಸಂತಾನವಿಲ್ಲದಿದ್ದರೂ ಎಲ್ಲರಿಗಿಂತ ಮೊದಲು ಅಗ್ನಿಪ್ರವೇಶ ಮಾಡಲು ಸಿದ್ಧರಾಗಿದ್ದರು ಅವರನ್ನು ಕುರಿತು ದೇವಿಯು "ನಿಮ್ಮ ವಂಶವಿಲ್ಲದಂತಾಗುತ್ತದೆ. ನೀವು ಅಗ್ನಿಪ್ರವೇಶ ಮಾಡುವ ಅಗತ್ಯವಿಲ್ಲ" ಎಂದು ಹೇಳಿದರೂ ಅವರು ಕೇಳಲಿಲ್ಲ. ಎಲ್ಲರೊಡನೆ ಅವರೂ ಅಗ್ನಿಪ್ರವೇಶ ಮಾಡಲು ನಿರ್ಧರಿಸಿದರು. ತಮ್ಮ ಮಗಳು ಮಂಗಳಮಯವಾದ ಮೂರ್ತಿಯಾಗಿ ಕಂಗೊಳಿಸಿ ಎಲ್ಲರ ಕಣ್ಣು ತೆರೆಯುವಂತೆ ಉಪದೇಶಾಮೃತವನ್ನು ಕರುಣಿಸುವುದನ್ನು ಕಣ್ಣಾರೆ ಕಂಡ ಕುಸುಮಶ್ರೇಷ್ಠಿ, ಕುಸುಮಾಂಬೆಯರು ತಮ್ಮ ಜನ್ಮ ಸಾರ್ಥಕವಾಯಿತೆಂದರು. ಅಲ್ಲಿ ನೆರೆದಿದ್ದವರೆಲ್ಲಾ ದೇವಿಯನ್ನು ಬಗೆ ಬಗೆಯಾಗಿ ಸ್ತುತಿಸಿದರು. ಸ್ತೋತ್ರ ಮುಗಿದ ನಂತರ ದೇವಿಯು ವಿಶ್ವರೂಪವನ್ನು ಉಪಸಂಹರಿಸಿ ಮತ್ತೆ ಮಾನವ ರೂಪದಿಂದ ವಾಸವಿಯಾಗಿ ನಿಂತಿದ್ದಳು.

೧೦೨ ಗೋತ್ರಗಳ ದಂಪತಿಗಳು ತಮ್ಮ ಮಕ್ಕಳಿಗೆ ಅನೇಕ ರೀತಿಯಾಗಿ ಹಿತನುಡಿಗಳನ್ನು ಹೇಳಿದರು. ೧೦೩ ಅಗ್ನಿ ಕುಂಡಗಳು ಧಗಧಗನೆ ಉರಿಯುತ್ತಿದ್ದವು ಅಗ್ನಿಕುಂಡದಿಂದ ಮೇಲೆದ್ದ ಜ್ವಾಲೆಯು ಆಕಾಶವನ್ನು ಮುಟ್ಟುವಂತಿತ್ತು. ಪಾಪಿಯಾದ ವಿಷ್ಣುವರ್ಧನನಿಂದ ಎಂತಹ ವಿಪತ್ತೊದಗಿ ಬಂತು. ಭಯಂಕರವಾದ ಮತ್ತು ಕರುಣಾಜನಕವಾದ ಆ ದೃಶ್ಯವನ್ನು ನೋಡಿದ ಜನರು ಮಮ್ಮಲ ಮರುಗಿದರು. ಶ್ರೀವಾಸವೀ ದೇವಿಯು ಅಗ್ನಿ ಕುಂಡಗಳ ಮುಂದೆ ನಿಂತಿದ್ದ ತ್ಯಾಗಮೂರ್ತಿಗಳೆಲ್ಲರನ್ನೂ ವಾತ್ಸಲ್ಯಮಯಿಯಾಗಿ ದೃಷ್ಟಿಸಿದಳು. ಬಾಲ್ಯದಿಂದಲೂ ಅಭ್ಯಾಸದಿಂದ ಮೈಗೂಡಿಸಿದ್ದ ಶಮ-ದಮ, ಉಪರತಿ ತಿತಿಕ್ಷಾ, ಶ್ರದ್ಧಾ, ಸಮಾಧಾನಗಳು ಈಗ ಮೂರ್ತಿವೆತ್ತಂತೆ ಆಯಿತು. ಯಮ, ನಿಯಮ, ಆಸನ ಪ್ರಾಣಾಯಾಮ, ಪ್ರತ್ಯಾಹಾರಗಳಿಂದ ಮುಂದುವರೆದು ಜಗನ್ಮಾತೆಯು ಮಂಗಳ ಮೂರ್ತಿಯನ್ನು ಹೃದಯದಲ್ಲಿ ಧಾರಣೆ ಮಾಡಿಕೊಂಡಳು. ಧ್ಯಾನದಲ್ಲಿ ಕ್ರಮಕ್ರಮವಾಗಿ ತನ್ನ ಇಂದ್ರಿಯಗಳನ್ನು ಮನಸ್ಸು ಬುದ್ಧಿಯನ್ನು ಆತ್ಮನಲ್ಲಿ ಲೀನ ಮಾಡಿಕೊಂಡಳು. ಎಲ್ಲರೂ ಭಕ್ತಿ ಭಾವದಿಂದ ಏಕಾಗ್ರ ಚಿತ್ತರಾಗಿ ನೋಡುತ್ತಿರಲು, ಸಾವಧಾನವಾಗಿ ಹೆಜ್ಜೆಯನ್ನಿಡುತ್ತಾ ಯಜ್ಞ ಪುರುಷನನ್ನೇ ದೃಷ್ಟಿಸುತ್ತಾ ಹೋಮ ಕುಂಡದಲ್ಲಿ ದೇಹವನ್ನು ಅರ್ಪಿಸಿದಳು. ನಂತರ ೧೦೨ ಗೋತ್ರಗಳ ದಂಪತಿಗಳೂ ಸಹ ಯಜ್ಞೇಶ್ವರನಿಗೆ ತಮ್ಮ ದೇಹಗಳನ್ನು ಸಮರ್ಪಿಸಿದರು.

ಏನಾಶ್ಚರ್ಯ! ಆ ಕೂಡಲೇ ಯಜ್ಞೇಶ್ವರನು ತಣ್ಣಗಾದನು. ವಾಸವಿಯು ಅಗ್ನಿದೇವನನ್ನು ಧ್ಯಾನ ಮಾಡಿದಳು. ಯಜ್ಞೇಶ್ವರನು ಪ್ರತ್ಯಕ್ಷನಾಗಿ, ಇವರೆಲ್ಲಾ ಧರ್ಮಾತ್ಮರು, ಪುಣ್ಯಾತ್ಮರು ಇವರನ್ನು ದಹಿಸಿದರೆ ದೋಷಿಯಾಗುವೆ. ಈ ಸಂಬಂಧದಲ್ಲಿ ನಿಮಗೆ ಒಂದು ಐತಿಹ್ಯವನ್ನು ಹೇಳಲು ಅಪೇಕ್ಷಿಸುತ್ತೇನೆ ಎಂದು ಈ ರೀತಿಯಾಗಿ ಹೇಳಿದನು. ಪೂರ್ವದಲ್ಲಿ ಭೃಗು ಎಂಬ ಮಹರ್ಷಿಯಿದ್ದನು. ಅವನು ತಪಸ್ವಿಗಳಲ್ಲಿ ಶ್ರೇಷ್ಠನಾಗಿದ್ದನು. ಅವನಿಗೆ ಸದ್ಗುಣವತಿಯಾದ ಧರ್ಮಪತ್ನಿಯಿದ್ದಳು. ಅವಳ ಹೆಸರು ಸುಕನ್ಯೆ. ಒಂದು ಸಾರಿ ಮಹರ್ಷಿಯು ಸಮಿತ್ತು, ದರ್ಬೆಗಳನ್ನು ತರಲು ಅರಣ್ಯಕ್ಕೆ ಹೋಗಿದ್ದನು. ಆಶ್ರಮದಲ್ಲಿ ಅವನ

[illegible]

ಧರ್ಮಪತ್ನಿಯಿದ್ದಳು. ಅವಳು ಗರ್ಭಿಣಿಯಾಗಿದ್ದಳು. ಅಲ್ಲಿಗೆ ಪುಲೋಮನೆಂಬ ರಾಕ್ಷಸನು ಬಂದು ಒಳ್ಳೆಯ ಮಾತುಗಳನ್ನಾಡುತ್ತಾ ಮಾತೆಯು ಎಲ್ಲಿರುವಳು ಎಂದು ಅಗ್ನಿಯನ್ನು ಕೇಳಿದನು. ಭೃಗುವಿನ ಮಗನಾದ ಶುಕ್ರಾಚಾರ್ಯನು ರಾಕ್ಷಸರ ಗುರು. ಅಂತೆಯೇ ಪುಲೋಮನು ಶುಕ್ರಾಚಾರ್ಯನಂತೆ ಎಂದು ವಿಶ್ವಾಸದಿಂದ ನಾನು ಸುಕನ್ಯೆಯನ್ನು ತೋರಿಸಿದೆನು. ಆ ನೀಚನು ಅವಳನ್ನು ನೋಡಿದ ಕೂಡಲೆ ಇವಳನ್ನು ನಾನು ಹಿಂದೆ ಕಾಮಿಸಿದ್ದೆನು. ಈ ವಿಷಯ ರಾಕ್ಷಸರಿಗೆಲ್ಲಾ ತಿಳಿದಿದೆ ಎಂದು ಹೇಳಿ, ಹಂದಿಯ ಆಕಾರವನ್ನು ಹೊಂದಿ ಆ ಋಷಿ ಪತ್ನಿಯನ್ನು ಬಲಾತ್ಕಾರವಾಗಿ ಎಳೆದೊಯ್ಯತೊಡಗಿದನು. ಸುಕನ್ಯೆಯು ದುಃಖ ರೋಷಗಳಿಂದ ನೆಲದ ಮೇಲೆ ಬಿದ್ದು ಹೊರಳಾಡಿದಳು. ತನ್ನ ಗಂಡನನ್ನು ಹಲವು ಬಾರಿ ಕೂಗಿದಳು. ಅಂತೂ ಅವಳು ಆ ರಾಕ್ಷಸ ನೊಡನೆ ಹೋಗದೆ ಮೊಂಡಾಟ ಮಾಡಿದಳು. ಆಗ ಅವಳ ಗರ್ಭಕ್ಕೆ ಪೆಟ್ಟಾಗಿ ಹೊಟ್ಟೆಯಲ್ಲಿದ್ದ ಮಗುವು ಹೊರಬಂದಿತು. ಕೂಡಲೆ ಆ ಮಗುವು ರಾಕ್ಷಸನನ್ನು ಕೊಂದಿತು. ಆ ಮಗುವೇ ಮುಂದೆ ಚ್ಯವನ ಮಹರ್ಷಿ ಎಂದು ಪ್ರಸಿದ್ಧನಾದನು. ಭೃಗು ಮಹರ್ಷಿಯು ಕೋಪಗೊಂಡು "ನೀಚ, ಕಾರಣವಿಲ್ಲದೆ ನನಗೆ ಅಪಕಾರ ಮಾಡಿರುವೆ. ನೀನು ಸರ್ವಭಕ್ಷನಾಗು"(ವೈಶ್ಯ ಮಾರ್ಗದರ್ಶಿ, ೨೦೦೩, ಪು. ೧೯೭) ಎಂದು ಅವನನ್ನು ಶಪಿಸಿದನು. ಅವನು ಶಿವನ ಧ್ಯಾನವನ್ನು ಮಾಡುತ್ತಾ ಕೆಲವು ಕಾಲ ತಪಸ್ಸು ಮಾಡಿದನು. 'ಅನಂತರ ಋಷಿಯ ಶಾಪವು ಪರಿಹಾರವಾಯಿತು. ಆದ್ದರಿಂದ ಕಟುವಾಗಿ ಈ ವೈಶ್ಯರನ್ನೆಲ್ಲಾ ಸುಡಲಾರೆನು. ಕಾರಣವಿಲ್ಲದೆ ಅವರನ್ನು ಸುಡುವುದರಿಂದ ಪಾಪವುಂಟಾಗುತ್ತದೆ'.

ಆಗ ವಾಸವಿಯು ಅಗ್ನಿದೇವಾ ನನ್ನ ಆಜ್ಞೆಯಂತೆ ೧೦೨ ಗೋತ್ರಗಳ ದಂಪತಿಗಳನ್ನು ಯಾತನೆಯಾಗದಂತೆ ದಹಿಸು. ನಾನು ಅವರಿಗೆಲ್ಲಾ ಮೋಕ್ಷವನ್ನು ಪ್ರಸಾದಿಸುತ್ತೇನೆ ಎಂದಳು. ವಾಸವಿಯ ಆಜ್ಞೆಯಂತೆ ಅಗ್ನಿದೇವನು ಪ್ರಜ್ವಲಿಸಿದನು. ತ್ರಿಮೂರ್ತಿಗಳಾದಿಯಾಗಿ ಎಲ್ಲಾ ದೇವತೆಗಳು ಪ್ರತ್ಯಕ್ಷರಾಗಿ ಧರ್ಮಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡುತ್ತಿರುವ ವೈಶ್ಯರ ಮೇಲೆ ಪುಷ್ಪವೃಷ್ಟಿ ಮಾಡಿದರು. ವಾಸವಿಯೊಂದಿಗೆ ೧೦೨ ಗೋತ್ರಗಳ ದಂಪತಿಗಳು ಯಜ್ಞಪುರುಷನನ್ನೇ ದೃಷ್ಟಿಸುತ್ತಾ ಅಗ್ನಿಕುಂಡಗಳಲ್ಲಿ ದೇಹವನ್ನು ಅರ್ಪಿಸಿದರು. ಆಗ ಅಲ್ಲಿ ನೆರೆದಿದ್ದ ಜನರು "ವೈಶ್ಯಕುಲ ದೇವತೆಗೆ ಜಯವಾಗಲಿ ವೈಶ್ಯಕುಲ ಬಾಂದವರಿಗೆ ಜಯವಾಗಲಿ" ಎಂದು ಜಯಕಾರ ಮಾಡುತ್ತಿರುವಾಗ ಯಜ್ಞ ಕುಂಡದಿಂದ ಉಜ್ವಲಕಾಂತಿಯಿಂದ ಎದ್ದು ನಿಂತು ಶೋಭಿಸುತ್ತಿರುವ ಶಾಂತಮೂರ್ತಿಯೊಂದನ್ನು ಕಂಡರು. ಪ್ರಸನ್ನ ಮುಖ ಮುದ್ರೆಯಿಂದ ದಿವ್ಯ ಶರೀರದಲ್ಲಿ ಕಂಗೊಳಿಸುತ್ತಿರುವ ಆ ವಾಸವಾಂಬೆಯು ಕನ್ನಿಕಾಪರಮೇಶ್ವರಿಯಾಗಿ" ಎಲ್ಲರಿಗೂ ದರ್ಶನವಿತ್ತಳು. ಆತ್ಮಾರ್ಪಣೆ ಮಾಡಿದ ೧೦೨ ಗೋತ್ರದವರು ಬಿಟ್ಟು ಹೋದ ೬೧೨ ಗೋತ್ರದವರಿಗೆ ತಿಳಿಯಬಾರದೆಂದು ಸಾಂಕೇತಿಕ ಗೋತ್ರಗಳನ್ನು ಏರ್ಪಡಿಸಿಕೊಂಡರು. ವೈಶ್ಯ ದಂಪತಿಗಳ ವಿಯೋಗದಿಂದ ದುಃಖಿತರಾದ, ಅವರ ಮಕ್ಕಳನ್ನು ಬಾಸ್ಕರಾಚಾರ್ಯರು ಸಮಾಧಾನಗೊಳಿಸಿದರು. ಭಾಸ್ಕರಾಚಾರ್ಯರ ನೇತೃತ್ವದಲ್ಲಿ ಆ ಮಕ್ಕಳು ಗೋದಾವರಿ ನದೀ ತೀರದಲ್ಲಿ ತಮ್ಮ ಪಿತೃಗಳಿಗೆ ಶ್ರದ್ಧಾಭಕ್ತಿಯಿಂದ ಅಂತ್ಯಕ್ರಿಯೆಯನ್ನು ಮಾಡಿದರು.

[illegible]

[illegible]

ಇತ್ತ ಕಡೆ ವಿಷ್ಣುವರ್ಧನ ಮಹಾರಾಜನು ವೈಶ್ಯರು ಭಯ ಭಕ್ತಿಯಿಂದ ವಾಸವಿ ಕನ್ಯೆಯನ್ನು ತನಗೆ ಕೊಟ್ಟು ಮದುವೆ ಮಾಡುತ್ತಾರೆಂಬ ಮಹದಾಸೆಯಿಂದ ಇದ್ದನು. ಆದರೆ ಪೆನುಗೊಂಡೆಯಿಂದ ಬಂದ ಪತ್ರದಿಂದ ಈ ಆಸೆ ನುಚ್ಚು ನೂರಾಯಿತು. ಕೋಪಗೊಂಡ ರಾಜನು ಚತುರಂಗ ಬಲದೊಂದಿಗೆ ಪಯಣಿಸಿ ಪೆನುಗೊಂಡೆಯ ಮೇಲೆ ಧಾಳಿ ಮಾಡಲು ಸಿದ್ಧನಾದನು. ವಿಷ್ಣುವರ್ಧನನ ರಾಣಿಯು ಎಷ್ಟೇ ಬಗೆಯಲ್ಲಿ ಹಿತಬೋಧೆ ಮಾಡಿದರೂ ರಾಜನಿಗೆ ಪಥ್ಯವಾಗಲಿಲ್ಲ. ವಿಷ್ಣುವರ್ಧನನು ಪೆನುಗೊಂಡಗೆ ಯುದ್ಧಕ್ಕೆ ಹೊರಟಾಗ ಅನೇಕ ಅಪಶಕುನಗಳಾದವು. ಆದರೂ ವಿಷ್ಣುವರ್ಧನನು ಹಿಂಜರಿಯದೆ ಪೆನುಗೊಂಡೆಯತ್ತ ವೇಗವಾಗಿ ಪ್ರಯಾಣವನ್ನು ಮುಂದುವರೆಸಿದನು. ವಿಷ್ಣುವರ್ಧನನ ಗೂಢಾಚಾರರು ಮಾರ್ಗ ಮಧ್ಯದಲ್ಲಿ ಎದುರಾಗಿ ಪೆನುಗೊಂಡೆಯಲ್ಲಿ ವಾಸವಿಯ ಮದುವೆಯ ಸಿದ್ಧತೆಗಳು ನಡೆಯುತ್ತಿವೆ. ವೈಶ್ಯರು ಮಹಾಧಿವೇಶನ ನಡೆಸಿದರು. ಅವರವರಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ೨ ಪಂಗಡಗಳಾದವು. ಪೆನಗೊಂಡೆಯಲ್ಲಿ ಮನೆಗಳನ್ನು ಸುಣ್ಣ ಬಣ್ಣಗಳಿಂದ ಅಲಂಕಾರ ಮಾಡಿದ್ದಾರೆ. ತಳಿರು ತೋರಣಗಳಿಂದ ನಗರವನ್ನು ಸಿಂಗರಿಸಿದ್ದಾರೆ ಎಂದು ಹೇಳಿದರು. ಗೂಢಾಚಾರರ ಈ ಮಾತುಗಳನ್ನು ಕೇಳಿದ ಮಹಾರಾಜನು ಸಂತೋಷಗೊಂಡು ತನ್ನ ಪ್ರಯಾಣವನ್ನು ಮುಂದುವರೆಸಿದನು. ಮಹಾರಾಜನು ತನ್ನ ಸೈನ್ಯದೊಂದಿಗೆ ಪೆನುಗೊಂಡೆಯ ಬಳಿಗೆ ಬಂದನು. ಅಷ್ಟರಲ್ಲಿ ತನ್ನ ಆಪ್ತ ಗೂಢಾಚಾರರಿಂದ ವಾಸವಿಯು ವೈಶ್ಯ ನಾಯಕರೊಂದಿಗೆ ಅಗ್ನಿಪ್ರವೇಶ ಮಾಡಿದಳೆಂದು ತಿಳಿಯಿತು. ಕೂಡಲೆ ಮಹಾರಾಜನು ತಲೆ ಸಿಡಿದು ಮರಣ ಹೊಂದಿದನು. ರಾಜನ ಪರಿವಾರ ಅಪಾರವಾದ ದುಃಖದಿಂದ ರಾಜಮಹೇಂದ್ರವರಕ್ಕೆ ಹಿಂದಿರುಗಿತು. ಪೆನುಗೊಂಡೆಯಲ್ಲಿ ವಾಸವಿ ವೈಶ್ಯ ನಾಯಕರೊಂದಿಗೆ ಅಗ್ನಿಪ್ರವೇಶ ಮಾಡಿ ಪ್ರಾಣತ್ಯಾಗ ಮಾಡಿದ್ದು ಆ ಸುದ್ದಿಯನ್ನು ತಿಳಿದ ವಿಷ್ಣುವರ್ಧನ ಮಹಾರಾಜನು ಮೃತ್ಯುವಿಗೀಡಾದ ಸುದ್ದಿ, ರಾಜಮಹೇಂದ್ರವರದಲ್ಲಿ ಕಾಳ್ಗಿಚ್ಚಿನಂತೆ ಹರಡಿತು. ಮಹಾರಾಣಿ ಮತ್ತು ರಾಜಕುಮಾರ ದುಃಖದಿಂದ ತೊಳಲಿದರು. ಮಂತ್ರಿಗಳು ಅವರನ್ನು ಸಮಾಧಾನಗೊಳಿಸಿ ರಾಜಕುಮಾರನಿಂದ ಮಹಾರಾಜನ ಅಂತ್ಯಕ್ರಿಯೆಯನ್ನು ಮಾಡಿಸಿದರು.

ಭಾಸ್ಕರಾಚಾರ್ಯರು ದುಃಖತೃಪ್ತರಾದ ಪೆನುಗೊಂಡೆಯ ವೈಶ್ಯರನ್ನು ಸಮಾಧಾನಗೊಳಿಸುತ್ತಿರಲು, ವಿಷ್ಣುವರ್ಧನನ ಮಗನಾದ ರಾಜರಾಜೇಂದ್ರನು ಮಿತ ಪರಿವಾರದೊಂದಿಗೆ ಪೆನುಗೊಂಡೆಗೆ ಬಂದನು. ನಗರದ ವೈಶ್ಯರು ಮತ್ತು ವಿರೂಪಾಕ್ಷ ಶ್ರೇಷ್ಠರು ರಾಜಕುಮಾರನನ್ನು ಸ್ವಾಗತಿಸಿದರು. ರಾಜರಾಜೇಂದ್ರನು ಇದುವರೆಗೂ ನಡೆದ ಕಹಿ ಘಟನೆಗಳನ್ನು ಮರೆತು ಬಿಡೋಣ. ನಿಮ್ಮ ರಾಜ್ಯಕ್ಕೆ ವಿರೂಪಾಕ್ಷ ಶ್ರೇಷ್ಠಿಯನ್ನು ರಾಜನನ್ನಾಗಿ ಮಾಡಿಕೊಳ್ಳಿ, ಮುಂದೆಯೂ ಸಹಾ ನಾವು ಸ್ನೇಹ ಸೌಹಾರ್ದತೆಯಿಂದ ಕೂಡಿ ಬಾಳೋಣ ಎಂದು ವೈಶ್ಯ ಯುವಕರಿಗೆ ತಿಳಿಸಿದರು.

ವಿರೂಪಾಕ್ಷ ಶ್ರೇಷ್ಠಿಯು ಯುದ್ಧವು ನಡೆದಿದ್ದರೆ ಎಂತಹ ಅನರ್ಥವಾಗುತ್ತಿತ್ತು. ಎಷ್ಟು ಜನ ಸಾಯುತ್ತಿದ್ದರು. "ಕನ್ನಿಕಾಪರಮೇಶ್ವರಿಯು ಅಂತಹ ಕೊಲೆ, ಸುಲಿಗೆ ರಕ್ತಪಾತಗಳನ್ನು ತಪ್ಪಿಸಿ ಜನತೆಯನ್ನು

ಕಾಪಾಡಿದಳು. ನೀನು ಈ ಘಟನೆಯಿಂದ ಪಾಠವನ್ನು ಕಲಿತು ಸನ್ಮಾರ್ಗಿಯಾಗಿರುವೆಯೆಂದು ಭಾವಿಸುತ್ತೇನೆ. ನೀನು ವೈಶ್ಯರ ವಿಷಯವಾಗಿ ತೋರಿಸಿದ ಪ್ರೀತಿ ವಿಶ್ವಾಸಗಳಿಗಾಗಿ ಕೃತಜ್ಞತಾಪೂರ್ವಕವಾದ ವಂದನೆಗಳು" ಎಂದು ರಾಜರಾಜೇಂದ್ರನಿಗೆ ಹೇಳಿದನು. ಇಂದಿನ ದಾರುಣ ಪರಿಸ್ಥಿತಿಯಿಂದ ನಮ್ಮಗಳ ಮನಸ್ಸಿಗೆ ಶಾಂತಿಯಿಲ್ಲವಾಗಿದೆ. ಸುಖವಂತೂ ಸ್ವಪ್ನವಾಗಿದೆ. ಆದ್ದರಿಂದ ನಾವು ನಮ್ಮ ಪಿತೃಗಳ ಸದ್ಗತಿಗಾಗಿಯೂ ಮತ್ತು ನಮ್ಮ ಮನಸ್ಸಿನ ಸಮಾಧಾನಕ್ಕಾಗಿಯೂ ಕೆಲಕಾಲ ಕಾಶಿ ಮೊದಲಾದ ಪುಣ್ಯಕ್ಷೇತ್ರಗಳ ಯಾತ್ರೆಯನ್ನು ಮಾಡಬೇಕೆಂದಿರುವೆವು. ಇಲ್ಲಿ ಮಕ್ಕಳು, ಮುದುಕರು, ಹೆಂಗಸರು ಮಾತ್ರ ಇರುವರು. ನಾವು ಯಾತ್ರೆಯನ್ನು ಮುಗಿಸಿಕೊಂಡು ಬರುವವರೆಗೆ ನಮ್ಮ ರಾಜ್ಯವನ್ನು ನೀವು ಪರಿಪಾಲಿಸಬೇಕೆಂದು ಕೋರುತ್ತೇವೆ ಎಂದು ರಾಜರಾಜೇಂದ್ರನಿಗೆ ಹೇಳಿದನು. ಯಾತ್ರೆಯು ಸಾಂಗವಾಗಿ ನೆರವೇರಲೆಂದು ಹಾರೈಸಿದ ರಾಜಕುಮಾರನು ಅವರನ್ನೆಲ್ಲಾ ನಂತರ ಸಂದರ್ಶಿಸುತ್ತೇನೆ ಎಂದು ಹೇಳಿ, ತನ್ನ ರಾಜಧಾನಿಗೆ ಹಿಂದಿರುಗಿದನು. ರಾಜಮಹೇಂದ್ರ ವರನ್ನು ತಲುಪಿದ ಮೇಲೆ ಗುರುಗಳಾದ ಧೌಮ್ಯರು ಆದಿಶಕ್ತಿಯ ದಿವ್ಯ ಮಂತ್ರವನ್ನು ರಾಜಕುಮಾರನಿಗೆ ಉಪದೇಶಿಸಿದರು. ರಾಜಕುಮಾರನು ಆ ಮಹಾ ಮಂತ್ರವನ್ನು ಪ್ರತಿ ನಿತ್ಯವೂ ಜಪಿಸಿ ಆರಾಧಿಸುತ್ತಿದ್ದನು.

ಆತ್ಮಾರ್ಪಣೆ ಮಾಡಿದ ದಂಪತಿಗಳ ಮಕ್ಕಳು, ಪುಣ್ಯಕ್ಷೇತ್ರಗಳ ಯಾತ್ರೆಗಾಗಿ ಪೆನುಗೊಂಡೆಯಿಂದ ಹೊರಟರು, ಭಾಸ್ಕರಾಚಾರ್ಯರು ಅವರ ಮಾರ್ಗದರ್ಶಕರಾಗಿದ್ದರು. ಭಾರತದ ನಾನಾ ಪವಿತ್ರಕ್ಷೇತ್ರಗಳ ಸಂದರ್ಶನ ಮಾಡಿದರು. ಅನೇಕ ನದಿಗಳಲ್ಲಿ ಮತ್ತು ಪವಿತ್ರತೀರ್ಥಗಳಲ್ಲಿ ಸ್ನಾನ ಮಾಡಿದರು. ಯಾತ್ರೆಯ ಕಾಲದಲ್ಲಿ ಗಯಾ ಕ್ಷೇತ್ರಕ್ಕೆ ಬಂದರು. ಅಲ್ಲಿ ಪಿತೃಗಳ ಶ್ರಾದ್ಧವನ್ನು ಮಾಡಿ ಆ ರಾತ್ರಿ ಅಲ್ಲಿ ಮಲಗಿರಲು, ಅವರ ಕನಸಿನಲ್ಲಿ ವಾಸವಿಯು ಪ್ರತ್ಯಕ್ಷಳಾಗಿ "ನೀವು ಮಾಡಿದ ಶ್ರಾದ್ಧದಿಂದ ನನಗೂ, ಪಿತೃದೇವತೆಗಳಿಗೂ ತೃಪ್ತಿಯಾಗಿದೆ. ಸಕಲ ಸೌಭಾಗ್ಯಗಳೊಂದಿಗೆ ನಿಮ್ಮ ವಂಶವು ಬೆಳೆಯಲಿ" (ಟೀಕಾ ವೆಂಕಟಾಚಲ ಗುಪ್ತ, ೧೯೭೭, ಪು. ೧೩೨) ಎಂದು ಆಶೀರ್ವದಿಸಿ ಅಂತರ್ಧಾನಳಾದಳು. ಅನಂತರ ಅವರೆಲ್ಲಾ ನೈಮಿಷ್ಯಾರಣ್ಯಕ್ಕೆ ಬಂದರು. ಅಲ್ಲಿ ಜಗದೊಡೆಯನಾದ ಗದಾಧರನನ್ನು ಧ್ಯಾನ ಮಾಡುತ್ತಿದ್ದ ಪುಂಡರೀಕ ಮಹಾಮುನಿಯ ಸಂದರ್ಶನವಾಯಿತು. ವೈಶ್ಯರು ಆ ಮುನಿಗೆ ವಂದಿಸಿ, ಗಧಾದರನ ಮಹಿಮೆಯನ್ನು ತಿಳಿಸಬೇಕೆಂದು ಪ್ರಾರ್ಥಿಸಿದರು. ಅದಕ್ಕೆ ಆ ಮಹಾಮುನಿಯು ವೈಶ್ಯರನ್ನು ಕುರಿತು "ಶ್ರೌತ, ಸ್ಮಾರ್ತ ಎಂಬುದಾಗಿ ಕರ್ಮಗಳು ಎರಡು ವಿಧ, ವೇದಗಳಲ್ಲಿ ಹೇಳಿರುವ ಯಜ್ಞ ಹೋಮಗಳು ಶ್ರೌತಕ್ಕೆ ಸಂಬಂಧಿಸಿವೆ. ಯಾಗ ಮತ್ತು ಹೋಮಗಳಲ್ಲಿ ದೇವತೆಗಳಿಗೆ ಸಮರ್ಪಿಸುವ ಪದಾರ್ಥಗಳಿಗೆ ಕವ್ಯವೆಂದೂ ಹೆಸರು. ಮಹಾವಿಷ್ಣುವು ಹವ್ಯವನ್ನು ದೇವರೂಪದಿಂದಲೂ, ಕವ್ಯವನ್ನು ಪಿತೃ ರೂಪದಿಂದಲೂ ಸ್ವೀಕರಿಸುವನು. ಆದರೆ ಅವನಿಗೆ ಹವ್ಯಕ್ಕಿಂತ ಕವ್ಯವು ಪ್ರಿಯಕರವಾದುದು. ಶ್ರಾದ್ಧದಲ್ಲಿ ಅತಿಥಿಗಳನ್ನು ತೃಪ್ತಿಪಡಿಸಿದರೆ ಪಿತೃಗಳು ತೃಪ್ತರಾಗುವರು. ಜನರು ಪಿತೃಗಳಿಗಾಗಿ ಅನ್ನದಾನ ಮೊದಲಾದವನ್ನು ಮಾಡುವಾಗ ವಿಷ್ಣುವು ಗದೆಯನ್ನು ಹಿಡಿದು ಕಾವಲಿರುವನು. ಆದ್ದರಿಂದ ವಿಷ್ಣುವನ್ನು ಗದಾಧರನೆಂದೂ, ಶ್ರಾದ್ಧ ಸಂರಕ್ಷಕ ದೇವತೆಯೆಂದೂ ಕರೆಯುತ್ತಾರೆ." ಹಿಂದೆ

ಸನ್ನತ್ಕುಮಾರನು ಮಾರ್ಕಂಡೇಯನಿಗೆ ಹೇಳಿದ ಗದಾಧರನಾದ ವಿಷ್ಣುವಿನ ಮಹಿಮೆಯನ್ನು ಹೇಳಿರುವೆನು. ಇದನ್ನು ಕೇಳಿದವರಿಗೆ ಶ್ರೇಯಸ್ಸಾಗುವುದು ಎಂದು ಹೇಳಿದನು.

ಬಳಿಕ ವೈಶ್ಯರು ಗಧಾದರ ದೇವರನ್ನು ಪೂಜಿಸಿ, ಕಾಶಿಗೆ ಹೋದರು. ಅಲ್ಲಿ ವಿಶ್ವೇಶ್ವರನನ್ನು ಪೂಜಿಸಿ, ಪೆನುಗೊಂಡೆಯಲ್ಲಿ ಶಿವಲಿಂಗ ಪ್ರತಿಷ್ಠಾಪನೆಯನ್ನು ಮಾಡುವ ಸಂಕಲ್ಪದಿಂದ ಗೋತ್ರಕ್ಕೆ ಒಂದು ಲಿಂಗದಂತೆ ೧೦೧ ಲಿಂಗಗಳನ್ನು ಕೊಂಡುಕೊಂಡರು. ಅಲ್ಲಿಂದ ಹೊರಟು ದಾರಿಯಲ್ಲಿ ಸಿಗುವ ಎಲ್ಲಾ ಪುಣ್ಯಕ್ಷೇತ್ರಗಳ ದರ್ಶನ ಮಾಡಿಕೊಂಡು, ನದಿಗಳಲ್ಲಿ ಮಿಂದು ಪುರಿ ಜಗನ್ನಾಥದ ಮಾರ್ಗವಾಗಿ ಪೆನುಗೊಂಡೆಗೆ ಬಂದು ತಲುಪಿದರು.

ವೈಶ್ಯರು ಪೆನುಗೊಂಡಗೆ ಹಿಂದಿರುಗಿದ ವಿಷಯವನ್ನು ತಿಳಿದ ರಾಜರಾಜೇಂದ್ರನು ಪೆನುಗೊಂಡೆಗೆ ಮಿತ ಪರಿವಾರದೊಂದಿಗೆ ಆಗಮಿಸಿದನು. ವಿರೂಪಾಕ್ಷ ಶ್ರೇಷ್ಠಿ ಮೊದಲಾದ ವೈಶ್ಯರು ಸಂತೋಷದಿಂದ ರಾಜರಾಜೇಂದ್ರ ನನ್ನು ಎದುರ್ಗೊಂಡರು, ಎಲ್ಲರೂ ನಗರೇಶ್ವರ ಮಂಟಪದಲ್ಲಿ ಸೇರಿದರು. ರಾಜಗುರುಗಳಾದ ಭಾಸ್ಕರಾಚಾರ್ಯರೂ, ಧೌಮ್ಯರೂ ಆಗಮಿಸಿದ್ದರು. ವೈಶ್ಯರು ಶಿವಲಿಂಗ ಪ್ರತಿಷ್ಠೆಯ ಉದ್ದೇಶವನ್ನು ಸಭೆಯಲ್ಲಿ ಹೇಳಿದರು. ವಾಸವಿ ದೇವಿಯ ಪ್ರತಿಷ್ಠೆಯನ್ನು ಮಾಡಿಸಬೇಕೆಂದಿರುವ ಸಂಕಲ್ಪವನ್ನು ವಿರುಪಾಕ್ಷನು ತಿಳಿಸಿದನು. ವಿರೂಪಾಕ್ಷ ಶ್ರೇಷ್ಠಿಗೆ ರಾಜ್ಯಪಟ್ಟಾಭಿಷೇಕ ಮಾಡಬೇಕೆಂದು ರಾಜರಾಜೆಂದ್ರನು ಹೇಳಿದನು. ರಾಜಗುರುಗಳು ಶುಭ ಮಹೂರ್ತವನ್ನು ನಿರ್ಧರಿಸಿದರು. ದೇವತಾ ಪ್ರತಿಷ್ಠೆ ಹಾಗೂ ರಾಜ್ಯಪಟ್ಟಾಭಿಷೇಕ ಮಹೋತ್ಸವದ ಆಹ್ವಾನ ಪತ್ರಿಕೆಗಳನ್ನು ಪೆನುಗೊಂಡ ಮೊದಲಾದ ೧೮ ನಗರಗಳ ಜನರಿಗೂ ನೆರೆಹೊರೆ ರಾಜ್ಯಗಳ ಮುಖ್ಯಸ್ಥರಿಗೂ ದೂತರ ಮೂಲಕ ಕಳುಹಿಸಿದರು.

ಪಟ್ಟಣದ ಮನೆಗಳು, ಬೀದಿಗಳು ವಿಶೇಷವಾಗಿ ಅಲಂಕರಿಸಲ್ಪಟ್ಟವು. ಪೆನುಗೊಂಡೆಯಲ್ಲಿ ಸಡಗರ ತುಂಬಿತು. ಪುರಪ್ರಮುಖರಲ್ಲದೆ ಬೇರೆ ಬೇರೆ ದೇಶಗಳಿಂದ ಬಂದ ಆಪ್ತೇಷ್ಟರು, ನಾಡಿನ ನಾಯಕರು, ಸಾಮಂತ ರಾಜರು ಮಹಾರಾಜರು ಎಲ್ಲರೂ ಪೆನುಗೊಂಡೆಯಲ್ಲಿ ನೆರೆದರು. ಎಲ್ಲರ ಹೃದಯಗಳಲ್ಲಿಯೂ ಕನ್ನಿಕಾಪರಮೇಶ್ವರಿಯೂ ಪ್ರಭಾವ ಹಾಗೂ ಮಹಿಮೆಯು ತುಂಬಿತ್ತು. ಒಂದೆಡೆ ಪಂಡಿತರು, ಇನ್ನೊಂದೆಡೆ ಕವಿಗಳು, ಇನ್ನೊಂದೆಡೆ ವೈಧಿಕರು ಸೇರಿದರು. ಯಾಗ ಮಂಟಪದಲ್ಲಿ ಜಪ, ಪಾರಾಯಣ, ಪೂಜೆ, ಹೋಮಗಳು ನಡೆಯುತ್ತಿತ್ತು. ವೇದಘೋಷ, ಮಂಗಳ ವಾದ್ಯಗಳು ಮೊಳಗಿದವು.

ಕಾಶೀ ಪಟ್ಟಣದಿಂದ ತಂದಿದ್ದ ೧೦೧ ಶಿವಲಿಂಗಗಳನ್ನು ಬಂದ ಅಭ್ಯಾಗತರೆಲ್ಲಾ ನೋಡಿ ಸಂತೋಷ ಪಟ್ಟರು. ಲಿಂಗಗಳಿಗೆ ವೇದೋಕ್ತ ಮಂತ್ರ ಪುರಸ್ಸರವಾಗಿ ಅಭಿಷೇಕಾದಿ ವಿಶೇಷ ಪೂಜೆಗಳು ನಡೆದುವು. ನಂತರ ಎಲ್ಲಾ ಲಿಂಗಗಳನ್ನು ನಗರದಲ್ಲಿನ ಒಂದು ಪ್ರಮುಖ ಬೀದಿಯಲ್ಲಿ ಪ್ರತಿಷ್ಠಾಪಿಸಿದರು.

ಅನಂತರ ವಿರೂಪಾಕ್ಷ, ರಾಜರಾಜೇಂದ್ರ, ಬಾಸ್ಕರಾಚಾರ್ಯ, ಧೌಮ್ಯರು ಅಲ್ಲಿ ನೆರೆದಿದ್ದ ಸಮಸ್ತ ಜನರೂ ಆಲಯಕ್ಕೆ ಬಂದರು. ನಾನಾ ಕ್ಷೇತ್ರಗಳ ಹಾಗೂ ಗಂಗಾ, ಗೋದಾವರಿ, ಕೃಷ್ಣಾ, ಕಾವೇರಿ ಮೊದಲಾದ

ಪುಣ್ಯನದಿಗಳ ತೀರ್ಥವನ್ನು ಚಿನ್ನದ ಕಲಶಗಳಲ್ಲಿ ತುಂಬಿ ವಾಸವಿ ದೇವಿಗೆ ಅಭಿಷೇಕಕ್ಕಾಗಿ ಸಿದ್ಧಪಡಿಸಿದ್ದ ಆ ಕಲಶಗಳಲ್ಲಿ ನಾನಾ ದೇವತೆಗಳನ್ನು ಅವಾಹನೆ ಮಾಡಿ ಪೂಜಿಸಿದರು. ವೇದ ವೇದಾಂಗ ಪಾರಂಗತ ಬ್ರಾಹ್ಮಣ ರಿಂದಲೂ, ಮುನೀಶ್ವರರಿಂದಲೂ, ಋತ್ವಿಕರಿಂದಲೂ, ಭಾಸ್ಕರಾಚಾರ್ಯರು ಸಮಸ್ತ ಹೋಮ ಕಾರ್ಯವನ್ನು ನಿರ್ವಹಿಸಿದರು.

ಭದ್ರಾಸನದಲ್ಲಿ ಸ್ಥಾಪಿಸಲ್ಪಟ್ಟ ಕನ್ನಿಕಾಪರಮೇಶ್ವರಿಗೆ ವೇದ ಘೋಷದೊಂದಿಗೆ ಬ್ರಾಹ್ಮಣರು ಧರ್ಮಶಾಸ್ತ್ರ ಪ್ರಕಾರವಾಗಿ ಅಭಿಷೇಕ ಮಾಡಿದರು. ಅನಂತರ ಭಾಸ್ಕರಾಚಾರ್ಯರು ರಾಜರಾಜೇಂದ್ರ ವಿರೂಪಾಕ್ಷ ಹಾಗೂ ಅಲ್ಲಿ ನೆರದಿದ್ದ ಎಲ್ಲಾ ಪ್ರಮುಖರೂ ದೇವಿಗೆ ಅಭಿಷೇಕ ಮಾಡಿಸಿದರು. ಆತ್ಮ ಬಲಿದಾನದ ಮೂಲಕವಾಗಿ ಜಯವನ್ನು ಗಳಿಸಿ ವೈಶ್ಯ ಸಮಾಜದ ಕೀರ್ತಿ ಪತಾಕೆಯನ್ನು ನಭೋಮಂಡಲದಲ್ಲ ಹಾರಾಡಿಸಿದ ವೈಶ್ಯ ಕುಲೋಧಾರಕಳಾದ ಆರ್ಯವೈಶ್ಯರಿಂದ ಸದಾ ಪೂಜೆಗೊಳ್ಳುತ್ತಿರುವ ಆದರ್ಶ ವೈಶ್ಯ ಕುಲದೇವತೆಯಾದ, ವೀರಮಾತೆ ಶ್ರೀ ಕನ್ನಿಕಾಪರಮೇಶ್ವರಿಯ ಪ್ರತಿಷ್ಠಾಪನಾ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು.

ನಗರಗಳಿಂದ ಬಂದವರೆಲ್ಲಾ ವಾಸವಿ, ನಗರೇಶ್ವರ, ಜನಾರ್ಧನ ಸ್ವಾಮಿಯವರನ್ನು ಪೂಜಿಸಿ, ವಿರೂಪಾಕ್ಷ ಮಹಾರಾಜನ ಅಪ್ಪಣೆ ಪಡೆದು ಎಲ್ಲರೂ ತಮ್ಮ ತಮ್ಮ ನಗರಗಳಿಗೆ ಹಿಂದಿರುಗಿದರು. ವಾಸವಿಯ ತ್ಯಾಗ, ಕುಸುಮ ಶ್ರೇಷ್ಠಿಯ ಶ್ರೇಷ್ಟತ್ವವನ್ನು ಕೊಂಡಾಡಿದರು. ವಾಸವಿಯ ಉಪದೇಶದಂತೆ ತಮ್ಮ ಕುಲ ವೃತ್ತಿಗಳನ್ನು ಮಾಡುತ್ತಾ ಸುಖವಾಗಿದ್ದರು. ವಿರೂಪಾಕ್ಷ ಮಹಾರಾಜನು ಧರ್ಮವನ್ನು ಬಿಡದೆ ಪರೋಪಕಾರ ಮಾಡುತ್ತಾ ಪ್ರೀತಿಯಿಂದ ಪ್ರಜಾಪರಿಪಾಲನೆ ಮಾಡಿದನು.

ಇದರಿಂದ ವೈಶ್ಯ ಭಕ್ತರೆಲ್ಲರೂ ಒಂದು ಕಡೆ ಸೇರಿ ಶ್ರೀ ಮಾತೆಯನ್ನು ಆರಾಧಿಸುವುದರ ಜೊತೆಗೆ ಆ ತಾಯಿಯ ತತ್ವ ಉಪದೇಶಗಳನ್ನು ನೆನಪಿಗೆ ತಂದುಕೊಳ್ಳುವ ಸತ್ಸಂಪ್ರದಾಯವು ರೂಢಿಗೆ ಬಂದಿತು. ಯಜುಶ್ಯಾಖೆಯ ಆಪಸ್ತಂಭ ಸೂತ್ರಕಾರರು ರಚಿಸಿರುವ ಧರ್ಮಸೂತ್ರಗಳನ್ನು ಪರಿಪಾಲಿಸಿಕೊಂಡು ಬರುತ್ತಿರುವ ವೈಶ್ಯರು ಇತರರಿಗೆ ಅನುಕರಣೀಯರಾಗಿದ್ದಾರೆ ಆದರ್ಶ ಪ್ರಾಯರಾಗಿದ್ದಾರೆ.

ದೇವತಾ ಪ್ರತಿಷ್ಠಾಪನಾ ಕಾರ್ಯವಾದ ಮರುದಿನ ವಿರೂಪಾಕ್ಷ ಶ್ರೇಷ್ಠಿಯ ಪಟ್ಟಾಭಿಷೇಕವು ಅತಿ ವಿಜೃಂಭಣೆಯಿಂದ ನಡೆಯಿತು. ಅನಂತರ ವಿರೂಪಾಕ್ಷ ಶ್ರೇಷ್ಠಿಯವರು ರತ್ನಾಭರಣ ಭೂಷಿತರಾಗಿ ಸಿಂಹಾಸನಾ ರೋಹಣ ಮಾಡಿದರು. ರಾಜರಾಜೇಂದ್ರನು ರತ್ನ ಖಚಿತವಾದ ದಿವ್ಯ ಕಿರೀಟವನ್ನು ವಿರೂಪಾಕ್ಷ ಶ್ರೇಷ್ಠಿಯ ಶಿರಸ್ಸಿಗೆ ಅಲಂಕರಿಸಿದನು. ಭಾಸ್ಕರಾಚಾರ್ಯರೇ ಮೊದಲಾದ ಕುಲ ಪುರೋಹಿತರು ಮಂತ್ರ ಪುರಸ್ಸರವಾಗಿ ವಿರೂಪಾಕ್ಷ ಶ್ರೇಷ್ಠಿಗೆ ರಾಜಾಶೀರ್ವಾದ ಮಾಡಿದರು. ಆಹ್ವಾನಿತರು ರಾಜನಿಗೆ ಕಾಣಿಕೆಗಳನ್ನರ್ಪಿಸಿದರು. ವಿರೂಪಾಕ್ಷ ಶ್ರೇಷ್ಠಿಯವರು ಆಹ್ವಾನಿತರೆಲ್ಲರನ್ನೂ ತಕ್ಕ ರೀತಿಯಲ್ಲಿ ಸತ್ಕರಿಸಿ ಉಡುಗೊರೆಗಳನ್ನಿತ್ತು ಗೌರವಿಸಿದರು. ಅನಂತರ ವಿರೂಪಾಕ್ಷ ಶ್ರೇಷ್ಠಿಯವರು ಅಲಂಕರಿಸಲ್ಪಟ್ಟ ಅಂಬಾರಿಯಲ್ಲಿ ಕುಳಿತು ಪಟ್ಟಣದ ರಾಜಬೀದಿಗಳಲ್ಲಿ ಮೆರವಣಿಗೆ ಹೊರಟರು.

ಪುರಜನರು ಆ ಮೆರವಣಿಗೆಯನ್ನು ಕಣ್ತುಂಬ ನೋಡಿ ಸಂತೋಷಪಟ್ಟರು. ನಂತರ ರಾಜರಾಜೇಂದ್ರನು ತನ್ನ ಪಟ್ಟಾಭಿಷೇಕಕ್ಕಾಗಿ ವಿರೂಪಾಕ್ಷ ಶ್ರೇಷ್ಠಿ ಮೊದಲಾದ ಪ್ರಮುಖರು, ಹಾಗೂ ಪೆನುಗೊಂಡೆಗೆ ಬಂದಿದ್ದ ಆಹ್ವಾನಿತರನ್ನೆಲ್ಲಾ ರಾಜಮಹೇಂದ್ರವರಕ್ಕೆ ಬರುವಂತೆ ಪ್ರಾರ್ಥಿಸಿದನು. ರಾಜರಾಜೇಂದ್ರನ ಪ್ರಾರ್ಥನೆಯಂತೆ ಎಲ್ಲರೂ ರಾಜಮಹೇಂದ್ರವರ ದತ್ತ ಪ್ರಯಾಣ ಮಾಡಿದರು.

ರಾಜಮಹೇಂದ್ರವರಲ್ಲಿ ರಾಜಗುರುಗಳಾದ ಧೌಮ್ಯ ಮಹರ್ಷಿಗಳ ಆದೇಶದಂತೆ ರಾಜರಾಜೇಂದ್ರನಿಗೆ ವೆಂಗಿ ದೇಶದ ರಾಜ್ಯಾಭಿಷೇಕವು ವಿಧಿವತ್ತಾಗಿ ನಡೆಯಿತು. ವಿರೂಪಾಕ್ಷ ಶ್ರೇಷ್ಠಿಯು, ರಾಜರಾಜೇಂದ್ರನನ್ನು ಕೈ ಹಿಡಿದುಕೊಂಡು ಕರೆತಂದು ಸಿಂಹಾಸನದಲ್ಲಿ ಕುಳ್ಳರಿಸಿ ಕಿರೀಟವನ್ನು ತೊಡಿಸಿದನು. ರಾಜರಾಜೇಂದ್ರನ ಪಟ್ಟಾಭಿಷೇಕ ಮಹೋತ್ಸವವು ಸಾಂಗವಾಗಿ ನೆರವೇರಿತು. ಅನಂತರ ಆಹ್ವಾನಿತರೆಲ್ಲಾ ಸಂತೋಷದಿಂದ ತಮ್ಮ ತಮ್ಮ ಊರುಗಳಿಗೆ ಹಿಂದಿರುಗಿದರು. ರಾಜರಾಜೇಂದ್ರ ಹಾಗೂ ವಿರೂಪಾಕ್ಷ ಶ್ರೇಷ್ಠಿಯು ಆಪ್ತಮಿತ್ರರಾಗಿ ಶ್ರೀ ಕನ್ನಿಕಾಪರಮೇಶ್ವರಿಯ ಅನುಗ್ರಹಕ್ಕೆ ಪಾತ್ರರಾದರು.

ಪರಮ ಪವಿತ್ರವಾದ ವಾಸವೀ ದೇವಿಯ ಚರಿತ್ರೆಯನ್ನು ಶ್ರದ್ಧಾಭಕ್ತಿಗಳಿಂದ ಓದಿದವರ ಹಾಗೂ ಕೇಳಿದವರ ಪಾಪಗಳೆಲ್ಲಾ ಕಳೆದು, ಸಕಲ ಸನ್ಮಂಗಳವಾಗುವುದು. ಅವರು ಆ ತಾಯಿಯ ಕೃಪೆಗೆ ಪಾತ್ರರಾಗುವರು ಎಂದು ವೈಶ್ಯರಲ್ಲಿರುವ ನಂಬಿಕೆಯಾಗಿದೆ.

ನಮೋ ದೇವ್ಯೈ ಮಹಾದೇವ್ಯೈ ಶಿವಾಯೈ ಸತತಂ ನಮಃ |
ನಮಃ ಪ್ರಕೃತ್ಯೈ ಭದ್ರಾಯೈ ನಿಯತಾಃ ಪ್ರಣತಾಃ ಸ್ಮತಾಂ ||

ಓ ತಾಯಿಯೇ, ನಾವು ಮಂಗಳಕರಳಾದ ನಿನಗೆ ಯಾವಾಗಲೂ ನಮಸ್ಕಾರ ಮಾಡುವೆವು. ದೇವ್ಯೈ ಎಂದರೆ ಪ್ರಕಾಶ ಸ್ವರೂಪಳು, ಸ್ಫುರಣ ಸ್ವರೂಪಳು, ಜ್ಞಾನ ಸ್ವರೂಪಳು ಮತ್ತು ಪರಬ್ರಹ್ಮ ಸ್ವರೂಪಳು. ಮಂಗಳಕರಳಾದ ಗುಣಗಳಿಂದ ತುಂಬಿರುವ ಸರ್ವಮಂಗಳೆಯಾದ ನಿನಗೆ ಭಕ್ತಿಯಿಂದ ನಮಸ್ಕರಿಸುತ್ತೇವೆ ಎಂದು ಅಂದಿನಿಂದ ಇಂದಿನವರೆಗೆ ವೈಶ್ಯರೆಲ್ಲರೂ ಶ್ರೀ ವಾಸವಿ ಕನ್ನಿಕಾಪರಮೇಶ್ವರಿಯನ್ನು ಕುಲದೇವತೆಯಾಗಿ ಪೂಜಿಸಿಕೊಂಡು ಬಂದಿದ್ದಾರೆ.

೨.೪ ಪೂರ್ವ ಪರಿಚಯ

ವೈಶ್ಯರಿಗೆ ಕೋಮಟಿ ಎಂಬ ಹೆಸರಿದೆ. ಕೋಮಟಿ ಶಬ್ದವು "ಗೋಮತಿ" ಶಬ್ದದಿಂದ ಹುಟ್ಟಿದೆ. ಗೋ ಮತಿರವ ಮತಿಃಯೇಷಾಂತೇ ಗೋಮತಃ ಅಂದರೆ ವೈಶ್ಯರು ಗೋವಿನಂತಹ ಬುದ್ಧಿಯುಳ್ಳವರೆಂದೂ ವೈಶ್ಯರಿಗೂ ಗೋವುಗಳಿಗೂ ಸಾಮ್ಯವಿರುವುದೆಂದೂ ತಿಳಿದುಬರುತ್ತದೆ. ಬ್ರಹ್ಮನು ವೈಶ್ಯರ ಜೊತೆಗೆ ಗೋವನ್ನು ಸೃಷ್ಟಿ ಮಾಡಿದನೆಂದು ವೇದ ಹೇಳುತ್ತದೆ. ಜ್ಯೋತಿಷ್ಯ ಗ್ರಂಥಗಳಲ್ಲಿ ನವಗ್ರಹಗಳಲ್ಲಿರುವ ಬುಧ ಮತ್ತು ಚಂದ್ರ ವೈಶ್ಯರೆಂದು ಹೇಳುತ್ತಾರೆ.

ಶೆಟ್ಟಿ ಅಥವಾ ಕೋಮಟಿಗಳೆಂದು ಪರಿಚಿತರಾಗಿರುವ ವೈಶ್ಯರು ತುಪ್ಪದ ಕೋಮಟಿ ಮತ್ತು ಎಣ್ಣೆ ಕೋಮಟಿಗಳೆಂದು ಎರಡು ಉಪ ಪಂಗಡಗಳನ್ನು ಹೊಂದಿದ್ದಾರೆ. ಕೋಮಟಿಗಳು ತಾವು ಪ್ರಾಚೀನ ವೈಶ್ಯ ಪಂಗಡದ ಪ್ರತಿನಿಧಿಗಳೆಂದು ಹೇಳುತ್ತಾರೆ. ಇವರು ಸಾಮಾನ್ಯವಾಗಿ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಕಂಡುಬರುತ್ತಾರೆ. ಅದರಲ್ಲೂ ಹೈದ್ರಾಬಾದ್ ಕರ್ನಾಟಕದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ವೈಶ್ಯರು ೬೫ ಸಾವಿರದಿಂದ ೭೦ ಸಾವಿರ ವೈಶ್ಯರು ಕಂಡುಬರುತ್ತಾರೆ. ಇದರಲ್ಲಿ ಕ್ಷೇತ್ರ ಕಾರ್ಯದಿಂದ ದೊರಕಿರುವ ಮಾಹಿತಿಯ ಪ್ರಕಾರ ಎಲ್ಲಾ ಗೋತ್ರದವರು ಕಂಡುಬಂದಿದ್ದಾರೆ. ಋಷಿಗಳ ಹೆಸರಿನಲ್ಲಿ ೧೦೨ ಗೋತ್ರಗಳು ಕಂಡು ಬರುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಗುರುತಿಸಲಾಗಿದೆ.

ಪ್ರಭಾತ ಮಹರ್ಷಿ, ಗೋಪಕ ಮಹರ್ಷಿ, ಪೂತಿಮಾಷ ಮಹರ್ಷಿ, ಪ್ರಭಾತನ ಮಹರ್ಷಿ, ಅಂಗೀರಸ ಮಹರ್ಷಿ, ದಾಲಭ್ಯ ಮಹರ್ಷಿ, ದೇವಲ್ಯ ಮಹರ್ಷಿ, ಕಶ್ಯಪ ಮಹರ್ಷಿ, ಸರತ್ಕಾರ ಮುನಿ, ಮೌದ್ಗಲ್ಯ ಮುನಿ, ಮೌದ್ಗಲ್ಯಸ ಮಹರ್ಷಿ, ಕರ್ಣಮುನಿ, ಧೌಮ್ಯ ಮಹರ್ಷಿ.

ಹೀಗೆ ಅನೇಕ ಋಷಿಗಳ ಹೆಸರಿನಲ್ಲಿ ಗೋತ್ರಗಳನ್ನು ಗುರುತಿಸಬಹುದು. ಇತ್ತಿಚೆಗೆ ಇವರು ಆರ್ಯವೈಶ್ಯರೆಂದು ಕರೆದುಕೊಂಡಿದ್ದಾರೆ. ಈ ಸಮುದಾಯವು ಪಿತೃನಡವಳಿಯ ಹೊರ ಬಾಂದವ್ಯದ ಗೋತ್ರಗಳನ್ನು ಹೊಂದಿವೆ. ಸೋದರಮಾವನ ಮಗಳು ಮತ್ತು ಅಕ್ಕನ ಮಗಳೊಂದಿಗೆ ವಿವಾಹಕ್ಕೆ ಸಮ್ಮತಿ ಇದೆ. ಅವಿಭಕ್ತ ಕುಟುಂಬ ಮಾದರಿಗಳು ಇವರಲ್ಲಿ ಹೆಚ್ಚಿನ ಪ್ರಮಾಣದಲ್ಲಿವೆ. ವೈಶ್ಯರಲ್ಲಿ ಕೆಲವರು ಸರ್ಕಾರಿ ಉದ್ಯೋಗದಲ್ಲಿ ಮತ್ತು ಕೆಲವರು ಖಾಸಗಿ ಸಂಸ್ಥೆಗಳಲ್ಲಿ ಕೆಲಸವನ್ನು ಮಾಡುತ್ತಾರೆ. ಬ್ಯಾಂಕ್, ವ್ಯಾಪಾರ, ಸ್ವಯಂ ಉದ್ಯೋಗ, ಸಣ್ಣ ಹಾಗೂ ದೊಡ್ಡ ಪ್ರಮಾಣದ ಉದ್ದಿಮೆಗಳನ್ನು ನಡಸುವುದರಲ್ಲಿ ನಿರತರಾಗಿದ್ದಾರೆ. ತಮ್ಮ ಸಮುದಾಯದ ಅಭಿವೃದ್ಧಿಗಾಗಿ ಅಖಿಲ ಭಾರತ ವೈಶ್ಯ ಸಂಘಟನೆಯನ್ನು ರಾಜ್ಯ ಜಿಲ್ಲೆ ಹಾಗೂ ತಾಲೂಕುಮಟ್ಟದ ಸಂಘಟನೆಯನ್ನು ಸಹ ಹೊಂದಿದ್ದಾರೆ. ಇವರು ವಿಷ್ಣು, ನಾರಾಯಣ, ಕನ್ನಿಕಾಪರಮೇಶ್ವರಿ, ವೆಂಕಟೇಶ್ವರ ದೈವಗಳನ್ನು ಪೂಜಿಸುತ್ತಾರೆ.

ಆಧುನಿಕ ಶಿಕ್ಷಣದ ಬಗ್ಗೆ ಆಸಕ್ತಿ ಇರುವ ಈ ಸಮುದಾಯದ ಜನರು ಎಲ್ಲಾ ಆಧುನಿಕ ಸಾಮಾಜಿಕ ವ್ಯವಸ್ಥೆಗಳ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿದ್ದಾರೆ. ವಲಸಿಗರು ಹಾಗೂ ಅಲ್ಪಸಂಖ್ಯಾತರಾದ ಇವರು ಸಾಂಸ್ಕೃತಿಕವಾಗಿ ಅನೇಕ ದ್ವಂದ್ವಗಳನ್ನು ಎದುರಿಸುವುದಲ್ಲದೆ, ಸಾಮಾಜಿಕವಾಗಿ, ಆರ್ಥಿಕವಾಗಿ ಬಿಕ್ಕಟ್ಟಿನ ಸ್ಥಿತಿಯಲ್ಲಿದ್ದಾರೆ. ವಲಸೆ ಬಿಟ್ಟು ಮನುಕುಲದ ಲಕ್ಷಣ ಆರ್ಯರು ಮಧ್ಯ ಏಷ್ಯಾದಿಂದ ವಲಸೆ ಬಂದರು ಎನ್ನುವುದರಿಂದ ಪ್ರಾರಂಭವಾಗಿ ಇಂದಿನ ಭಾರತೀಯರು ಅಮೇರಿಕಾಕ್ಕೆ ವಲಸೆ ಹೋಗುವವರೆಗೆ ವಲಸೆ ನಿರಂತರವಾಗಿ ರಾಜಕೀಯ, ಭೌಗೋಳಿಕ ಗಡಿಗಳನ್ನು ದಾಟಿ ನಡೆಯುತ್ತದೆ. ದೇಶ, ಭಾಷೆ, ಧರ್ಮ, ರಾಷ್ಟ್ರೀಯತೆ ಪ್ರಶ್ನೆಗಳು ಬಂದಾಗಲೆಲ್ಲಾ ವಲಸಿಗ ಸಮುದಾಯಗಳು ಬಿಕ್ಕಟ್ಟಿಗೆ ಸಿಲುಕಿಕೊಳ್ಳುತ್ತವೆ. ಅಲ್ಪಸಂಖ್ಯಾತ ವಲಸಿಗರು ಹೇಗೆ ಸಮಸ್ಯೆಯನ್ನು ನಿಭಾಯಿಸುತ್ತಾರೆ ಎಂಬುದನ್ನು ಈ

ಜನಾಂಗದ ಹಿನ್ನೆಲೆಯಲ್ಲಿ ಗಮನಿಸಲಾಗಿದೆ. ಕುಲಕಸುಬನ್ನು ಕಳೆದುಕೊಂಡು ಈ ಸಮುದಾಯಗಳು ಸರ್ಕಾರ ಕೈಗೊಂಡ ಶೈಕ್ಷಣಿಕ, ಔದ್ಯೋಗಿಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿತ್ತು. ಆದರೆ ಭಾಷಾ ಅಲ್ಪಸಂಖ್ಯಾತರಾದ ಇವರು ಮೀಸಲಾತಿ ಸೌಲಭ್ಯ ಪಡೆಯುವಲ್ಲಿ ಅನೇಕ ಗೊಂದಲಗಳನ್ನು ಎದುರಿಸುತ್ತಿದ್ದಾರೆ. ಇಂದಿನ ಜಾಗತೀಕರಣ, ಉದಾರೀಕರಣ ಪ್ರಕ್ರಿಯೆಯಲ್ಲಿ ಈ ಸಮುದಾಯ ಜೀವನ ನಿರ್ವಹಣೆಗಾಗಿ ಆಯ್ಕೆ ಮಾಡಿಕೊಂಡ ವ್ಯಾಪಾರ ಅಸ್ಥಿರವಾದದ್ದು. ತಮ್ಮಲ್ಲಿರುವ ಕಡಿಮೆ ಬಂಡವಾಳದಿಂದ ವಿದೇಶಿ ಬಂಡವಾಳಿಗರೊಡನೆ ಸೆಣಸಾಡಲು ಹೇಗೆ ಸಾಧ್ಯ? ಸೀಮಿತ ಬಂಡವಾಳ, ಆರ್ಥಿಕ ಬಿಕ್ಕಟ್ಟು ಇದರಿಂದ ಕುಸಿದ ಜೀವನಮಟ್ಟ ಇತ್ಯಾದಿಗಳಿಂದ ಸಮುದಾಯ ಅದೋಗತಿಯ ಅಂಚಿನಲ್ಲಿದೆ. ಒಂದು ಕಡೆ ನೈಪುಣ್ಯವನ್ನು ತೋರುವ ಕುಲಕಸುಬುಗಳು ವಿದೇಶಿ ಬಂಡವಾಳಿಗರ ಸೊತ್ತಾಗಿದೆ. ಇನ್ನೊಂದು ಕಡೆ ಅಭಿವೃದ್ಧಿ ಪಥದಲ್ಲಿ ಸಾಗಿಸಬೇಕಿದ್ದ ಸರ್ಕಾರ ಇವರನ್ನು ಸ್ವಾತಂತ್ರ್ಯ ಬಂದು ೬೨ ವರ್ಷಗಳಾದರೂ ಗಣನೆಗೆ ತೆಗೆದುಕೊಳ್ಳದೇ ಹೋಗಿದೆ.

೨.೫ ಕೆಲವು ಮುಖ್ಯ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗಳು

ಜಾವಾ, ಸುಮತ್ರಾ, ಗ್ರೀಕ್, ರಷ್ಯಾ ಮೊದಲಾದ ದೇಶಗಳಲ್ಲಿ ಹಿಂದೆ ವೈಶ್ಯರು ಬೇಕಾದಷ್ಟು ವ್ಯಾಪಾರವನ್ನು ಮಾಡಿರುವುದಲ್ಲದೆ ಅಲ್ಲಿ ಧರ್ಮಶಾಲೆ, ದೇವಾಲಯ, ವಿದ್ಯಾಲಯಗಳನ್ನು ನಿರ್ಮಿಸಿದ ನಿದರ್ಶನಗಳಿವೆ.

ವೈಶ್ಯರು ರಾಜ್ಯಭಾರ ಮಾಡಿದುದಕ್ಕೆ ಪುರಾಣೇತಿಹಾಸಗಳ ಆಧಾರವು ದೊರೆಯುತ್ತದೆ. ವೈಶ್ಯವರ್ಣಕ್ಕೆ ಸೇರಿದ ಕರಂದನ ಮಹಾರಾಜ ಮತ್ತು ಮರುತ್ತನೆಂಬ ಚಕ್ರವರ್ತಿಗಳಿದ್ದರೆಂದು ಭಾಗವತದ ನವಮಸ್ಕಂಧ ಎರಡನೆಯ ಅಧ್ಯಾಯದಿಂದಲೂ, ವಿಷ್ಣು ಪುರಾಣದ ನಾಲ್ಕನೆಯ ಭಾಗ ಮೊದಲನೆಯ ಅಧ್ಯಾಯದಿಂದಲೂ ತಿಳಿದುಬರುತ್ತದೆ.

ವಲಭಿ ನಗರವು ಹಿಂದೆ ಗುಜರಾತಿನ ಮುಖ್ಯ ಪಟ್ಟಣವಾಗಿದ್ದಿತು. ಅಲ್ಲಿ ವೈಶ್ಯ ರಾಜರು ಆಡಳಿತವನ್ನು ನಡೆಯಿಸಿದ್ದರು. ಅವರೊಬ್ಬರ ಮಗನಾದ ಕುಮಾರಗುಪ್ತನು ಸೌರಾಷ್ಟ್ರ ರಾಜ್ಯವನ್ನು ಗೆದ್ದನು. ಅನಂತರ ಅವನ ತಂದೆಯು ೨೩ ವರ್ಷಗಳ ಕಾಲ ರಾಜ್ಯಬಾರ ಮಾಡಿ ಸ್ವರ್ಗಸ್ಥನಾದನು. ಬಳಿಕ ಕುಮಾರಗುಪ್ತನು ರಾಜ್ಯಾಭಿಷಿಕ್ತನಾಗಿ ೨೦ ವರ್ಷಗಳ ಕಾಲ ಪ್ರಭುತ್ವವನ್ನು ನಡೆಯಿಸಿ ಕಾಲವಾದನು. ಆಮೇಲೆ ಅವನ ಮಗ ಸ್ಕಂದಗುಪ್ತನು ಸಿಂಹಾಸನವೇರಿ ೨ ವರ್ಷಗಳ ಕಾಲ ರಾಜ್ಯಭಾರ ಮಾಡಿ ಮೃತನಾದನು. ಆಗ ಗುಪ್ತರ ರಾಜ್ಯವು ಅನ್ಯರ ವಶವಾಯಿತು. ಈ ವಿಷಯವು ಸೌರಾಷ್ಟ್ರ ದೇಶದಲ್ಲಿ ಪರಂಪರೆಯಾಗಿ ಹೇಳುವ ಹಾಡು-ಹಬ್ಬಗಳಿಂದ ತಿಳಿದುಬರುವುದೆಂದು ಥಾಮಸ್ ಎಂಬ ಇತಿಹಾಸಜ್ಞನು ಬರೆದ ವೈಶ್ಯ ರಾಜರ ಚರಿತ್ರೆಯಲ್ಲಿ ಉಲ್ಲೇಖವಾಗಿದೆ. ಕ್ರಿ.ಶ.೧೬೧ರಿಂದ ೩೧೯ರ ವರೆಗೆ ಅಪರಿಮಿತ ಪರಾಕ್ರಮದಿಂದ ಹಾಗೂ ಶ್ರೇಷ್ಠವಾಗಿ ರಾಜ್ಯಭಾರವನ್ನು ನಿರ್ವಹಿಸಿದ ಗುಪ್ತ ಚಕ್ರವರ್ತಿಗಳ ಕಾಲದಲ್ಲಿ ಭಾರತ ದೇಶದ ಎಲ್ಲೆಡೆಯಲ್ಲಿ ಹಾಲು-

ತುಪ್ಪಗಳ ಕಾಲುವೆ ಹರಿಯುತ್ತಿದ್ದಿತೆಂದೂ, ಕೇಸರಿ, ಕಸ್ತೂರಿ ಮತ್ತು ಶ್ರೀಗಂಧದ ಕಂಪು ಹರಡಿತ್ತೆಂದೂ ಧನ, ದಾನ್ಯಗಳ ರಾಶಿಗಳಿಂದ ತುಂಬಿ ನ್ಯಾಯ-ಧರ್ಮಗಳು ಆಚರಣೆಯಲ್ಲಿದ್ದವೆಂದೂ ಚೈನಾ ದೇಶದ ಯಾತ್ರಿಕನಾದ ಪಾಹಿಯಾನ್, ಯುನಾನಿ, ಯಾತ್ರಿಕನಾದ ಮೆಗಸ್ತಾನೀಸ್ ಅವರು ತಮ್ಮ ಯಾತ್ರಾ ಚರಿತ್ರೆಗಳಲ್ಲಿ ಸ್ಪಷ್ಟವಾಗಿ ಬರೆದಿರುವರು. ಇತಿಹಾಸ ಪರಿಶೋಧಕರಾದ ಪಾಶ್ಚಾತ್ಯ ದೇಶದ ಲಾರ್ಡ್ ಮರ್ಫಿ ಮತ್ತು ಲಾರ್ಡ್ ಡೌಟರು ಕೆಲವು ಜನ ಜೈನ ಸನ್ಯಾಸಿಗಳ ಸಹಾಯದಿಂದ ೧೭ನೇ ಶತಮಾನದಲ್ಲಿ ಭಾರತೀಯ ವೈಶ್ಯರ ಚರಿತ್ರೆಯನ್ನು ಬರೆಯಲು ಪ್ರಯತ್ನಿಸಿದರು. ಆಸೇತುಹಿಮಾಲಯದಲ್ಲಿ ೧೮೦೦ ವೈಶ್ಯ ಶಾಖೆಗಳ ಸೂಚಿಯನ್ನು ತಯಾರಿಸಿದರು. ಆ ಸೂಚಿ ಪತ್ರದಲ್ಲಿ ಇಂದಿಗೆ ಅನೇಕ ಮಾರ್ಪಾಡುಗಳಾಗಿವೆ.

ಪ್ರಾಚೀನ ಕಾಲದಲ್ಲಿ ನವಬಂಧ ಮಹೀ ಮಂಡಲದ ಸಪ್ತ ಸಮುದ್ರಗಳಲ್ಲಿ 'ಫಣಿ' ಎಂಬ ವೈಶ್ಯರು ವ್ಯಾಪಾರ ಮಾಡುತ್ತಿದ್ದರು. ಉಪಾಸಕ ದಶಾಸೂತ್ರವೆಂಬ ೧೫ನೇ ಶತಮಾನಕ್ಕಿಂತಲೂ ಹಿಂದಿನದಾದ ಜೈನ ಗ್ರಂಥದಲ್ಲಿ ಆನಂದನೆಂಬ ವೈಶ್ಯನ ಚರಿತ್ರೆಯಿದೆ. ಆನಂದನ ಧರ್ಮಪತ್ನಿಯ ಹೆಸರು ಶಿವಾನಂದ ದೇವಿ. ಅವರ ಮನೆಯಲ್ಲಿ ನಾಲ್ಕು ಕೋಟಿ ಚಿನ್ನದ ನಾಣ್ಯಗಳು ನಗದಾಗಿದ್ದವು. ಹತ್ತು ಹದಿನಾರು ಕೋಟಿ ಚಿನ್ನದ ನಾಣ್ಯಗಳು ಲೇವಾದೇವಿ ಹಾಗೂ ವ್ಯಾಪಾರಕ್ಕಾಗಿ ಇದ್ದವು. ಐದುನೂರು ಕುದುರೆ ಗಾಡಿಗಳಿದ್ದವು. ಸ್ವದೇಶ ವ್ಯಾಪಾರಕ್ಕಾಗಿ ನಾಲ್ಕು ಹಡಗುಗಳು ವಿದೇಶೀ ವ್ಯಾಪಾರಕ್ಕಾಗಿ ನಾಲ್ಕು ಹಡಗುಗಳು ಇದ್ದವು. ಅಲ್ಲದೆ ಹತ್ತು ಸಾವಿರ ಹಸುಗಳಿದ್ದವು ಎಂದು ತಿಳಿದು ಬರುತ್ತದೆ.

ಕ್ರಿ.ಶ.೧೯೧೮ರಲ್ಲಿ ಮರಾದಬಾದ್ ನಿವಾಸಿಯಾದ ವಿದ್ಯಾವಾಚಸ್ಪತಿ, ಸನಾತನ ದರ್ಮೋಪದೇಶಕ ಚತುರ್ವೇದ ಪಾರಂಗತಾದಿ ಬಿರುದಾಂಕಿತರಾದ ಪಂಡಿತ ಜ್ವಾಲುಪ್ರಸಾದ ಮಿಶ್ರರವರು ಬರೆದ 'ಚಾಲೆಭಾಸ್ಕರ' ವೆಂಬ ಗ್ರಂಥದಲ್ಲಿ ಅಖಿಲ ಭಾರತ ದೇಶದಲ್ಲಿ ನೆಲಸಿರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ವರ್ಣಾಶ್ರಮ ಧರ್ಮಗಳ ಸಂಕ್ಷಿಪ್ತ ಚರಿತ್ರೆಯನ್ನು ಬರೆದಿರುವರು. ಆ ಗ್ರಂಥದ ವಿವರಣೆಯ ಪ್ರಕಾರ ಭಾರತೀಯ ವೈಶ್ಯರ ಶಾಖೋಪಶಾಖೆಗಳನ್ನು ತಿಳಿಸಿದೆ.

ಪೆನುಗೊಂಡೆಯು ಕ್ರಿಸ್ತಶಕ ೧೦-೧೧ನೇ ಶತಮಾನದಲ್ಲಿ ಒಂದುನೂರು ಚದರ ಮೈಲಿಗಳ ವಿಸ್ತೀರ್ಣವುಳ್ಳ ಮಹಾನಗರವಾಗಿದ್ದಿತು. ಅದರ ಸುತ್ತಲೂ ವಿಶಾಖಪಟ್ಟಣ ಮೊದಲಾದ ೧೭ ನಗರಗಳಿದ್ದವು. ಅಲ್ಲಿ ೭೧೪ ಗೋತ್ರಗಳಿಗೆ ಸೇರಿದ ವೈಶ್ಯರೂ ಇದ್ದರು. ಶ್ರೀ ಕನ್ನಿಕಾಪರಮೇಶ್ವರಿಯ ಮದುವೆಯ ವಿಷಯದಲ್ಲಿ ವಿವಾದವುಂಟಾಗಿ ೧೦೨ ಗೋತ್ರದ ವೈಶ್ಯರು ಮಾತ್ರ ಅಲ್ಲಿ ನಿಂತರೆಂದೂ, ೬೧೨ ಗೋತ್ರದ ವೈಶ್ಯರು ಆ ಸ್ಥಳವನ್ನು ಬಿಟ್ಟು ದಿಕ್ಕಾಪಾಲಾಗಿ ಹೋದರೆಂದೂ 'ಕನ್ನಿಕಾ ಪುರಾಣ'ದಿಂದ ತಿಳಿದು ಬರುತ್ತದೆ. ಹಿಂದೆ ಒಂದೇ ಸಂಪ್ರದಾಯಕ್ಕೆ ಸೇರಿದ ಈ ವೈಶ್ಯರು ಬೇರೆ ಬೇರೆ ಪ್ರಾಂತಗಳಲ್ಲಿ ನೆಲಸಿ, ಅಲ್ಲಿಯ ಜನರ ನಡೆ-ನುಡಿಗಳನ್ನು ಕಲಿತು, ಆಯಾಯ ದೇಶದ ಸಂಸ್ಕೃತಿಗಳಿಗನುಗುಣವಾಗಿ ಇವರ ಆಚಾರ್ಯವು ಮಾರ್ಪಟ್ಟು, ಈಗ ಈ ದೇಶದ ಆ ಮೂಲೆಯ ಮತ್ತು ಈ ಮೂಲೆಯ ವೈಶ್ಯರು ಬೇರೆ ಎನ್ನುವಂತಾಗಿದೆ. ಆದರೂ ಕೃಷಿ, ವಾಣಿಜ್ಯ,

ಪಶುಪಾಲನೆ ಮೊದಲಾದ ವೃತ್ತಿಗಳಿಂದ ದೇಶದ ಎಲ್ಲಾ ಭಾಗದ ವೈಶ್ಯರಲ್ಲಿ ಸಾಮ್ಯತೆಯು ಸ್ಪಷ್ಟವಾಗಿದೆ.

೨.೬ ಭಾರತದಲ್ಲಿ ಆಳಿದ ವೈಶ್ಯ ರಾಜರುಗಳು

ಆರ್ಯವೈಶ್ಯ ರಾಜರುಗಳು ಸುಮಾರು ಎಂಟು ಪ್ರದೇಶಗಳಲ್ಲಿ ರಾಜ್ಯವನ್ನು ಆಳಿದ್ದಾರೆ.

೧. ಅಹಿಚೈತ್ರಮ್: (ಉತ್ತರ ಪ್ರದೇಶ) ಈ ಪ್ರದೇಶವನ್ನು ಸುಮಾರು ೧೧ ಜನ ವೈಶ್ಯರಾಜರು ಕ್ರಿ.ಪೂ.ಮೊದಲನೇ ಶತಮಾನದಲ್ಲಿ ರಾಜ್ಯವಾಳಿದರು.

೧. ಭದ್ರ ಘೋಷ್ ೨. ಭಾನು ಮಿತ್ರ ೩. ಭೂಮಿ ಮಿತ್ರ ೪. ಜಯ ಮಿತ್ರ ೫. ಪಾಲ್ಗುನಿ ಮಿತ್ರ ೬. ಶೂರ್ಯ ಮಿತ್ರ ೭. ವಿಷ್ಣು ಮಿತ್ರ ೮. ವರುಣ ಮಿತ್ರ ೯. ಪ್ರಜಾಪತಿ ಮಿತ್ರ ೧೦. ಸೋನಯಾನಿ ಪುತ್ರ, ವಂಗಪಾಲ ೧೧. ತಯಾನಿ ಪುತ್ರ ಭಾಗವತ

೨. ಅಯೋಧ್ಯ: (ಉ.ಪ್ರ.) ಒಂಬತ್ತು ಜನ ರಾಜರು ಕ್ರಿ.ಪೂ. ಮೊದಲನೇ ಶತಮಾನದ ೮೬ರಲ್ಲಿ ಸುಮಾರು ೧೦೦ ವರ್ಷ ರಾಜ್ಯವಾಳಿದ್ದಾರೆ.

೧. ಮೂಲ ದೇವ ೨. ವಾಯು ದೇವ ೩. ವಿಶಾಖ ದೇವ ೪. ಧನ ದೇವ ೫. ಫಲ್ಗದೇವ ೬. ಸತ್ಯಮಿತ್ರ ೭. ಆರ್ಯಮಿತ್ರ ೮. ಸಂಘಮಿತ್ರ ೯. ಅಜಯವರ್ಮ

೩. ಕೌಶಾಂಬಿ: ಈ ರಾಜ್ಯದಲ್ಲಿ ಏಳು ಜನ ವೈಶ್ಯರು ಕ್ರಿ.ಪೂ. ೨ನೇ ಶತಮಾನದಲ್ಲಿ ರಾಜ್ಯವಾಳಿದ್ದಾರೆ.

೧. ಬಹಪತಿ ಮಿತ್ರ ೨. ಬ್ರಹಸ್ಪತಿ ಮಿತ್ರ ೩. ಘೌಷ್ಮಮಿತ್ರ ೪. ವರುಣ ಮಿತ್ರ ೫. ಪುಷ್ಪಶ್ರೀ ೬. ಘೌತನು ೭. ಅಶ್ವಘೋಷ

೪. ಮಧುರಾ: (ಉ.ಪ್ರ) ಹದಿನಾಲ್ಕು ಜನ ವೈಶ್ಯ ರಾಜರು ಕ್ರಿ.ಪೂ. ೨ನೇ ಶತಮಾನದಲ್ಲಿ ರಾಜ್ಯ ವಾಳಿದರು.

೧. ಗೋತಿ ಮಿತ್ರ ೨. ಗೋತಿ ಮಿತ್ರ ೩. ಬ್ರಹ್ಮ ಮಿತ್ರ ೪. ದೃಷ್ಟಮಿತ್ರ ೫. ಸೂರ್ಯ ಮಿತ್ರ ೬. ಪುರುಷ ದತ್ತ ೭. ಉತ್ತಮ ದತ್ತ ೮. ರಾಮದತ್ತ ೯. ಶೇಷದತ್ತ ೧೧. ಕಾಮದತ್ತ ೧೨. ನರದತ್ತ ೧೩. ಶಿವದತ್ತ ೧೪. ಬಲಭೂತಿ.

೫. ಐಹೊಳೆ (ಕರ್ನಾಟಕ): ಈ ಪ್ರದೇಶವನ್ನು ಹೊನ್ನ ಎಂಬ ದೊರೆ ಕ್ರಿ.ಶ.೧೪೦೫ ರಲ್ಲಿ ರಾಜ್ಯ ವಾಳಿದ್ದಾರೆ.

೬. ಪೆನುಗೊಂಡ: (ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆ) ರಾಜ ಕುಸುಮಶ್ರೇಷ್ಠಿ ೧೧ನೇ ಶತಮಾನದಲ್ಲಿ ರಾಜ್ಯವಾಳಿದ್ದಾರೆ. ಇದು ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕಿ, ಆರ್ಯವೈಶ್ಯ ಕುಲದೇವತೆ ಶ್ರೀಮತ್ ವಾಸವಿ ಕನ್ನಿಕಾಪರಮೇಶ್ವರಿ ಅಮ್ಮನವರ ಜನ್ಮಸ್ಥಳವಾಗಿದೆ.

೭. ಆಗ್ರೋರ : (ಉತ್ತರ ಭಾರತ) ಮಹಾರಾಜ ಅಗ್ರಸೇನನು ಸುಮಾರು ೫೦೦ ವರ್ಷಗಳ ಹಿಂದೆ ರಾಜ್ಯವಾಳಿದ್ದಾರೆ.

೮. ಮೇವಾರ: ಈ ಪ್ರದೇಶವನ್ನು ಮಹಾಬಲಶಾಲಿಯಾದ ಮಹಾರಾಜ ಹೇಮರಾಜನು ೧೯ನೇ ಶತಮಾನದಲ್ಲಿ ರಾಜ್ಯವಾಳಿದ್ದಾರೆ.

ವೇದಕಾಲದ ವೈಶ್ಯ ರಾಜರುಗಳು

೧. ದುಷ್ಮರಾಜ ೨. ದಿಷ್ಟ ರಾಜ ೩. ಬರುನಾನಂದ ರಾಜ ೪. ವತ್ಸಪ್ರೀತ ರಾಜ ೫. ಪ್ರಣರಾಜ ೬. ಪ್ರಣಸು ರಾಜ ೭. ಕನಿತ್ರ ರಾಜ ೮. ಚಕೇಶುಷಾ ರಾಜ ೯. ವಿಲಿನಿಷ್ಮ ರಾಜ ೧೦. ಕನಿಮಿತ್ರ ರಾಜ ೧೧. ಕರೇಂದುನ ರಾಜ ೧೨.ಅವಿಕಶಿಭ ರಾಜ ೧೩. ಮಾರೂತಾ ರಾಜ

ಚಕ್ರವರ್ತಿಗಳು

೧. ಚಂದ್ರಗುಪ್ತ ೨.ಸಮುದ್ರಗುಪ್ತ ೩.ಚಂದ್ರ ಗುಪ್ತ ೪.ಕುಮಾರ ಗುಪ್ತ ೫.ಸ್ಕಂದ ಗುಪ್ತ ೬.ಬುಧ ಗುಪ್ತ ೭.ನರಸಿಂಹ ಗುಪ್ತ ೮.ಯಶೋದರ್ಶನ ೯.ಶಿಲಾಜಿತ್ತು ೧೦.ಹರ್ಷವರ್ಧನ ೧೧.ಬಿಂಬಸಾರ ೧೨.ಅಜಾತ ಶತ್ರು ೧೩.ಚಂದ್ರಗುಪ್ತ ಮೌರ್ಯ ೧೪.ಬಿಂದು ಸಾರ ೧೫.ಅಶೋಕ ವರ್ಧನ ೧೬.ಪ್ರಭಾಕರ ವರ್ಧನ ೧೭.ಸಿನುಕಾ ೧೮. ವಶಿಷ್ಮ ಪುತ್ರ

ಅ. ದೇವತೆಗಳು- ವಸು, ರುದ್ರ, ಆದಿತ್ಯ, ವಿಶ್ವದೇವ

ಆ. ಗ್ರಹಗಳು- ಚಂದ್ರ, ಬುಧ, (ಅಮ್ಮನವರು ಬುಧ ಗ್ರಹ)

ಇ. ವೇದ ಮಂತ್ರಗಳ ರಚನಾಕಾರರು -ಬಲಂಧರ ವತ್ಸ ಸಂಕೀಲ

ಈ. ಮನುಪುತ್ರರು -ದಿಷ್ಮ, ನಾಭಾಗ

ಉ. ಜ್ಞಾನಿಗಳಾದ ಶ್ರೇಷ್ಠಿಗಳು -ಜನಕಮಹಾರಾಜ

ಗಣರಾಜ್ಯ (Republic)

ಯೌದೇಯರು: ಉತ್ತರ ಹಿಂದೂಸ್ಥಾನದಲ್ಲಿ ಸಮುದ್ರ ಗುಪ್ತನ ಕಾಲದಲ್ಲಿ ಪ್ರಜೆಗಳಿಂದ ನೇಮಿಸಲ್ಪಟ್ಟ ಪ್ರತಿನಿಧಿಗಳಿಂದ ರಾಜ್ಯವಾಳಲ್ಪಟ್ಟಿತ್ತು. (ರಾಜನಿಲ್ಲದ ರಾಜ್ಯ)

ಮಂತ್ರಿಗಳು

ಮಹಾರಾಜರ ಕಾಲದಲ್ಲಿ ಒಬ್ಬ ಮಂತ್ರಿ ಮಾತ್ರ ಇರುತ್ತಿದ್ದರು.

೧. ತೇಜ ಪಾಲ್ ೨. ವಸ್ತು ಪಾಲ್ ೩. ಭಾಮಾಷಾ ೪. ವಿಮಲ ಮಂತ್ರಿ ೫. ಉದಯನ ಮಂತ್ರಿ ೬.ವಾಗ್ಭುಟ್ಟು ಮಂತ್ರಿ ೭. ಅಮರಭಟ್ಟು ಮಂತ್ರಿ ೮. ಆಭಡ ಮಂತ್ರಿ ೯. ಭಟ್ಟಿವಿಕ್ರಮಾದಿತ್ಯ

ಕವಿಗಳು

೧.ಮಹಾಕವಿ ಮಾಘು ೨.ಭಕ್ತ ತುಕಾರಾಮ ೩. ಆಚಾರ್ಯ ಹೇಮ ಚಂದ್ರ ಸೂರಿ ೪.ಜಯಶಂಕರ ಪ್ರಸಾದ್ ೫. ಮೈಥಿಲಿ ಶರಣ್ ೬.ಭಾರತೇಂದ್ರು ಹರಿಚ್ಚಂದ್ರ ೭.ಕವಿಚಕ್ರವರ್ತಿ ಶ್ರೀಪಾದ ೮.ಸಿದ್ದ ಪಾಲ್ ೯. ವಿಜಯ ಪಾಲ್ ೧೦. ಬಾಬುಗಂಗಾದರ ಪ್ರಸಾದ್ ಗುಪ್ತ ೧೧. ರಾದಾಕೃಷ್ಣದಾಸ್ ೧೨. ಜಗನ್ನಾಥ ದಾಸ್ ರತ್ನಾಕರ ೧೩. ಸಿಯಾರಾಂ ಚರಣ್ ಗುಪ್ತ ೧೪. ಕಾಳಿದಾಸ ವ್ಯಾಸ

ಭಕ್ತರು

೧.ತುಲಾಧಾರ ೨.ಸುಂದರ ಶ್ರೇಷ್ಠಿ ೩. ಸಂಗರ ಶ್ರೇಷ್ಠಿ ೪. ವೈರಾಟಿ ೫. ಕಾಮದೇವ ೬.ಜ್ಞಾನೇಶ್ವರ ಜಗಧೂಷಾ ೭. ವಿಜಯ ಶ್ರೇಷ್ಠಿ ದಂಪತಿಗಳು ೮. ಕೈವನ್ನ ಶ್ರೇಷ್ಠಿ ೯. ವೀರ ಮಹರ್ಷಿ ೧೦. ಭವಿಶ್ಯದತ್ತು ೧೧. ಮಹಾತ್ಮ ಸುಂದರ ದಾಸ್ ೧೨. ರಾಜಚಂದ್ರ ಭಾಯಿ ೧೩. ಭಕ್ತ ಸಿರಿಯಾಳ. ೧೪. ಕನ್ನಗೆ

ಸ್ವಾತಂತ್ರ್ಯ ಸಮರ ನಾಯಕರು

೧.ರಾಷ್ಟ್ರಪಿತ ಮಹಾತ್ಮ ಗಾಂಧಿ ೨.ಲಾಲ ಲಜಪತರಾಯ ೩.ಅಮರ ಜೀವಿ ಪೊಟ್ಟಿ ಶ್ರೀರಾಮಲು ೪.ದರ್ಶಿ ಚೆಂಚಯ್ಯ ೫.ರಾಂ ಮನೋಹರ್, ಲೋಹಿಯಾ ೬. ಜಮನಲಾಲ್ ಬಜಾಜ್

ಪ್ರಧಾನ ಮಂತ್ರಿಗಳು

೧.ರಾಧಾ ಗುಪ್ತ ೨.ಸಕದ್ ಹಾಲ್ ೩.ಕಲ್ಪಕ್ ೪. ಅಭಯ್ ಕುಮಾರ್

ರಾಜ್ಯಪಾಲರು

ಸಮುದ್ರ ಗುಪ್ತರ ಕಾಲದಲ್ಲಿ ಪುಷ್ಯಗುಪ್ತರು ರಾಜ್ಯಪಾಲರಾಗಿದ್ದರು.

ವೈಶ್ಯ ಸಂಘೋದ್ಧಾರಕರು

೧. ಆತ್ಮಕೂರಿ ಲಕ್ಷ್ಮೀನರಸಿಂಹ ಸೋಮಯಾಜುಲು

೨. ಮಾಮಿಡಿ ವೆಂಕಟಾಚಾರ್ಯಲು

೩. ತಂಪೂಚೂಡಿ ಭಗವಂತಂ ಗುಪ್ತ

ಮಾಜಿ ಕೇಂದ್ರ ಮಂತ್ರಿಗಳು

೧. ಹೆಚ್.ಕೆ.ಎಲ್.ಭಗತ್ ೨.ಪೆಂಡ ಕಂಟಿ ವೆಂಕಟ ಸುಬ್ಬಯ್ಯ ೩. ಸತೀಶ ಚಂದ್ರ ಅಗರವಾಲ್

೪. ಕೃಷ್ಣಕುಮಾರ್ ಗೋಯಲ್ ೫. ಶಾಂತಿ ಭೂಷಣ್ ೬. ಮೋಹನ ಧಾರಿಯಾ ೭. ಪಿ.ಸಿ.ಸೇತಿ

೮. ವಿಕ್ರಮ್ ಮಹಾಜನ್ ೯. ಸೀತಾರಾಂ ಕೇಸರಿ

ಮಾಜಿ ರಾಜ್ಯಪಾಲರು

೧. ಶ್ರೀ ಪ್ರಕಾಶ ೨. ಮೋಹನ್ ಲಾಲ್ ಸುಖಾಡಿಯಾ ೩. ಪಿ.ವೆಂಕಟಸುಬ್ಬಯ್ಯ

ಮಾಜಿ ಮುಖ್ಯ ಮಂತ್ರಿಗಳು

೧. ಚಂದ್ರ ಭಾನು ಗುಪ್ತ (ಉತ್ತರ ಪ್ರದೇಶ) ೨. ಬನಾರಸಿ ದಾಸ್ ಗುಪ್ತ (ಹರ್ಯಾಣ)

೩. ಮೋಹನ್ ಲಾಲ್ ಸುಖಾಡಿಯಾ (ರಾಜಸ್ಥಾನ) ೪. ಬನಾರಸಿದಾಸ್, (ಉತ್ತರ ಪ್ರದೇಶ)

೫. ವೀರೇಂದ್ರ ಚಕ್ಲಂಚ (ಮಧ್ಯ ಪ್ರದೇಶ) ೬. ಸುಂದರ ಲಾಲ್ ಪಟ್ವಾ (ಮಧ್ಯ ಪ್ರದೇಶ)

ಮಾಜಿ ಮಂತ್ರಿಗಳು

೧. ರಾಜ ಸೇವಾಸಕ್ತ ಶ್ರೀ ಪಾಮಿಡಿ ಸುಬ್ಬರಾಮ ಶ್ರೇಷ್ಠಿ ಮತ್ತ ಶ್ರೀ ಬಿ.ಇ.ರಾಮಯ್ಯ (ಕರ್ನಾಟಕ)

೨. ಶ್ರೀ ಕೋಣ ಜೇಟಿ ರೋಸಯ್ಯ ೩. ಶ್ರೀ ಬಚ್ಚು ಗುರುಮೂರ್ತಿ

೪. ಶ್ರೀ ಮುತ್ತುಗೋಪಾಲ ಕೃಷ್ಣ (ಆಂಧ್ರ ಪ್ರದೇಶ)

೫. ಶ್ರೀ ಡಿ.ಎಚ್.ಶಂಕರಮೂರ್ತಿ, ಶಿಕ್ಷಣ ಸಚಿವರು (ಕರ್ನಾಟಕ ಸರ್ಕಾರ)

೬. ಶ್ರೀ ಕೃಷ್ಣಯ್ಯ ಶೆಟ್ಟಿ, ಶಾಸಕರು, ಮಾಲೂರು

ಮಾಜಿ ಮಹಿಳಾ ಮಂತ್ರಿಗಳು

೧. ಶ್ರೀಮತಿ ಪ್ರಭಾವತಿ ಅಗರವಾಲ್ (ಬಿಹಾರ)

೨. ಶ್ರೀಮತಿ ಯಸೋಧರಾ ಬಜಾಜ್ (ಮಹಾರಾಷ್ಟ್ರ)

೩. ಶ್ರೀಮತಿ ನಾಗಮ್ಮ ಕೇಶವ ಮೂರ್ತಿ (ಕರ್ನಾಟಕ)

ಕರ್ನಾಟಕ ಮಾಜಿ ಡೆಪ್ಯೂಟಿ ಸ್ಪೀಕರ್ (Deputy chairman)

೧. ಶ್ರೀಮತಿ ನಾಗಮ್ಮ ಕೇಶವ ಮೂರ್ತಿ, Deputy speaker

೨. ಶ್ರೀ ಪುಟ್ಟು ಗೋಪಾಲ ಕೃಷ್ಣ ಶ್ರೇಷ್ಠಿ Deputy chairman.

ಮೈಸೂರು ಮಹಾರಾಜರ ಕಾಲದಲ್ಲಿ Representative ಅಸೆಂಬ್ಲಿಯಲ್ಲಿ ೩೦ ಜನ ಚುನಾಯಿತ ಆರ್ಯವೈಶ್ಯ ಸದಸ್ಯರಿದ್ದರು.

ಅಭಿಯಂತರರು (ಇಂಜಿನಿಯರ್)

ಮೈಸೂರಿನ ಅಭಿಯಂತರರಾಗಿದ್ದ ಶ್ರೀ ಎಸ್.ವಿ.ಶೆಟ್ಟಿಯವರು ವಿಮಾನ ತಯಾರಿಸಿ, ಮಹಾರಾಜರಿಗೆ ತೋರಿಸಿ, ಆಕಾಶದಲ್ಲಿ ಹಾರಾಡಿಸಿ ಭೂಮಿಗೆ ಸುರಕ್ಷಿತವಾಗಿ ತಂದಿಳಿಸಿದ ಪೈಲಟ್, ಭಾರತದಲ್ಲಿಯೇ ಇವರು ಮೊದಲನೆಯವರು.

ಮಾಜಿ ಉಪ ಕುಲಪತಿಗಳು

೧. ಡಾ.ಜೆ.ಲಕ್ಷ್ಮೀನಾಯಣ ಶ್ರೇಷ್ಠಿ, ಜಿ.ಎನ್.ಟಿ. ವಿಶ್ವವಿದ್ಯಾಲಯ

೨. ಡಾ.ಕೆ.ವೆಂಕಟರಾಮಯ್ಯ ಕಾಕತೀಯ ವಿಶ್ವವಿದ್ಯಾಲಯ ಇವರು ಕೇಂದ್ರ ಲೋಕ ಸೇವಾ ಆಯೋಗದ (U.P.S.C) ದೆಹಲಿ, ಸದಸ್ಯರೂ ಆಗಿದ್ದರು.

ಯಜ್ಞಾದಿಗಳು ಹಾಗೂ ಆಶ್ರಮ ಸ್ಥಾಪಕರು

೧. ಶ್ರೀ ಆತ್ಮಕೂರು ಲಕ್ಷ್ಮೀನರಸಿಂಹ ಸೋಮಯಾಜಲುರವರು ನ್ಯಾಯಾದೀಶರಾಗಿ ಆಡಳಿತ ವಿಭಾಗಗಳಲ್ಲಿ ಪ್ರತಿಷ್ಠಿತ ಸೇವೆ ಸಲ್ಲಿಸಿ, ಕೀರ್ತಿ ಪಡೆದರಲ್ಲದೇ ಯಜ್ಞಗಳನ್ನು ನಡೆಸಿ 'ಸೋಮಯಾಜಿ' ಗಳಾದರು.

೨. ಶ್ರೀ ಮಾಮಿಡಿ ವೆಂಕಟಾರ್ಯರವರು ಜನರ ಹಕ್ಕು ಬಾದ್ಯತೆಗಳನ್ನು ಲಂಡನ್ನಿನ ಪ್ರೀ ದಿಕೌನ್ಸಿಲ್‌ವರೆಗೂ ಹೋಗಿ ಮಂಡಿಸಿ ಪ್ರತಿಪಾದಿಸಿರುತ್ತಾರೆ.

೩. ಶ್ರೀ ಶ್ರೀ ಶ್ರೀ ವಿದ್ಯಾಪ್ರಕಾಶನಂದಗಿರಿ ಸ್ವಾಮಿಯವರು ಶ್ರೀ ಕಾಳಹಸ್ತಿಯಲ್ಲಿ ಆಶ್ರಮವನ್ನು ಸ್ಥಾಪಿಸಿ, ನೂರಾರು ಗೀತಾ ಯಜ್ಞಗಳನ್ನು ನಡೆಸಿರುತ್ತಾರೆ.

೪. ಶ್ರೀ ಶ್ರೀ ಶ್ರಿ ಕೃಷ್ಣಾನಂದಗಿರಿ ಸ್ವಾಮಿಯವರು ಕೋಲಾರ ಜಿಲ್ಲೆಯ ಮುಳಬಾಗಿಲು ಬಳಿ ಇರುವ ಅಗರಂನಲ್ಲಿ ಶ್ರೀನಿವಾಸಾಶ್ರಮವನ್ನು ಸ್ಥಾಪಿಸಿ ಸತತ ರಾಮನಾಮಸಪ್ತಾಹಗಳನ್ನು ನಡೆಸಿರುತ್ತಾರೆ. ಅವರ ಉತ್ತರಾಧಿಕಾರಿಗಳಾದ ಶ್ರೀ ಶ್ರೀ ಶ್ರೀ ವೇಣ್ವಾನಂದಗಿರಿ ಸ್ವಾಮಿಯವರು ಸಹ ಅಧ್ಯಾತ್ಮಿಕ ಹಾಗೂ ಗೀತಾ ಪ್ರವಚನ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ.

ನ್ಯಾಯಾಧೀಶರುಗಳು

೧. ಶ್ರೀರಂಗನಾಥಂ ಶ್ರೇಷ್ಠಿ   ೨. ಶ್ರೀ ಪಿ. ರಾಮುಲು   ೩. ವೈ.ವೆಂಕಟೇಶ್ವರಲು

೪. ಶ್ರೀ ನೀಲಾದ್ರಿರಾವ್‌ರವರು ಆಂಧ್ರ ಪ್ರದೇಶದ ನ್ಯಾಯಾಧೀಶರಾಗಿದ್ದರು.

೫. ಶ್ರೀ ಆರ್.ವಿ.ರವೀಂದ್ರರವರು ಕರ್ನಾಟಕದ ಉಚ್ಚ ನ್ಯಾಯಾಧೀಶರಾಗಿದ್ದರು.

೬. ಶ್ರೀಮತಿ ಮಂಜುಳಾ ಚೆಲ್ಲೂರ್‌ರವರು ಕರ್ನಾಟಕದ ಪ್ರಥಮ ಮಹಿಳಾ ನ್ಯಾಯಾಧೀಶರಾಗಿದ್ದರು.

೭. ವೆಂಕಟ ಸುಬ್ಬರಾವ್‌ರವರು ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿದ್ದರು. ಹೈದರಾಬಾದಿನ ನಿಜಾಮರು "ಬೇರಾರ್" ರಾಜ್ಯದ ಪ್ರತಿನಿಧಿ(ಏಜೆಂಟ್)ಯನ್ನಾಗಿ ನೇಮಿಸಿದ್ದರು.

೮. ಆರ್.ಕೃಷ್ಣಶ್ರೇಷ್ಠಿಯವರು ಕರ್ನಾಟಕ ಟ್ರಿಬ್ಯೂನಲ್‌ನ ಛೇರ್ಮನ್‌ರಾಗಿದ್ದರು.

೯. ಪಿ.ವಸಂತ ಶ್ರೇಷ್ಠಿಯವರು ಕರ್ನಾಟಕ ಟ್ರಿಬ್ಯೂನಲ್‌ನ ಸದಸ್ಯರಾಗಿದ್ದರು

೧೦. ಕೆ.ಆರ್.ಕೃಷ್ಣಶ್ರೇಷ್ಠಿಯವರು ಕಲ್ಕತ್ತಾ ಆದಾಯ ತೆರಿಗೆ ಅಪಲೇಟ್ ಹಾಗೂ ನಾಗ್ಪುರದ ಜೀವ ವಿಮಾ ನಿಗಮದ ಅಪಲೇಟ್ ಟ್ರಿಬ್ಯೂಲನ ಸದಸ್ಯರಾಗಿದ್ದರು.

ಭಾರತ ಸರ್ಕಾರದಿಂದ "ಪದ್ಮಶ್ರೀ" ಬಿರುದಾಂಕಿತರು

೧. ಬೆಂಗಳೂರಿನ ವೈಶ್ಯ ಬ್ಯಾಂಕ್‌ನ ಚೇರ್ಮನ್‌ರಾಗಿದ್ದ ಶ್ರೀ ರಮೇಶ್‌ಗೆಲ್ಲಿಯವರು

೨. ಆಂಧ್ರ ಪ್ರದೇಶದ ನರಸಾಪುರದ ಶ್ರೀ ಎ.ಎಸ್.ಚೆಟ್ಟಿಯವರು

(ಶ್ರೀ ಎನ್.ಜಿ.ಕೃಷ್ಣಯ್ಯ ಶ್ರೇಷ್ಠಿ, ಆರ್ಯ ವೈಶ್ಯ ಮಾರ್ಗದರ್ಶಿ, ೨೦೦೩, ಪು. ೨೨೨)

ಕೊನೆ ಟಿಪ್ಪಣಿ

೧. ರಾ.ಲಾ.ಪುರುಷೋತ್ತಮ, ೨೦೦೮, ಪು. ೭೪

೨. ಟಿ.ಕಾ.ವೆಂಕಟಾಚಲ ಗುಪ್ತ, ೧೯೭೭, ಪು. ೧೩೨

೩. ಎನ್.ಜಿ.ಕೃಷ್ಣಯ್ಯ ಶ್ರೇಷ್ಠಿ, ೨೦೦೧, ಪು. ೧೨೮

೪. ರಾ.ಲ.ಪುರುಷೋತ್ತಮ, ೨೦೦೮, ಪು. ೯೬

೫. ಎನ್.ಜಿ.ಕೃಷ್ಣಯ್ಯ ಶ್ರೇಷ್ಠಿ, (ಸಂ) ೨೦೦೧, ಪು. ೨೨೩

೬. ಆರ್ಯ ವೈಶ್ಯ ಮಾರ್ಗದರ್ಶಿ, ೨೦೦೧, ಪು. ೧೯೬

೭. ಆರ್ಯ ವೈಶ್ಯ ಮಾರ್ಗದರ್ಶಿ, ೨೦೦೧, ಪು. ೧೩೭

ಅಧ್ಯಾಯ ೩

ಸಾಮಾಜಿಕ ಬದುಕು

೩.೧. ಕುಟುಂಬ ಪದ್ಧತಿ

೩.೨. ಒಳಪಂಗಡಗಳು

೩.೩. ಆರ್ಥಿಕತೆ

೩.೪. ಮನೆಗಳ ರಚನೆ

೩.೫. ನ್ಯಾಯ ಪದ್ಧತಿ

೩.೬. ಆಹಾರ ಪದ್ಧತಿ

೩.೭. ಉಡುಗೆ-ತೊಡುಗೆ

ಅಧ್ಯಾಯ ೩

ಸಾಮಾಜಿಕ ಬದುಕು

ಸಾಮಾನ್ಯವಾಗಿ ಬೇಕಾದ ಎಲ್ಲ ವ್ಯವಸ್ಥೆ ಇರುವ ಮನೆಗಳಲ್ಲಿಯೇ ವೈಶ್ಯರು ವಾಸಿಸುವುದನ್ನು ಕಾಣುತ್ತೇವೆ. ವ್ಯಾಪಾರ ಮಾಡುವವರು ಮತ್ತು ಸರ್ಕಾರಿ ನೌಕರರು ಗುಣಮಟ್ಟದ ಮನೆಗಳಲ್ಲಿ ಆಧುನಿಕ ರೀತಿಯಲ್ಲಿ ವಾಸಿಸುತ್ತಾರೆ. ವ್ಯವಸಾಯ ಅವಲಂಬಿಸಿದ ವೈಶ್ಯರು ಮತ್ತು ಕೂಲಿಗಾಗಿ ದುಡಿಯುವವರು ಸಾಮಾನ್ಯ ರೀತಿಯಲ್ಲಿ ವಾಸ ಮಾಡುತ್ತಿದ್ದಾರೆ.

ವೈಶ್ಯರ ಉಡುಪುಗಳು ಸಾಮಾನ್ಯವಾಗಿ ಇರುತ್ತವೆ. ಇವರಲ್ಲಿ ಯಾವುದೇ ರೀತಿಯಾದಂತಹ ವಿಭಿನ್ನ ಉಡುಪುಗಳನ್ನು ಧರಿಸುವುದಿಲ್ಲ. ಆದರೆ ವೈಶ್ಯ ಜನಾಂಗದ ಸ್ತ್ರೀಯರು ಹೆಚ್ಚಿನ ಚಿನ್ನದ ಆಭರಣಗಳನ್ನು ಹಾಕಿಕೊಳ್ಳುತ್ತಾರೆ. ವೈಶ್ಯರು ಮದ್ಯ ಮತ್ತು ಮಾಂಸವನ್ನು ಉಪಯೋಗಿಸುವುದಿಲ್ಲ. ಕೇವಲ ಸಸ್ಯಹಾರಿ ಗಳಾಗಿದ್ದಾರೆ. ಇವರು ಬ್ರಾಹ್ಮಣರನ್ನು ಗುರುಗಳಾಗಿಯೂ ಮತ್ತು ಕೆಲವು ಮನೆಯ ಪೂಜೆ ಹಾಗೂ ವಿಧಿ ವಿಧಾನಗಳಿಗೆ ಬ್ರಾಹ್ಮಣರನ್ನು ಕರೆಯಿಸಿ ಅವರೊಂದಿಗೆ ಕಾರ್ಯಗಳನ್ನು ನೆರವೇರಿಸಿಕೊಂಡು ದಾನವನ್ನು ನೀಡುತ್ತಾರೆ. ವೈಶ್ಯರು ವ್ಯಾಪಾರ ಮಾಡುವುದಕ್ಕಾಗಿ ಊರಿಂದ ಊರಿಗೆ ವಲಸೆ ಹೋಗುತ್ತಾರೆ. ಕೆಲವು ಸಂದರ್ಭ ದಲ್ಲಿ ಅದೇ ಭಾಗಗಳಲ್ಲಿಯೂ ವಾಸಿಸುತ್ತಾರೆ. ವೈಶ್ಯರ ಕುಟುಂಬಗಳಲ್ಲಿ ವ್ಯಾಪಾರ ಮಾಡುವುದು, ಕಾಂಟ್ರಾಕ್ಟ್ ಮಾಡುವುದು, ಕೃಷಿ ಮಾಡುವುದು ಮತ್ತು ಕೆಲವು ಕುಟುಂಬಗಳಲ್ಲಿ ಸರ್ಕಾರಿ ನೌಕರರು ಕಂಡು ಬರುತ್ತಾರೆ.

ಇತ್ತೀಚಿನ ದಿನಗಳಲ್ಲಿ ವ್ಯಾಪಾರವನ್ನು ಎಲ್ಲ ಜನಾಂಗದವರೂ ಅಳವಡಿಸಿಕೊಂಡಿರುವುದರಿಂದ ಇವರು ಅನೇಕ ಕೆಲಸಗಳಲ್ಲಿ ತೊಡಗಿಕೊಂಡರು. ಇವುಗಳಿಂದ ಜೀವನ ಸಾಗಿಸಲಿಕ್ಕೆ ತೊಂದರೆಯಾದಾಗ ಉಪ ಕಸುಬುಗಳಾಗಿ ವ್ಯವಸಾಯ ಮಾಡಲು ತೊಡಗಿದರು. ಇವರ ಆರ್ಥಿಕ ಜೀವನ ಒಂದು ಸುಧಾರಿತ ಸ್ಥಿತಿಯಲ್ಲಿ ಕಂಡು ಬರುತ್ತದೆ. ಉಡುಗೆ, ತೊಡುಗೆ ಜೀವನ ವಿಧಾನದಲ್ಲಿ ಬೇರೆ ಸಮೂಹಗಳಿಗಿಂತ ಭಿನ್ನವಾಗಿಲ್ಲ. ಇವರು ಸಂಪೂರ್ಣವಾಗಿ ಸಸ್ಯಹಾರಿಗಳು, ಮದ್ಯವನ್ನು ಸೇವಿಸುವುದಿಲ್ಲ.

ಇವರು ಉನ್ನತ ಮಟ್ಟದ ಸಭೆ ಸಮಾರಂಭಗಳಲ್ಲಿ ಭಾಗಿಯಾಗುತ್ತಿದ್ದರು. ವೈಶ್ಯರು ಶಕ್ತಿ ದೇವತೆ ಶ್ರೀ ವಾಸವಿ ಕನ್ನಿಕಾಪರಮೇಶ್ವರಿಯ ಆರಾಧಕರು. ಜೊತೆಗೆ ಮನೆ ದೇವರಾಗಿ ನಗರೇಶ್ವರ, ವೆಂಕಟೇಶ್ವರ ಮತ್ತು ಕುಟುಂಬಗಳಿಗೆ ಬೇಕಾದ ದೇವರುಗಳನ್ನು ಇವರು ಆರಾಧಿಸುತ್ತಾರೆ.

೩.೧. ಕುಟುಂಬ ಪದ್ಧತಿ

ವೈಶ್ಯರಲ್ಲಿ ವಿಭಕ್ತ ಕುಟುಂಬ ಮತ್ತು ಅವಿಭಕ್ತ ಕುಟುಂಬ ಎಂಬ ಎರಡು ಪ್ರಭೇದಗಳಿದ್ದರೂ, ವಿಭಕ್ತ ಕುಟುಂಬಗಳೇ ಹೆಚ್ಚು ಅವಿಭಕ್ತ ಕುಟುಂಬದಲ್ಲಿ ಯಜಮಾನ ವಯಸ್ಸಾಗಿರುವಂತಹ ಸಂದರ್ಭದಲ್ಲಿ ಅಣ್ಣನಾದವನೇ ಮನೆಯ ಯಜಮಾನನಾಗಿರುತ್ತಾನೆ. ಮದುವೆ, ಹಬ್ಬ ಇತ್ಯಾದಿ ಆಚರಣೆಗಳು ಇವರ ಒಪ್ಪಿಗೆ ಮೇರೆಗೆ ನಡೆಯುತ್ತವೆ. ಮನೆಯಲ್ಲಿ ನಡೆಯುವ ಒಳಜಗಳಗಳು ಇವರ ಮೂಲಕ ಪರಿಹಾರ ಗೊಳ್ಳುತ್ತವೆ.

ವಿಭಕ್ತ ಕುಟುಂಬದಲ್ಲಿ ಪತಿ, ಪತ್ನಿ ಮತ್ತು ಮಕ್ಕಳು ಸೇರಿರುತ್ತಾರೆ. ಇಲ್ಲ ತಂದೆ ಪ್ರಧಾನ ವ್ಯಕ್ತಿ ಯಾಗಿರುತ್ತಾನೆ. ವೃದ್ಧರಿಗೆ ಮನೆಯ ಅಧಿಕಾರವಿರುವುಲ್ಲ. ತನ್ನ ಮಕ್ಕಳು ಮದುವೆಯಾಗುವವರೆಗೆ ಅವನ ಜೊತೆ ಇದ್ದು ನಂತರ ಅವರಿಗೆ ಬಂದ ಆಸ್ತಿಯ ಭಾಗದಲ್ಲಿ ಸುಖವಾಗಿ ಬದುಕುತ್ತಾರೆ. ಈ ಕಾರಣದಿಂದ ಗಂಡು ಮಕ್ಕಳಿಗೆ ಮದುವೆ ಪ್ರಧಾನ ಘಟ್ಟ. ಈ ಕುಟುಂಬದಲ್ಲಿ ತಂದೆ ಪ್ರಧಾನ ರಕ್ಷಕನಾಗಿ ಕೆಲಸ ನಿರ್ವಹಿಸುತ್ತಾನೆ. ಇವರಲ್ಲಿ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ಇದ್ದು, ಮದುವೆ ಸಮಾರಂಭಗಳಲ್ಲಿ ಗೋತ್ರ(ಬಳ್ಳಿ)ವನ್ನು ಕುಟುಂಬದ ತಂದೆಯಿಂದಲೇ ಗುರುತಿಸಿಕೊಳ್ಳುತ್ತಾರೆ. ಮಕ್ಕಳ ಮೇಲೆ ತಂದೆಗೆ ಹಿಡಿತವಿರುತ್ತದೆ. ಆಸ್ತಿಯ ಸಂಪೂರ್ಣ ಹಕ್ಕು ತಂದೆಯಿಂದ ಮಗನಿಗೆ ವರ್ಗಾವಣೆಯಾಗುತ್ತದೆ. ಇವರಲ್ಲಿ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಬಹಳ ಕಡಿಮೆಯಾಗಿ ಕಂಡು ಬರುತ್ತದೆ. ಹೆಚ್ಚಾಗಿ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯೇ ಹೆಚ್ಚು.

ವೈಶ್ಯ ಜನಾಂಗದಲ್ಲಿ (ಕುಟುಂಬದಲ್ಲಿ) ತಂದೆಯ ಕಡೆ ರಕ್ತ ಸಂಬಂಧಗಳಿಗೆ ಹೆಚ್ಚಿನ ಮಹತ್ವ ಇರುತ್ತದೆ. ತಂದೆಯ ತಂದೆ, ತಾಯಿ, ಅಜ್ಜಿಯರೆಂದು ಕರೆಯಿಸಿಕೊಳ್ಳುತ್ತಾರೆ. ಮೊಮ್ಮಕ್ಕಳಿಗೆ ಅಜ್ಜ -ಅಜ್ಜಿಯರೆಂದರೆ ಬಹಳ ಪ್ರೀತಿ ಹಾಗೆಯೇ ಅಜ್ಜ-ಅಜ್ಜಿಯರೂ ಮೊಮ್ಮಕ್ಕಳನ್ನು ವಿಶೇಷ ಮಮತೆಯಿಂದ ಬೆಳೆಸುತ್ತಾರೆ. ಕೆಲವು ವಿಶೇಷ ಹಬ್ಬ ಮತ್ತು ಸಮಾರಂಭದ ದಿನಗಳಲ್ಲಿ ಮಕ್ಕಳ ಮಕ್ಕಳನ್ನು ಕರೆಯಿಸಿ ಹೊಸ ಬಟ್ಟೆ ಮತ್ತು ಹಣವನ್ನು ಕೊಡುತ್ತಾರೆ.

ವೈಶ್ಯ ಸಮುದಾಯದವರು ಶ್ರೀ ವಾಸವಿ ಕನ್ನಿಕಾಪರಮೇಶ್ವರಿ, ಊರಮ್ಮ, ವೆಂಕಟೇಶ್ವರ, ವೀರಭದ್ರೇಶ್ವರ, ಆಂಜನೇಯ, ಬಸವೇಶ್ವರ, ದೇವ-ದೇವತೆಗಳಿಗೆ ಹರಕೆಯನ್ನು ಒಪ್ಪಿಸುತ್ತಾರೆ. ತಮ್ಮ ತಮ್ಮಲ್ಲಿ ಜಗಳಗಳುಂಟಾದಾಗ ಆ ಸಮುದಾಯದ ಮುಖ್ಯಸ್ಥರಿಂದ ನ್ಯಾಯ ಬಗೆಹರಿಸಿಕೊಳ್ಳುತ್ತಾರೆ. ಬೇರೆ ಸಮುದಾಯ (ಜಾತಿ)ಯ ಜನರೊಂದಿಗೆ ಜಗಳ ಅಥವಾ ಕಲಹಗಳಾದರೆ ಊರ ಮುಖಂಡರಿಂದ ನ್ಯಾಯವನ್ನು ಬಗೆಹರಿಸಿ ಕೊಳ್ಳುತ್ತಾರೆ.

೩.೨. ಒಳಪಂಗಡಗಳು

ಶೆಟ್ಟಿ ಅಥವಾ ಕೋಮಟಿಗಳೆಂದು ಪರಿಚಿತರಾಗಿರುವ ವೈಶ್ಯರು ತುಪ್ಪದ ಕೋಮಟಿ ಮತ್ತು ಎಣ್ಣೆ ಕೋಮಟಿಗಳೆಂದು ಎರಡು ಉಪ ಪಂಗಡಗಳನ್ನು ಹೊಂದಿದ್ದಾರೆ. ಅಯ್ಯರ್ ೧೯೩೦ರಲ್ಲಿ ಬರೆಯುವಂತೆ ಕೋಮಟಿಗಳು ತಾವು ಪ್ರಾಚೀನ ವೈಶ್ಯ ಪಂಗಡದ ಪ್ರತಿನಿಧಿಗಳು ಎಂದು ಹೇಳುತ್ತಾರೆ. ವೈಶ್ಯರು ಸಾಮಾನ್ಯವಾಗಿ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ಇವರಲ್ಲಿ ೭೧೪ ಗೋತ್ರದವರು ಕಂಡು ಬರುತ್ತಾರೆ. ಆದರೆ ಇದರಲ್ಲಿ ೬೧೨ ಗೋತ್ರದವರು ಬೇರೆ ಬೇರೆ ಕಾರಣದಿಂದಾಗಿ ಬೇರೆ ಬೇರೆ ಬಣಗಳಿಗೆ ಸೇರಿದ್ದಾರೆ. ೧೦೨ ಗೋತ್ರದವರು ಮಾತ್ರ ವೈಶ್ಯ ಸಮುದಾಯದಲ್ಲಿ ಕಂಡು ಬರುತ್ತಾರೆ. ಇವರಲ್ಲಿ ಋಷಿಗಳ ಹೆಸರಿನಲ್ಲಿ ೧೦೨ ಕ್ಕೂ ಹೆಚ್ಚಿನ ಗೋತ್ರಗಳು ಕಂಡು ಬರುತ್ತವೆ.

ವೈಶ್ಯರ ಗೋತ್ರಗಳು

ಸಂ.	ಋಷಿ ಗೋತ್ರ	ಸಂಕೇತನಾಮಗಳು	ದಾನ	ವರ್ಜಿತ	ಅಗ್ನಿಪ್ರವೇಶ ಮಾಡಿದ ದಂಪತಿಗಳು
೧.	ಅಗಸ್ತ್ಯಗೋತ್ರ	ಅನಪಕುಲ, ಅನಪಾಲಕುಲ, ಅನುಪಕುಲ, ಅನುಪಾಲ	ಎಮ್ಮೆ	ಅವರೆ	ಚಂದ್ರಲೇಖ, ಶೃಂಗಾಖ್ಯ ಶ್ರೇಷ್ಠಿ
೨.	ಆತ್ರೇಯಸ	ಅರಿಶಿಷ್ಟಕುಲ, ಅರಸುಕುಲ ಅರಿಶೆಟ್ಟಿಕುಲ ಎಲಿಶಿಷ್ಟಕುಲ, ಯರಶಿಷ್ಟಕುಲ, ಹರಿಶಿಷ್ಟಕುಲ	ಶಕಟ	ಕೆಂಪುಕಾವಲಿ	ರಾಚಮುಖಿ, ರಾಜಶ್ರೇಷ್ಠಿ
೩.	ಅಚ್ಛಾಯನ	ಅಗ್ರಮೂಲಕುಲ, ಅರ್ಘ್ಯಮೂಲ, ಅರ್ಘ್ಯಮೂಲಕುಲ, ಅಮಲಕುಲ	ಐರಾವತ	ಅತ್ತಿಹಣ್ಣು	
೪.	ಉಗ್ರಸೇನ	ಕುಮಾರಶಿಷ್ಟ, ಕುಮರಿಶಿಷ್ಟ, ಕೊಮರಶಿಷ್ಟಕುಲ	ಅನ್ನದಾನ	ಮೆಹಂದಿ	ಅಲಕಾಂಬ, ಪಾರ್ಥಿವ ಶ್ರೇಷ್ಠಿ
೫.	ಉತ್ಪಪ್ಷಸ	ಕನ್ಯಕುಲ, ಕಾನುಕುಲ, ಕ್ರಾನುಕುಲ, ಕ್ರಾನು	ಐರಾವತ	ಹೊಂಗೆಮರ	ಕಮಲಾಕ್ಷಿ, ಸಮ್ಮದ ಶ್ರೇಷ್ಠಿ
೬.	ಉತ್ತಮೌಜಸ	ಉತಕುಲ, ಉತಕಾಲಕುಲ, ಉತಶಿಷ್ಟಕುಲ, ಉತ್ತಮಕುಲ ಜಲ	ಉತ್ತರೇಣ	ಧರ್ಮಾಂಭ,	ಉತ್ತಮ ಶ್ರೇಷ್ಠಿ
೭.	ಋಷ್ಯಶೃಂಗಸ	ಅನಂತಕುಲ	ಭೂಮಿ	ಅಲಸಂದಿ	ಅನುಮಿತ್ರ, ಅನಂತ ಶ್ರೇಷ್ಠಿ
೮.	ಔಬಿಧ್ಯಸ	ಯನಸಕುಲ, ಯಾನಸಕುಲ, ಯಾನಸಖಿಕುಲ, ಯಾನಶಖಿಕುಲ	ಧನ	ಗೋಧಿ	ನೀಲವೇಣಿ, ಭಾಸುರ ಶ್ರೇಷ್ಠಿ
೯.	ಕಣ್ವ ಋಷಿ	ಕರ್ಣಕುಲ, ಕರ್ಣಾವಕುಲ, ಕಾಟಿಕುಲ, ಕಾಟುಕುಲ, ಕೋಟಿಕುಲ	ಒಂಟೆ	ಬಿಳಿತೊಗರಿ	ಸಮದರ್ಶಿನಿ, ಸೋಮದ ಶ್ರೇಷ್ಠಿ
೧೦.	ಕಂದರ್ಪಸ	ಚಿರಕುಲ, ಚೀಗೊಡ್ಡಕುಲ, ಚೀಗೊಳ್ಳಕುಲ, ಮನಕುಲ ಶ್ರೇಷ್ಟ ಕುಂಡಲಕುಲ, ಶಮನಕುಲ	ದಾಶಿ	ಸುಗಂದ	ಅಮೃತಭಾಷಿಣಿ, ಗೌತಮ ಶ್ರೇಷ್ಠಿ

೧೧.	ಕಪಿಲಸ	ಮಂಡು, ಮಂದಕುಲ, ಹಸ್ತಕುಲ	ಧೇನು	ಮಾವಿನಕಾಯಿ	ಕಂಬುಕಂಠಿ, ಕಪಿಲಶ್ರೇಷ್ಠಿ
೧೨.	ಕಪೀತಸ	ವೆಂಕಾಲ, ವೆಂಕೋಲ	ರತ್ನ	ಬದನೆಕಾಯಿ	ಕುಮುದವಲ್ಲಿ, ಸುದರ್ಶನ ಶ್ರೇಷ್ಠಿ
೧೩.	ಕಾಶ್ಯಪಸ	ಗಣಮುಖಿಕುಲ, ಗಣಮುಖಿಕುಲ	ಬಂಗಾರ	ಸುವರ್ಣಗಡ್ಡೆ	ಧನಲಕ್ಷ್ಮಿ, ಧನ ಶ್ರೇಷ್ಠಿ
೧೪.	ಕುತ್ಯಸ	ಇಷ್ವಾಕುಕುಲ	ಕನ್ಯಾದಾನ	ಕಪ್ಪು ಹುರುಳಿ	ಚಂಚಲಾಕ್ಷಿ, ಪಾವನ ಶ್ರೇಷ್ಠಿ
೧೫.	ಕೌಂಡಿನ್ಯಸ	ಘನಲೋಲ, ಘನಶ್ರೀಲ, ಘನಶೀಲಕುಲ	ತುಲಾಭಾರ	ತಿಪ್ಪಬೇರು	ಕಮಲ, ಗೌರಶ್ರೇಷ್ಠಿ
೧೬.	ಕೌಂತೇಯಸ	ಕಾಮಶಿಷ್ಟ, ಕೌಮಿಶೆಟ್ಲ	ಬಂಗಾರ	ಕರ್ಪೂರ	ಕುಂದವದನ, ಗೋವಿಂದ ಶ್ರೇಷ್ಠಿ
೧೭.	ಕೌಶಿಕಸ	ಕನಕಪಾಲ, ಕರಕಪಾಲ, ಕರಪಾಲ	ವಸ್ತ್ರ	ಎಕ್ಕದ ಹೂ	ಅರ್ಕಾಂಬ, ಮಲ್ಲಾಖ್ಯ ಶ್ರೇಷ್ಠಿ
೧೮.	ಕೃಷ್ಣಸ	ಧನಕುಲ, ಧನದಕುಲ, ಧೇನುಕುಲ	ಧನ	ಉತ್ತರೇಣಿ	ಶ್ಯಾಮಲಾ, ಕೃಷ್ಣಶ್ರೇಷ್ಠಿ
೧೯.	ಗಾರ್ಗ್ಯಜ್ಯಸ	ಪ್ರಹಿಣಿಕುಲ, ಪ್ರಹೀಣುಕುಲ, ಪೈಡಿಕುಲ	ಹಲಸಿನಹಣ್ಣು	ಹಾಗಲಕಾಯಿ	ಕಾಳಿದೇವಿ, ಕಾಲಕಂಠ ಶ್ರೇಷ್ಠಿ
೨೦.	ಗತ್ಸ್ನಮದಸ	ಇಸಪಕುಲ, ಇಷುಪಕುಲ, ಚನ್ನಕುಲ, ಜನಕುಲ, ಜಾನುಕುಲ	ಷೋಡಸ	ಇಂಗು	ಕಮಲ, ಗಜಸತ್ವ ಶ್ರೇಷ್ಠಿ
೨೧.	ಗೋಪಕಸ	ಇಂಚುಪಕುಲ, ಇಂಚುಪಾಹ್ವಯ, ಗೋಪಕುಲ, ಗೋಟಿಕುಲ, ಪೊಂಟಿಕುಲ	ಗೋದಾನ	ಅವರೆ	ಕೀರ್ತಿಕಾಂತ, ಉತ್ಪಲಾಕ್ಷ ಶ್ರೇಷ್ಠಿ
೨೨.	ಗೌತಮಸ	ಗಂಧಶೀಲ, ಗಂಧಸೀಲ, ಗ್ರಂಧಿಶೀಲ, ಗ್ರಂಧಿಸಿಲ, ಗ್ರಂಧಶೀಲಕುಲ	ತುಪ್ಪ	ದೇವಕಾಂಚನ	ಪುಷ್ಪ ಲೋಲಾಂಬ, ಲೋಕಾಹ್ವಯ ಶ್ರೇಷ್ಠಿ
೨೩.	ಚಕ್ರಪಾಣಿಸ	ಚಕ್ರಮೂಲಸಕುಲ, ಚಕ್ರಮೂಲಕುಲ, ಚಕ್ರಮಾಲಸ	ಛತ್ರಿ	ಚಕ್ರವರ್ತಿ	ಸೊಪ್ಪು ತನುಮಧ್ಯ, ಧೃತಸತ್ವ ಶ್ರೇಷ್ಠಿ
೨೪.	ಚಾಮರ್ಷಣಸ	ಪೆದ್ದಶ್ರೇಷ್ಠಿ, ಪೆದಿಶಿಷ್ಟ, ಬುಧಶಿಷ್ಟ, ಬುದ್ದಶಿಷ್ಟ	ಮಹಿಷ	ಹುಚ್ಚೆಸರು	ಹೇಮಾಂಗಿ, ಮತ್ಸ್ಯಧ್ವಜ ಶ್ರೇಷ್ಠಿ

೨೫.	ಜಡಭರತಸ	ಗುಂಡಕುಲ, ದೂರಶಿಷ್ಟ	ಕುಂಬಳಕಾಯಿ	ಬೇವಿನಹಣ್ಣು	ಮಣಿಮಂಜರಿ, ಆದಿತ್ಯ ಶ್ರೇಷ್ಠಿ
೨೬.	ಜತುಕರ್ಣಸ	ಚಂದ್ರಕುಲ, ಚಂದ್ರಶಿಷ್ಟ, ಚಂಧ್ರಮಶಿಷ್ಟ, ಚಂದ್ರಮೂಲ	ಕುದುರೆ	ಚಂದನ	ಬಾಲಾಮಣಿ
೨೭.	ಜಂಭಸೂದನ	ತ್ರಿಮೂಲಕುಲ	ದಾಶಿದಾನ	ಕರ್ಪೂರ	ಮೋಹನಾಂಗಿ, ಸುಂದರ್ ಶ್ರೇಷ್ಠಿ
೨೮.	ಜರತ್ಕಾರಸ	ಛನ್ನಕುಲ, ಜನ್ನಕುಲ, ಜ್ಯಾನಕುಲ, ಜಾನಕುಲ, ಜ್ಯಾನುಕುಲ	ಮದಿಸಿದ ಆನೆ	ಚೇಪೆ ಹಣ್ಣು	ಕಲಾವತಿ, ಚಂದ್ರಾಖ್ಯ ಶ್ರೇಷ್ಠಿ
೨೯.	ಜಾಬಾಲಿಸ	ಸುರಶಿಷ್ಟಕುಲ, ಸೂರಶಿಷ್ಟಕುಲ	ಬಂಗಾರ	ಅರಳಿ	ಎಲೆ ಪಾವನಿ, ಚಂದ್ರಮೌಳಿ ಶ್ರೇಷ್ಠಿ
೩೦.	ಜಾಬ್ರೀಯಸ	ಚನಶಿಷ್ಟ, ಚಪ್ಪನಿಶಕುಲ, ಚಿನಿಶೆಟ್ಟಿ, ಶಿನಿಚೆಟ್ಟಿ, ಚೆನ್ನಶಿಷ್ಟ	ಐರಾವತ	ಗೆಡ್ಡೆಗಳು	ಚಂದ್ರಕಲಾ, ಚಂದ್ರಮೌಳಿ ಶ್ರೇಷ್ಠಿ
೩೧.	ಜೀವಂತಿಸ	ಭೂಮಶಿಷ್ಟಕುಲ, ಭೂತಿಲಾಶಿಷ್ಟಕುಲ, ವೃದ್ಧಿಕುಲ	ಕನ್ಯಾದಾನ	ಗಜಲಿಂಬೆ	ಸೋಮಪ್ರಭ, ಸಿಂಹಧ್ವಜ ಶ್ರೇಷ್ಠಿ
೩೨.	ತರಣಿಸ	ತ್ರಿವಿಕ್ರಮಶಿಷ್ಟಕುಲ, ತ್ರಿವಿಕ್ರಮಕುಲ, ತ್ರಿವಿಕ್ರಮ ಶಿಷ್ಟಸ	ಕುದುರೆ	ಕುಂಬಳಕಾಯಿ	ಬಾಲಾಮಣಿ, ಜನಾರ್ಧನ ಶ್ರೇಷ್ಠಿ
೩೩.	ತಿತ್ತಿರಸ	ಭಮದಕುಲ, ಭ್ರಮದಕುಲ, ಭ್ರಮರಕುಲ	ವಸ್ತ್ರ	ಭತ್ತ	ಭೂಮಾಂಬ, ಬ್ರಹ್ಮ ಶ್ರೇಷ್ಠಿ
೩೪.	ತ್ರಿಜಟಸ	ಉಪರಕುಲ, ಉಶಿರಕುಲ	ಸ್ವರ್ಣ	ಪೂರ್ಣಫಲ	ಮಂಜುವಾಣಿ, ಸುಂದರ ಶ್ರೇಷ್ಠಿ
೩೫.	ತೈತ್ರೇಯಸ	ಚಿದ್ರೂಪಕುಲ, ಚಿದ್ರುಪೇಳ್ಯ, ಚಿದುರುಪೆಳ್ಳಿ	ಛತ್ರಿ	ಸೇವಂತಿಗೆ	ಸುದರ್ಶನಿ, ಪಾಲಾಖ್ಯ ಶ್ರೇಷ್ಠಿ
೩೬.	ದಾಲ್ಬ್ಯಸ	ಪಲಕಕುಲ, ಪಲಕಲಕುಲ, ಪಟನಕುಲ, ಪಟನಶಿಷ್ಯಕುಲ	ಫಲಗಳು	ಹಾಲುಹಣ್ಣು	ಪಲ್ಲವವಾಣಿ ವಲ್ಲಭ ಶ್ರೇಷ್ಠಿ
೩೭.	ದೂರ್ವಾಸಸ	ದಿದಶ, ದಿದಿನಕುಲ, ದೆಂತಾಕುಲ, ದೆಂತಾಕುಲ, ದೆದನಕುಲ	ಕನ್ಯಾದಾನ	ದಾಸವಾಳದ	ಹೂ ಚಿತ್ರರೇಖ, ಕುಶಲ ಶ್ರೇಷ್ಠಿ
೩೮.	ದೇವರಾತಸ	ಹಿರರಾಶಿಕುಲ, ಹರಿತ, ಹಿರಾಕುಲ, ಹೀರೇರಾಜು, ಹಿರಿಕಾತಕುಲ	ಧಾನ್ಯದಾನ	ಕೃಷ್ಣತುಳಸಿ	ಮಣಿಮಾಲ, ಘನಮುಖಿ ಶ್ರೇಷ್ಠಿ
೩೯.	ದೇವವಲ್ಕ್ಯಸ	ಉಸಿರಕುಲ, ದೇಸಿಷ್ಟಕುಲ	ಕಾಮಧೇನು	ದೇವದಾರು	ಬ್ರಮರಾಮಣಿ, ದಂತುನಾರ್ಮಾರ್ಯಲು

೪೦.	ನಾರದಸ	ಪಾಲಕುಲ, ಪಾಲಕಕುಲ, ಪಾಲಕ್ರಪಾಲಕುಲ	ಫಲ	ಮಾದಿಫಲ	ಹೇಮರೇಖ, ಸ್ವರ್ಣರಥ ಶ್ರೇಷ್ಠಿ
೪೧.	ನೇತ್ರಪಾದಸ	ಚಂದೋಗುಕುಲ, ಛಂದೋಗುಕುಲ, ಚಂದೋಗು, ಚೆಂದೋಗಾಲ	ಗೃಹದಾನ	ಬಿಳಿಕಬ್ಬು	ಸುಬೋಧಿನಿ, ಸಿಂಹಸೇನ ಶ್ರೇಷ್ಠಿ
೪೨.	ಪರಸ್ಪರಾಯಣ್ಯಸ	ತುನ್ನಿನಿಷ್ಪಕುಲ, ಪೌಲಸ್ತ್ಯಕುಲ, ಶ್ರೀಪುಂಶಿಕಕುಲ	ಸ್ವರ್ಣ	ಹಾಲುಹಣ್ಣು	ಧನದಾಂಬ, ಮೂಲಾಖ್ಯ ಶ್ರೇಷ್ಠಿ
೪೩	ಪಲ್ಲವಸ	ಗಣಪಕುಲ, ಪಂಟಕುಲ, ಘಂಟಾಶುಲಕುಲ, ಘಂಟಿಸಕುಲ, ಘಂಟಸ್ಥೂಲಕುಲ	ಬಂಗಾರ	ಬಾಳೆಹಣ್ಣು	ನೀಲಾಂಬ, ನಂದಾಖ್ಯ ಶ್ರೇಷ್ಠಿ
೪೪.	ಪವಿತ್ರಪಾಣಿಸ	ದಯಾಶಿಷ್ಪಕುಲ, ದಶಿಷ್ಪಕುಲ, ದೈಶೆಟ್ಟಕುಲ, ದೇಶೆಟ್ಟಕುಲ, ದೇಶಿಷ್ಪಕುಲ, ದೈಶಿಷ್ಪಕುಲ,	ಕಾಮಧೇನು	ಹಾಲುಹಣ್ಣು	ಧನಲಕ್ಷ್ಮೀ, ಧನದ ಶ್ರೇಷ್ಠಿ
೪೫.	ಪಾರಾಶರ್ಯಸ	ಕಾಮಧೇನುಕುಲ, ಪಡಗಶಿಲ, ಪಾಂಬಾಳಕುಲ, ಪ್ರಾಣಸುಲಕುಲ, ಪ್ರಾಣಶೀಲಕುಲ, ಪ್ರಾಗ್ಯಬಲಕುಲ, ಪೌಢಶೀಲಕುಲ, ಪಾಪಾಲ, ಪಾಂಚಾಲಕುಲ	ಫಲಗಳು	ಕರ್ಪೂರ	ಪಲ್ಲವಾಂಬ, ಪಾಲಾಹ್ವಯ ಶ್ರೇಷ್ಠಿ
೪೬.	ಪಿಂಗಳಸ	ಅಯನಕುಲ, ಪಿನಕುಲ, ಆಯಸಕುಲ	ಷೋಡಶ	ಚತೋತಸೊಪ್ಪು	ಪೋತಾಂಬ, ಭೋಗಾಖ್ಯ ಶ್ರೇಷ್ಠಿ
೪೭.	ಪುಂಡರೀಕಸ	ಅನುಶಿಷ್ಪಕುಲ, ಕ್ರಾಮುಕುಲ, ತೊಂಟಕುಲ	ರತ್ನದಾನ	ಮಲ್ಲಿಗೆ ಹೂ	ಕನಕಾಂಗಿ, ಕುಮುದ ಶ್ರೇಷ್ಠಿ
೪೮.	ಪೂತಿಮಾಷಸ	ತುರ್ರ್ಯಾಟಕುಲ,ತುಲಾಶಿಷ್ಪಕುಲ	ಷೋಡಶದಾನ	ದಂಟಿನ	ಚಂದ್ರಮುಖಿ, ಪಾಲಾಖ್ಯ ಶ್ರೇಷ್ಠಿ
೪೯.	ಪೌಂಡ್ರಕಸ	ಪುಂಸಿಮಾಂಶಕುಲ, ಪುಂಸಿಮಾಸಕುಲ, ಪ್ರೊಲಿಶಿಷ್ಪಕುಲ, ಪ್ರೋಲಿಕುಲ, ಪ್ರೋಲೇಖಕುಲ	ಪಲ್ಲಕ್ಕಿ	ಗೋಡಂಬಿ	ಪುಷ್ಪಾಂಬ, ಭುವನ ಶ್ರೇಷ್ಠಿ

೫೦.	ಪೌಲಶ್ಯ	ಗೋಶಿಲ, ಉತ್ತಮಗೋಶಿಲ, ಪಲ್ಲವಗೋಶಿಲ, ಪಟುಗೋಶಿಲ, ಶ್ರೀಗೋಶಿಲ, ಭೀಮಗೋಶಿಲ, ಸತ್ಯಗೋಶಿಲ, ಪುನರಶೀಲ, ನಂದಿಗೋಶಿಲ, ಪುನರ್ಗೋಶಿಲ, ಪುನರ್ಗೋಶೀಲ, ಸುರ್ಯಕುಲ, ಶ್ರೀಪುಂಸಕುಲ, ಪಟ್ಟುಗೋಶಿಲ, ಪುನಗೋಶಿಲ	ತಿಲದಾನ	ಬೆಲ್ಲದ ವಸ್ತ್ರ	ರುಕ್ಮವತಿ, ಪಾವನ ಶ್ರೇಷ್ಠಿ
೫೧.	ಪ್ರಾಚೀನಸ	ವಸಿಷ್ಟಕುಲ, ವನಶಿಷ್ಟಕುಲ, ವೆಲಿಶಿಷ್ಟಕುಲ	ರತ್ನಗಳು	ತಿಕ್ತಿಶಾಖಾ	ಚಿತ್ರಾಂಗಿ, ವಿನ್ನವರೇಣ್ಯ ಶ್ರೇಷ್ಠಿ
೫೨.	ಪ್ರಭಾತಸ	ಉದ್ವಾಹಕುಲ, ಪೆಳ್ಳಿಕುಲ, ಪೆಂಡ್ಲಿಕುಲ, ರವಿ ಶಿಷ್ಟಕುಲ	ಮುತ್ತು	ಕುಸುಮಧಾನ್ಯ	ಕುಸುಮಾಂಬ, ಕುಸುಮ ಶ್ರೇಷ್ಠಿ
೫೩.	ಬೃಹದಶ್ವಸ	ಫೇರುಶಿಷ್ಟಕುಲ, ಫೇರಿಶಿಷ್ಟಕುಲ, ಪೈರುಶಿಷ್ಟಕುಲ	ಮುತ್ತು	ಮೇಕೆ ಹಾಲು	ಬಿಂಬಾದರಿ, ಪೀನವಷ ಶ್ರೇಷ್ಠಿ
೫೪.	ಬೋದಾಯನಸ	ಬುದ್ದಿಕುಲ, ಬುದ್ಧಕುಲ, ಬುಧನಕುಲ	ಗೋವು	ನಿಂಬೆಹಣ್ಣು	ಇಭಯಾನ್, ನಾಗಾಖ್ಯ ಶ್ರೇಷ್ಠಿ
೫೫.	ಭಾರದ್ವಾಜಸ	ಬಲಶೆಟ್ಟಿ, ಬಲಿಶಿಷ್ಟ, ಬಲಶ್ರೇಷ್ಠ	ಭತ್ತ	ಮೆಂತೆಸೊಪ್ಪು	ಪಲ್ಲವಾಂಬ, ಭೋಗಾಖ್ಯ ಶ್ರೇಷ್ಠಿ
೫೬.	ಭಾರ್ಗವಸ	ಪೃಥಿವಿ ಶಿಷ್ಟ, ಪೃಥ್ವಿ, ಶ್ರೇಷ್ಠ	ಭೂಮಿ	ನೇರಳೆ	ಪೃಥ್ವಿದೇವಿ, ಪೃಥುನಾಮ ಶ್ರೇಷ್ಠಿ
೫೭.	ಮಂದಪಾಲಸ	ವಿನ್ನಕುಲ, ವೀನಕುಲ, ವೆನ್ನಕುಲ	ಬಂಗಾರ	ದಪ್ಪಕ್ಕಿ	ವಿನ್ನಾಂಬ, ವಿಶ್ವನಾಥ ಶ್ರೇಷ್ಠಿ
೫೮.	ಮಾನವಸ	ಮನ್ನಕುಲ, ಮನ್ನುಕುಲ, ಮಾನಸಕುಲ, ಮಾನಾಭಿಕುಲ, ಮಾನಾಚ್ಛಕುಲ	ಷೋಡಶ	ಕೆಂಪುವಸ್ತ್ರ	ವಿಚಷಣಾಂಗಿ, ದಕ್ಷಣಾಹ್ವಯ ಶ್ರೇಷ್ಠಿ
೫೯.	ಮರೀಚಸ	ದೀಷಮಶಿಷ್ಟಕುಲ, ದೀಷಮ ಶ್ರೇಷ್ಠಿ, ದೀಷಮಕುಲ, ದೀಶಮ ಶಿಷ್ಟಸ	ಬಂಗಾರ	ದ್ರಾಕ್ಷಿಹಣ್ಣು	ಭಾಮಾಮಣಿ, ಭಾಸ್ಕರ ಶ್ರೇಷ್ಠಿ

೬೦.	ಮಾರ್ಕಂಡೇಯಸ	ಮೋದಕುಲ, ಮೋರ್ಕಾಲಕುಲ, ಮೋರುಕಕುಲ, ಮೋರುಸಕುಲ	ಕುದುರೆಗಳು	ಗಾರ್ಲೆಹಣ್ಣು	ಪಿಪ್ಪಲಾಂಬ, ನಾಗಧ್ವಜ ಶ್ರೇಷ್ಠಿ
೬೧.	ಮುನಿರಾಜಸ	ಪದ್ಮಶಿಷ್ಟಕುಲ, ಪದ್ಮಶ್ರೇಷ್ಠಿ ಕುಲ	ಅನ್ನದಾನ	ತಾವರೆ ಹೂ	ಸರಸ್ವತಿ, ಸರಸ ಶ್ರೇಷ್ಠಿ
೬೨.	ಮೈತ್ರೇಯಸ	ಮದ್ದಿಕುಲ, ಮಥನಕುಲ, ಮಿಥುನಕುಲ, ಮಧ್ಯಕುಲ, ಮೈತ್ರಿಕುಲ	ಆನೆಗಳ ಗುಂಪು	ಚಾಪೆ	ನಾರೀಮಣಿ, ನಾಗಾಖ್ಯ ಶ್ರೇಷ್ಠಿ
೬೩.	ಮೌಸಲಸ	ಚಂದಕಕುಲ, ಚಂದಕುಲ, ಚಿಂಗಕುಲ, ಚಿಂಗಾಲಕುಲ	ಕುದುರೆ	ಕುಂಕುಮ ಹೂ	ಕಮಲಾಂಬ, ಗೌರಾಖ್ಯ ಶ್ರೇಷ್ಠಿ
೬೪.	ಮೌಂಚಾಯನಸ	ಮಲಹಾರ, ಮಂಜೀವೃತ	ದುಕೂಲ ವಸ್ತ್ರ	ಮೆಣಸು	ಮಂಜುವಾಣಿ, ಗಣಕುಂಜ ಶ್ರೇಷ್ಠಿ
೬೫.	ಮೌದ್ಗಲ್ಯಸ	ನಾಭಿಳ್ಳಕುಲ, ನಾಭಿಕುಲ, ನಾಭೀಲಸಕುಲ, ಮುನಿಕುಲ, ಮೂಲಕುಲ	ಮಹಿಷ	ತಾಳೆ ಹೂ	ಭ್ರಮರಾಂಬ, ಚಾಲಾಹ್ವಯ ಶ್ರೇಷ್ಠಿ
೬೬.	ಯಾಸ್ಕಸ	ವೆಲಿಗಳ್ಳ, ವೆಲಿಗೊಳ್ಳ, ವ್ಯಾಲಕೂಲಸ	ಬೆಳ್ಳಿ	ಪ್ರಾಣಹಣ್ಣು	ನವನೀತಾಂಗಿ, ವಿನ್ನಾಖ್ಯ ಶ್ರೇಷ್ಠಿ
೬೭.	ಯಾಜ್ಞವಲ್ಕಸ್ಯ	ಅಭಿಮಂಚಿಕುಲ, ಅಭಿಮನ್ಯು, ಅಭಿಮಂಚ, ಅಭಿಮುಂಜಿ	ರತ್ನ	ಬಾಳೆಹಣ್ಣು	ಅಭಿನವಾಂಬ, ಅಮಲ ಶ್ರೇಷ್ಠಿ
೬೮.	ವಟುಕಸ	ಅನುಮರ್ಷಣಕುಲ	ಪಗಡೆ	ಸ್ಫಟಿಕ	ತಾರಕಾಂಬ, ವಾಮನ ಶ್ರೇಷ್ಠಿ
೬೯.	ವರತಂತುಸ	ಮಾಸಂತಕುಲ, ಮಾಷಾಂತಕುಲ, ಮಾಂತಕುಲ	ಕಪಿಲಗೋವು	ವಾವಿಲಿ	ವಾಸಂತಿಕ, ಅರ್ಧನಾರೀಶ್ವರ ಶ್ರೇಷ್ಠಿ
೭೦.	ವರುಣಸ	ಏಲಶಿಷ್ಟಕುಲ, ವೆಲಿಶಿಷ್ಟಕುಲ, ಶಿರಿಶೇಷ್ಟಕುಲ	ಬಂಗಾರ	ಸೋಗದ ಹೂ	ಸುಂದರಿ, ಜಿಮೂತ ಶ್ರೇಷ್ಠಿ
೭೧.	ವಸಿಷ್ಠಸ	ವಸ್ತಿಸ, ವಸ್ತಿಕುಲ, ವಸ್ತ್ರಕುಲ	ವಜ್ರಗಳು	ಲಾವಂಚ	ಪುಷ್ಪಧಾಮ, ವಿದ್ಯಾಖ್ಯ ಶ್ರೇಷ್ಠಿ
೭೨.	ವಾಮದೇವಸ	ಉಪಮಕುಲ, ಉಪಲಾಲಕುಲ, ಉಪನಕುಲ, ಉಪಮನ್ಯುಕುಲ	ಅನ್ನದಾನ	ಪಿಪ್ಪಲಿ	ಭೀಮಾಂಬ, ಪೃಥ್ವಿ ಶ್ರೇಷ್ಠಿ
೭೩.	ವಾಸುದೇವಮಸ	ಭೀಮಕುಲ, ಭೀಮಶಿಷ್ಟಕುಲ, ಭೀಮಶ್ರೇಷ್ಠಿ ಕುಲ	ರತ್ನಗಳು	ಬಿಳಿರೇಷ್ಮೆ	ವಿದುರಾಂಬ, ಮಾಧವ ಶ್ರೇಷ್ಠಿ
೭೪.	ವಾಯುವ್ಯಸ	ವ್ರಂಗಮಕುಲ, ವ್ರಕಶಿಷ್ಟಕುಲ, ವ್ರಕಾಲಕುಲ, ವ್ರಕ್ಕಾಲಕುಲ, ವ್ರಂಗಮಕುಲ, ವ್ರಂಗಮೂಲಕುಲ	ಷೋಡಶ	ಜೀರಿಗೆ	ರಾಜ್ಯಲಕ್ಷ್ಮಿ ದ್ರವಿಣರಾಜ ಶ್ರೇಷ್ಠಿ

೭೫.	ವಾಲ್ಮೀಕಸ	ಸಾಂತಾಲ, ಶಾಂತಕುಲ, ಶಾಂತಿಕುಲ, ಶಾಂಪಾಲಕುಲ	ಸಪ್ತಸಂತಾನ	ಜೆಮ್ಮಿ	ಸತ್ಯವತಿ, ಸತ್ಯಸಂಧ ಶ್ರೇಷ್ಠಿ
೭೬.	ವಿಶ್ವಕ್ಸೇನಸ	ಉಪರಿಶಿಷ್ಟಕುಲ, ವಿಪರಿಶಿಷ್ಟ, ವಿಪರಿಶೆಟ್ಲ	ಕನ್ಯಾದಾನ	ಮಾಲತಿಪುಷ್ಪ	ಮೇದಾಂಬ, ವೀರಭದ್ರ ಶ್ರೇಷ್ಠಿ
೭೭.	ವಿಶ್ವಾಮಿತ್ರಸ	ವಿಕ್ರಮಶಿಷ್ಟಕುಲ, ವಿಕ್ರಮಶೆಟ್ಲ, ವಿಮರಶೆಟ್ಲ	ಸುವರ್ಣ	ವಾವಿಲಿ	ಗಂಗಾಭವಾನಿ, ವಿದ್ಯಾಧರ ಶ್ರೇಷ್ಠಿ
೭೮.	ವಿಷ್ಣುವೃದ್ಧಸ	ಪಿಪ್ಪಲಕುಲ, ಪುಷ್ಪಾಲಕುಲ	ಕಾಮಧೇನು	ತಿಪ್ಪಲಿ	ಮಣಿಶಲಾಕ, ಕಂದರ್ಪ ಶ್ರೇಷ್ಠಿ
೭೯.	ವೈರೋಹಿತ್ಯಸ	ವಸಂತಕುಲ, ವಸಂತಕಕುಲ	ಸುವರ್ಣ	ವಾವಿಲಿ	ಗಂಗಾಭವಾನಿ, ವಿದ್ಯಾಧರ ಶ್ರೇಷ್ಠಿ
೮೦.	ವ್ಯಾಸಸ	ಧನಗುಕುಲ, ಧನದಕುಲ, ಧನಗುಂಡಕುಲ	ಧಾನ್ಯ	ದಾಳಿಂಬೆ	ಧನವತಿ, ಧರ್ಮಾಖ್ಯ ಶ್ರೇಷ್ಠಿ
೮೧.	ಶರ ಭಂಗಸ	ಕ್ರಮಶಿಷ್ಟಕುಲ, ಕ್ರಮಶ್ರೇಷ್ಠಕುಲ,	ಸ್ವರ್ಣ	ಗೋಕ್ಷೀರ	ಅಬ್ಬಮುಜಿ, ಜಮದಗ್ನಿ ಶ್ರೇಷ್ಠಿ
೮೨.	ಶಾಂರ್ಗರವಸ	ಗುಂಡಕಕುಲ, ಗೋಂಡಕಕುಲ	ಕುಂಬಳಕಾಯಿ	ನಿಂಬೆಹಣ್ಣು	ಲೀಲಾವತಿ, ಜನಾರ್ಧನ ಶ್ರೇಷ್ಠಿ
೮೩.	ಶಾಂಡಿಲ್ಯಸ	ತುಪ್ಪಾಲಕುಲ, ತುಪ್ಪಾಲ	ತುಲಾಭಾರ	ಪಿಪ್ಪಲಿ	ದಂತವತಿ, ಅಮೃತಾಖ್ಯ ಶ್ರೇಷ್ಠಿ
೮೪.	ಶ್ರೀವತ್ಸಸ	ಚಿಲಕುಲ, ಶ್ರೀಲಕುಲ, ಶ್ರೀರಂಗಕುಲ	ಕುದುರೆ	ಸೊಪ್ಪು	ರಾಗಮಂಜರಿ, ರಾಗಾಖ್ಯ ಶ್ರೇಷ್ಠಿ
೮೫.	ಶ್ರೀಧರಸ	ಶಿರಿಶಿಷ್ಟ, ಶಿರಿಶೇಷ್ಟಕುಲ, ಶ್ರೀ ಶಿಷ್ಟ	ಮೇಕೆ	ನೆಲಗಡಲೆ	ಉತ್ಪಲಾಕ್ಷಿ, ಪಂಡಿತಾರ್ಯಲು
೮೬.	ಶುಕ್ಲಸ	ಶ್ರೀಶಾಲಕುಲ, ಶ್ರೀ ಸಾಳ್ವಕುಲ, ಶ್ರೀ ಸೊಳ್ಳ	ಷೋಡಶ	ಕುರುವೇರು	ರಾಜಮುಖಿ, ರಾಜೇಶ್ವರ ಶ್ರೇಷ್ಠಿ
೮೭.	ಶೌಚೇಯಸ	ಇಲಮಂಚಿಕುಲ, ಯಲಮಂಚಿಕುಲ, ಹೇಲಮಂಚಿಕುಲ	ಋಷಭ	ಏಲಕ್ಕಿ	ದಾವನಿ, ನಿರ್ಜಲಸೇವ ಶ್ರೇಷ್ಠಿ
೮೮.	ಶೌನಕಸ	ಕದುಲಕುಲ, ತೃಕಶಿಷ್ಟಕುಲ, ಧನದಕುಲ, ಶೌನಕುಲ, ಶನಕಾಲಕುಲ	ಮುತ್ತಿನಹಾರ	ಬಿಳಿತಾವರೆ	ಸಮಶೀಲ, ಶಕಲಾಖ್ಯ ಶ್ರೇಷ್ಠಿ
೮೯.	ಸತ್ಯಸ	ಅಂದಿರಕುಲ, ಚಿಂತಕುಲ, ಚಿಂತಮಶಿಷ್ಟ, ಚಿಂತ್ಯಕುಲ, ಚಿಂತಾಲ	ಧಾನ್ಯ	ನೇರಳೆ	ಚಿತ್ರಭಾಷಿನಿ, ಚಿತ್ರಶುಭ ಶ್ರೇಷ್ಠಿ

೯೦.	ಸನಕಸ	ಸನಕುಲ, ಶಾನಕುಲ, ಸಾಲಕುಲ, ಶನಗಕುಲ, ಸನ್ನಕುಲ, ಶಾಕಲ್ಯ	ಭೂಮಿ	ಜಾಕಾಯಿ	ಪಲ್ಲವಾಂಬ, ಮಲ್ಲಾಖ್ಯ ಶ್ರೇಷ್ಠಿ
೯೧.	ಸನತ್ಕುಮಾರಸ	ಮುದ್ದುಕುಲ, ಠಂಕಾರಕುಲ	ಅಶ್ವಗಜದಾನ	ದಾಸವಾಳದ ಹೂ	ಪದ್ಮಗಂಧಿ, ಬಾಲಭುಸು ಶ್ರೇಷ್ಠಿ
೯೨.	ಸನಂದನಸ	ಸಮುಶಿಷ್ಟಕುಲ, ಸಮಶಿಷ್ಟಕುಲ, ಸೋಮಶಿಷ್ಟಕುಲ, ಸಂಶೆಟ್ಲ	ಹಸು ಕರು	ನಿವಾರ ಧಾನ್ಯ	ಮೋಹಿನಿ, ಪವಿತ್ರ ಪಾಣಿ ಶ್ರೇಷ್ಠಿ
೯೩.	ಸಂವರ್ತಕಸ	ರೆಂಟಕುಲ, ರೆಂಟಸ, ರೆಂಟುಕುಲ	ಕನ್ಯಾದಾನ	ಗುಲಗಂಜಿ	ಕೃಷ್ಣಾಂಬ, ನಾಗಾಹ್ವಯ ಶ್ರೇಷ್ಠಿ
೯೩.	ಸಂವರ್ತಕಸ	ರೆಂಟಕುಲ, ರೆಂಟಸ, ರೆಂಟುಕುಲ	ಕನ್ಯಾದಾನ	ಗುಲಗಂಜಿ	ಕೃಷ್ಣಾಂಬ, ನಾಗಾಹ್ವಯ ಶ್ರೇಷ್ಠಿ
೯೪.	ಸುಕಾಂಚನಸ	ಪುಚ್ಚಕುಲ, ಪುಚ್ಛಕಕುಲ, ಪುನೀತಸ, ಪುನೀತಕುಲ	ರತ್ನ	ಬಿಳಿಅವರೆಜಾಯಿ	ಮೇದಾಂಬ, ಮಾರ್ಕಂಡೇಯ ಶ್ರೇಷ್ಠಿ
೯೫.	ಸುತೀಷ್ಣಸ	ದಂತಕುಲ, ದ್ಯಂತಕುಲ, ದಂತಕುಲ, ದೊಂತಕುಲ, ದೇವಿಶೆಟ್ಲ, ದ್ವಂತಕುಲ	ಕನ್ಯಾದಾನ	ನೇರಳೆ	ಜಾಹ್ನವಿ, ಜಮದಗ್ನಿ ಶ್ರೇಷ್ಠಿ
೯೬.	ಸುಂದರಸ	ಇನಕುಲ, ಇನಕೋಲ, ವಿನುಕುಲ	ರತ್ನಗಳು	ಬೇಲದಹಣ್ಣು	ಇಮ್ಮುಖಿ, ವಿದ್ಯಾಖ್ಯ ಶ್ರೇಷ್ಠಿ
೯೭.	ಸುವರ್ಣಸ	ಪ್ರೋಢಯಾಚಕುಲ, ಪ್ರೋಡಯಾಜಕುಲ, ಪ್ರೌಡಯಾಜ	ಗೋವುಗಳು	ಪಡವಲಕಾಯಿ	ಪ್ರೊಲ್ಲಾಸಿನಿ, ಪುಣ್ಯರಾಶಿ ಗುಪ್ತ
೯೮.	ಸುಬ್ರಹ್ಮಣ್ಯಸ	ಚಂದನಕುಲ ಸ್ನಗ್ಧಕುಲ	ತಿಲದಾನ	ಬಿಳಿಕಬ್ಬು	ಪದ್ಮಾಕ್ಷಿ, ಮೇಘಸೇನ ಗುಪ್ತ
೯೯.	ಸೌಪರ್ಣಸ	ಬುಧರಕುಲ, ಬುದುರುಕ್ಸಕುಲ	ಭೂದಾನ	ಪಡವಲಕಾಯಿ	ದೇವಾಂಗ, ಭೋಗಶ್ರೇಷ್ಠಿ
೧೦೦.	ಸೌಮ್ಯಸ	ಹಸ್ತಿಕುಲ, ಹಸ್ತಕುಲ, ಹರಸಿಕ್ತ	ಶಾಟಿಲಿ	ಬಚ್ಚಲಿ	ಚಪಲಾಕ್ಷಿ, ಸಿಂಹಮುಖ ಶ್ರೇಷ್ಠಿ
೧೦೧.	ಸೌವರ್ಣಸ	ಸುಶಾಲಕುಲ, ಸುಕಾಳ್ಳಕುಲ, ಸೋಸೋಳ್ಳಿ ಕುಲ, ಸೋಸಾಲಕುಲ	ಸ್ವರ್ಣಪಾತ್ರ	ಪಾಟಲಿಪುಷ್ಪ	ಚಂದ್ರಾಂಬ, ಜಲದಾಖ್ಯ ಶ್ರೇಷ್ಠಿ
೧೦೨.	ಹರಿವಲ್ಲ್ಯಸ	ಕವಟ, ಕುರಟಿ, ಕೊರಟಕುಲ, ಗೋರಂಟಕುಲ	ಗಜದಾನ	ಗೋರಂಟಿ ಸೊಪ್ಪು	ಧರಣೇದೇವಿ, ಕುಮಾರ ಶ್ರೇಷ್ಠಿ

ಹೀಗೆ ಅನೇಕ ಗೋತ್ರ ಇವರಲ್ಲಿ ಗುರುತಿಸಬಹುದು. ಇತ್ತೀಚೆಗೆ ಇವರು ಆರ್ಯ ವೈಶ್ಯರೆಂದು ಕರೆದುಕೊಂಡಿದ್ದಾರೆ. ಈ ಸಮುದಾಯವು ಪಿತೃ ನಡುವಳಿಯ ಹೊರ ಬಾಂದವ್ಯದ ಗೋತ್ರಗಳನ್ನು ಹೊಂದಿವೆ. ಸೋದರ ಮಾವನ ಮಗಳು ಮತ್ತು ಅಕ್ಕನ ಮಗಳೊಂದಿಗೆ ವಿವಾಹಕ್ಕೆ ಸಮ್ಮತಿ ಇದೆ. ಅವಿಭಕ್ತ ಕುಟುಂಬ ಮಾದರಿಗಳು ಇವರಲ್ಲಿ ಹೆಚ್ಚಿನ ಪ್ರಮಾಣದಲ್ಲಿವೆ. ಇವರಲ್ಲಿ ಕೆಲವರು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ನೌಕರಿ, ಬ್ಯಾಂಕ್, ವ್ಯಾಪಾರ, ಸ್ವಯಂ ಉದ್ಯೋಗ, ಸಣ್ಣ ಹಾಗೂ ದೊಡ್ಡ ಪ್ರಮಾಣದ ಉದ್ದಿಮೆಗಳನ್ನು ನಡೆಸುವುದರಲ್ಲಿ ನಿರತರಾಗಿದ್ದಾರೆ. ತಮ್ಮ ಸಮುದಾಯದ ಅಭಿವೃದ್ಧಿಗಾಗಿ ಅಖಿಲ ಭಾರತ ವೈಶ್ಯ ಸಂಘಟನೆ ಯನ್ನು ರಾಜ್ಯ ಜಿಲ್ಲಾ ಹಾಗೂ ತಾಲೂಕುಮಟ್ಟದ ಸಂಘಟನೆಯನ್ನು ಸಹ ಹೊಂದಿದ್ದಾರೆ. ಇವರು ನಾಗದೇವತೆ, ವಿಷ್ಣು, ನಾರಾಯಣ, ಕನ್ನಿಕಾಪರಮೇಶ್ವರಿ, ವೆಂಕಟೇಶ್ವರ ದೈವಗಳನ್ನು ಪೂಜಿಸುತ್ತಾರೆ (ಟೀ ಕಾ ವೆಂಕಟಾಚಲ ಗುಪ್ತ,ಗೋತ್ರ ಪ್ರವರ ದರ್ಪಣ, ೧೯೮೫, ಪು. ೬-೪೮). ಆಧುನಿಕ ಶಿಕ್ಷಣದ ಬಗ್ಗೆ ಆಸಕ್ತಿ ಇರುವ ಈ ಸಮುದಾಯದ ಜನರ ಎಲ್ಲಾ ಆಧುನಿಕ ಸಾಮಾಜಿಕ ವ್ಯವಸ್ಥೆಗಳ ಹಾಗೂ ಅಭಿವೃದ್ಧಿಕಾರ್ಯಕ್ರಮಗಳ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿದ್ದಾರೆ. ವಲಸಿಗರು ಹಾಗೂ ಅಲ್ಪಸಂಖ್ಯಾತರಾದ ಇವರು ಸಾಂಸ್ಕೃತಿಕವಾಗಿ ಅನೇಕ ದ್ವಂದ್ವಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಬಿಕ್ಕಟ್ಟಿನ ಸ್ಥಿತಿಯಲ್ಲಿದ್ದಾರೆ. ವಲಸೆ ಬಿಟ್ಟು ಮನುಕುಲದ ಲಕ್ಷಣ ಆರ್ಯರು ಮಧ್ಯ ಏಷ್ಯಾದಿಂದ ವಲಸೆ ಬಂದರು ಎನ್ನುವುದರಿಂದ ಪ್ರಾರಂಭವಾಗಿ ಇಂದಿನ ಭಾರತೀಯರು ಅಮೇರಿಕಾಕ್ಕೆ ವಲಸೆ ಹೋಗುತ್ತಿರುವುದರವರೆಗೆ ವಲಸೆ ನಿರಂತರವಾಗಿ ರಾಜಕೀಯ-ಭೌಗೋಳಿಕ ಗಡಿಗಳನ್ನು ದಾಟಿ ನಡೆಯುತ್ತದೆ. ದೇಶ-ಭಾಷೆ-ಧರ್ಮ, ರಾಷ್ಟ್ರೀಯತೆ ಪ್ರಶ್ನೆಗಳು ಬಂದಾಗಲೆಲ್ಲಾ ವಲಸಿಗರ ಸಮುದಾಯಗಳು ಬಿಕ್ಕಟ್ಟಿಗೆ ಸಿಲುಕಿಕೊಳ್ಳುತ್ತವೆ. ಅಲ್ಪಸಂಖ್ಯಾತರು ಹೇಗೆ ಸಮಸ್ಯೆಯನ್ನು ನಿಭಾಯಿಸುತ್ತಾರೆ ಎಂಬುದನ್ನು ಈ ಜನಾಂಗದ ಹಿನ್ನೆಲೆಯಲ್ಲಿ ಗಮನಿಸಲಾಗಿದೆ. ಕುಲಕಸುಬನ್ನು ಕಳೆದು ಕೊಂಡು ಈ ಸಮುದಾಯಗಳು ಸರ್ಕಾರ ಕೈಗೊಂಡ ಶೈಕ್ಷಣಿಕ, ಔದ್ಯೋಗಿಕ, ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿತ್ತು. ಆದರೆ ಭಾಷಾ ಅಲ್ಪಸಂಖ್ಯಾತರಾದ ಅದರಲ್ಲೂ ಹೈದ್ರಾಬಾದ್ ಕರ್ನಾಟಕದಲ್ಲಿ ಕೇವಲ ೬೦ ಸಾವಿರದಿಂದ ೬೫ ಸಾವಿರದವರೆಗೆ ಇವರು ಕಾಣಿಸಿಕೊಳ್ಳುತ್ತಿದ್ದಾರೆ. ಇವರು ಮೀಸಲಾತಿ ಸೌಲಭ್ಯ ಪಡೆಯುವಲ್ಲಿ ಅನೇಕ ಗೊಂದಲಗಳನ್ನು ಎದುರಿಸುತ್ತಿದ್ದಾರೆ. ಇಂದಿನ ಜಾಗತೀಕರಣ, ಉದಾರೀಕರಣ ಪ್ರತಿಕ್ರಿಯೆಯಲ್ಲಿ ಈ ಸಮುದಾಯ ಜೀವನ ನಿರ್ವಹಣೆಗಾಗಿ ಆಯ್ಕೆ ಮಾಡಿಕೊಂಡ ವ್ಯಾಪಾರ ಅಸ್ಥಿರವಾದದ್ದು. ತಮ್ಮಲ್ಲಿರುವ ಕಡಿಮೆ ಬಂಡವಾಳದಿಂದ ವಿದೇಶಿ ಬಂಡವಾಳಿಗರೊಡನೆ ಸೆಣಸಾಡಲು ಹೇಗೆ ಸಾಧ್ಯ? ಸೀಮಿತ ಬಂಡವಾಳ ಆರ್ಥಿಕ ಬಿಕ್ಕಟ್ಟು ಇದರಿಂದ ಕುಸಿದ ಜೀವನ ಮಟ್ಟ ಇತ್ಯಾದಿಗಳಿಂದ ಸಮುದಾಯ ಅದೋಗತಿಯ ಅಂಚಿನಲ್ಲಿದೆ. ಒಂದು ಕಡೆ ನೈಪುಣ್ಯವನ್ನು ತೋರುವ ಕುಲಕಸುಬುಗಳು ವಿದೇಶಿ ಬಂಡವಾಳಿಗರ ಸೊತ್ತಾಗಿವೆ. ಇನ್ನೊಂದು ಕಡೆ ಅಭಿವೃದ್ಧಿ ಪಥದಲ್ಲಿ ಸಾಗಿಸಬೇಕಿದ್ದ ಸರ್ಕಾರ ಇವರನ್ನು ಸ್ವಾತಂತ್ರ್ಯ ಬಂದು ೬೧ ವರ್ಷಗಳಾದರೂ ಗಣನೆಗೆ ತೆಗೆದುಕೊಳ್ಳದೇ ಹೋಗಿದೆ.

ಈ ವೈಶ್ಯ ಸಮುದಾಯದ ಬಗ್ಗೆ ಅನೇಕ ಕಥೆಗಳನ್ನು ಪೂರ್ವಿಕರು ಹೇಳುತ್ತಾರೆ. ಇವರ ಕುಲಕಥನಗಳಲ್ಲಿ ಪಾಂಡ್ಯ-ಚೇಳರ ಸಂಘರ್ಷದ ಕತೆಗಳಿವೆ. ಆಂಧ್ರಮೂಲ-ತಮಿಳು ಹಾದಿ ಕರ್ನಾಟಕದಲ್ಲಿ ನೆಲೆಯಾಗಿರುವ ಈ ಸಮುದಾಯಗಳು ಮೂರು ವಿಭಿನ್ನ ಭಾಷಿಕ ನೆಲೆಗಳಲ್ಲಿ ತನ್ನ ಸಂಸ್ಕೃತಿಯನ್ನು ಕಟ್ಟಿಕೊಂಡಿದೆ. ಇವರ ಮೂಲ ಕಸುಬು ವ್ಯಾಪಾರ. ಈ ಉದ್ದೇಶವೆ ತಮಿಳುನಾಡಿನಿಂದ ಕರ್ನಾಟಕಕ್ಕೆ ವಲಸೆ ಹೋಗಲು ಕಾರಣವಾಗಿರಬಹುದು. ಈಗಲೂ ಮನೆಯ ಜವಾಬ್ದಾರಿಯನ್ನು ಹೊತ್ತಿರುವ ಗಂಡಸರು ವ್ಯಾಪಾರಕ್ಕಾಗಿ ಅಲೆದಾಡುತ್ತಲೇ ಇರುತ್ತಾರೆ. ಇವರ ಮನೆಮಾತು ಆಯಾಯ ಪ್ರದೇಶದ ಆಡುಭಾಷೆಯು ಅಲ್ಲಿ ವಾಸಿಸುವವರ ಮಾತೃಭಾಷೆಯಾಗಿದೆ. ಎಂದಿಗೂ ಆರ್ಯವರ್ತದ ಎಲ್ಲೆಡೆಯೂ ವಾಸಿಸುವ ಒಂದೊಂದು ವರ್ಣದವರಿಗೆ ಒಂದೊಂದು ಭಾಷೆ ಎಂಬುದಾಗಿ ಇಲ್ಲ. ಆದರೆ ತೆಲುಗು ಮಾತನಾಡುವ ಅನೇಕ ವ್ಯಾಪಾರಿ ಸಮುದಾಯಗಳು ಹೈದ್ರಾಬಾದ್ ಕರ್ನಾಟಕದಲ್ಲಿವೆ.

೩.೩. ಆರ್ಥಿಕತೆ

ಆರ್ಥಿಕತೆ ಅಥವಾ ಆರ್ಥಿಕ ವ್ಯವಸ್ಥೆ ಎಂಬುದು ದೇಶವೊಂದು ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವ ಮತ್ತು ವಿತರಿಸುವ ಸ್ಥಿತಿಯಾಗಿರುತ್ತದೆ. ಅದು ಜನರು ಲಾಭದಾಯಕವಾಗಿ ಉದ್ಯೋಗದಲ್ಲಿ ತೊಡಗಿರುವ ಒಂದು ವಿಧಾನವೂ ಆಗಿರುತ್ತದೆ. ಅಂದರೆ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದ ಒಳಗಡೆ ಲಭ್ಯವಿರುವ ಉದ್ಯೋಗದ ಮತ್ತು ಉತ್ಪಾದನೆಯ ಎಲ್ಲ ಮೂಲಗಳನ್ನು 'ಆರ್ಥಿಕತೆ' ಎಂದು ಕರೆಯಬಹುದು. ಅದು ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ಮತ್ತು ಅನುಭೋಗಿಸಲು ಪರಸ್ಪರ ಕ್ರಿಯೆ ಮತ್ತು ಪ್ರತಿಕ್ರಿಯೆಯಲ್ಲಿ ತೊಡಗಿರುವ ಎಲ್ಲಾ ವ್ಯಕ್ತಿಗಳು. ಕುಟುಂಬಗಳು, ಕೃಷಿಕ್ಷೇತ್ರ, ಉದ್ಯಮಗಳು, ಕಾರ್ಖಾನೆಗಳು, ಬ್ಯಾಂಕುಗಳು ಮತ್ತು ಸರ್ಕಾರವನ್ನು ಒಳಗೊಂಡಿರುತ್ತದೆ.

ಆದ್ದರಿಂದ ಒಂದು ಆರ್ಥಿಕತೆ ಎಂಬುದು ಜನರು ತಮ್ಮ ಜೀವನವನ್ನು ಸಾಗಿಸುವ ಒಂದು ಸಾಮಾಜಿಕ ಸಮಷ್ಠಿ(Social organism)ಯಾಗಿರುತ್ತದೆ. ಅದು ದೇಶವೊಂದರಲ್ಲಿ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ಉತ್ಪಾದನೆ, ಅನುಭೋಗ, ವಿನಿಮಯ ಮತ್ತು ವಿತರಣೆಯಂತಹ ಆರ್ಥಿಕ ಚಟುವಟಿಕೆಗಳನ್ನು ಸಂಘಟಿಸಿರುವ ವಿಧಾನವನ್ನು ಪ್ರತಿನಿಧಿಸುತ್ತದೆ. ವಿವಿಧ ಚಟುವಟಿಕೆಗಳನ್ನು ಸಂಘಟಿಸುವ ಮೂಲಕ ಜನರು ಹೇಗೆ ತಮ್ಮ ಜೀವನೋಪಾಯವನ್ನು ಕಂಡುಕೊಳ್ಳುತ್ತಾರೆ ಎಂಬುದನ್ನು ಆರ್ಥಿಕತೆ ತಿಳಿಯಪಡಿಸುತ್ತದೆ.

ಹೈದ್ರಾಬಾದ್ ಕರ್ನಾಟಕದ ವೈಶ್ಯರ ಆಧುನಿಕ ಆರ್ಥಿಕತೆಯ ಕಾರ್ಯಾಚರಣೆಯು ಅತ್ಯಂತ ಸಂಕೀರ್ಣವಾಗಿರುತ್ತದೆ. ಇಲ್ಲಿ ಸಾವಿರಾರು ವೈಶ್ಯರು ಅದರ ಕಾರ್ಯಚರಣೆಯಲ್ಲಿ ಭಾಗವಹಿಸುತ್ತಾರೆ. ವೈಶ್ಯರು ವಿವಿಧ ಮಾರ್ಗಗಳಲ್ಲಿ ಮತ್ತು ಸಾಮರ್ಥ್ಯಗಳಲ್ಲಿ ತಮ್ಮ ಕೊಡುಗೆ ಸಲ್ಲಿಸುತ್ತಿರುತ್ತಾರೆ. ಅವರು ಉತ್ಪಾದಕರಾಗಿ, ಕಾರ್ಮಿಕರಾಗಿ, ಅನುಭೋಗಿಗಳಾಗಿ, ವ್ಯಾಪಾರಸ್ಥರಾಗಿ, ಲೇವಾದೇವಿಗರಾಗಿ, ಆಡಳಿತಗಾರರಾಗಿ, ಶಿಕ್ಷಕರಾಗಿ, ವಕೀಲರಾಗಿ, ಸಮಾಜ ಸೇವಕರಾಗಿ, ರಾಜಕೀಯ ಮುಖ್ಯಸ್ಥರಾಗಿ, ಮುಂತಾದ ಹಲವಾರು ರೀತಿಯಲ್ಲಿ ಕಾರ್ಯ

ನಿರ್ವಹಿಸುತ್ತಿದ್ದಾರೆ. ಇಲ್ಲಿ ಅನೇಕ ರೀತಿಯ ಸರಕುಗಳು ಮತ್ತು ಸೇವೆಗಳನ್ನು ಉತ್ಪಾದಿಸಲಾಗುತ್ತಿದೆ ಹಾಗೂ ಅನುಭೋಗಿಸಲಾಗುತ್ತದೆ. ಅದೇ ರೀತಿ ಈ ಹಲವು ರೀತಿಯ ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ವಿತರಣೆಯಲ್ಲಿ ಸಾವಿರಾರು ವೈಶ್ಯರು ತೊಡಗಿರುತ್ತಾರೆ.

ನೂರಾರು ವರ್ಷಗಳ ಹಿಂದೆ ವೈಶ್ಯ ಸಮುದಾಯದ ಆರ್ಥಿಕ ಸ್ಥಿತಿಯನ್ನು ಚರಿತ್ರೆಯಲ್ಲಿ ಅಭ್ಯಾಸಿಸಿದಾಗ ಅವರ ಸ್ಥಿತಿ ಮೇಲ್ಮಟ್ಟದಲ್ಲಿರುವುದು ಮತ್ತು ಹಳ್ಳಿ-ಪಟ್ಟಣ, ನಗರ ಪ್ರದೇಶಗಳಲ್ಲಿ ಪ್ರಭಾವಿಗಳಾಗಿ ಜೀವನ ವನ್ನು ನಡೆಸುತಿದ್ದರು ಎಂದು ತಿಳಿಯುತ್ತದೆ. ಆ ಕಾಲದಲ್ಲಿ ಅವರ ಉದ್ಯೋಗದ ಬಗ್ಗೆ ಗಮನಿಸಿದಾಗ ಮೂಲ ವೃತ್ತಿ ಕೃಷಿಯಾಗಿದ್ದು ಜೊತೆಗೆ ಪಶು ಸಂಗೋಪನೆ, ವ್ಯಾಪಾರ ಈ ವೃತ್ತಿಗಳಲ್ಲಿ ತೊಡಗಿರುವುದು ಕಂಡು ಬರುತ್ತದೆ.

ಹೈದ್ರಾಬಾದ್ ಕರ್ನಾಟಕದ ವೈಶ್ಯ ಸಮುದಾಯದ ೨೦೦೮ರ ಜನಗಣತಿಯ ಪ್ರಕಾರ ೬೦ ಸಾವಿರದಿಂದ ೬೫ ಸಾವಿರದವರೆಗೆ ಇರುವುದು ಕಂಡು ಬರುತ್ತದೆ. ಹೈದ್ರಾಬಾದ್ ಕರ್ನಾಟಕದ ೫ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ನಡೆಸಿದಾಗ ನಮಗೆ ಹೆಚ್ಚಾಗಿ ವೈಶ್ಯರು ಬಳ್ಳಾರಿ ಮತ್ತು ರಾಚಯೂರು ಜಿಲ್ಲೆಗಳಲ್ಲಿ ಕ್ರಮವಾಗಿ ೧೮,೦೦೦, ೨೦,೦೦೦ ಉಳಿದ ಜಿಲ್ಲೆಗಳಲ್ಲಿ ೧೦,೦೦೦ ದಷ್ಟು ವೈಶ್ಯ ಸಮುದಾಯದವರು ಕಂಡು ಬರುತ್ತಾರೆ.

ಹೈದ್ರಾಬಾದ್ ಕರ್ನಾಟಕದ ಜಿಲ್ಲೆಯಲ್ಲಿರುವ ವೈಶ್ಯ ಸಮುದಾಯದ ಆರ್ಥಿಕ ಸ್ತಿತಿಯ ಬಗ್ಗೆ ಕ್ಷೇತ್ರಕಾರ್ಯ ನಡೆಸಿದಾಗ ಇವರ ಆರ್ಥಿಕತೆಯನ್ನು ಮೂರು ಹಂತಗಳಲ್ಲಿ ಹೇಳಲು ಪ್ರಯತ್ನಿಸಿದ್ದೇನೆ.

ಮೊದಲನೇ ಹಂತ -ಅತ್ಯಂತ ಶ್ರೀಮಂತ ವರ್ಗ

ಎರಡನೇ ಹಂತ -ಸಾಮಾನ್ಯ ಶ್ರೀಮಂತ ವರ್ಗ

ಮೂರನೇ ಹಂತ -ಮಧ್ಯಮ ವರ್ಗ

ಮೊದಲನೇ ಹಂತ: ವೈಶ್ಯ ಸಮುದಾಯದವರು ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ಏಕೆಂದರೆ ಇಲ್ಲಿ ಇರುವಂತಹ ವೈಶ್ಯರು ಹೆಚ್ಚು ಕೃಷಿ ಭೂಮಿ, ರೈಸ್‌ಮಿಲ್, ಮೈನಿಂಗ್ ಉದ್ದಿಮೆಗಳಲ್ಲಿ ತೊಡಗಿಕೊಂಡಿರುವುದು ಕಂಡು ಬರುತ್ತದೆ.

ಎರಡನೇ ಹಂತ: ಈ ಹಂತದಲ್ಲಿ ಕಂಡು ಬರುವ ವೈಶ್ಯರು ವ್ಯಾಪಾರ, ಕೃಷಿ ಸಂಬಂಧಿಸಿದ ಫರ್ಟಿಲೈಸರ್ಸ್ ಗೊಬ್ಬರ, ಕೀಟನಾಶಕ ಔಷಧಿಗಳು, ಕೃಷಿ ಸಲಕರಣೆಗಳು, ಸರ್ಕಾರಿ, ಖಾಸಗಿ ಕ್ಷೇತ್ರಗಳಲ್ಲಿ ಕೈಗಾರಿಕೆಗಳಲ್ಲಿ ರಾಜಕೀಯದಲ್ಲಿ ಕಾರ್ಯವನ್ನು ನಿರ್ವಹಿಸುವವರು ಕಂಡು ಬರುತ್ತದೆ.

ಮೂರನೇ ಹಂತ: ಈ ಹಂತದಲ್ಲಿ ಕಂಡು ಬರುವ ವೈಶ್ಯರು ಕೈಗಾರಿಕೆ ಕಾರ್ಮಿಕರಾಗಿ, ದಿನಸಿ ಅಂಗಡಿ ವ್ಯಾಪಾರಿಗಳಾಗಿ, ಪೆಟ್ಟಿಗೆ ಅಂಗಡಿಗಳಲ್ಲಿ, ಸಣ್ಣ ಹೋಟಲುಗಳನ್ನು ನಡೆಸುವರಾಗಿ, ಗುಡಿ ಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ ಕಾರ್ಯವನ್ನು ನಿರ್ವಹಿಸುತ್ತಿರುವುದು ಕಂಡು ಬರುತ್ತದೆ.

ಒಟ್ಟಾರೆಯಾಗಿ ಹೈ.ಕ.ಪ್ರದೇಶದಲ್ಲಿ ಇರುವಂತಹ ವೈಶ್ಯ ಸಮುದಾಯದವರು ದೇವರಾಜ್ ಅರಸು ಅವರ ಆಡಳಿತದಲ್ಲಿ ಜಾರಿಗೆ ತಂದಂತಹ ಕಾನೂನಾದ "ಉಳುವವನೇ ಭೂ ಒಡೆಯ" ಎಂಬ ನೀತಿಯಿಂದಾಗಿ

ಈ ಪ್ರದೇಶದಲ್ಲಿ ಅಸಂಖ್ಯಾತ ಕೃಷಿ ಭೂಮಿಯನ್ನು ವೈಶ್ಯರು ಕಳೆದುಕೊಂಡರು ಇದರಿಂದಾಗಿ ಅನೇಕರು ಸಣ್ಣಪುಟ್ಟ ಉದ್ದಿಮೆಗಳಲ್ಲಿ ತೊಡಗುತ್ತಾ ಖಾಸಗಿ ಕ್ಷೇತ್ರದಲ್ಲಿ ತಮ್ಮ ಸೇವೆಯನ್ನು ಸಲ್ಲಿಸತೊಡಗಿದರು.

ಹೈದ್ರಾಬಾದ್ ಕರ್ನಾಟಕದ ವೈಶ್ಯ ಸಮುದಾಯದ ಶೇಕಡವಾರು ಆದಾರದಲ್ಲಿ ಯಾವಾವ ರಂಗದಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಯಾವ ಮಟ್ಟದ ಆರ್ಥಿಕ ಸ್ಥಿತಿಯನ್ನು ಹೊಂದಿದ್ದಾರೆ ಎಂಬುದನು ಕ್ಷೇತ್ರ ಕಾರ್ಯ ನಡೆಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹೈದ್ರಾಬಾದ್ ಕರ್ನಾಟಕದ ವೈಶ್ಯರ ಒಟ್ಟು ಜನಸಂಖ್ಯೆ ೬೦,೦೦೦ (೨೦೦೮ರ ಜನಗಣತಿ ಆಧಾರ) ಇದರಲ್ಲಿ ೩೦,೦೦೦ದಷ್ಟು ಹಿರಿಯರು, ಹೆಂಗಸರು ಮತ್ತು ಮಕ್ಕಳು ಕೆಲಸ ಮಾಡಲಾರದವರು ಉಳಿದ ೩೦,೦೦೦ದಷ್ಟು ವೈಶ್ಯರು ಮನೆಯನ್ನು ನಡೆಸುವವರು, ಕೆಲಸ ಮಾಡುವವರು ಆಗಿದ್ದಾರೆ. ೩೦ ಸಾವಿರ ವೈಶ್ಯ ಜನ ಸಂಖ್ಯೆಯನ್ನು ಶೇಕಡವಾರು ಆಧಾರದಲ್ಲಿ ವಿಭಜನೆ ಮಾಡಿದಾಗ ೧೦೦ಕ್ಕೆ ೩೦% ರಷ್ಟು ತೆಗೆದುಕೊಂಡಾಗ ಯಾವ್ಯಾವ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಅವರ ಆರ್ಥಿಕ ಸ್ಥಿತಿಯನ್ನು ಈ ಕೆಳಗಿನ ರೀತಿಯಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಶೇಕಡವಾರು ಆಧಾರದಲ್ಲಿ ವೈಶ್ಯ ಸಮುದಾಯದವರ ಆರ್ಥಿಕ ಸ್ಥಿತಿ

೧. ಕೃಷಿ ಭೂಮಿ ಹೊಂದಿದವರು -೦೪%

೨. ರೈಸ್‌ಮಿಲ್ ಹೊಂದಿದವರು -೦೨%

೩. ಲೇವಾದೇವಿಗರಾಗಿ -೦೩%

೪. ವ್ಯಾಪಾರಸ್ಥರಾಗಿ -೦೪%

೫. ಮೈನಿಂಗ್ ಉದ್ದಿಮೆಗಳಾಗಿ -೦೧%

೬. ಗುಡಿ ಕೈಗಾರಿಕೆ -೦೪%

೭. ಸರ್ಕಾರಿ ಹುದ್ದೆಯಲ್ಲಿ -೦೩%

೮. ಖಾಸಗಿ ಕ್ಷೇತ್ರದಲ್ಲಿ -೦೭%

೯. ಕಾರ್ಮಿಕರಾಗಿ -೦೩%

ಹೈದ್ರಾಬಾದ್ ಕರ್ನಾಟಕದ ವೈಶ್ಯ ಸಮುದಾಯದ ಕ್ಷೇತ್ರಕಾರ್ಯ ನಡೆಸಿದಾಗ ಮೇಲೆ ಹೇಳಿದ ಕ್ಷೇತ್ರಗಳಲ್ಲದೆ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವುದು ಕಂಡು ಬರುತ್ತದೆ. ಒಟ್ಟಾರೆಯಾಗಿ ಹೈದ್ರಾಬಾದ್ ಕರ್ನಾಟಕದ ವೈಶ್ಯ ಸಮುದಾಯದವರ ಆರ್ಥಿಕ ಸ್ಥಿತಿ ಎಲ್ಲಾ ವರ್ಗಗಳಲ್ಲಿ ಕಂಡುಬರುತ್ತದೆ (ಹೈದ್ರಾಬಾದ್ ಕರ್ನಾಟಕದ ೨೦೦೮ರ ಜನಗಣತಿ).

೩.೪. ಮನೆಗಳ ರಚನೆ

ಮನುಷ್ಯನ ವಸತಿಯನ್ನು ಕುರಿತಾದ ಅಧ್ಯಯನವು ನೇರವಾಗಿ ವಾಸ್ತುಶಿಲ್ಪದ ಅಧ್ಯಯನವೇ ಆಗಿದೆ. ಅದು ಮಾನವ ಸಾಂಸ್ಕೃತಿಕ ಬದುಕಿನ ಅಧ್ಯಯನವೂ ಹೌದು. ಮುಖ್ಯವಾಗಿ ಭೌಗೋಳಿಕ ಕಾರಣಕ್ಕಾಗಿ

ವಿಶಿಷ್ಟ ವಿನ್ಯಾಸ ಮತ್ತು ಮಾದರಿಗಳ ವಸತಿಗಳು ಕರ್ನಾಟಕದ ಉದ್ದಗಲಕ್ಕೂ ಕಂಡುಬರುವುದರಿಂದ ಈ ಅಧ್ಯಯನ ತುಂಬಾ ಮಹತ್ವಪೂರ್ಣದ್ದಾಗಿದೆ. 'ವಾಸ್ತುಶಿಲ್ಪದ ಇತಿಹಾಸದಲ್ಲಿ ನಾವು ಮೊದಲು ಕಾಣುವುದು ಗ್ರಹಗಳನ್ನು ತನಗಾಗಿ ತನ್ನವರಿಗಾಗಿ ವಾಸಸ್ಥಳವನ್ನು ರಚಿಸಿಕೊಳ್ಳಬೇಕೆಂಬ ಕಲ್ಪನೆ ಮಾನವನಿಗೆ ಬಂದುದೇ ಅಲೆಮಾರಿ ಜೀವನವನ್ನು ಮುಕ್ತಾಯಗೊಳಿಸಿ ಒಂದು ಕಡೆ ಸ್ಥಿರವಾಗಿ ನೆಲಸುವುದನ್ನು ಕಲಿತು, ಜನರೊಡನೆ ಗುಂಪುಗೂಡಿ ವಾಸಮಾಡಲಾರಂಭಿಸಿ, ತಾನು ತನ್ನದು ಎಂಬ ಮನೋಭಾವ ಬೆಳೆದು, ಕುಟುಂಬ ಪದ್ಧತಿ, ಆರಂಭವಾದಾಗ ಮನೆಯ ಅವಶ್ಯಕತೆ ಉಂಟಾಯಿತು. ಈ ಮನೆಯ ಪ್ರಾರಂಭದಲ್ಲಿ ಗುಡಿಸಲುಗಳಾಗಿದ್ದವು. ಮೊದ ಮೊದಲು ಮನೆಗಳು ಗಾಳಿ-ಮಳೆಗಳಿಂದ ರಕ್ಷಿಸಿಕೊಳ್ಳಲು ನಿರ್ಮಾಣವಾದವು ಅನಂತರ ಕಾಲದಲ್ಲಿ ಆತನು ವ್ಯವಸಾಯ ಕೈಗೊಂಡು, ಪಶುಪಾಲನೆ ಆರಂಭಿಸಿದಾಗ ಅವರಿಗೆ ಕೃಷಿ ಸಲಕರಣೆಗಳನ್ನಿಡುವುದಕ್ಕೂ, ಸಾಕು ಪ್ರಾಣಿಗಳನ್ನು ಗಾಳಿ-ಮಳೆಗಳಿಂದ ರಕ್ಷಿಸಿಕೊಳ್ಳುವುದಕ್ಕೂ ಮನೆಯನ್ನು ಕಟ್ಟಿಕೊಂಡನು. ಇಂದಿನ ಹಾಗೆ, ಹಿಂದೆ ಕಲ್ಲು ಇಟ್ಟಿಗೆಗಳನ್ನು ಬಳಸಿ ಮನೆಕಟ್ಟುತ್ತಿರಲಿಲ್ಲವಾದರೂ ಅವು ಭದ್ರವಾಗಿದ್ದು, ಗಾಳಿ-ಮಳೆಯಿಂದ ರಕ್ಷಿತವಾಗಿದ್ದವು. ಅವುಗಳನ್ನು ನೆಲದಿಂದ ಕಡಿಮೆ ಎತ್ತರದಲ್ಲಿ ಗಾಳಿಯ ಹೊಡೆತ ಕಡಿಮೆ ಇರುವ ಸ್ಥಳವನ್ನೇ ಆಯ್ಕೆಮಾಡಿಕೊಳ್ಳುತ್ತಿದ್ದರು. ಬದಲಾದ ಇಂದಿನ ದಿನಗಳಲ್ಲಿ ವೈಶ್ಯರು ಆರ್ಥಿಕವಾಗಿ ಮುಂದುವರಿದಿರುವುದರಿಂದ ಇತರ ಜನವರ್ಗಗಳಿಗಿಂತ ತಮಗೆ ಬೇಕಾದ ರೀತಿಯಲ್ಲಿ ಮನೆ ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ಇಂಜಿನಿಯರವರ ಮೂಲಕ ವ್ಯವಸ್ಥಿತವಾಗಿ ನಕ್ಷೆಯನ್ನು ಹಾಕಿಸಿ ಅದರ ಪ್ರಕಾರವಾಗಿ ವಡ್ಡರಿಗೆ ನಿರ್ಮಾಣ ಮಾಡಲು ಗುತ್ತಿಗೆಯ ಆಧಾರದ ಮೇಲೆ ನೀಡುತ್ತಾರೆ. ಸಾಮಾನ್ಯವಾಗಿ ವೈಶ್ಯರು ಗುಂಪು ಗುಂಪಾಗಿ ವಾಸ ಮಾಡಲು ಇಷ್ಟ ಪಡುತ್ತಾರೆ. ಪ್ರತಿಯೊಂದು ಮನೆಯ ಮುಂದೆ ಸ್ವಲ್ಪ ಜಾಗವಿರುವಂತೆ ನೋಡಿಕೊಂಡು ಮನೆಗಳನ್ನು ನಿರ್ಮಿಸುತ್ತಾರೆ. ಇದಕ್ಕೆ 'ಅಂಗಳ' ವೆಂದು ಕರೆಯುತ್ತಾರೆ. ಅದರಲ್ಲಿ ಗಿಡ, ಮರಗಳನ್ನು ಹೂವಿನ ಗಿಡಗಳನ್ನು ಬೆಳಸಿ ತಂಪಾಗಿ ಇಟ್ಟುಕೊಂಡಿರುತ್ತಾರೆ.

ಸಾಮಾನ್ಯವಾಗಿ ವೈಶ್ಯರು ಮನೆ ನಿರ್ಮಾಣವನ್ನು 'ವಾಸ್ತು ಶಾಸ್ತ್ರ'ದ ಮೂಲಕ ನಿರ್ಮಾಣ ಮಾಡುತ್ತಾರೆ. ಮನುಷ್ಯನಿಗೆ ಪಂಚೇಂದ್ರಿಯಗಳಾದ ಕಿವಿ, ಬಾಯಿ, ಕಣ್ಣು, ಮೂಗು, ಕೈ ಕಾಲುಗಳು ಹೇಗೆ ಮುಖ್ಯವೋ ಅದೇ ರೀತಿ ಪ್ರಕೃತಿ ನಿಯಮದಲ್ಲಿ ಗಾಳಿ, ನೀರು, ಆಕಾಶ, ಭೂಮಿ, ಬೆಂಕಿ ಇವುಗಳನ್ನು ಆಯ್ಕೆ ಮಾಡಿಕೊಂಡು ಮನುಷ್ಯರು ವಾಸ ಮಾಡಲು ನಿರ್ಮಾಣ ಮಾಡುವ ಗೃಹ ಅಥವಾ ಮನೆಗೆ "ವಾಸ್ತುಶಾಸ್ತ್ರ"ವು ಸಹ ಮುಖ್ಯವಾದದ್ದಾಗಿದೆ. ವಾಸ ಮಾಡುವವರಿಗೆ ಆರೋಗ್ಯದ ಬಗ್ಗೆ ಜೀವಿತದ ಕಾಲದಲ್ಲಿ ಉತ್ತಮ ಫಲಗಳು ಬರುವ ಅನುಭವದ ವಿಚಾರವಾಗಿ ಅವಲೋಕನ ಮಾಡಬೇಕಾಗುತ್ತದೆ. ಆದ್ದರಿಂದ ವೈಶ್ಯರು ಮನೆ ನಿರ್ಮಾಣವನ್ನು ವಾಸ್ತುಶಾಸ್ತ್ರದ ನಿಯಮದ ಪ್ರಕಾರ ಮನೆ ನಿರ್ಮಾಣ ಮಾಡುತ್ತಾರೆ.

ವೈಶ್ಯರು 'ವಾಸ್ತುಶಾಸ್ತ್ರ'ದಿಂದ ಮನೆ ನಿರ್ಮಾಣ ಮಾಡುವಲ್ಲಿ ಬಳಸುವಂತಹ ಅಂಶಗಳು:

೧. ಮನೆಯ ಮುಂಬಾಗಿಲು ಯಾವ ದಿಕ್ಕಿನಲ್ಲಿದೆ. (ಪೂ.ಪ.ಉ.ದ)

೨. ಮನೆಯ ಮುಂಬಾಗಿಲು ಉಚ್ಚ ಸ್ಥಾನದಲ್ಲಿ ಇರುವಂತೆ ನೋಡಿಕೊಳ್ಳುತ್ತಾರೆ.

[illegible]

೩. ಮನೆಯ ದಕ್ಷಿಣ ಹಾಗೂ ಪಶ್ಚಿಮ ಭಾಗದಲ್ಲಿ ತೂಕವಾದ ಕಬ್ಬಿಣದ ಪೆಟ್ಟಿಗೆ ಅಲ್ಮೇರ, ಬೆಡ್ ರೂಂ ಇರುವಂತೆ, ಮಹಡಿ ಮೆಟ್ಟಿಲುಗಳು, ಕುರ್ಚಿಗಳು ಬರುವಂತೆ ಅಳವಡಿಸಿಕೊಳ್ಳುತ್ತಾರೆ.

೪. ಭೂಮಿಯಲ್ಲಿ ಉತ್ತರ ಈಶಾನ್ಯ ಅಥವಾ ಪೂರ್ವ ಈಶಾನ್ಯ ಭಾಗದಲ್ಲಿ ನೀರಿನ ಪಂಪು, ಬಾವಿ ಅಥವಾ ಬೋರ್‌ವೆಲ್ ಬರುವಂತೆ ಅಳವಡಿಸುತ್ತಾರೆ.


೫. ಮನೆಯ ಪೂರ್ವ ಆಗ್ನೇಯ ಭಾಗದಲ್ಲಿ ಅಡುಗೆ ಕೋಣೆ ನಿರ್ಮಾಣ ಮಾಡಿಕೊಳ್ಳುತ್ತಾರೆ. ಹಾಗೂ ಅಡುಗೆ ಮನೆಯ ದಕ್ಷಿಣ ಅಥವಾ ಪಶ್ಚಿಮ ಭಾಗಕ್ಕೆ ಪದಾರ್ಥಗಳ ಉಗ್ರಾಣವನ್ನು ನಿರ್ಮಾಣ ಮಾಡುತ್ತಾರೆ.

೬. ಮಹಡಿ ಮೇಲೆ ದಕ್ಷಿಣ ಹಾಗೂ ಪಶ್ಚಿಮ ಭಾಗದಲ್ಲಿ ಪೂರ್ಣವಾಗಿ ಕಟ್ಟಡವನ್ನು ಕಟ್ಟಿ ನೈಋುತ್ಯ(ದಕ್ಷಿಣ ಪಶ್ಚಿಮ)ದಲ್ಲಿ ನೀರಿನ ಟ್ಯಾಂಕನ್ನು ನಿರ್ಮಿಸುವುದು.

೭. ಮನೆಯನ್ನು ನಿರ್ಮಿಸುವಾಗ ಸೈಟಿನ ಪೂರ್ವಕ್ಕೆ ಹಾಗೂ ಉತ್ತರಕ್ಕೆ ಹೆಚ್ಚಿನ ಸ್ಥಳವನ್ನು ಖಾಲಿ ಬಿಡುತ್ತಾರೆ. ಹಾಗೂ ದಕ್ಷಿಣ ಮತ್ತು ಪಶ್ಚಿಮಕ್ಕೆ ಕಡಿಮೆ ಸ್ಥಳವನ್ನು ಬಿಟ್ಟು ಕಟ್ಟುತ್ತಾರೆ. ಕಾಂಪೌಂಡು ಕಟ್ಟಿ ಉಚ್ಛ ಸ್ಥಾನದಲ್ಲಿ ಗೇಟನ್ನು ಇಡುತ್ತಾರೆ.

೮. ಸ್ನಾನದ ಮನೆ, ಶೌಚದ ಕೋಣೆ, ಗ್ಯಾರೇಜ್, ಅಂಗಡಿ ಇವುಗಳನ್ನು ನಿರ್ಮಾಣ ಮಾಡಬೇಕಾದಲ್ಲಿ ಆದಷ್ಟು ವಾಯುವ್ಯ ಭಾಗದಲ್ಲಿ ನಿರ್ಮಿಸುತ್ತಾರೆ.[೨]

ಗೃಹ ವಾಸ್ತು



ವೈಶ್ಯರು ಆರ್ಥಿಕವಾಗಿ ಸಾಮಾಜಿಕವಾಗಿ ಪ್ರಬಲರಾಗಿರುವವರು ಆಧುನಿಕ ರೀತಿಯಲ್ಲಿ ವಾಸ್ತುಶಾಸ್ತ್ರದ ನಿಯಮಕ್ಕನುಸಾರವಾಗಿ ಮನೆಯನ್ನು ಕಟ್ಟಿಕೊಂಡಿದ್ದಾರೆ. ಹಳ್ಳಿಯಲ್ಲಿ ಬದುಕುವವರು ಹಾಗೂ ಆರ್ಥಿಕವಾಗಿ ತಕ್ಕಮಟ್ಟಿಗೆ ಇರುವವರು ಸರಳವಾದ ಸಾಮಾನ್ಯ ರೀತಿಯಲ್ಲಿ ಮನೆಗಳನ್ನು ಕಟ್ಟಿಕೊಂಡಿರುವುದು ಈ ಸಮುದಾಯದಲ್ಲಿ ನೋಡಬಹುದಾಗಿದೆ.

ಹಬ್ಬ-ಹರಿದಿನಗಳಲ್ಲಿ ಮದುವೆ ಸಮಾರಂಭಗಳಲ್ಲಿ ಬಣ್ಣ ಸುಣ್ಣಗಳಿಂದ ಮನೆಯನ್ನು ಅಲಂಕರಿಸುತ್ತಾರೆ. ಹೊಸ ಮನೆ ಪ್ರವೇಶದ ಸಂದರ್ಭದಲ್ಲಿ ಪುರೋಹಿತರು ಗೋಡೆಯ ಮೇಲೆ 'ಓಂ' ಶ್ರೀ ಬರೆಯುವುದು ಕಂಡುಬರುತ್ತದೆ(ಶ್ರೀ ಎಸ್.ಮಂಜುನಾಥ ಶ್ರೇಷ್ಠಿ, ಸರಳ ವಾಸ್ತುಶಾಸ್ತ್ರ, ೨೦೦೩, ಪು. ೩೪೨).

ಗೃಹ ಪ್ರವೇಶ

ಮನೆ ನಿರ್ಮಾಣವಾದ ಮೇಲೆ ಪುರೋಹಿತರಿಂದ ಶಾಸ್ತ್ರ ಕೇಳಿ ಒಳ್ಳೆಯ ದಿನ ನೋಡಿ ಶಾಸ್ತ್ರೋಕ್ತವಾಗಿ ಗೃಹ ಪ್ರವೇಶ ಮಾಡುತ್ತಾರೆ. ಮೊದಲು ಮನೆಗೆ ಶೃಂಗರಿಸಿದ ಬಸವಣ್ಣನನ್ನು ದಾಟಿಸಿ ಮಧ್ಯೆ ಮನೆಯ ಒಳಗೆ ಚೌಕಾಕಾರದ ಹೋಮಕ್ಕೆ ಪುರೋಹಿತರಿಂದ ತುಪ್ಪ, ಹಾಲು, ಜೇನು, ಗಂಧ, ಸಕ್ಕರೆ ಇತ್ಯಾದಿಗಳನ್ನು ಹಾಕುತ್ತಾರೆ. ಮನೆಯ ಮಾಡಿನ ಸುತ್ತಲೂ ಧರ್ಬೆಯ ಹುಲ್ಲಿನ ದಾರವನ್ನು ಒಂದು ಸುತ್ತು ಹಾಕುತ್ತಾರೆ. ಮನೆಯ ಮುಂಬಾಗಿಲಿಗೆ ಕುಂಬಳಕಾಯಿಯನ್ನು ಕಟ್ಟುತ್ತಾರೆ. ಮತ್ತು ಒಲೆಯ ಮೇಲೆ ಹಾಲನ್ನು ಉಕ್ಕಿಸಿ ಮನೆಯ ಪ್ರವೇಶ ಮಾಡುತ್ತಾರೆ. ನಂತರ ಊರಿನ ಎಲ್ಲಾ ಹಿರಿಯರಿಗೂ ಸಿಹಿ ಊಟವನ್ನು ಮನೆಯಲ್ಲಿಯೆ ಹಾಕಿಸಿ ಎಲ್ಲರ ಮನಸಂತೋಷ ಪಡಿಸುತ್ತಾರೆ. ಇದು ವೈಶ್ಯರ ಮನೆ ನಿರ್ಮಾಣ ಈ ರೀತಿಯಾಗಿ ನಡೆಯುತ್ತದೆ.

೩.೫. ನ್ಯಾಯ ಪದ್ಧತಿ

ವೈಶ್ಯರಲ್ಲಿ ವಂಶ ಪರಂಪರಾಗತವಾಗಿ ಬಂದ ನ್ಯಾಯಪದ್ಧತಿಯ ವ್ಯವಸ್ಥೆಯು ಸಾಂಸ್ಕೃತಿಕವಾಗಿ ಬಹು ಮಹತ್ವದ ಅಂಶವಾಗಿದೆ. ಶಾಂತ ಹಾಗೂ ವ್ಯವಸ್ಥಿತವಾಗಿ ಜೀವನ ನಡೆಸಲು ಪ್ರತಿಯೊಂದು ಜನಾಂಗವೂ ತನ್ನದೇ ಆದ ರೀತಿಯಲ್ಲಿ ನ್ಯಾಯ ವ್ಯವಸ್ಥೆಯೊಂದನ್ನು ಮಾಡಿಕೊಂಡಿದೆ. ಇದನ್ನು ಹಳ್ಳಿಗಳಲ್ಲಿ 'ಪಂಚಾಯಿತಿ ಕಟ್ಟೆ' ಎಂದು ಕರೆಯುತ್ತಾರೆ. ಈ ನ್ಯಾಯ ವ್ಯವಸ್ಥೆಯಲ್ಲಿ ಆ ಜಾತಿಯ ಹಿರಿಯರು ಇರುತ್ತಾರೆ. ಇವರು ತಮ್ಮ ಜೀವನಾನುಭವದಲ್ಲಿ ಅನೇಕ ನ್ಯಾಯ ಪಂಚಾಯಿತಿಗಳಲ್ಲಿ ಭಾಗವಹಿಸುತ್ತಾರೆ. ಕಷ್ಟಕರ ಸಂದರ್ಭದಲ್ಲಿ ಸಮಯೋಚಿತವಾದ ನಿರ್ಣಯಗಳನ್ನು ಕೊಟ್ಟು ಆ ಜನರಲ್ಲಿ ಏಕತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಈ ಪಂಚರು ಗೌರವ ಪೂರ್ಣ ವ್ಯಕ್ತಿಗಳು ಅಸಭ್ಯ ರೀತಿಯಲ್ಲಿ ವರ್ತಿಸಿದ ಜಾತಿಯ ನಿಯಮಗಳನ್ನು ಮೀರಿದರೆ, ಕಟ್ಟುಕಟ್ಟಳೆಗಳನ್ನು ಉಲ್ಲಂಘನೆ ಮಾಡಿದರೆ ಅಂಥಹ ವ್ಯಕ್ತಿಗಳನ್ನು ಜಾತಿಯಿಂದ ಹೊರಗೆ ಹಾಕುವ ಅಥವಾ ಬಹಿಷ್ಕರಿಸುವ ಅಧಿಕಾರವನ್ನು ಇವರು ಹೊಂದಿರುತ್ತಾರೆ. ಆದಷ್ಟು ವೈಶ್ಯರು ತಮ್ಮ ತಮ್ಮ ಜಗಳಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಾರೆ. ವೈಶ್ಯರ ಜೊತೆ ಒಡಗೂಡಿ ಬದುಕುವ ಮತ್ತು ನ್ಯಾಯ

ವ್ಯವಸ್ಥೆಯಲ್ಲಿ ಪಾಲುಗೊಳ್ಳುವ ಅವರು ತುಂಬಾ ಜವಾಬ್ದಾರಿಯುತ ವ್ಯಕ್ತಿಗಳಾಗಿರುತ್ತಾರೆ. ವೈಶ್ಯರು ಆರ್ಥಿಕವಾಗಿಯೂ ತುಂಬಾ ಶ್ರೀಮಂತರಾಗಿದ್ದು ಪ್ರತಿಷ್ಠಿತ ವ್ಯಕ್ತಿಗಳಾಗಿರುತ್ತಾರೆ. ಒಂದು ವೇಳೆ ಪಂಚಾಯಿತಿ ಕಟ್ಟೆಯಲ್ಲಿ ನ್ಯಾಯ ಬಗೆಹರಿಯದೇ ಹೋದಲ್ಲಿ ಕೋರ್ಟ್ ಮೂಲಕ ನ್ಯಾಯವನ್ನು ಬಗೆಹರಿಸಿಕೊಳ್ಳುತ್ತಾರೆ.

ಪಂಚಾಯಿತಿಯಲ್ಲಿ ಯಜಮಾನನು ಮತ್ತು ಜನಾಂಗದ ಮುಖ್ಯಸ್ಥನು ಸರ್ವೋಚ್ಚವಾದ ಸ್ಥಾನದಲ್ಲಿದ್ದು ಉಚ್ಚನ್ಯಾಯಾಧೀಶನಾಗಿರುತ್ತಾನೆ. ಇವರ ತೀರ್ಮಾನವೇ ಅಂತಿಮವಾಗಿದ್ದು ಇದನ್ನು ಎಲ್ಲರೂ ಒಪ್ಪಿ ಕೊಳ್ಳುತ್ತಾರೆ. ಸಾಮಾನ್ಯವಾಗಿ ಊರಿನ ಸಾರ್ವಜನಿಕ ಕೆಲಸಗಳು ನಡೆಯಬೇಕಾದಾಗ ಪಂಚಾಯತಿಯ ಯಜಮಾನ ಜನಾಂಗದ ಮುಖಂಡರ ಜೊತೆಗೆ ಸೇರಿ ಚರ್ಚಿಸಲಾಗುತ್ತದೆ. ಅನಂತರ ಕಾಲದಲ್ಲಿ ಎಲ್ಲರಿಗೂ ಸರಿಹೊಂದುವ ತಾರೀಖನ್ನು ಗೊತ್ತುಪಡಿಸಲಾಗುವುದು. ಆ ಕಾರ್ಯಕ್ಕೆ ತಗಲುವ ವೆಚ್ಚದ ವಿವರವನ್ನು ತಿಳಿದು ಚರ್ಚಿಸಿ ಊರಿನ ಮನೆ ಮನೆಗೂ ಎಷ್ಟೆಷ್ಟು ಚಂದಾ ಹಾಕಬೇಕು ಎನ್ನುವುದನ್ನು ನಿರ್ಧರಿಸಲಾಗುತ್ತದೆ. ಹೀಗೆ ನಿರ್ಧಾರ ಮಾಡುವಾಗ, ಆ ವ್ಯಕ್ತಿಯ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡಿರುತ್ತಾರೆ. ಗ್ರಾಮದಲ್ಲಿ ವೈಶ್ಯರು ಮೇಲ್ಜನಾಂಗದವರು ಆಗಿರುತ್ತಾರೆ. ಅವರು ಧಾರ್ಮಿಕ ಕಾರ್ಯಗಳಿಗೆ ಭಾಗವಹಿಸಿದರೆ ಅವರಿಗೆ ತಾಂಬೂಲವನ್ನು ಯಜಮಾನನೇ ಕೊಟ್ಟು ಗೌರವಿಸುತ್ತಾರೆ.

ವೈಶ್ಯ ಜನಾಂಗದ ಮುಖ್ಯಸ್ಥನು ವಿವಾಹ, ಶುಭ ಸಂದರ್ಭಗಳಲ್ಲಿ ಬೇಟಿ ನೀಡಿ ಜಾತಿಯ ನಿಯಮವನ್ನು ಉಲ್ಲಂಘನೆ ಆಗದಂತೆ ನೋಡಿಕೊಳ್ಳುತ್ತಾರೆ. ಎಲ್ಲಾ ಕಾರ್ಯಕ್ರಮಗಳು ಕ್ರಮವಾಗಿ ನಡೆಯುವಂತೆ ಕಾರ್ಯ ಮಾಡುವ ಮನೆಯವರು ಜವಾಬ್ದಾರಿಯನ್ನು ಹೊಂದಿರುತ್ತಾರೆ. ಆ ಶುಭ ಕಾರ್ಯಕ್ರಮಗಳಿಗೆ ಬಂದ ಯಜಮಾನನನ್ನು ವಿಶೇಷ ಗೌರವಗಳಿಂದ ಸ್ವಾಗತಿಸಿ ಸತ್ಕರಿಸುತ್ತಾರೆ. ವೈಶ್ಯ ಜನಾಂಗದವರು ವಾಸಿಸುವ ವ್ಯಾಪ್ತಿಗೆ ಸೇರುವ ಶ್ರೀವಾಸವಿ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಜನಾಂಗದ ಮುಖ್ಯಸ್ಥನು, ಶೆಟ್ಟಿ ಇವರು ಸೇರಿಕೊಂಡು ನ್ಯಾಯವನ್ನು ಬಗೆಹರಿಸುತ್ತಾರೆ. ನ್ಯಾಯ ವ್ಯವಸ್ಥೆಯಲ್ಲಿ ಮುಖಂಡರು ತಮ್ಮ ಕೆಳಗಿನ ಪಂಚರು ತಪ್ಪು ಮಾಡಿದರೆ ಅವರನ್ನು ದಂಡಿಸುವ ಮತ್ತು ಆ ಹುದ್ದೆಯಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿರು ತ್ತಾರೆ. ಹಾಗೆ ಅಧಿಕಾರದಿಂದ ಇಳಿಸುವ ಮತ್ತು ತೆರವಾದ ಹುದ್ದೆಗೆ ನೇಮಿಸಿಕೊಳ್ಳುವ ಕೆಲಸಗಳು ಪಂಚಾಯತಿ ಕಟ್ಟೆಯಲ್ಲಿ ನಡೆಯುತ್ತಿದ್ದವು. ವೈಶ್ಯರು ಜಟಿಲ ಸಮಸ್ಯೆಗಳು ಎದುರಾದರೂ ತಮ್ಮ ಜನಾಂಗದ ಒಳಜಗಳಗಳ ಬಗೆಗೆ ಅನ್ಯ ಜನಾಂಗದವರಿಗೆ ತಿಳಿಸದೇ ಬಗೆಹರಿಸಿಕೊಳ್ಳುತ್ತಾರೆ. ಕಾರಣ ತಮ್ಮ ಜನಾಂಗದ ಮೇಲೆ ಇರುವ ಗೌರವವೇ ಇದಕ್ಕೆ ಕಾರಣ. ಆತ್ಮಾಭಿಮಾನ ಗೌರವಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಹಾಗೂ ಸಮಾಜದ ಹಿತದೃಷ್ಟಿಯಿಂದ ರಹಸ್ಯವನ್ನು ಬಯಲು ಮಾಡದೇ ತಮ್ಮ ತಮ್ಮಲ್ಲಿಯೇ ಉಪಾಯವಾಗಿ ಬಗೆಹರಿಸಿಕೊಳ್ಳುವ ವಿವೇಕಶಾಲಿಗಳಾಗಿರುತ್ತಾರೆ. ಕೆಲವು ಸಾರಿ ಅನ್ಯ ಜನಾಂಗದ ಜನರೊಂದಿಗೆ ಜಗಳವಾದಾಗ ಊರ ಮುಖಂಡರ ಸರಪಂಚರಿಂದ ನ್ಯಾಯ ಬಗೆಹರಿಸಿಕೊಳ್ಳುತ್ತಾರೆ.

ಆದರೆ ಇತ್ತೀಚೆಗೆ ಈ ರೀತಿಯ ಪದ್ಧತಿ ಸ್ವಲ್ಪ ಬದಲಾಗಿದೆ. ಗ್ರಾಮದಲ್ಲೀಗ ನಾಗರೀಕ ಹಿತರಕ್ಷಣ ಸಮಿತಿಯೊಂದನ್ನು ರಚಿಸುವರು. ಊರಿನ ಜಾತಿಯ ಆಧಾರದ ಮೇಲೆ ಸದಸ್ಯರನ್ನು ಆಯ್ಕೆ ಮಾಡುವರು. ಈ ಸದಸ್ಯರೆಲ್ಲಾ ಸೂಚಿಸಿದ ವ್ಯಕ್ತಿ ಅಧ್ಯಕ್ಷನಾಗುತ್ತಾನೆ. ಇದರಲ್ಲಿ ಒಬ್ಬ ಕಾರ್ಯದರ್ಶಿ ಎಂದು ಆಯ್ಕೆ ಮಾಡುವರು. ಊರಿನಲ್ಲಿ ಮೊದಲಿನಿಂದಲೂ ಕೋಲಕಾರ ಅಥವಾ ಸಾರುವವ, ಇಂದಿಗೂ ಅದನ್ನೇ ಮುಂದು ವರಿಸಿಕೊಂಡು ಬಂದಿದ್ದಾರೆ. ಈ ಸದಸ್ಯ ಮತ್ತು ಅಧ್ಯಕ್ಷರಾದವರು ಬಹಳ ಹಿರಿಯರಾಗಿರಬೇಕು ಎಂದೇನಿಲ್ಲ. ವಯಸ್ಕರಾದರೂ ನಡೆಯುತ್ತದೆ. ಅಧ್ಯಕ್ಷನಾದವನು ವಾದವಿವಾದವನ್ನು ಕೇಳಿ ಪರಾಂಬರಿಸಿ, ಸದಸ್ಯರೊಡನೆ ಚರ್ಚಿಸಿ ದಂಡ ವಿಧಿಸುತ್ತಾನೆ. ದಂಡದ ಹಣ ಕಟ್ಟಿಸಿಕೊಳ್ಳುವವ ಕಾರ್ಯದರ್ಶಿ ಆಗಿರುತ್ತಾನೆ. ಊರಿನ ದೇವಸ್ಥಾನ ಅಥವಾ ಅರಳಿಕಟ್ಟೆಯ ಮೇಲೆ ತೀರ್ಪುಗಾರರು ಕುಳಿತಿದ್ದರೆ, ಕಟ್ಟೆಯ ಕೆಳಗೆ ವಾದಿ ಮತ್ತು ಪ್ರತಿವಾದಿ ಇಬ್ಬರು ನಿಂತಿರಬೇಕು. ಸಾಕ್ಷಿ ಹೇಳುವವರು ಕೂತಿರಬಹುದು. ಮೊದಲು ಪಿರ್ಯಾದಿ (Complaint) ಕೊಟ್ಟು ವ್ಯಕ್ತಿ ನ್ಯಾಯ ಪಂಚಾಯಿತಿಯ ಎದುರು ನಿಂತು ಹೇಳಿಕೆ ಮಂಡಿಸುತ್ತಾನೆ. ನಂತರ ಪಂಚಾಯಿತಿಯ ಮುಖಂಡ ಆಪಾದನೆಗೆ ಗುರಿಯಾದ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸಿ, ಸಾಕ್ಷಿಗಳ ವಿಚಾರ ಮಾಡಲಾಗುತ್ತದೆ. ಎಲ್ಲಾ ಸದಸ್ಯರು ಅಥವಾ ಹಿರಿಯರೊಡನೆ ಸಮಾಲೋಚಿಸಿ ತೀರ್ಮಾನ ಹೇಳಿ ತಪ್ಪು ಮಾಡಿದವನಿಗೆ ದಂಡ ವಿಧಿಸಲಾಗುತ್ತದೆ. ಕೆಲವೊಮ್ಮೆ ಇಬ್ಬರು ತಪ್ಪು ಮಾಡಿದರೆ ಇಬ್ಬರಿಗೂ ದಂಡ ವಿಧಿಸಲಾಗುತ್ತದೆ.

ಕೆಲವೊಮ್ಮೆ ದಂಡದ ಸ್ವರೂಪ ಕಠಿಣ ಶಿಕ್ಷೆಯು ಆಗಿರುತ್ತದೆ. ಲೈಂಗಿಕ ಕಿರುಕುಳ ನೀಡಿದ ಗಂಡನಿಗೆ, ಮದುವೆಯಾಗದೆ ಗರ್ಭಿಣಿಯಾದ ಹೆಂಗಸು ಮತ್ತು ಕಾರಣೀಭೂತನಾದ ವ್ಯಕ್ತಿಗೆ, ವ್ಯಭಿಚಾರ ಮಾಡಿದ ಸ್ತ್ರೀಗೆ, ಪಂಚಾಯಿತಿ ನಡೆಯುವಾಗ ಅತಿಯಾದ ತಲೆಹರಟೆ, ವಾಚಾಳಿತನ ಪ್ರದರ್ಶಿಸಿದವರಿಗೆ ಪಂಚಾಯಿತಿ ಕಟ್ಟೆಯ ಕಠಿಣ ಶಿಕ್ಷೆಯನ್ನು ನೀಡುವ ಅಧಿಕಾರ ಹೊಂದಿರುತ್ತದೆ. ಲೈಂಗಿಕ ಪ್ರಕರಣಗಳು ಪಂಚಾಯಿತಿ ಕಟ್ಟೆಗೆ ಬರುವುದಿಲ್ಲ. ಜಾತಿಯ ಹಿರಿಯರು ತೊಂದರೆಗೊಳಗಾದ ಹೆಣ್ಣು ಅಥವಾ ಗಂಡಿನ ಮನೆಯಲ್ಲಿ ವಿಚಾರಣೆ ಮಾಡಿ ತೀರ್ಮಾನ ಹೇಳುವರು.

ಪಂಚಾಯಿತಿ ಕಟ್ಟೆಗೆ ಬರುವ ಎಲ್ಲಾ ಜಗಳ ತಂಟೆ ತಕರಾರುಗಳಿಗೂ ತೀರ್ಮಾನ ಕೊಡಲು ಸಾಧ್ಯವಿಲ್ಲ. ಕೆಲವೊಮ್ಮೆ ಕ್ಲಿಷ್ಟ ಪರಿಸ್ಥಿತಿ ನಿರ್ಮಾಣವಾದಾಗ, ಅಂದರೆ ಅಪರಾಧ ಕಂಡು ಹಿಡಿಯಲು ಸಾಧ್ಯವಿಲ್ಲ ಎಂದಾಗ ಪೋಲಿಸರ ವಶಕ್ಕೆ ಒಪ್ಪಿಸುತ್ತಾರೆ. ಕೋರ್ಟ್‌ಗಳ ಮೂಲಕ ನ್ಯಾಯವನ್ನು ಬಗೆಹರಿಸಿಕೊಳ್ಳುತ್ತಾರೆ.

ನಾಗರಿಕ ಹಿತರಕ್ಷಣ ಸಮಿತಿ ಅಥವಾ ಪಂಚಾಯಿತಿ ಮುಖಂಡರು ಬರಿ ನ್ಯಾಯ ತೀರ್ಮಾನಗಳನ್ನಲ್ಲದೆ ಅನೇಕ ಜನೋಪಯೋಗಿ ಕೆಲಸದಲ್ಲಿಯ ನ್ಯಾಯ ಮಂಡಳಿಯನ್ನು ಬಳಸಿಕೊಳ್ಳುವರು. ಊರಿನ ರಸ್ತೆ, ದೇವಸ್ಥಾನದ ರಿಪೇರಿ, ಕೆರೆ ರಿಪೇರಿ ಮತ್ತು ಜಾತ್ರೆ ಹಬ್ಬದ ದಿನಾಂಕ, ಪೂರ್ವ ತಯಾರಿಯ ಬಗ್ಗೆ, ಅನೇಕ ವಿಷಯಗಳ ಬಗ್ಗೆ ಊರಿನ ಮುಖಂಡರು ಮತ್ತು ಜನರನ್ನು ನ್ಯಾಯದ ಕಟ್ಟೆಗೆ ಊರು ಸಾರುವವನ ಮುಖಾಂತರ

ಕರೆಸುವರು. ಇಲ್ಲಿ ಗ್ರಾಮದ ರಸ್ತೆ ಕೆಲಸ, ಕೆರೆ ಕೆಲಸಕ್ಕೆ ಇಂತಿಷ್ಟು ಆಳು ಒಂದೊಂದು ಮನೆಯಿಂದ ಬರಬೇಕು. ಜಾತ್ರೆ, ಹಬ್ಬದ ವಿಷಯವಾದರೆ ಮನೆಗೆ ಇಷ್ಟು ಹಣ, ವರಾಡ ವಿಧಿಸುವರು. ವರಾಡದ ಹಣದ ಪ್ರಮಾಣ, ಪ್ರತಿಯೊಂದು ಮನೆಯ ಆರ್ಥಿಕ ಸ್ಥಿತಿಗತಿ ಜನಸಂಖ್ಯೆಯನ್ನು ಅವಲಂಭಿಸಿರುತ್ತದೆ. ಊರಿನ ಕೆಲಸ ಎಂದ ಮೇಲೆ ಎಲ್ಲಾ ಜಾತಿಯ ಹಿರಿಯರು ಸೇರಿ ತೀರ್ಮಾನ ತೆಗೆದುಕೊಳ್ಳುವರು. ಇಂತಹ ಸಭೆ ಸೇರಿರುವ ಸಂದರ್ಭದಲ್ಲಿ ಹೆಚ್ಚಿನ ಒಂದು ಗೌರವ ಹಾಗೂ ತೀರ್ಮಾನವನ್ನು ವೈಶ್ಯರಿಗೆ ತೆಗೆದುಕೊಳ್ಳಲು ಅವಕಾಶ ವಿರುತ್ತದೆ.

೩.೬. ಆಹಾರ ಪದ್ಧತಿ

ಜನಾಂಗಗಳು ವಾಸಿಸುತ್ತಿರುವ ಭೌಗೋಳಿಕ ಪರಿಸರಕ್ಕನುಗುಣವಾಗಿ ಅಡುಗೆ ಪದ್ಧತಿಯು ಇರುತ್ತದೆ. ಎಲ್ಲಾ ಕಡೆಯೂ ಒಂದೇ ರೀತಿಯ ಅಡುಗೆ ಪದ್ಧತಿ ಇರುವುದಿಲ್ಲ. ಈ ಕಾರಣದಿಂದ ಬಯಲು ಸೀಮೆ, ಕರಾವಳಿ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕಗಳಲ್ಲಿ ಉಟೋಪಚಾರಗಳಲ್ಲಿ ವ್ಯತ್ಯಾಸಗಳು ಕಂಡು ಬರುತ್ತವೆ. ಆಹಾರ ಪಾನೀಯಗಳು ಮಾನವನಿಂದ ಮಾನವನಿಗೆ ಜನಾಂಗದಿಂದ ಜನಾಂಗಕ್ಕೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಭಿನ್ನವಾಗುತ್ತ ಸಾಗಿದೆ. ಹೀಗಿರುವುದರಿಂದಲೇ ಆಹಾರ ಪಾನೀಯ ಪದ್ಧತಿಗಳು ಸಂಸ್ಕೃತಿಯ ಧ್ಯೋತಕವೆನಿಸಿಕೊಂಡಿತ್ತು. ಅವುಗಳ ಅಧ್ಯಯನವೇ ಒಂದು ಸಮಾಜದ ಒಂದು ಸಂಸ್ಕೃತಿಯ ಪುನರ್ ರಚನೆಯಾಗಿದೆ. ಆದರಿಂದ ಒಂದು ಜನಾಂಗದಲ್ಲಿಯೇ ಅವರು ನೆಲಸಿರುವ ಪ್ರದೇಶಕ್ಕೆ ಅನುಗುಣವಾಗಿ ಉಟೋಪಚಾರದಲ್ಲಿ ವ್ಯತ್ಯಾಸಗಳು ಉಂಟಾಗಿವೆ. ಪ್ರಸ್ತುತ ಹೈದ್ರಾಬಾದ್ ಕರ್ನಾಟಕದ ವೈಶ್ಯರ ಅಡುಗೆ ಪದ್ಧತಿಯನ್ನು ಇಲ್ಲಿ ಚರ್ಚಿಸಲಾಗಿದೆ.

ವೈಶ್ಯರು ಸಂಪೂರ್ಣವಾಗಿ ಸಸ್ಯಹಾರಿಗಳಾಗಿದ್ದಾರೆ. ಗುಣಮಟ್ಟದ ಆಹಾರವನ್ನು ಮಾತ್ರ ಸೇವಿಸುತ್ತಾರೆ. ಹೆಚ್ಚಾಗಿ ಅಡುಗೆಯನ್ನು ಮನೆಯಲ್ಲಿಯೇ ತಯಾರಿಸಿ ಊಟ ಮಾಡುತ್ತಾರೆ. ಹೋಟಲುಗಳಲ್ಲಿನ ತಿಂಡಿ ತಿನುಸುಗಳನ್ನು ಹೆಚ್ಚಾಗಿ ಸೇವಿಸುವುದಿಲ್ಲ. ವೈಶ್ಯರ ಅಡುಗೆ ಪದ್ಧತಿಯು ಸಾಂಪ್ರದಾಯಿಕವಾಗಿದ್ದು ಸ್ಥಳೀಯ ಗುಣವನ್ನು ಹೊಂದಿದೆ. ತರಕಾರಿಯಿಂದ ತಯಾರಿಸಿದ ಅಡುಗೆ ಇವರಿಗೆ ಹೆಚ್ಚು ಪ್ರಿಯವಾದವುಗಳಾಗಿವೆ. ವೈಶ್ಯರು ಅಡುಗೆಯನ್ನು ವಿಭಾಗಗಳಾಗಿ ಮಾಡಿಕೊಂಡಿದ್ದಾರೆ. ನಿತ್ಯ ಅಡುಗೆಗಳು, ಹಬ್ಬದ ಅಡುಗೆಗಳು, ಮದುವೆ ಸಮಾರಂಭದ ಅಡುಗೆಗಳು ತಿಥಿ ಇತ್ಯಾದಿ ಸಂದರ್ಭದಲ್ಲಿಯ ಅಡುಗೆಗಳು ಎಂದು ವಿಭಾಗಿಸಿಕೊಂಡು ವಿಶ್ಲೇಷಣೆಗೆ ಒಳಪಡಿಸಿದೆ.

ನಿತ್ಯ ಅಡುಗೆಗಳು

ವೈಶ್ಯರ ದಿನಿತ್ಯದ ಅಡುಗೆ ಸರಳವಾಗಿ ಮತ್ತು ಸುಲಭವಾಗಿರುತ್ತದೆ. ವ್ಯಾಪಾರ ಮಾಡುವಂತಹ ಕುಟುಂಬದಲ್ಲಿ ಹೆಚ್ಚಾಗಿ ಅನ್ನ, ಸಾಂಬಾರು, ಚಪಾತಿ ಮತ್ತು ರೊಟ್ಟಿಯನ್ನು ಹೆಚ್ಚಾಗಿ ಬಳಸುತ್ತಾರೆ. ಇದರ

ಜೊತೆಯಲ್ಲಿ ಪುಳಿಯೊಗರೆ, ತರಕಾರಿ ಫಲಾವು, ಚಿತ್ರಾನ್ನ, ಗೀ ರೈಸ್, ಮಸಾಲೆ ರೈಸ್ ಇಂತಹ ವಿಧವಾದಂತಹ ಅಡುಗೆಗಳನ್ನು ತಯಾರಿಸಿ ತಿನ್ನುತ್ತಾರೆ. ಇನ್ನು ಹೊಲ, ಗದ್ದೆ, ತೋಟಗಳಲ್ಲಿ ಕೆಲಸ ಮಾಡುವಂತಹ ಕುಟುಂಬದವರು ಶಕ್ತಿ ಬರುವುದಕ್ಕಾಗಿ ರಾಗಿ ಮುದ್ದೆ, ರೊಟ್ಟಿ, ಕಾಳುಗಳನ್ನು ಹೆಚ್ಚಾಗಿ ಬಳಸುತ್ತಾರೆ. ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಯ ಜನರು ಅಕ್ಕಿ ರೊಟ್ಟಿ ಮತ್ತು ಗೋಧಿ ರೊಟ್ಟಿಯನ್ನು ಹೆಚ್ಚಾಗಿ ಮಾಡುತ್ತಾರೆ. ಬಳ್ಳಾರಿ ಜಿಲ್ಲೆಯ ಜನರು ಹೆಚ್ಚಾಗಿ ಜೋಳದ ರೊಟ್ಟಿ ಮತ್ತು ಮುದ್ದೆಯನ್ನು ಮಾಡುತ್ತಾರೆ. ಬೆಳಗಿನ ಉಪಹಾರಕ್ಕಾಗಿ, ಪೂರಿ, ಇಡ್ಲಿ, ದೋಸೆ, ಚಪಾತಿ, ಉಪ್ಪಿಟ್ಟು, ವಗ್ಗರಣೆ, ಕಾಯಿಚಟ್ನಿ, ಶೇಂಗ ಮತ್ತು ಕಡಲೆ ಚಟ್ನಿಯನ್ನು ನಂಚಿಕೆಯಾಗಿ ಉಪ್ಪಿನಕಾಯಿಗಳನ್ನು ಬಳಸುತ್ತಾರೆ. ಹೈದ್ರಾಬಾದ್ ಕರ್ನಾಟಕದಲ್ಲಿ ಅವರೆಕಾಳು, ಅಲಸಂದಿ ಹೆಸರುಕಾಳುಗಳನ್ನು ಪಲ್ಯಕ್ಕಾಗಿ ಹೆಚ್ಚಾಗಿ ಬಳಸಿಕೊಳ್ಳುತ್ತಾರೆ.

ವೈಶ್ಯರು ಕಾಲಕ್ಕನುಗುಣವಾಗಿ ಅಡುಗೆಯನ್ನು ತಯಾರಿಸುವ ಪದ್ಧತಿ ಉಂಟು. ಚಳಿಗಾಲಕ್ಕೆ ವಿವಿಧ ಬಗೆಯ ಬಿಸಿ ಬಿಸಿ ಸೂಪ್‌ಗಳನ್ನು ತಯಾರಿಸುತ್ತಾರೆ. ಅವುಗಳ ವಿಧಗಳು ಪಾಲಕ್ ಸೂಪ್, ಟೊಮಾಟೋ ಸೂಪ್, ಆನಿಯನ್ ಸೂಪ್, ಪನ್ನೀರ್ ಪರೋಟ, ಪಾಲಕ್ ಫನ್ನಿರ್ ಕಬಾಬ್, ಪುದೀನ ಆಲೂಗಡ್ಡೆ ಫಿಂಗರ್ ಚಿಪ್ಸ್ ಇಂತಹ ವಿಧಗಳನ್ನು ಹೆಚ್ಚಾಗಿ ಚಳಿಗಾಲದಲ್ಲಿ ಬಳಸುತ್ತಾರೆ. ಮಳೆಗಾಲದಲ್ಲಿ ಬಿಸಿ ಬಿಸಿಯಾದ ಜೋಳ ಮತ್ತು ರಾಗಿ ರೊಟ್ಟಿಗಳನ್ನು ಜೊತೆಗೆ ದ್ವಿದಳ ದಾನ್ಯದ ಪಲ್ಯಗಳನ್ನು ಮಾಡುತ್ತಾರೆ. ತರಕಾರಿ ರೊಟ್ಟಿಯನ್ನು ಮತ್ತು ತಾಲಿಪಟ್ಟು, ವಡಪೆಗಳನ್ನು ಮಾಡುತ್ತಾರೆ. ವೈಶ್ಯರು ಬಳಸುವ ಉಪ್ಪಿನಕಾಯಿ ವಿಧಗಳು, ಸಾಸಿವೆ ಉಪ್ಪಿನಕಾಯಿ, ಮೆಂತ್ಯದ ಉಪ್ಪಿನಕಾಯಿ, ಕಾಕರಕಾಯಿ ಉಪ್ಪಿನಕಾಯಿ, ಕರಿಬೇವು ಉಪ್ಪಿನಕಾಯಿ, ನಿಂಬೆ ಮತ್ತು ಮಾವಿನ ಕಾಯಿ ಉಪ್ಪಿನಕಾಯಿ, ಹುಣಿಸೆಹಣ್ಣಿನ ಉಪ್ಪಿನಕಾಯಿಗಳ ಉಪಯೋಗವನ್ನು ಮಾಡುತ್ತಾರೆ. ಚಟ್ನಿ ಪುಡಿಯ ವಿಧಗಳು. ಹುರುಗಡಲೆಪುಡಿ, ಶೇಂಗಾಪುಡಿ, ಕೊಬರಿಪುಡಿ, ಕಾರಾಪುಡಿ, ಬೇಳೆ ಚಟ್ನಿಪುಡಿ, ಸಾಂಬಾರ್‌ಪುಡಿ, ಅನ್ನದ ಪುಡಿ, ಗೊಜ್ಜಿನಪುಡಿ, ಇವು ವೈಶ್ಯರ ವಿವಿಧ ರೀತಿಯ ಚಟ್ನಿ ಪುಡಿಗಳು.

ಹಬ್ಬದ ಅಡುಗೆಗಳು

ಹಬ್ಬದ ಅಡುಗೆಗಳು ದಿನ ನಿತ್ಯದ ಅಡುಗೆಗಳಿಗಿಂತ ಭಿನ್ನವಾಗಿರುತ್ತವೆ. ಸಾಮಾನ್ಯವಾಗಿ ಒಂದೊಂದು ಹಬ್ಬದಲ್ಲಿಯೂ ವಿಶೇಷವಾದ ಅಡುಗೆಗಳನ್ನು ಮಾಡುತ್ತಾರೆ. ಯುಗಾದಿಯಲ್ಲಿ ಬೇವು ಮತ್ತು ಹೋಳಿಗೆ, ಕರಿಗಡುಬುಗಳನ್ನು ತಯಾರಿಸುತ್ತಾರೆ. ನಾಗರ ಪಂಚಮಿಯಲ್ಲಿ ವಿಧವಿಧವಾದಂತಹ ಬೆಲ್ಲದ ಉಂಡಿಗಳನ್ನು ಮತ್ತು ಕರ್ಜಿಕಾಯಿಗಳನ್ನು ಮಾಡುತ್ತಾರೆ. ಗಣೇಶ ಚತುರ್ಥಿಯಲ್ಲಿ ಕೇವಲ ಕರಿಗಡುಬುಗಳನ್ನು ಮಾಡುತ್ತಾರೆ. ಕೇವಲ ಸಸ್ಯಹಾರಿಗಳಾಗಿರುವುದರಿಂದ ಸಿಹಿ ಅಡುಗೆಗಳನ್ನು ಮಾತ್ರ ಬಳಸುತ್ತಾರೆ. ಜೊತೆಗೆ ಅನ್ನ, ಸಾಂಬಾರು, ಸಾರು, ಕೋಸಂಬರಿ ಅನೇಕ ತರಹದ ತರಕಾರಿ ಪಲ್ಯಗಳನ್ನು ತಯಾರಿಸಿ ಭೋಜನ ಮಾಡುತ್ತಾರೆ.

ಮದುವೆ ಸಮಾರಂಭಗಳ ಅಡುಗೆ

ಇವು ಎಲ್ಲವುಕ್ಕಿಂತಲೂ ವಿಭಿನ್ನವಾದಂತಹ ಅಡುಗೆಗಳನ್ನು ಮದುವೆ ಸಮಾರಂಭಗಳಲ್ಲಿ ವೈಶ್ಯರು ಬಳಸುತ್ತಾರೆ. ಆರ್ಥಿಕವಾಗಿ ಪ್ರಬಲರಾಗಿರುವುದರಿಂದ ಮದುವೆಗಳಲ್ಲಿ ಉಪಹಾರಕ್ಕೆ ಒಂದು ವಿಧವಾದಂತಹ ಸಿಹಿಯನ್ನು ಮಾಡಿದರೆ ಊಟಕ್ಕೆ ಮತ್ತೊಂದು ತರಹದ ಸಿಹಿಯಾದಂತಹ ತಿನಿಸುಗಳನ್ನು ಮಾಡುತ್ತಾರೆ. ಉತ್ತರ ಭಾರತದ ಅಡುಗೆಯ ವ್ಯವಸ್ಥೆಯನ್ನು ಮಾಡಿರುತ್ತಾರೆ. ಹೋಳಿಗೆ ಊಟ, ಲಡ್ಡು, ವಿಧವಾದ ಬೇಕರಿ ಸಿಹಿಯ ವಿಧಗಳು ಐಸ್‌ಕ್ರೀಂ, ತಂಪಾದ ಪಾನೀಯಗಳು ಅನೇಕ ತರಹದ ವ್ಯವಸ್ಥೆಗಳನ್ನು ಮದುವೆ ಸಮಾರಂಭದಲ್ಲಿ ವ್ಯವಸ್ಥೆ ಮಾಡಿರುತ್ತಾರೆ.

ತಿಥಿಯ ಊಟವು ವೈಶ್ಯರಲ್ಲಿ ಭಿನ್ನವಾಗಿರುತ್ತದೆ. ಇದು ಹದಿನಾರು ದಿನಗಳ ಕಾರ್ಯಕ್ರಮ ಇವರಲ್ಲಿ ನಡೆಯುತ್ತದೆ. ದಿನಗಳಿಗನುಗುಣವಾಗಿ ಊಟದ ತಿನಿಸುಗಳನ್ನು ಮಾಡುತ್ತಾರೆ. ಕೊನೆಯ ದಿವಸ ವಡೆ ಮತ್ತು ಪಾಯಸ, ಅನ್ನ ಸಾಂಬಾರು, ತರಕಾರಿ ಪಲ್ಯಗಳನ್ನು ಮಾಡುತ್ತಾರೆ. ಇವು ವೈಶ್ಯರ ಆಹಾರ ಪದ್ಧತಿಯಾಗಿದೆ.

೩.೭. ಉಡುಗೆ-ತೊಡುಗೆ

ಒಂದು ದೇಶದ ಉಡಿಗೆ-ತೊಡಿಗೆಗಳು ಅಲ್ಲಿಯ ಸಭ್ಯತೆ ಮತ್ತು ಸಂಸ್ಕೃತಿಯ ಪ್ರತೀಕಗಳಾಗಿರುತ್ತವೆ. ಭಾರತದಲ್ಲಿ ಪ್ರಾಂತ್ಯ ಪ್ರಾಂತ್ಯಕ್ಕೂ ಉಡಿಗೆ-ತೊಡಿಗೆಗಳಲ್ಲಿ ವ್ಯತ್ಯಾಸವಿದೆ. ಭಾರತದ ಧಾರ್ಮಿಕ ವಿವಿಧತೆಯಲ್ಲಿ ಏಕತೆಯಿದ್ದರೂ ಉಡಿಗೆ ತೊಡಿಗೆಗಳಲ್ಲಿ ನಾನಾ ಪ್ರಕಾರಗಳಿವೆ. ಅದೇ ರೀತಿ ಹೈದ್ರಾಬಾದ್ ಕರ್ನಾಟಕದ ವೈಶ್ಯರ ಉಡಿಗೆ ತೊಡುಗೆಗಳು ವಿಭಿನ್ನ ರೀತಿಯಾಗಿವೆ. ಮೈ ಮುಚ್ಚುವಂತೆ ಬಟ್ಟೆ ಧರಿಸುವುದು ಸಭ್ಯತೆಯ ಲಕ್ಷಣ, ವಾಸ್ತವವಾಗಿ ಧಾರ್ಮಿಕ, ಪರಂಪರಾಗತ ಆಚರಣೆಗಳನ್ನು ಬಾಹ್ಯ ರೂಪದಲ್ಲಿ ಬಿಂಬಿಸುವ ಸಾಧನಗಳೇ ಉಡಿಗೆ-ತೊಡಿಗೆಗಳು. ಈ ಉಡಿಗೆ ತೊಡಿಗೆಗಳು ಸಾಂಪ್ರದಾಯಿಕವಾಗಿ ಬೇರೆ ಬೇರೆ ಇವೆ. ಉದಾಹರಣೆಗೆ ಸ್ತ್ರೀಯರಲ್ಲಿ ಸೀರೆ ಉಡುವ ವ್ಯತ್ಯಾಸಗಳು ಕೊಡವ, ಗುಜರಾತಿ, ಕನ್ನಡ, ಐಯ್ಯರ್ ಇತ್ಯಾದಿ ಅಂದರೆ ಪರಂಪರೆ ಮತ್ತು ಧಾರ್ಮಿಕತೆಗೆ ತಕ್ಕಂತೆ ಪೋಷಾಕುಗಳಿರುತ್ತವೆ. ದೇವರ ಪೂಜೆ ಮಾಡುವ ಪೂಜಾರಿಯ ಉಡಿಗೆ ಒಂದು ವಿಧವಾದರೆ, ಕಚೇರಿಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳ ಉಡಿಗೆ ಇನ್ನೊಂದು ತರಹ ಇರುತ್ತದೆ. ಶಾಲೆ-ಶಾಲೆಗಳ ಮಕ್ಕಳ ಸಮವಸ್ತ್ರಗಳಲ್ಲಿ ವ್ಯತ್ಯಾಸವಿರುತ್ತದೆ. ನಾಟಕ ಹರಿಶ್ಚಂದ್ರ ಪಾತ್ರಧಾರಿಯು ಪ್ಯಾಂಟ್-ಶರ್ಟ್ ಧರಿಸಿದರಾಗದು, ಉಡಿಗೆಯು ಗೌರವದ ಮಾನದಂಡವಾಗಿದೆ. ಸ್ತ್ರೀಯರು ಲಕ್ಷಣವಾಗಿ ಸೀರೆಯುಟ್ಟು, ಹಣೆಗೆ ತಿಲಕವಿಟ್ಟರೆ ಅಥವಾ ಮೈ ಮುಚ್ಚುವಂತೆ ಚೂಡಿದಾರ್ ಧರಿಸಿದರೆ ಗೌರವಕ್ಕೆ ಪಾತ್ರರಾಗುತ್ತಾರೆ. ಆದರೆ ಅದೇ ಸ್ತ್ರೀಯು ಅತೀ ಸಣ್ಣ ಬಟ್ಟೆ ಧರಿಸಿ ಪ್ರದರ್ಶನದ ಪ್ರಚಾರದ ಸಾಧನವಾದಾಗ ಅಸಭ್ಯವಾಗಿ ಕಾಣುತ್ತಾಳೆ.

ಇತ್ತೀಚಿನ ದಿನಗಳಲ್ಲಿ ಪುರುಷರು ಮೈ ತುಂಬ ಬಟ್ಟೆ ಧರಿಸುತ್ತಾರೆ. ಆದರೆ ಎಷ್ಟೋ ಬಾಲಕಿಯರು, ಪ್ರೌಢ ಸ್ತ್ರೀಯರು ಅರೆನಗ್ನತೆಯನ್ನು ಪ್ರದರ್ಶಿಸುತ್ತಾರೆ. ಪ್ರಾಚೀನ ಕಾಲದಲ್ಲಿ ಪುರುಷರು ಮೈ ಪೂರ್ತಿ

ಬಟ್ಟೆ ಧರಿಸದಿದ್ದರೂ ಸ್ತ್ರೀಯರು ಮೈ ತುಂಬ ಬಟ್ಟೆಧರಿಸಿ, ಗೌರವಕ್ಕೆ ಪಾತ್ರರಾಗಿರುತ್ತಿದ್ದರು. ಮಾತೆ, ಭಗನಿ, ಪುತ್ರ ಕುಲವಧೂ ಮುಂತಾದ ಬಿರುದಾಂಕಿತರು ಉಡಿಗೆ-ತೊಡಿಗೆಗಳಲ್ಲೂ ಎಚ್ಚರದಿಂದಿರಬೇಕಲ್ಲವೇ? ಉಡಿಗೆ ಯಾವುದೇ ಇರಲಿ, ಮೈ ಮುಚ್ಚಿರಲಿ ಅದು ನೀತಿ, ಧರ್ಮ ಮತ್ತು ಸಭ್ಯತೆಯ ಪ್ರತೀಕವಾಗಿರುತ್ತದೆ.

ಉಡುಗೆ, ಪೋಷಾಕು, ಬಟ್ಟೆ-ಬರೆ, ಅರಿವೆ ಮುಂತಾದವು ಒಂದೇ ಅರ್ಥ ಧ್ವನಿಸುವ ಪದಗಳು. ಶರೀರದ ಮೇಲೆ ಮೆರೆಯುವ ಈ ಸಾಧನಗಳು ಮನುಷ್ಯನಿಗೆ ಮಾತ್ರ ಮೀಸಲು ಅನ್ಯ ಪ್ರಾಣಿಗಳಿಂದ ಆತನನ್ನು ಪ್ರತ್ಯೇಕಿಸುವ ಪರಿಕರಗಳಲ್ಲಿ ಇವೂ ಸೇರುತ್ತವೆ. ಸುಮಾರು ೧೦,೦೦೦ ವರ್ಷಗಳ ಹಿಂದಿನಿಂದಲೂ ಬಟ್ಟೆ ಬಳಕೆಯ ಸಾಕ್ಷ್ಯಾಧಾರಗಳಿವೆ. ಪರಿಸರದಲ್ಲಿ ದೊರೆಯುವ ವಸ್ತುಗಳನ್ನೇ ಸಂಸ್ಕರಿಸಿ ವಿವಿಧ ವಿನ್ಯಾಸಗಳೊಂದಿಗೆ ಕಲಾತ್ಮಕವಾಗಿ ಬಳಸಿಕೊಳ್ಳುವುದರಲ್ಲಿ ಮಾನವ ಅದ್ವಿತೀಯ, ಆದಿಮಾನವ ಬೆತ್ತಲೆಯ ನಂತರ ಮುಜುಗರ ಕ್ಕೊಳಗಾಗಿ ಎಲೆಯನ್ನು ಸೊಪ್ಪಿನ ಕೋಲನ್ನು ದೇಹದ ಕೆಲಭಾಗ ಮುಚ್ಚಿಕೊಳ್ಳಲು ಹವಣಿಸಿದ ನಂತರ ಪ್ರಾಣಿಗಳ ಚರ್ಮದ ಬಳಕೆ, ನಾರಿನ ಉಡುಗೆಗಳ ಬಳಕೆ ನಂತರದಲ್ಲಿ ಬಟ್ಟೆಯ ಬಳಕೆ ಹೀಗೆ ಉಡುಗೆ ಯಲ್ಲಿಯು ವಿಕಾಸವಾಗುತ್ತಾ ಸಾಗಿದೆ. ಸಮಾಜ ವರ್ಗೀಕೃತಗೊಂಡ ನಂತರ ಅದಕ್ಕೆ ತಕ್ಕಂತೆ ಉಡುಗೆ ತೊಡುಗೆ ಗಳು ನಿಗದಿಗೊಂಡಿದ್ದುಂಟು. ಮೊದಲಿಗೆ ರಾಜ ಮಹಾರಾಜರು ಹಾಗೂ ಭಾರೀ ಉಳ್ಳವರ ಹೊರತಾಗಿ ಇನ್ನೆಲ್ಲ ಸಾಮಾನ್ಯರಿಗೆ ಹತ್ತಿ ಬಟ್ಟೆಯೇ ಲಭ್ಯವಾಗಿತ್ತು.

ಮಾನವನಿಗೆ ಗಾಳಿ, ನೀರು, ಆಹಾರ ಅವಶ್ಯಕವಿದ್ದಂತೆ ಉಡುಗೆಯೂ ಕೂಡ ಅಷ್ಟೇ ಅವಶ್ಯಕ. ಒಬ್ಬ ಮನುಷ್ಯನ ಗುಣನಡತೆಗಳನ್ನು ಅವನು ಧರಿಸಿದ ಉಡುಗೆಗಳಿಂದ ಗುರುತಿಸಬಹುದು. ಉಡುಗೆಗಳು ಅವನ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಪ್ರತಿನಿಧಿಸುತ್ತವೆ. ಈ ಉಡುಗೆಗಳು ಪ್ರಾದೇಶಿಕವಾಗಿ ವೈವಿಧ್ಯತೆಯನ್ನು ಪಡೆದುಕೊಂಡಿದೆ. ಯಾವುದೇ ಒಬ್ಬ ವ್ಯಕ್ತಿಯು ತೊಡುವ ಬಟ್ಟೆ ಮಾಡಿಕೊಳ್ಳುವ ಮನುಷ್ಯನ ಬದುಕಿನಲ್ಲಿ ಆದ ಸಾಂಸ್ಕೃತಿಕ ಸಾರ್ವಜನಿಕ, ಬದಲಾವಣೆ ವಿಕಾಸಗಳು ಒಡವೆ ತಯಾರಿಕೆ ಹಾಗೂ ಧರಿಸುವಿಕೆಯೊಂದಿಗೆ ನಿರಂತರ ಸಂಬಂಧ ಹೊಂದಿವೆ(ಕಮಲಾಹೆಮ್ಮಿಗೆ, ೧೯೯೪, ಪುಟ ೧೦೪). ಆಭರಣಗಳು ಹೇಗೆ ರೂಪ ತಾಳಿದವು ಅವುಗಳ ಹಿಂದಿನ ಉದ್ದೇಶ ಏನು ಎಂಬುದರ ಬಗ್ಗೆ ಕಮಲಾ ಹೆಮ್ಮಿಗೆಯವರು ಆಭರಣಗಳ ಬಳಕೆ ಮೊದಲು ಭಯದಿಂದ ಬಳಕೆಯಾಗಲ್ಪಟ್ಟಿತು. ಪ್ರವಾಹ, ಸಿಡಿಲು, ಭೂಕಂಪನಗಳಿಂದ ರಕ್ಷಣೆ ಹೊಂದಲು 'ತಾಯಿತ, ಹುಲಿಯುಗುರು, ರುಂಡ ಮಾಲೆ, ಕವಡೆಸರಗಳು ಬಳಸತೊಡಗಿದ, ಮೊದಲಿಗೆ ಒರಟು ಸ್ವರೂಪದಲ್ಲಿದ್ದ ಇವು ಕ್ರಮೇಣ ಪರಿಷ್ಕರಣಗೊಂಡವು' ಎಂದು ತಿಳಿಸಿದ್ದಾರೆ. ಅಲಂಕಾರದ ಸಾಧನಗಳು ಪೂರ್ವ ಇತಿಹಾಸ ಕಾಲದಿಂದ ಸಂಸ್ಕೃತಿಯಲ್ಲಿ ಹುದುಗಿವೆ. ಸರಳ ಮಾದರಿಯ ಮಣಿಗಳು ಮತ್ತು ಬಳೆಗಳು ಜನರ ಮುಖಾಂಲಂಕಾರಿಕ ಆಭರಣಗಳಾಗಿದ್ದವು. ಅಗೆಡ್ ಚಾಲ್ಸಿಡಾನಿ, ಕಾರ್ನೀಲಿಯ, ಶಂಖ, ಸುಟ್ಟ ಮಣ್ಣಿನ ಗೋಲಾಕಾರದ ಸಾಮಾನ್ಯ ಚಂದೋಳಿ ಮುಂತಾದ ಸರಳ ವಸ್ತುಗಳನ್ನು ಧರಿಸುತ್ತಿದ್ದರು. ತಾಮ್ರಯುಗದ ಒಂದು ಶವಗುಣಿಯಲ್ಲಿ ಒಂದು ಮಗುವಿನ ಅಸ್ಥಿಪಂಜರದ ಕತ್ತಿನಲ್ಲಿ ಸಿಲ್ಕ್‌ದಾರದಲ್ಲಿ

ಪೋಣಿಸಿದ ತಾಮ್ರದ ಮಣಿಗಳ ಸರವಿದ್ದಿತು. ತಾಮ್ರದ ದಪ್ಪ ತಂತಿಯಲ್ಲಿ ಮಾಡಿದ ತುದಿಯಲ್ಲಿ ಸೇರಿಸಿದ ಬಳೆಗಳ ಸರ್ವೇಸಾಮಾನ್ಯ ಬ್ರಹ್ಮಗಿರಿ ಮತ್ತು ತೇರದಾಳಗಳಲ್ಲಿ ಇಂಥ ಬಳೆಗಳು ದೊರೆತಿವೆ.

ನಿಸರ್ಗ ಮಾನವ ಬೆಳವಣಿಗೆಗೆ, ಆಲೋಚನೆಗೆ ಪೂರಕ ವಾತಾವರಣ ಕಲ್ಪಿಸುತ್ತಲೇ ಬಂದಿದೆ. ಮಾನವ ನಿಸರ್ಗವನ್ನು ಅನುಸರಿಸಿ ಮುಂದುವರೆದವನು. ನಿಸರ್ಗದಲ್ಲಿ ಕಾಣಬರುವ ಪ್ರಾಣಿ-ಪಕ್ಷಿ, ಮರ -ಗಿಡಗಳ ಚೆಲುವನ್ನು ನೋಡಿ ಮರುಳಾಗಿ, ಅವುಗಳಿಂದ ದೊರೆತ ಕೆಲ ಪರಿಕರಗಳನ್ನು ಧರಿಸಿ ಆನಂದಿಸಿರಬೇಕು. ತನ್ನ ಜೀವನದ ಅಸ್ತಿತ್ವಕ್ಕೆ ಅವಶ್ಯಕವಾದ ಅಲಂಕಾರ, ಹಾಕಿಕೊಳ್ಳುವ ಒಡವೆಗಳು ಅವರ ಸೌಂದರ್ಯ ಪ್ರಜ್ಞೆಯ ಅಭಿವ್ಯಕ್ತಿಗಳಾಗಿವೆ. ಉಡುಗೆಗಳು ಅವರ ಮಾನಸಿಕ ಸಂತೋಷ ಮತ್ತು ಸುಖವನ್ನು ಹೆಚ್ಚಿಸುತ್ತವೆ. ಆದರೂ "ಸಾಮಾಜಿಕ, ರಾಜಕೀಯ, ಧಾರ್ಮಿಕ ಮೌಲ್ಯಗಳು ಬದಲಾದಂತೆಲ್ಲ ಜನರು ಸಾಮಾಜಿಕ ಪರಿವರ್ತನೆಗೆ ಒಳಪಟ್ಟಂತೆಲ್ಲಾ ಪ್ರತಿಯೊಂದು ಸಮೂಹ ತನ್ನ ನೀತಿ ನಿಯಮಗಳಲ್ಲಿ ಬದಲಾಗುತ್ತದೆ" ಇದು ಉಡುಗೆ ತೊಡುಗೆಗಳಿಗೂ ಅನ್ವಯಿಸುತ್ತದೆ. ವಿಶೇಷವಾಗಿ ಆಯಾಯ ಜನಾಂಗಗಳು ನಡೆಸುವ, ಅವರದೆ ಆದ ಹಬ್ಬ, ಜಾತ್ರೆ, ಹರಕೆ, ವಿವಾಹ ಮೊದಲಾದವುಗಳಲ್ಲಿ ತೊಡುವ ಉಡುಗೆಗಳಲ್ಲಿ ಮಾತ್ರ ವ್ಯತ್ಯಾಸಗಳನ್ನು ಕಂಡುಕೊಳ್ಳಬಹುದು. ಆದರೆ ಅದೇ ಭೌಗೋಳಿಕ ಪರಿಸರದಲ್ಲಿ ನೆಲಸಿದ ಜನರು, ಆ ಪ್ರದೇಶಕ್ಕೆ ಹೊಂದಿ ಕೊಳ್ಳುವ ಉಡುಗೆ -ತೊಡುಗೆಗಳನ್ನು ಧರಿಸುತ್ತಾರೆ. ಅದರಂತೆ ವೈಶ್ಯರು ಕೂಡಾ ದಿನನಿತ್ಯ ಇತರೆ ಜನಾಂಗದಂತೆ ಉಡುಗೆ-ತೊಡುಗೆಗಳಿದ್ದು ವಿಶೇಷ ಸಂದರ್ಭದಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಅಗತ್ಯಗಳಿಗನುಗುಣವಾಗಿ ಆ ಸ್ಥಳೀಯ ಉಡುಗೆಗಳನ್ನು ತೊಡುತ್ತಾರೆ.

ಆಭರಣ ಎಂದರೆ ಕನ್ನಡ ರತ್ನಕೋಶದಲ್ಲಿ ಒಡವೆ ಎಂಬರ್ಥವಿದೆ. ಹಾಗೆಯೇ ಕರಕುಶಲ ಕಲೆಗಳು (ಕ.ವಿ.ಹಂ) ಕೋಶದಲ್ಲಿ ಒಡವೆ ಎಂಬುದಕ್ಕೆ ದಾಗೀನು ಎಂದು ಹೆಸರಿದೆ. ಶಿಲಾಯುಗದ ಮಾವನ ಕಲ್ಲಿನಲ್ಲಿ ಸರಗಳನ್ನು ಧರಿಸಿದರೆ, ಲೋಹಯುಗದವರು ಚಿನ್ನ ಬೆಳ್ಳಿ ಹಿತ್ತಾಳೆಗಳನ್ನು ಒಡವೆ ವಸ್ತುಗಳಾಗಿ ಬಳಸಿದರು. ಮನುಷ್ಯನ ಬದುಕಿನಲ್ಲಿ ಆದ ಸಾಂಸ್ಕೃತಿಕ ಸಾರ್ವಜನಿಕ, ಬದಲಾವಣೆ ವಿಕಾಸಗಳು ಒಡವೆ ವಸ್ತುಗಳಾಗಿ ಬಳಸಿದರೆ ಕೆಲವು ವಸ್ತುಗಳಲ್ಲಿ ಮಾಂತ್ರಿಕ ಗುಣವಿದೆ ಎಂದು ಬಗೆದು ಅವುಗಳನ್ನು ಯಾವಾಗಲೂ ತನ್ನೊಡನೆಯೇ ಹೊತ್ತುಕೊಂಡು ತಿರುಗಾಡಲು ತೊಡಗಿದನು. ಇದಕ್ಕೆ ಅನುಕೂಲವಾಗುವಂತೆ ಅವುಗಳ ಆಕಾರ-ಆಕೃತಿಗಳನ್ನು ನಿರ್ಮಿಸಿಕೊಂಡು ತಿರುಗಾಡಲು ತೊಡಗಿದನು. ಇದಕ್ಕೆ ಅನುಕೂಲವಾಗುವಂತೆ ಅವುಗಳ ಆಕಾರ ಆಕೃತಿಗಳನ್ನು ನಿರ್ಮಿಸಿಕೊಂಡನು. ಇಂದಿಗೂ ಮಾನವನ ಹಲವಾರು ಆಭರಣಗಳಲ್ಲಿ ಮಾಂತ್ರಿಕ ಶಕ್ತಿ ಇದೆಯೆಂಬ ನಂಬುಗೆಯನ್ನು ಕಂಡುಕೊಳ್ಳಬಹುದು.

ಭಾರತದಲ್ಲಿ ಆಭರಣಗಳ ಬಳಕೆ ಹರಪ್ಪಾ-ಮಹೆಂಜೋದಾರೋ ಮತ್ತು ವೇದಗಳ ಕಾಲದಿಂದಲೆ ಪ್ರಚಲಿತದಲ್ಲಿದೆ. ಮಹರ್ಷಿ ಕರ್ಕಿವರ್ತನ ಪ್ರಕಾರ ಋಗ್ವೇದ ಪ್ರಯಾಸಗಳಲ್ಲಿ ಆತನು ಈ ರೀತಿ ಹೇಳುತ್ತಾನೆ. ಅವನಿಗೆ ಬಂಗಾರದ ಕಿವಿ ಓಲೆಗಳ ಕಂಠಹಾರವಿತ್ತೆಂದು ಹೇಳುತ್ತಾನೆ. (Rama Dhamisa page 11)

ಆದಿ ಧರ್ಮ ಗ್ರಂಥಗಳಲ್ಲಿ ಆಭರಣಗಳ ಉಲ್ಲೇಖವಿದೆ. ರಾಮಾಯಣ, ಮಹಾಭಾರತದಲ್ಲಿ ರಾಜ ಮಹಾರಾಜರು ಆಭರಣಗಳನ್ನು ಧರಿಸುತ್ತಿದ್ದರು. ಕರ್ನಾಟಕದಲ್ಲಿ ಚಿತ್ರದುರ್ಗ ಪರಿಸರದ ಚಂದ್ರವಳ್ಳಿಯಲ್ಲಿ ವಿವಿಧ ಒಡವೆ ವಸ್ತುಗಳು ದೊರೆತಿವೆ. ತಾಮ್ರದ ಉಂಗುರ, ಪಂಚಲೋಹದ ಹಾಗೂ ಕಬ್ಬಿಣದ ಉಂಗುರಗಳು ಎಲುಬಿನಲ್ಲಿ ಕೊರೆದು ಮಾಡಿದ ಸರ ಇತ್ಯಾದಿಗಳು ದೊರಕಿವೆ. ಬಹುಶಃ ಇವು ಮಾಂತ್ರಿಕ ಮೂಲವಾಗಿರಬೇಕು(ಕಮಲಾ ಹೆಮ್ಮಿಗೆ, ೧೯೯೪, ಪುಟ ೧೦೪). ನಮ್ಮಲ್ಲಿ ದೇವತೆಗಳು, ಶ್ರೀ ವಾಸವಿ ಕನ್ನಿಕಾಪರಮೇಶ್ವರಿ, ಪದ್ಮಾವತಿ, ಪಾರ್ವತಿ ಮಾರಮ್ಮ, ಹುಲಿಗೆಮ್ಮ, ರೇಣುಕಮ್ಮ ಮುಂತಾದ ಗ್ರಾಮ ದೇವತೆಗಳ ಆಭರಣಗಳು ಚಂದ್ರಸರ, ಗಿಳಿ ಹಚ್ಚಿದ ಮುಳ್ಳು, ಕಂಕಣ, ನತ್ತು ಜೋಡೇ ಜೋಡು, ಹರಡೆ ಜೋಡು, ಕೊಪ್ಪೆ ಜೋಡು, ಬಂದಿಸರಿಗೆ, ಗೆಜ್ಜೆಟೀಕೆ, ಕರ್ಣಪೂವು, ನೆಲ್ಲಿಕಾಯಿಸರ, ನಾಗಭೂಷಣ, ಪುಲ್ಲೆಸರ, ಸವರನ್ ಸರ, ನಾಗಸಂಪಿಗೆ ಸರ, ಜೋಮಾಲೆ ಸರ, ಮುತ್ತಿನ ಕಂಠಿ, ಕಠಾಣಿಸರ, ಶೃಂಗಾರ ಮಣಿಸರ, ಗಿಜಿಬಿಜಿ ಸರ, ಚತ್ರಛಾಮರ ಪ್ರಭಾವಳಿ ಇವೆಲ್ಲವುಗಳು ದೇವರುಗಳಿಗೆ ಧರಿಸುವ ಆಭರಣಗಳು. ಇವು ಬೆಳ್ಳಿ, ಬಂಗಾರ, ಹಿತ್ತಾಳೆ, ಲೋಹದಿಂದ ಅಕ್ಕಸಾಲಿಗ ರಚನೆ ಮಾಡುತ್ತಾನೆ(ಪಿ.ಆರ್.ತಿಪ್ಪೇಸ್ವಾಮಿ, ೧೯೯೮, ಪುಟ ೧೯೭). ಗ್ರಾಮದೇವತೆಗಳಿಗೆ ನಮ್ಮ ಜನಪದರು ವೈವಿಧ್ಯಮಯವಾದ ಆಭರಣಗಳನ್ನು ಧರಿಸಿ ಭಕ್ತಿ ಭಾವದಿಂದ ತಲ್ಲೀನರಾಗುತ್ತಿದ್ದರು.

ಎಲ್ಲಾ ಜನಾಂಗದಲ್ಲೂ ಆಭರಣ ಧರಿಸುವುದು ಅವರ ಅಭಿರುಚಿ ಮತ್ತು ರಸಿಕತೆಯ ಕುರುಹಾಗಿಯೂ ಮೂಡಿ ಬಂದಿದೆ. ಅದೇ ರೀತಿ ವೈಶ್ಯರೂ ಆಭರಣಗಳನ್ನು ಧರಿಸುವುದರಲ್ಲಿ ಮೊದಲನೇ ಸ್ಥಾನ ಹೊಂದಿದ್ದಾರೆ. ಏಕೆಂದರೆ ಆರ್ಥಿಕತೆಯಲ್ಲಿ ತೊಂದರೆಯಿಲ್ಲದ್ದರಿಂದ ಪ್ರತಿಯೊಂದು ವೈಶ್ಯ ಕುಟುಂಬದಲ್ಲಿಯೂ ಏನಿಲ್ಲವೆಂದರೂ ಒಂದು ಗುಲಗಂಜಿಯಷ್ಟು ಬಂಗಾರವಿರುತ್ತದೆ ಎಂದು ಪ್ರತೀತಿ ಇದೆ. ಹೈದ್ರಾಬಾದ್ ಕರ್ನಾಟಕದ ವೈಶ್ಯರು ಏಕತ್ರವಾದ ಉಡುಗೆ ಸಂಪ್ರದಾಯವಿಲ್ಲ ಅವರವರ ಆರ್ಥಿಕತೆಯ ಅನುಗುಣವಾಗಿ ಬೆಲೆ ಬಾಳುವ ಉಡುಗೆಗಳನ್ನು ಧರಿಸುತ್ತಾರೆ.

ಆಭರಣಗಳನ್ನು ಪರಿಸರ ಮತ್ತು ವ್ಯಕ್ತಿಯ ಆಧಾರದ ಮೇಲೆ ಗಮನಿಸುವುದು ಸಮಂಜಸವಲ್ಲ. ಆಭರಣ ಶೃಂಗಾರ ಸಾಧನಗಳಾಗಿ ಜನಪದರಲ್ಲಿ ಬಳಕೆಗೊಳ್ಳುತ್ತವೆ. ಆಭರಣಗಳನ್ನು ಗಂಡಸರ ಆಭರಣಗಳು, ಹೆಂಗಸರ ಆಭರಣಗಳು, ಮಕ್ಕಳ ಆಭರಣಗಳು ಎಂದು ವಿಭಾಗಿಸಿ ನೋಡಬಹುದಾದರೂ ಹೆಂಗಸರ ಆಭರಣಗಳಷ್ಟು ವೈವಿಧ್ಯತೆ ಗಂಡಸರ ಮತ್ತು ಮಕ್ಕಳ ಆಭರಣಗಳಲ್ಲಿ ಇರದ ಕಾರಣ ವಿವಿಧ ದೃಷ್ಟಿಕೋನಗಳ ಹಿನ್ನಲೆಯಲ್ಲಿ ಅವುಗಳು ಹುಟ್ಟಿಕೊಂಡ ಬಗೆಗಳನ್ನು ಗುರುತಿಸಬಹುದು.

ಕೊನೆಟಿಪ್ಪಣಿ

೧. ಟೀ.ಕಾ. ವೆಂಕಟಾಚಲ ಗುಪ್ತ, ೧೯೯೫, ಪು. ೬-೪೮

೨. ಶ್ರೀ ಎಸ್.ಮಂಜುನಾಥ ಶ್ರೇಷ್ಠಿ, ೨೦೦೩, ಪು. ೩೪೨

[illegible]

[illegible]

[illegible]

[illegible]

[illegible]

ಅಧ್ಯಾಯ ೪

ಆಚರಣೆಗಳು

ಅಧ್ಯಾಯ ೪

ಆಚರಣೆಗಳು

ಸಮಾಜವನ್ನು ಒಂದುಗೂಡಿಸುವ ಶಕ್ತಿಯನ್ನು ಸಂಪ್ರದಾಯಗಳು ಮತ್ತು ಆಚರಣೆಗಳು ನೀಡುತ್ತವೆ. ಇವು ವ್ಯಕ್ತಿಯ ಬಾಳಿನ ಅವಿಭಾಜ್ಯ ಸಂಗತಿಗಳಾಗಿ, ಅವನ ಜೀವನವನ್ನು ರೂಪಿಸಿ, ಸಂಸ್ಕೃತಿಯನ್ನು ಪೋಷಿಸಿ, ನಾಗರಿಕತೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಇದು ಇವುಗಳ ಮೂಲ ನಂಬಿಕೆಯೇ ಆಗಿದೆ. "ಮನುಕುಲದ ಶ್ರೇಯಸ್ಸಿಗಾಗಿ ಅತ್ಯವಶ್ಯವೆಂದು ಎಣಿಕೆಗೊಂಡಿರುವ ನಂಬಿಕೆಗಳೇ ಸಂಪ್ರದಾಯಗಳಾಗಿ ವಿಧಿ ನಿಷೇಧಗಳಾಗಿ ಉಪಾಸನೆಗಳಾಗಿ ಸಾಕಾರತೆ ಪಡೆಯುತ್ತವೆ"(ಜವರೇಗೌಡ ದೇ. ೧೯೭೬ ಪುಟ ೩೨೧). ಇಂಥ ಆಚರಣೆಗಳಿಂದಲೇ ಸಂಪ್ರದಾಯಗಳು ಉಳಿದುಕೊಂಡು ಬಂದಿವೆ. ಭೌಗೋಳಿಕ ಮತೀಯ ಹಾಗೂ ಸಾಂಸ್ಕೃತಿಕ ಪರಿಸರಗಳ ಹಿನ್ನೆಲೆಯಲ್ಲಿ ಆಯಾಯ ಜನರ ಮನೋಧರ್ಮವನ್ನವಲಂಬಿಸಿ ಸಂಪ್ರದಾಯಗಳು ಉಗಮಿಸಿ ಆಚರಣೆಗಳಿಂದ ಉಳಿದುಕೊಂಡಿವೆ. ಮಾನವನ ಭೌದ್ಧಿಕ, ಮಾನಸಿಕ ಹಾಗೂ ಶಾರೀರಿಕ ಗುಣ ಲಕ್ಷಣ ಕ್ರಿಯೆಗಳು ಸಾರ್ವತ್ರಿಕವಾಗಿ ಏಕ ರೂಪವಾಗಿರುವುದರಿಂದ ಒಂದೇ ಬಗೆಯ ಸಂಪ್ರದಾಯ ಆಚರಣೆಗಳು ಭಿನ್ನ ಭಿನ್ನ ಪ್ರದೇಶಗಳಲ್ಲಿ ಸ್ವತಂತ್ರ್ಯವಾಗಿ ರೂಪುಗೊಳ್ಳಲು ಅವಕಾಶವುಂಟು. ಈ ಕಾರಣದಿಂದಲೇ ಬೇರೆ ಬೇರೆ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ವಿವಾಹ ಸಂಬಂಧವಾದ ಹಾಗೂ ಮರಣೋತ್ತರ ಸಂಪ್ರದಾಯಾಚರಣೆಗಳಲ್ಲಿ ಸಾದೃಶ್ಯ ಮತ್ತು ವೈದೃಶ್ಯಗಳಿವೆ.

ಮೌಲ್ಯಗಳು ಬದಲಾದಂತೆ ಸಂಪ್ರದಾಯ ಮತ್ತು ಆಚರಣೆಗಳು ವ್ಯತ್ಯಾಸವಾದರೂ ಅವು ಸಂಪೂರ್ಣ ಇಲ್ಲವಾಗುವುದಿಲ್ಲ. ಕೆಲವು ಆಚರಣೆಗಳು ಆಧುನಿಕತೆಯ ಜೀವನದ ಅಲೆಗಳಿಗೆ ಲೆಕ್ಕಿಸದೇ ಇನ್ನೂ ಜೀವಂತವಾಗಿವೆ. ವೈಶ್ಯ ಜನಾಂಗದ ಆಚರಣೆಗಳು ಕರ್ನಾಟಕದಾದ್ಯಂತ ಭಿನ್ನವಾದರೂ, ಹೈದ್ರಾಬಾದ್ ಕರ್ನಾಟಕದಲ್ಲಿ ಸಾಮಾನ್ಯವಾಗಿ ಹೆಚ್ಚು ವ್ಯತ್ಯಾಸಗಳಿಲ್ಲದೆ ಉಳಿದಿವೆ.

೪.೧. ಜೀವನಾವರ್ತನದ ಆಚರಣೆಗಳು

ವ್ಯಕ್ತಿಯ ಹುಟ್ಟಿನಿಂದ ಸಾವಿನವರೆಗೆ ನಡೆಯುವ ಆಚರಣೆಗಳು ವೈವಿಧ್ಯಮಯದಿಂದ ಕೂಡಿರುತ್ತವೆ. ಒಂದು ಸಮುದಾಯದ ಜನ ಆಚರಿಸುವ ಆಚರಣೆಗಳು ಒಂದೇ ತೆರನಾಗಿರುತ್ತವೆ. ಕೆಲವು ವೇಳೆ ತಮ್ಮ ಸುತ್ತಮುತ್ತಲಿನ ಬಹುಸಂಖ್ಯಾ ಜನಾಂಗದಿಂದ ಪ್ರಭಾವ ಪಡೆದು ಅಲ್ಪಸ್ವಲ್ಪ ವ್ಯತ್ಯಾಸವಾದರೂ ಅವುಗಳು ತಮ್ಮ ಮೂಲವನ್ನು ಹಾಗೆಯೇ ಉಳಿಸಿಕೊಂಡಿವೆ.

[illegible]

[illegible]

[illegible]

[illegible]

[illegible]

[illegible]

೪.೧.೧. ಜನನ

ಸಂತಾನೋತ್ಪತ್ತಿ ಅಥವಾ ವಂಶಾಭಿವೃದ್ಧಿ ವಿವಾಹದ ಮೂಲ ಉದ್ದೇಶವಾಗಿದೆ. ಜನರ ಬದುಕಿನಲ್ಲಿ ಇದಕ್ಕೆ ಅತ್ಯಂತ ಮಹತ್ವವಿದೆ. ಪ್ರತಿಯೊಂದು ಕುಟುಂಬದ ಪ್ರತಿಯೊಬ್ಬರು ತಮ್ಮ ಸಂತಾನ ಅನುವಂಶಿಕವಾಗಿ ರೋಗಗಳಿಲ್ಲದೇ ಆರೋಗ್ಯವಾಗಿರಬೇಕೆಂದು ಆಸೆ ಪಡುವುದು ಸಹಜವಾದಂತಹ ವಿಷಯವಾಗಿದೆ. ಹೀಗೆ ಒಬ್ಬರನ್ನೊಬ್ಬರು ಅರಿತ ಬದುಕಿನ ಫಲವೇ ಸಂತಾನದ ಉಗಮಕ್ಕೆ ಕಾರಣವಾಗಿದೆ. ಸ್ತ್ರೀಯು ಗರ್ಭ ಧರಿಸುತ್ತಾಳೆ, ದಿನದಿಂದ ದಿನಕ್ಕೆ ಅವಳ ಶರೀರ ಬದಲಾಗುತ್ತಾ ಹೋಗುತ್ತದೆ. ಪ್ರಥಮ ತಿಂಗಳಿಂದ ನವಮಾಸ ಕಳೆದು ಮಗು ಜನನವಾಗುವವರೆಗೂ ಅವಳ ದೇಹ ಸ್ಥಿತಿ ದಿನದಿಂದ ದಿನಕ್ಕೆ ಬದಲಾಗುತ್ತಾ ಹೋಗುತ್ತದೆ. ಈ ವೇಳೆಯಲ್ಲಿ ಅನೇಕ ಸಂಪ್ರದಾಯಗಳು ಅನೇಕ ಆಚರಣೆಗಳು, ನಿಷೇಧಗಳು ನಡೆಯುತ್ತದೆ, ಇವುಗಳು ಜನಾಂಗದಿಂದ ಜನಾಂಗಕ್ಕೆ ಭಿನ್ನವಾಗಿರುತ್ತವೆ. ಜೀವನದ ಮುಖ್ಯ ಘಟ್ಟವಾದ ಜನನ ಸಂದರ್ಭದಲ್ಲಿ ತನಗೆ ತೀರ ಹತ್ತಿರದವರು ಜೊತೆಗೆ ಸೇರಿ ಹಿಂದಿನಿಂದ ನಡೆದು ಬಂದ ಪದ್ಧತಿಯಂತೆ ನಡೆಸಲು ಇಷ್ಟಪಡುತ್ತಾರೆ. ಎಲ್ಲಾ ಜನಾಂಗಗಳಂತೆ ವೈಶ್ಯ ಜನಾಂಗದವರು ಈ ಸಂದರ್ಭದಲ್ಲಿ ಅನೇಕ ಬಗೆಯ ಸಂಪ್ರದಾಯಗಳನ್ನು ಆಚರಿಸುವುದು ಕಂಡು ಬಂದಿದೆ.

ಸ್ತ್ರೀಯು ಗರ್ಭವಾದ ನಂತರ ಒಂದು ಗೊತ್ತಾದ ದಿನ ತವರಿನ ಮನೆಯವರು ಅವಳನ್ನು ಐದು ತಿಂಗಳಲ್ಲಿ ಅಥವಾ ಏಳು ತಿಂಗಳಲ್ಲಿ ಸೀಮಂತ ಕಾರ್ಯವನ್ನು ಮಾಡಿ ತವರಿನ ಮನೆಯವರು ಕರೆದುಕೊಂಡು ಬರಲು ಸಿದ್ಧರಾಗುತ್ತಾರೆ. ತನ್ನ ಚೊಚ್ಚಲು ತಾಯ್ತನವನ್ನು ಅದರ ಸಿರಿಯನ್ನು ಹೆತ್ತಮ್ಮನ ಎದುರಿನಲ್ಲಿ ಸಾಕ್ಷಾತ್ಕರಿಸಿಕೊಳ್ಳಲು ಸ್ತ್ರೀಯು ಕಾತರಿಸುತ್ತಾಳೆ. ಈ ಅವಧಿ ಹೆಣ್ಣಿನ ಬದುಕಿನಲ್ಲಿ ಬಹಳ ಮಹತ್ವ ಪೂರ್ಣವೂ ಹಾಗೂ ಸೂಕ್ಷ್ಮವೂ ಆಗಿರುತ್ತದೆ. ನಿರ್ದಿಷ್ಟ ಅವಧಿ ತುಂಬಿದ ಬಳಿಕ ತವರಿನವರು ಮಗಳನ್ನು ಕರೆದುಕೊಂಡು ಬರುವ ದಿನವನ್ನು ಊರಿನ ಬ್ರಾಹ್ಮಣ ಪುರೋಹಿತರಿಂದ ತಿಳಿದುಕೊಳ್ಳುತ್ತಾರೆ. ಪುರೋಹಿತರು ಹೇಳಿದ ದಿನವನ್ನು ಆ ಕಾರ್ಯಕ್ಕಾಗಿ ಗೊತ್ತುಪಡಿಸಲಾಗುವುದು, ಮಗಳ ಗಂಡನ ಮನೆಯವರಿಗೂ ತಾವು ಕರೆಯಲು ಬರುವ ದಿವಸವನ್ನು ಖಚಿತವಾಗಿ ತಿಳಿಸುತ್ತಾರೆ.

ಚೊಚ್ಚಲು ಗರ್ಭಿಣಿಯಾದ ಹೆಣ್ಣು ಮಗಳನ್ನು ವೈಶ್ಯರಲ್ಲಿ ಸಾಮಾನ್ಯವಾಗಿ ಐದು ಅಥವಾ ಏಳನೇ ತಿಂಗಳಲ್ಲಿ ತವರಿಗೆ ಕರೆತರುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಮೊದಲ ಹೆರಿಗ ತವರು ವನೆಯಲ್ಲೇ ಆಗಬೇಕೆಂಬ ನಿಯಮವಿದೆ. ಇದು ಹೆಣ್ಣಿನ ಆಸೆಯೂ ಆಗಿರುತ್ತದೆ. ಹೆಣ್ಣನ್ನು ಕರೆತರಲು ತವರಿನವರು ಗಂಡನ ಮನೆಗೆ ಹೋದಾಗ ಸೀಮಂತ ಕಾರ್ಯ ಅಥವಾ ಬಯಕೆ ಶಾಸ್ತ್ರವನ್ನು ಮಾಡಿ ಕಳಿಸಿಕೊಡುತ್ತಾರೆ. ತವರಿನ ಮನೆಯವರು ಗರ್ಭಿಣಿ ಹೆಂಗಸು ಇಷ್ಟ ಪಡುವ ತಿಂಡಿ ತಿನುಸುಗಳನ್ನು ಸಿದ್ಧಪಡಿಸಿಕೊಂಡು ಬರುತ್ತಾರೆ. ಅಂತಹ ಸಂದರ್ಭದಲ್ಲಿ ಸ್ತ್ರೀಗೆ ಹಸಿರು ಬಳೆ, ಹಸಿರು ಸೀರೆ ತೊಡಿಸುತ್ತಾರೆ. ಅನೇಕ ಜನ ಮುತ್ತೈದೆಯರು ಸೇರಿ ಈ ಕಾರ್ಯವನ್ನು ಮಾಡುತ್ತಾರೆ. ಗಂಡನ ಮನೆಯ ದೇವರಿಗೆ ಅಥವಾ

ಆ ಊರಿನಲ್ಲಿರುವ ದೇವಸ್ಥಾನಕ್ಕೆ ಹೋಗಿ ಪೂಜೆಯ ನಂತರ ಸ್ತ್ರೀಯು ಗಂಡನ ಮನೆಯಿಂದ ತವರಿಗೆ ತನ್ನ ಸಂಬಂಧಿಕರೊಂದಿಗೆ ಆಗಮಿಸುತ್ತಾಳೆ.

ತವರಿಗೆ ಬಂದ ಬಸುರಿ ಹೆಂಗಸಿಗೆ ಅನೇಕ ಬಯಕೆಗಳುಂಟಾಗುತ್ತವೆ. ತಿಂಡಿ ತಿನಿಸುಗಳನ್ನು, ಬಂದು-ಬಳಗದವರನ್ನು ನೋಡುವ, ವಸ್ತ್ರಾಭರಣಗಳ ಬಯಕೆ ಉಂಟಾಗುತ್ತದೆ. ಇಂತಹ ಎಲ್ಲಾ ಬಯಕೆಗಳನ್ನು ತವರು ಮನೆಯವರು ಈಡೇರಿಸಲು ಯತ್ನಿಸುತ್ತಾರೆ. ಒಂದು ವೇಳೆ ಇಂತಹ ಬಯಕೆಗಳನ್ನು ಈಡೇರಿಸದೇ ಹೋದರೆ ಗರ್ಭಿಣಿಗೆ ಕಣ್ಣು ಕಾಣುವುದಿಲ್ಲವೆಂದೂ ಎದೆ ಹಾಲು ಇಂಗಿ ಹೋಗುತ್ತವೆಂದೂ ಹಾಗೂ ದುರ್ಬಲ ಮನಸ್ಕಳಾಗುತ್ತಾಳೆಂದೂ, ಹುಟ್ಟುವ ಮಗು ಅಂಗವಿಕಲತೆಯಿಂದ ಹುಟ್ಟುತ್ತದೆಂದೂ ವೈಶ್ಯರಲ್ಲಿ ನಂಬಿಕೆಗಳಿವೆ.

ಸಾಮಾನ್ಯವಾಗಿ ಚೊಚ್ಚಲು ಬಸುರಿಯನ್ನು ಬಹಳ ಮುತುವರ್ಜಿಯಿಂದ ನೋಡಿಕೊಳ್ಳಲಾಗುವುದು. ಬಸುರಿನ ಹೆಂಗಸಿನ ಕೈಯಲ್ಲಿ ಸಣ್ಣಪುಟ್ಟ ಕೆಲಸಗಳಲ್ಲಿ ತೊಡಗಿಸುತ್ತಾರೆ. ಕಷ್ಟಕರವಾದಂತಹ ಕೆಲಸಗಳನ್ನು ಮಾಡಿಸುವುದಿಲ್ಲ. ಹಾಗೆ ಮಾಡುವುದರಿಂದ ಪ್ರಸವ ಕಾಲದಲ್ಲಿ ಸುಲಭವಾಗುತ್ತದೆ ಎಂಬ ನಂಬಿಕೆ ವೈಶ್ಯರಲ್ಲಿ ಇದೆ. ಗರ್ಭಿಣಿಯಾದ ಸಂದರ್ಭದಲ್ಲಿ ಸ್ತ್ರೀಗೆ ಗ್ರಹಣಗಳ ಕಿರಣಗಳು ಬಸುರಿಯ ಮೈ ಮೇಲೆ ಬೀಳದಂತೆ ಎಚ್ಚರಿಕೆ ವಹಿಸುತ್ತಾರೆ. ಈ ಕಾರಣಕ್ಕಾಗಿ ಅವಳನ್ನು ಕತ್ತಲೆ ತುಂಬಿದ ಕೋಣೆಯಲ್ಲಿ ಮಲಗಿಸುತ್ತಾರೆ, ಹೆರಿಗೆಯ ಅವಧಿ ತುಂಬುತ್ತಾ ಬಂದಂತೆಲ್ಲಾ ಅನುಭವಿ ಸೂಲಗಿತ್ತಿಯರನ್ನು ಕರೆಸಿ ಹೆರಿಗೆ ಮಾಡಿಸುತ್ತಾರೆ. ಅನೇಕ ದೇವರುಗಳಿಗೆ ಕಾಣಿಕೆಯನ್ನು ಕಟ್ಟಿಕೊಳ್ಳುವ ಪದ್ಧತಿ ಉಂಟು. ಸೂಲಗಿತ್ತಿಯರು ಹೆರುವವಳನ್ನು ಸಮಾಧಾನ ಮಾಡುತ್ತಾ, ಧೈರ್ಯ ತುಂಬುತ್ತಾರೆ. ಪ್ರಮುಖ ಸೂಲಗಿತ್ತಿ ಹೊರ ಬರುತ್ತಿರುವ ಮಗುವನ್ನು ಹಿಡಿದುಕೊಂಡಿರುತ್ತಾಳೆ. ಮಗು ಹೊರಬಂದ ತಕ್ಷಣ ಹೊಕ್ಕಳ ಬಳ್ಳಿಯನ್ನು ಬೆರಳಿನಿಂದ ಒತ್ತಿ ಹಿಡಿದು ಕೊಂಡು ಹೊಸ ಬ್ಲೇಡಿನಿಂದ ಅಥವಾ ಕುಡುಗೋಲಿನಿಂದ ಹೊಕ್ಕಳ ಬಳ್ಳಿಯನ್ನು ಕೊಯ್ದು ನೂಲಿನಿಂದ ಹೊಕ್ಕಳ ಬಳ್ಳಿಯನ್ನು ಕಟ್ಟಿ ಮಗುವಿನ 'ನತ್ ನೀರೊಡೆದ' ಮೇಲೆ ಮಗುವನ್ನು ಮೃದುವಾದ, ಸ್ವಚ್ಛವಾದ ಬಟ್ಟೆಯಿಂದ ಒರೆಯಿಸಿ ಮೊರದಲ್ಲಿರುವ ಮೆತ್ತನೆಯ ಬಟ್ಟೆಯ ಮೇಲೆ ಮಲಗಿಸಲಾಗುತ್ತದೆ. ಮೊದಲಿಗೆ ಮಗುವಿನ ಬಾಯಿಗೆ ಜೇನು ತುಪ್ಪ, ಅಥವಾ ಬತ್ತಿಸಿದ ಜೀರಿಗೆ ನೀರು ಯಾವುದಾದರೂ ಒಂದನ್ನು ಬೆರಳಿಗೆ ಅದ್ದಿಕೊಂಡು ಮಗುವಿಗೆ ಚೀಪಿಸುತ್ತಾರೆ. ಮೂರು ದಿನದವರೆಗೆ ತಾಯಿಗೆ ಎದೆ ಹಾಲು ಬರುವುದಿಲ್ಲ. ಅಲ್ಲಿಯವರೆಗೆ ಚೀಪಿಸುತ್ತಾರೆ. ಮಗುವಿನ ಹೊಕ್ಕಳಿಗೆ ಎಣ್ಣೆ ಹಚ್ಚುತ್ತಾರೆ. ತಾಯಿಯ ಹೊಕ್ಕಳಿಗೆ ಎಣ್ಣೆಯನ್ನು ಹಚ್ಚುವರು. ಹೀಗೆ ಮಾಡುವುದರಿಂದ "ಮಾಸ" ಬೀಳುತ್ತದೆ. ಇದನ್ನು ಯಾವ ಪ್ರಾಣಿ ತಿನ್ನಬಾರದೆಂದು ಬಚ್ಚಲು ಹರಿಯುವ ನೀರಿನ ಜಾಗದಲ್ಲಿ ಅಥವಾ ಮನೆಯ ಯಾವುದಾದರೊಂದು ಮೂಲೆಯಲ್ಲಿ ತುಂಬಿ ಇಟ್ಟಿರುತ್ತಾರೆ.

ಸೂತಕ ಕಳೆಯುವುದು

ವೈಶ್ಯ ಸಮುದಾಯದಲ್ಲಿ ಜನನ ಮತ್ತು ಮರಣಗಳಿಗೆ ಸಂಬಂಧಿಸಿದಂತೆ ಸೂತಕ ಕಳೆಯಲಾಗುತ್ತದೆ.

ಒಂದು ಶುಭ ಸೂತಕವಾದರೆ ಇನ್ನೊಂದು ಅಶುಭ ಸೂತಕ, ಮೈನೆರೆಯುವುದು, ಹೆರುವುದು ಶುಭ ಸೂತಕವಾದರೆ, ಮರಣ ಅಶುಭ ಸೂತಕ, ಜನನದ ಸೂತಕ ಗಂಡನ ಮನೆಯಲ್ಲಿ ಮತ್ತು ಹೆರಿಗೆಯಾದ ಸೂತಕ ತವರು ಮನೆಯಲ್ಲಿ ಆಚರಿಸಲಾಗುತ್ತದೆ. ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗುತ್ತಿರುವುದರಿಂದ ಈ ದಾಯಾದಿ ಕುಟುಂಬಗಳಿಗೆಲ್ಲ ಸೂತಕ ಬರುತ್ತದೆ. ಹಬ್ಬ ಹರಿದಿನಗಳಿದ್ದರೆ ನಿಲ್ಲಿಸಿ ಬೇರೆ ಬೇರೆ ದಿನ ಆಚರಿಸಬೇಕು. ಸೂತಕ ಮುಗಿಯುವವರೆಗೆ ದೇವರುಗಳಿಗೆ ಪೂಜೆಯನ್ನು ಮಾಡುವುದಿಲ್ಲ. ಸೂತಕವಿರುವ ಮನೆಯಿಂದ ಶುಭ ಕಾರ್ಯಗಳು ದೂರ ಉಳಿಯುತ್ತವೆ.

ಹೆರಿಗೆಯಾದ ಏಳು ಅಥವಾ ಹದಿನಾರನೇ ದಿನದವರೆಗೆ ವೈಶ್ಯರಲ್ಲಿ ಸೂತಕವಿರುತ್ತದೆ. ಒಂಬತ್ತನೇ ದಿನ ಮನೆಯಲ್ಲಿ ಈರ್ಲ್ ಪೂಜೆಯನ್ನು ಊರಿನ ಒಬ್ಬ ಜೋಗತಿಯನ್ನು ಕರೆಯಿಸಿ ಗುಂಡು ಕಲ್ಲಿಗೆ ನೈವೇದ್ಯವನ್ನು ಮಾಡಿ ಸೂತಕವನ್ನು ಕಳೆಯುತ್ತಾರೆ. ಹದಿನಾರನೇ ದಿನ ಬ್ರಾಹ್ಮಣರನ್ನು ಕರೆಯಿಸಿ ಮನೆಗೆಲ್ಲಾ ಗೋಮಾಯೆಯನ್ನು ಹಾಕಿ ವಿಶೇಷ ಪೂಜೆಗಳನ್ನು ಮಾಡಿಸಿ ಸೂತಕವನ್ನು ಕಳೆಯುತ್ತಾರೆ. ನಂತರ ದಿನ ನಿತ್ಯದಂತೆ ಎಲ್ಲಾ ಕಾರ್ಯಕ್ರಮಗಳು ಮುಂದುವರೆಯುತ್ತವೆ.

ನಾಮಕರಣ

ಮಗು ಮರದಿಂದ ತೊಟ್ಟಿಲನ್ನು ಏರುವ ಶಾಸ್ತ್ರೋಕ್ತವಾದ ಶುಭ ದಿನವಾಗಿದೆ. ಇದಕ್ಕೆ ತೊಟ್ಟಿಲ ಪೂಜೆ ಎಂದೂ ಅಥವಾ ನಾಮಕರಣ ಎಂದೂ ಕರೆಯುತ್ತಾರೆ. ನಾಮಕರಣವನ್ನು ವೈಶ್ಯರು ಬಹಳ ವಿಜೃಂಭಣೆಯಿಂದ ಆಚರಣೆ ಮಾಡುತ್ತಾರೆ ಮಗು ಹುಟ್ಟಿ ಹದಿನಾರನೇ ದಿನದ ನಂತರ ಮೂರು ತಿಂಗಳಲ್ಲಿ ಅಥವಾ ಐದು ತಿಂಗಳಲ್ಲಿ ಒಂದು ಒಳ್ಳೆಯ ದಿನವನ್ನು ಬ್ರಾಹ್ಮಣರಿಂದ ತಿಳಿದುಕೊಂಡು ಅಂದಿನ ದಿನ ತಾಯಿ ಮತ್ತು ತಂದೆಯ ಎಲ್ಲಾ ಸಂಬಂಧಿಕರನ್ನು ಆಹ್ವಾನಿಸಿ ತವರು ಮನೆಯವರು ಮನೆಯಲ್ಲಿ ಅಥವಾ ದೇವಸ್ಥಾನಗಳಲ್ಲಿ ಈ ಕಾರ್ಯಕ್ರಮವನ್ನು ಆಚರಿಸುತ್ತಾರೆ. ಮೊದಲು ಮುತ್ತೈದೆಯರು ತೊಟ್ಟಿಲನ್ನು ಪೂಜೆ ಮಾಡಿ ಅದಕ್ಕೆ ಹೂಗಳಿಂದ ಅಲಂಕರಿಸಿ ಅದರಲ್ಲಿ ರೇಷ್ಮೇ ಸೀರೆಯನ್ನು ಹಾಕಿ ಅದನ್ನು ಅಲಂಕರಿಸುತ್ತಾರೆ. ತೊಟ್ಟಿಲ ಒಳಗೆ ಎಲೆಯನ್ನು ಅರಿಸಿಣವನ್ನು ಹಾಕಿದ ನಂತರ ಮಗುವನ್ನು ತೊಟ್ಟಿಲಿಗೆ ಮೂರು ಬಾರಿ ಸುತ್ತಿಸುತ್ತಾರೆ. ಮೊದಲು ಮಗುವಿನ ತಂದೆ ತಾಯಿ ತೊಟ್ಟಿಲಲ್ಲಿ ಹಾಕುತ್ತಾರೆ. ಈ ಸಂದರ್ಭದಲ್ಲಿ ಮಗುವಿನ ಸೋದರತ್ತೆ ಅಂದರೆ ಮಗುವಿನ ತಂದೆಯ ಅಕ್ಕ ಅಥವಾ ತಂಗಿಯೂ ಈ ತವರು ಮನೆಯವರಾಗಲಿ ಅಥವಾ ಗಂಡನ ಮನೆಯವರಾಗಲಿ ಮಗುವಿಗೆ ನಾಮಕರಣ ಮಾಡುತ್ತಾರೆ. ಇಂದಿನ ದಿನಗಳಲ್ಲಿ ಆಧುನಿಕತೆಯಿಂದಾಗಿ ಜನಪದರಲ್ಲಿ ಹೆರಿಗೆ ಎಂಬುದು ಆಸ್ಪತ್ರೆಯ ನಾಲ್ಕು ಗೋಡೆಯ ಮಧ್ಯೆ ನಡೆಯುತ್ತದೆ. ಹೆರಿಗೆಯ ದಿನಾಂಕವನ್ನು ಮುಂಚಿತವಾಗಿಯೇ ತಿಳಿದುಕೊಂಡು ಅದಕ್ಕೆ ಒಂದೆರಡು ದಿನಗಳ ಮುಂಚಿತವಾಗಿ ಆಸ್ಪತ್ರೆಗೆ ಸೇರಿಸುತ್ತಾರೆ. ವೈದ್ಯರ ಸಲಹೆಯನ್ನು ಬಾಣಂತಿ ಮತ್ತು ಮಗುವಿನ ಆರೈಕೆಯಲ್ಲಿ ಪಡೆಯಲಾಗುತ್ತದೆ. ಮೊದಲು ವೈದ್ಯಕೀಯ ಭಾಷೆಯ 'ನಾರ್ಮಲ್ ಡೆಲವರಿ' (ಸಹಜ ಹೆರಿಗೆ) ಜಾನಪದರಲ್ಲಿ ನಡೆಯುತ್ತಿತ್ತು. ಆದರೆ ಆಸ್ಪತ್ರೆಯಲ್ಲಿ

'ಸೀಜೇರಿಯನ್ ಡೆಲವರಿ' (ಕತ್ತರಿಸುವ ಮೂಲಕ ಹೆರಿಗೆ)ಗಳೇ ಇಂದು ಹೆಚ್ಚಾಗಿವೆ. ಮೊದಲು ಗರ್ಭಿಣಿ ಸ್ತ್ರೀ ಶ್ರಮದ ಕೆಲಸವನ್ನು ಮಾಡುತ್ತಿದ್ದರಿಂದ ನಾರ್ಮಲ್ ಡೆಲವರಿ ಆಗುತ್ತಿತ್ತು, ಈಗ ಆಸ್ಪತ್ರೆಯಲ್ಲಿ ಹೆರಿಗೆಯಾಗುವುದರಿಂದ ಸಣ್ಣ ಪುಟ್ಟ ಕಾಯಿಲೆಗೆ ಬಳಸುತ್ತಿದ್ದ ಮನೆಯ ವೈದ್ಯ ಪದ್ಧತಿ ಮಾಯವಾಗುತ್ತದೆ. ಈ ಬದಲಾವಣೆ ಜನಪದರ ಬದುಕಿನಲ್ಲಿ ಆಗುತ್ತಿರುವುದರಿಂದ ಒಂದು ರೀತಿಯಲ್ಲಿ ಇವರು ಪರಾವಲಂಬಿ ಯಾಗುತ್ತಿದ್ದಾರೆ ಎನಿಸದಿರದು. ಇಂದು ವೈಶ್ಯ ಜನಾಂಗದಲ್ಲಿ ಸಂಪೂರ್ಣವಾಗಿ ಹೆರಿಗೆಗಳು ಆಸ್ಪತ್ರೆಯಲ್ಲಿ ಆಗುತ್ತದೆ. ಜೀವನದ ಭಯದಿಂದ ಮನೆಯಲ್ಲಿ ಹೆರಿಗೆಯನ್ನು ಮಾಡಿಸದೇ ಆಸ್ಪತ್ರೆಗಳಲ್ಲಿ ತೊಂದರೆಗಳಿಲ್ಲದೇ ಹೆರಿಗೆಗಳನ್ನು ಮಾಡಿಸುತ್ತಾರೆ. ವೈಶ್ಯ ಜನಾಂಗದವರು ಆರ್ಥಿಕತೆಯಲ್ಲಿ ಮುಂದುವರಿದ ಜನಾಂಗವಾಗಿರುವು ದರಿಂದ ಅವರು ಖರ್ಚುಗಳಿಗೆ ಹೆದರದೇ ತಮ್ಮ ಒಂದು ಭಯದಿಂದ ಈ ರೀತಿಯಾಗಿ ಹೆರಿಗೆಯನ್ನು ಮಾಡಿಸುತ್ತಾರೆ.

ಮೊದಲು ಆ ಮನೆಯ ದೇವರ ಹೆಸರನ್ನು ಕರೆದು ನಂತರ ಸೂಚಿಸಿದ ಹೆಸರನ್ನು ಮೂರು ಬಾರಿ ಮಗುವಿನ ಕಿವಿಯಲ್ಲಿ ಹೇಳುತ್ತಾರೆ. ನಂತರ ಜೋರಾಗಿ ಎಲ್ಲರಿಗೂ ಗೊತ್ತಾಗುವಂತೆ ಹೆಸರನ್ನು ಹೇಳುತ್ತಾರೆ. ಅಲ್ಲಿ ನೆರದಿರುವ ಬಂದು ಬಾಂಧವರಿಗೆಲ್ಲಾ ಉಡುಗೊರೆ ಜೊತೆಗೆ ಸಕ್ಕರೆ, ಬಾಳೆಹಣ್ಣು, ಎಲೆ ಅಡಿಕೆ ನೀಡುವುದರ ಜೊತೆಗೆ ಹೆಸರನ್ನು ಅವರಿಗೆ ಹೇಳುತ್ತಾರೆ. ಹೆಸರಿಟ್ಟ ಮಗುವಿನ ಸೋದರತ್ತೆಗೆ ವಿಶೇಷವಾದ ಕೊಡುಗೆಯನ್ನು ನೀಡುವ ಪದ್ಧತಿ ವೈಶ್ಯರಲ್ಲಿ ನಡೆದುಕೊಂಡು ಬಂದಿದೆ. ಇದು ಅವರವರ ಯೋಗ್ಯತೆಯ ಆಧಾರದ ಮೇಲೆ ಉಡುಗೊರೆಯನ್ನು ನೀಡುತ್ತಾರೆ.

ಜವಳ (ಕೂದಲು) ತೆಗೆಯುವುದು

ಮಗುವಿಗೆ ಮೂರು ತಿಂಗಳು ತುಂಬಿದ ನಂತರ ಮೊದಲಿಗೆ ಬಂದ ಕೂದಲುಗಳನ್ನು ಅವರವರ ಮನೆ ದೇವರ ದೇವಸ್ಥಾನದಲ್ಲಿ ತೆಗೆಸುತ್ತಾರೆ. ಅಂದಿನ ದಿನ ಅವರಿಗೆ ಬೇಕಾದ ತಮ್ಮ ಸಂಬಂಧಿಕರನ್ನು ಕರೆದುಕೊಂಡು ಹೋಗುತ್ತಾರೆ. ಮಗುವಿಗೆ ಕಿವಿ ಚುಚ್ಚುವುದು ಕೂದಲು ತೆಗೆಯಿಸಿದ ನಂತರ ಅಕ್ಕಸಾಲಿಗನು ಮಗುವಿನ ಕಿವಿ ಚುಚ್ಚಿಸುವ ಶಾಸ್ತ್ರ ಮಾಡುತ್ತಾರೆ. ಅಕ್ಕಸಾಲಿಗನು ಕಿವಿ ಚುಚ್ಚಿದ ನಂತರ ಮಗುವಿಗೆ ಲೋಲಾಕು ಹಾಕಿ, ಕೈಗೆ ಬಳೆ, ಕಾಲಿಗೆ ಕಡಗ, ಸೊಂಟಕ್ಕೆ ಬೆಳ್ಳಿ ಉಡಿದಾರವನ್ನು ಹಾಕುತ್ತಾರೆ. ಕಿವಿ ಚುಚ್ಚಿದ ಪ್ರಯುಕ್ತ ಅಕ್ಕಸಾಲಿಗೆ ಅಕ್ಕಿ, ತೆಂಗಿನಕಾಯಿ, ಎಲೆ ಅಡಿಕೆ ಜೊತೆಗೆ ಹಣ ಕೊಟ್ಟು ಗೌರವಿಸಿ ಕಳುಹಿಸುತ್ತಾರೆ. ವೈಶ್ಯರಲ್ಲಿ ಗಂಡು ಮಕ್ಕಳಿಗೂ ಈ ಕಾರ್ಯ ಮಾಡುತ್ತಾರೆ.

ತವರು ಮನೆಯಿಂದ ಗಂಡನ ಮನೆಗೆ

ಬಾಣಂತಿ ಮತ್ತು ಮಗುವನ್ನು ತವರು ಮನೆಯಿಂದ ಗಂಡನ ಮನೆಗೆ ಮೂರು ತಿಂಗಳು ಅಥವಾ ಐದು ತಿಂಗಳಾದ ಮೇಲೆ ಪುರೋಹಿತರನ್ನು ಕೇಳಿ ಅವರು ಸೂಚಿಸಿದ ಒಳ್ಳೆಯ ಶುಭದಿನದಂದು ಕರೆದುಕೊಂಡು

ಹೋಗುತ್ತಾರೆ. ಗಂಡನ ಮನೆಯಿಂದ ಅತ್ತೆ, ಮಾವ, ಅತ್ತಿಗೆ, ನಾದಿನಿ ಮುಂತಾದವರು ಮನೆಗೆ ಬರುತ್ತಾರೆ. ಬಂದವರಿಗೆ ಆ ದಿನ ವಿಶೇಷ ಆಹ್ವಾನದಿಂದ ಒಳ್ಳೆಯ ಔತಣವಿರುತ್ತದೆ. ಇದರ ಜೊತೆಗೆ ವೈಶ್ಯರು ಸೀರೆ ರವಿಕೆಗಳನ್ನು ಮತ್ತು ಆಭರಣಗಳನ್ನು ಕೊಟ್ಟು, ಮಗುವಿಗೂ ತವರಿನವರು ಕೊಟ್ಟ ಹೊಸ ಬಟ್ಟೆಯನ್ನು ತೊಡಿಸುತ್ತಾರೆ. ಬಟ್ಟೆ ಹಾಕುವ ಮೊದಲು ಮಗುವಿಗೆ ಎಣ್ಣೆ ಹಾಕಿ ಸ್ನಾನ ಮಾಡಿಸುತ್ತಾರೆ. ಬಾಣಂತಿ ಹೊರಡುವ ಮೊದಲು ತನಗಿಂತ ಹಿರಿಯರಾದ ಎಲ್ಲರ ಪಾದ ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದುಕೊಳ್ಳುತ್ತಾಳೆ. ನಿಶ್ಚಿತ ವೇಳೆಗೆ ಸರಿಯಾಗಿ ತೊಟ್ಟಿಲು ಹೊರಡುತ್ತದೆ. ತೊಟ್ಟಿಲನ್ನು ಮಗುವಿಗೆ ಸೋದರ ಮಾವ ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಾನೆ. ಬಾಣಂತಿಯು ಮನೆದೇವರಿಗೆ ನಮಸ್ಕರಿಸಿ ವಾಹನವನ್ನು ಏರುತ್ತಾಳೆ. (ಬಸ್ಸು, ಕಾರು, ಇತ್ಯಾದಿ) ವಾಹನವನ್ನು ಇಳಿದು ಮನೆಯನ್ನು ಸೇರುವ ದಾರಿಯಲ್ಲಿ ನೀರು ಹರಿಯುವ ಹಳ್ಳಗಳು, ಸಣ್ಣ ನದಿಗಳು ಸಿಕ್ಕರೆ ಮಗುವಿಗೆ ವೀಳ್ಯದೆಲೆಯಿಂದ ದೃಷ್ಟಿ ತೆಗೆದು ಬಿಸಾಕುತ್ತಾರೆ. ತವರಿನಿಂದ ಮಗುವಿನೊಡನೆ ಮನೆಗೆ ಹಿಂತಿರುಗಿ ಬರುವ ಬಾಣಂತಿಗೆ ಸಂಪ್ರದಾಯದ ಸ್ವಾಗತ ಕಾದಿರುತ್ತಿರುತ್ತದೆ. ಸಂಪ್ರದಾಯವಾಗಿ ಮೊದಲು ಬಾಣಂತಿ ಮತ್ತು ಮಗುವನ್ನು ಅದೇ ಊರಿನಲ್ಲಿರುವ ದೇವಸ್ಥಾನಕ್ಕೆ ಮೊದಲು ಹೋಗಿ ಪೂಜೆ ಮಾಡಿಸುತ್ತಾರೆ. ಅಲ್ಲಿಂದ ಆ ಮನೆಯ ಮುತ್ತೈದೆಯರು ದೇವಸ್ಥಾನಕ್ಕೆ ಬಂದು ಮಗುವಿಗೆ ಮತ್ತು ಬಾಣಂತಿಗೆ ಆರತಿ ಮಾಡಿದ ನಂತರ ಬಾಣಂತಿ ಮಗು ದೇವರಿಗೆ ಪ್ರದಕ್ಷಿಣೆ ಮಾಡಿ ಮನೆಗೆ ಪ್ರವೇಶ ಮಾಡುತ್ತಾಳೆ. ತವರಿನಿಂದ ತಂದ ಸಿಹಿ ಪದಾರ್ಥಗಳನ್ನು ಅಲ್ಲಿರುವ ಎಲ್ಲಾ ಸಂಬಂಧಿಕರಿಗೆ ಕೊಡುತ್ತಾರೆ. ಅಂದು ಮನೆಗೆ ಬಂದ ಮೊದಲ ದಿನವಾದ್ದರಿಂದ ವಿಶೇಷ ಅಡುಗೆ ಮಾಡಿ ಭೋಜನ ಮಾಡುತ್ತಾರೆ. ಬಾಣಂತಿಯ ಜೊತೆಗೆ ಬಂದ ಮುತ್ತೈದೆಯರಿಗೆ ಸೀರೆ ಕೊಡುವ ಪದ್ಧತಿ ವೈಶ್ಯರಲ್ಲಿ ಇದೆ.

ಮುಂದೆ ತವರಿನಿಂದ ಬಂದ ಕರೆಯ ಪ್ರಕಾರ ಮಗು ಮತ್ತು ತಾಯಿ ತವರಿಗೆ ಹೋಗುತ್ತಾರೆ. ಈ ಸಾರಿ ಅವಳು ಹೆಚ್ಚು ದಿನ ತವರಿನಲ್ಲಿ ಇರುವುದಿಲ್ಲ. ಇದಾದ ಕೆಲ ತಿಂಗಳಲ್ಲಿ, ವರ್ಷಗಳಲ್ಲಿ ಅವಳಿಗೆ ಬೇಕಾದಾಗಲೆಲ್ಲ ತವರಿಗೆ ಹೋಗಿ ಬರುತ್ತಿರುತ್ತಾಳೆ.

ಮಗು ಹೊಸಲು ದಾಟುವುದು

ಮಗುವಿನ ಪ್ರತಿಯೊಂದು ಬೆಳವಣಿಗೆಯನ್ನು ಜನಪದರು ಗಮನಿಸುತ್ತಾ ಇರುತ್ತಾರೆ. ಮಗು ಮೊದಲು ಮಗ್ಗುಲಾಗಿ ಹೊರಳುತ್ತದೆ. ಸ್ವಲ್ಪ ದಿನಗಳ ನಂತರ ಹೊಟ್ಟೆಯನ್ನು ನೆಲಕ್ಕೆ ಹಾಕಿ ಜೀಕುತ್ತದೆ. ಹೀಗೆ ಮಗುವಿನ ಬದಲಾವಣೆ ಹೊಂದುತ್ತಾ ಅಂಬೆಗಾಲು ಹಾಕಿ ಅತ್ತಿಂದಿತ್ತ ಸರಿದಾಡುತ್ತದೆ. ನಂತರ ಗೋಡೆಯನ್ನು ಹಿಡಿದುಕೊಂಡು ಅತ್ತಿಂದಿತ್ತಾ ಓಡಾಡುತ್ತಾ, ಪುಟ್ಟ ಪುಟ್ಟ ಹೆಜ್ಜೆಯನ್ನು ಇಡಲು ಶುರು ಮಾಡುತ್ತದೆ. ಈ ಎಲ್ಲಾ ಹಂತಗಳ ಬದಲಾವಣೆ ತಾಯಿಗೆ ಸಂತೋಷ ಕೊಡುತ್ತದೆ. ಮನೆ ಮಂದಿಯಲ್ಲ ಈ ಬೆಳವಣಿಗೆಯನ್ನು ಸಂತಸದಿಂದ ಗಮನಿಸುತ್ತಾರೆ.

ಮಗು ಅಂಬೆಗಾಲಿಕ್ಕುತ ನಡೆದಾಡುವ ಚೈತನ್ಯ ಪಡೆದಾಗ ಮಗು ಬಾಣಂತಿ ಕೋಣೆಯಿಂದ ಈಚೆಗೆ ಬಂದು ಹೊಸಲು ದಾಟುತ್ತದೆ. ಹೀಗೆ ಮೊದಲ ಸಲ ಹೊಸಲು ದಾಟಿದಾಗ ಹೊಸಲಿಗೆ ಕಾಯಿ ಒಡೆದು ಪೂಜೆ ಮಾಡಲಾಗುತ್ತದೆ. ಮಗು ಅತ್ತಿಂದಿತ್ತ ಓಡಾಡುವಾಗ ತೊಂದರೆ ಆಗದಿರಲೆಂದು ಪೂಜೆ ಮಾಡುತ್ತಾರೆ. ಹೊಸಲಿನ ಎದುರು ಮಗುವನ್ನು ಕೂರಿಸಿ ಓಕುಳಿ ತೆಗೆಯಲಾಗುತ್ತದೆ. ದೃಷ್ಟಿ ತಾಕದಿರಲೆಂದು ದೃಷ್ಟಿ ತೆಗೆಯಲಾಗುವುದು. ಜನಪದರಲ್ಲಿ ಹೊಸಲಿಗೆ ಮಹತ್ವದ ಸ್ಥಾನವಿದೆ. ಹಬ್ಬ ಹರಿದಿನಗಳಲ್ಲಿ ಹೊಸಲಿಗೆ ವಿಶೇಷ ಪೂಜೆ ಮಾಡಲಾಗುತ್ತದೆ. ದಿನಃಪ್ರತಿ ಮುಂಜಾನೆ ಬಾಗಿಲ ಹೊಸಲನ್ನು ಒದ್ದೆ ಬಟ್ಟೆಯಿಂದ ಸಾರಿಸಿ, ರಂಗೋಲಿ ಇಟ್ಟು, ಅರಿಸಿನ ಕುಂಕುಮ ಹಚ್ಚಿ ಊದಬತ್ತಿಯನ್ನು ಹಚ್ಚಿಟ್ಟು ಹೂವನ್ನು ಆ ಕಡೆ ಈ ಕಡೆ ಇಡಲಾಗುತ್ತದೆ. ಹಬ್ಬಗಳಲ್ಲಿ ಎರಡು ಕಡೆ ಒಂದೊಂದು ದೀಪವನ್ನು ಹಚ್ಚಿಡುತ್ತಾರೆ.

ಮನೆಯೊಳಗಿಂದ ಯಾರಾದರೂ ಹೊರಗೆ ಹೊರಡುವ ಸಂದರ್ಭದಲ್ಲಿ ಹೊಸಲು ಎಡವಿದರೆ, ಬಾಗಿಲ ಪಟ್ಟಿ ತಲೆಗೆ ತಾಗಿದರೆ, ಸ್ವಲ್ಪ ಹೊತ್ತು ಕೂತು ಸಮಯ ಕಳೆದು ಹೊರಡುತ್ತಾರೆ. ಶುಭ ಕಾರ್ಯವಾಗಿದ್ದರೆ ಅದು ನೆರವೇರುವುದಿಲ್ಲ ಎಂಬುದು ವೈಶ್ಯರಲ್ಲಿ ನಂಬಿಕೆ ಇದೆ. ಕೆಲವರು ಪ್ರಯಾಣವನ್ನು ರದ್ದು ಮಾಡುತ್ತಾರೆ. ಮನೆಯ ಸೊಸೆ ಮೊದಲ ಸಲ ಬರುವಾಗ ಹೊಸಲು ಪೂಜೆ ಮಾಡಿಸಿ ಹೊಸಲಿಗೆ ಮಳೆ ಮತ್ತು ಹೂವನ್ನು ಹೊಡೆದು ಬಲಗಾಲನ್ನು ಒಳಹಾಕಿ ಬರುವ ಸಂಪ್ರದಾಯ ವೈಶ್ಯರಲ್ಲಿ ಕಂಡು ಬರುತ್ತದೆ. ಹೊಸಲ ಮೇಲೆ ನಿಲ್ಲುವುದಾಗಲಿ, ಕೂರುವುದಾಗಲಿ ಯಾರೂ ಮಾಡುವುದಿಲ್ಲ.

ಮಗುವಿಗೆ ದೃಷ್ಟಿ ದೋಷ ತೆಗೆಯುವುದು

ಮಗು ಹುಟ್ಟಿದಾಗಿನಿಂದ ವಯಸ್ಸಿಗೆ ಬರುವವರೆಗೂ ದೃಷ್ಟಿ ತೆಗೆಯುವುದು ವೈಶ್ಯ ಸಮುದಾಯದಲ್ಲಿ ಕಂಡು ಬರುತ್ತದೆ. ಜಾನಪದರಲ್ಲಿ ಎಲ್ಲಾ ಕಡೆ ಕಂಡು ಬಂದರೂ ಇವರಲ್ಲಿ ದೃಷ್ಟಿ ತೆಗೆಯುವುದು ವಿಶೇಷವಾಗಿದೆ. ದೃಷ್ಟಿ ತೆಗೆಯುವ ಮನೆಯಲ್ಲಿನ ವಯಸ್ಸಾದ ಹೆಂಗಸರು ಜನಾಂಗದಲ್ಲಿರುತ್ತಾರೆ ಒಂದು ವೇಳೆ ಇಲ್ಲದಿದ್ದರೆ ಬೇರೆ ಜನಾಂಗದ ಹೆಂಗಸರಿಂದ ದೃಷ್ಟಿಯನ್ನು ತೆಗೆಯಿಸುತ್ತಾರೆ. ಮಗುವು ಹೆದರಿದ ಸಂದರ್ಭದಲ್ಲಿ ರಾತ್ರಿಯಿಡಿ ಅಳುತ್ತದೆ, ಇಂತಹ ಸಂದರ್ಭದಲ್ಲಿ ಇವರಿಗೆ ದೃಷ್ಟಿಯನ್ನು ತೆಗೆಯಲು ಹೇಳಲಾಗುತ್ತದೆ. ಇವರು ಉಪಯೋಗ ಮಾಡಿದ ಕಸಬರಿಕೆಯ ಒಂದೆರಡು ಕಡ್ಡಿಗಳನ್ನು ಅಥವಾ ವೀಳ್ಯದೆಲೆಯನ್ನು ತೆಗೆದುಕೊಂಡು ಮೂರು ಸುತ್ತು ಮುಖದ ಸುತ್ತ ನಿವಾಳಿಸಿ ಕೆಂಡದ ಮೇಲೆ ಹಾಕುತ್ತಾರೆ, ಅದು ಚಟಪಟ ಸದ್ದು ಮಾಡುತ್ತದೆ, ಜಾಸ್ತಿ ಸದ್ದು ಮಾಡಿದರೆ ಯಾರದೋ ಕೆಟ್ಟ ಕಣ್ಣು ತಾಕಿದೆ ಎಂದು ತಿಳಿಯಲಾಗುತ್ತದೆ. ಇನ್ನೊಂದು ಎಲೆಯನ್ನು ತೆಗೆದು ಕೊಂಡು ಹಣತೆ ದೀಪದ ಸುಳಿಗೆ ಎಲೆಯ ಒಂದು ಭಾಗವನ್ನು ಸ್ವಲ್ಪ ಹೊತ್ತು ಹಿಡಿದಾಗ ಎಲೆಯ ಒಂದು ಭಾಗದಲ್ಲಿ ಕಪ್ಪು ಶೇಖರಣೆಯಾಗುತ್ತದೆ. ಈ ಮಸಿಯನ್ನು ಹಣೆಗೆ, ಗಲ್ಲಕ್ಕೆ ಇಡಲಾಗುತ್ತದೆ. ಈ ರೀತಿ ದೃಷ್ಟಿ ತೆಗೆದವರಿಗೆ ಎಲೆ, ಅಡಿಕೆ, ಚಹಾವನ್ನು ಕೊಡಲಾಗುತ್ತದೆ.

ಮಗುವು ಆಟ ಆಡುವಾಗ ಯಾವುದೆಲ್ಲಾ ಕಾರಣಕ್ಕೆ ಭಯಗೊಂಡು ಬೆಚ್ಚಿ ಬೀಳುತ್ತದೆ. ಜ್ವರ ಬಂದು ಅಳಲು ಆರಂಭಿಸುತ್ತದೆ. ಇಂತಹ ಸಂದರ್ಭದಲ್ಲಿ ರಂಚು (ರಂಜು) ತೆಗೆಯುತ್ತಾರೆ. ಮಗುವು ಊಟ ಮಾಡಿದ ತಟ್ಟೆಗೆ ಕಂಚಿನ ಲೋಟ ಅಥವಾ ತಂಬಿಗೆಗೆ ಕೆಂಡ, ಮೆಣಸಿನಕಾಯಿ, ಉಪ್ಪು ಹಾಕಿ ಲೋಟವನ್ನು ಊಟದ ತಟ್ಟೆಗೆ ಬೋರಲಾಗಿ ಹಾಕಲಾಗುತ್ತದೆ. ತಟ್ಟೆಯಲ್ಲಿರುವ ನೀರು ಗೊಡಗೊಡ ಶಬ್ದಮಾಡಿ ಲೋಟ ತಟ್ಟೆಯನ್ನು ಬಿಗಿಯಾಗಿ ಹಿಡಿದಿರುತ್ತದೆ. ಮಾರನೆಯ ದಿನ ಅದನ್ನು ತೆಂಗಿನ ಮರಕ್ಕೆ ಚೆಲ್ಲಿ ತೊಳೆಯಲಾಗುತ್ತದೆ. ಶಬ್ದ ಮಾಡಿ ತಟ್ಟೆಯನ್ನು ಬಿಗಿಯಾಗಿ ಹಿಡಿದುಕೊಂಡರೆ ಮಗು ಬಹಳ ಹೆದರಿದೆ ಎಂದು ನೀರನ್ನು ಮುಖಕ್ಕೆ ಚಿಮುಕಿಸಿ ಸಮಾಧಾನಿಸಲಾಗುತ್ತದೆ. ಅದು ಚಟಪಟ ಸದ್ದು ಮಾಡುತ್ತದೆ. ಇದನ್ನೆಲ್ಲ ಪಿಳಿ ಪಿಳಿ ಕಣ್ಣು ಬಿಡುತ್ತಾ ನೋಡುತ್ತಿರುವ ಮಗು ಭಯದ ಆಘಾತವನ್ನು ಬಿಟ್ಟು ಈ ವಾತಾವರಣಕ್ಕೆ ಹೊಂದಿಕೊಳ್ಳುತ್ತದೆ.

ಮಗುವಿಗೆ ದೃಷ್ಟಿಯಾಗದಿರಲೆಂದು ಕಪ್ಪುದಾರವನ್ನು ಕೈಯಿಗೆ, ಕುತ್ತಿಗೆಗೆ ಕಟ್ಟುತ್ತಾರೆ. ಕಪ್ಪುಮಣಿ ಹವಳದ ಮಣಿಯನ್ನು ಪೋಣಿಸಿ ಕೈಯಿಗೆ ಕಟ್ಟುವರು. ಬ್ರಾಹ್ಮಣರು ಅಥವಾ ಪುರೋಹಿತರು ಮಂತ್ರಿಸಿದ ತಾಯಿತವನ್ನು ಕೊರಳಿಗೆ ಕಟ್ಟುತ್ತಾರೆ. ಮಗುವಿಗೆ ಬರುವ ಭಯದ ಜ್ವರಕ್ಕೆ ವೈಶ್ಯ ಜನಾಂಗದಲ್ಲಿ ಈ ರೀತಿಯಾಗಿ ದೃಷ್ಟಿ ತೆಗೆಯಲಾಗುತ್ತದೆ.

೪.೧.೨. ಪ್ರೌಢ

ಬಾಲ್ಯದಿಂದ ಪ್ರೌಡಾವಸ್ಥೆಯನ್ನು ದಾಟುವ ವ್ಯಕ್ತಿಯ ಶಾರೀರಿಕ ಮತ್ತು ಮಾನಸಿಕ ಪರಿವರ್ತನೆಗಳನ್ನು ಗುರುತಿಸಿ, ಒಂದು ಮಹತ್ವದ ಸ್ಥಾನದಲ್ಲಿರಿಸಿ ಗೌರವಿಸುವುದು ಸಮಾಜದ ಜವಾಬ್ದಾರಿಯಾಗಿದೆ. ಪ್ರತಿಯೊಂದು ಜನಾಂಗವೂ ಗಂಡು ಹೆಣ್ಣುಗಳೂ ಲಿಂಗ ಪ್ರೌಢಿಮೆ ಹೊಂದುವಾಗ ಉಂಟಾಗಬಹುದಾದ ಬದಲಾವಣೆಗಳನ್ನು ಗುರುತಿಸಿ ಸಾಂಪ್ರದಾಯಿಕ ರೀತಿಯಲ್ಲಿ ಆಚರಿಸಿ ಎಲ್ಲರಿಗೂ ಪರಿಚಯಿಸುತ್ತಾರೆ. ವೈಶ್ಯ ಜನಾಂಗವೂ ಇದನ್ನು ತಪ್ಪದೇ ತಮ್ಮದೇ ಆದ ಸಾಂಪ್ರದಾಯಿಕ ರೀತಿಯಲ್ಲಿ ಆಚರಿಸುತ್ತಾರೆ.

ಗಂಡು ಹೆಣ್ಣುಗಳಿಗೆ ಒಂದೇ ವಯಸ್ಸಿನಲ್ಲಿ ಲಿಂಗ ಪ್ರೌಢಿಮೆ ಉಂಟಾಗುವುದಿಲ್ಲ. ಸಾಮಾನ್ಯವಾಗಿ ಗಂಡಿಗೆ ಹದಿನಾಲ್ಕರಿಂದ ಹದಿನಾರರವರೆಗೊ, ಹೆಣ್ಣಿಗೆ ಹನ್ನೆರಡರಿಂದ ಹದಿನಾಲ್ಕರವರೆಗೆ ಘಟಿಸುತ್ತದೆ. ದೈಹಿಕ ಮತ್ತು ಮಾನಸಿಕ ಬದಲಾವಣೆಯಿಂದ ಸಹಜವಾಗಿ ಅವರಲ್ಲಿ ಕೆಲವು ಬದಲಾವಣೆಗಳುಂಟಾಗುತ್ತವೆ. ಹುಡುಗನಾದರೆ ಕಂಠನಾಳ ದೊಡ್ಡವಾಗಿ ಧ್ವನಿ ಗಡುಸಾಗುವುದು. ಗಲ್ಲ ಮತ್ತು ಕೆನ್ನೆಗಳಲ್ಲಿ ರೋಮಗಳು ಕಾಣಿಸಿಕೊಳ್ಳುವುದು ಹೆಣ್ಣಿನಲ್ಲಿ ದೈಹಿಕ ಬದಲಾವಣೆ ಕಂಡು ರಸಜ್ವಾಲೆಯಾಗುವುದು ಇದನ್ನೇ ಋತುಮತಿಯಾಗುವುದು, ದೊಡ್ಡವಳಾಗುವುದು, ಮೈನೆರೆಯುವುದು ಎಂದು ಕರೆದು ಆ ದಿನದಿಂದ ಸೂತಕ ಕಳೆಯುವವರೆಗೆ ವಿಶೇಷ ಕಾರ್ಯಕ್ರಮಗಳನ್ನು ಆಚರಿಸುವುದರ ಮೂಲಕ ಅವಳನ್ನು ಸಾಂಸಾರಿಕ ಜೀವನಕ್ಕೆ ಪ್ರವೇಶ ಹೊಂದಲು ಅರ್ಹಳಾಗಿ ಮಾಡುತ್ತಾರೆ.

[illegible]

ಸಾಮಾನ್ಯವಾಗಿ ಹೆಣ್ಣು ಮಕ್ಕಳು ಹನ್ನೆರಡರಿಂದ ಹದಿನೈದು ವರ್ಷದೊಳಗೆ ಮೈನೆರೆಯುತ್ತಾರೆ. ಈ ದೈಹಿಕವಾದ ಬೆಳವಣಿಗೆ ಆ ಹೆಣ್ಣು ಮಗುವಿಗೆ ಅನಿರೀಕ್ಷಿತವಾಗಿರುತ್ತದೆ. ಒಂದು ರೀತಿಯ ಭಯ, ನಾಚಿಕೆ, ಕಳವಳ ಉಂಟಾಗುತ್ತದೆ. ಸಮಾಜದಲ್ಲಿ ಇಂತಹ ಬೆಳವಣಿಗೆಯನ್ನು ಆಕೆ ಗಮನಿಸಿರುವುದರಿಂದ ಮನೆಯ ಹೊರಗೆ ಬಚ್ಚಲು ಮನೆಯಲ್ಲೋ, ಕಟ್ಟೆಯ ತುದಿಯಲ್ಲೋ ಬಂದು ಕುಳಿತಾಗ ಈ ಸೂಕ್ಷ್ಮವೆಲ್ಲಾ ಆ ಹೆತ್ತ ತಾಯಿಗೆ ಗೊತ್ತಾಗುತ್ತದೆ. ಜನಪದರು ಈ ರೀತಿಯ ಘಟನೆಯನ್ನು ಮೈಲಿಗೆ ಎಂದು ತಿಳಿಯುತ್ತಾರೆ.

ಬದುಕಲು ಜೀವಸತ್ವಗಳು ಬೇಕು. ಅದು ದೊರಕುವುದು ಆಹಾರದಿಂದ, ಆಹಾರ ಪಡೆಯಲು ಹಣ ಬೇಕು. ಹಣಕ್ಕಾಗಿ ಕೆಲಸ ಮಾಡಬೇಕು. ಇಷ್ಟರ ಹೊರತು ದೇಹಕ್ಕೆ ನಿದ್ರೆ ಬೇಕು. ಇಷ್ಟಾದರೆ ಬದುಕು ಮುಗಿಯಿತು ಖಂಡಿತ ಇಲ್ಲ. ಬದುಕು ನಡೆಯುವುದೇ ಸಮಾಜದಿಂದ ಎಲ್ಲರೂ ಬದುಕುವುದು ಸಮಾಜದ ಮಧ್ಯದಲ್ಲಿ ಇಂದು ಸಮಾಜದ ಹೊರತಾಗಿ ಯಾರಿಗೂ ಬದುಕನ್ನು ನಡೆಸಲು ಸಾಧ್ಯವಿಲ್ಲ. ಹಾಗಾಗಿ ಸಮಾಜದ ಸಮಷ್ಠಿಗಾಗಿ ಎಲ್ಲರೂ ಶ್ರಮಿಸುತ್ತಾರೆ. ಬದುಕು ಹಸನಾಗಿರಲು ಮೊದಲು ಸಮಾಜದ ಬದುಕು ಹಸನಾಗಬೇಕು. ಹಾಗಾಗಿಯೇ ವೈಶ್ಯರ ಪೂರ್ವಜರು ಅನೇಕ ವಿಚಾರಗಳನ್ನು ಚಿಂತಿಸಿ, ಮಥಿಸಿ ಅನುಭವಿಸಿ ಸಮಾಜದಲ್ಲಿ ಹಲವು ವಿಧದ ವಿಚಾರಗಳನ್ನು ರೂಪಿಸಿ ಹಲವು ತೆರನಾದ ಆಚರಣೆಗಳನ್ನು ರೂಢಿಗೆ ತಂದಿದ್ದಾರೆ. ಪ್ರತಿಯೊಂದು ಆಚರಣೆಗಳ ಹಿಂದೆ ಆಚಾರವಿದೆ. ಪ್ರತಿ ಆಚಾರದ ಹಿಂದೆ ನಿಗೂಢ ವಿಚಾರವಿದೆ. ಇಂದು ಆಚರಣೆಗಳು ಹಿಂದಿಗಿಂತಲೂ ಹೆಚ್ಚಾಗಿವೆ. ಆಚಾರಗಳು ಬದಲಾಗುತ್ತವೆ ಇಲ್ಲವೇ ನಶಿಸುತ್ತವೆ. ಆದರೆ ವಿಚಾರ ಮಾತ್ರ ಶೂನ್ಯವಾಗಿದೆ ಎಂದರೆ ಅಚ್ಚರಿಪಡಬೇಕಿಲ್ಲ. ಕಾರಣ ಹಿಂದಿನಿಂದಲೂ ಇವರುಗಳು ಉಳಿಸಿಕೊಂಡು ಬಂದದ್ದು ಕೇವಲ ಆಚರಣೆಗಳನ್ನಷ್ಟೇ ಹೊರತು ಆಚಾರ-ವಿಚಾರಗಳನ್ನಲ್ಲ. ಅದೇಕೋ ನಮ್ಮ ಹಿರಿಯರು ವಿಚಾರಗಳತ್ತ ಗಮನೀಸಲೇ ಇಲ್ಲ. ಇಂದು ಇವರು ಆಚರಿಸುತ್ತಿರುವ ಬಹುತೇಕ ಎಲ್ಲಾ ಆಚರಣೆಗಳ ಮೂಲ ವಿಚಾರ ತಿಳಿದಾಗ ನಮಗೆ ಅಚ್ಚರಿಯಾಗಬಹುದು, ನಂಬಲು ಸಾಧ್ಯವಾಗದಿರಬಹುದು, ಹೆಮ್ಮೆ ಎನಿಸಬಹುದು. ಇಲ್ಲವೇ ಕೀಳರಿಮೆಯುಂಟಾಗಬಹುದು. ಅಥವಾ ತಾತ್ಸಾರ ಮೂಡಬಹುದು ಎಂಬುದಂತೂ ಸತ್ಯವಾದ ಸಂಗತಿಯಾಗಿದೆ.

ಈ ಪ್ರಪಂಚದಲ್ಲಿ ಮಾನವರು ಮಾಡುವ ಎಲ್ಲಾ ರೀತಿಯ ಹಬ್ಬ-ಉಪವಾಸ ಆಚರಣೆ, ಪೂಜೆ, ದಾನ, ಯಜ್ಞ-ಯಾಗ, ಹೋಮ, ಭಜನೆ, ಅಭಿಷೇಕ ಮುಂತಾದ ಎಲ್ಲಾ ಬಗೆಯ ಆಚರಣೆಗಳೂ ನಿಜವಾಗಿಯೂ ದೇವರಿಗಾಗಿ ಅಥವಾ ದೇವರ ಪ್ರೀತ್ಯರ್ಥವಾಗಿ ಖಂಡಿತ ಅಲ್ಲ. ಈ ಎಲ್ಲಾ ಆಚರಣೆಗಳು ಮಾನವರಿಗಾಗಿ, ಮಾನವರ ಸುಖಕ್ಕಾಗಿ ಮಾತ್ರ. ಈ ಬದುಕಿನ ಜಂಜಾಟದಲ್ಲಿ ಆರ್ಥಿಕ-ರಾಜಕೀಯ ಸಮರದಲ್ಲಿ ಬದುಕು ನಡೆಸುವುದು ಸುಲಭವಲ್ಲ. ದುಡ್ಡಿದ್ದವರೆ ಬದುಕು ಸುಲಭ ಎಂದು ತಿಳಿಯುವುದು ತಪ್ಪು ದುಡ್ಡಿಲ್ಲದವನು ಸುಖಿಯಲ್ಲ ಎಂದು ತಿಳಿಯುವುದು ಅತಿ ದೊಡ್ಡ ತಪ್ಪು. ದುಡ್ಡಿಲ್ಲದವನ ಸುಖ ನಿದ್ರೆ ದುಡ್ಡಿದ್ದವನಿಗೆ ದೊರಕದು. ಹಣ ಕೊಟ್ಟು ಹಾಸಿಗೆ ಕೊಳ್ಳಬಹುದು. ಆದರೆ ಹಣ ಕೊಟ್ಟು ನಿದ್ರೆಯನ್ನು ಕೊಳ್ಳಲಾದೀತೆ ಎಂಬುದು ಇವರ ನಂಬಿಕೆ.

ಸಂಸಾರದಲ್ಲಿ ಬೇಕು-ಬೇಡಗಳ ತೊಳಲಾಟದಲ್ಲಿ ಗಂಡ-ಹೆಂಡತಿ, ಮಕ್ಕಳು ತಂದೆ-ತಾಯಿ ಸಹೋದರ-ಸಹೋದರಿಯರೊಡನೆ ನಿತ್ಯ ಬಾಳು ನಡೆಸಲೇಬೇಕು. ಇದರ ನಡುವೆ ಮಾನಸಿಕವಾಗಿ ನೆಮ್ಮದಿ ನೀಡುವ ಸಾಮೂಹಿಕ ಪೂಜೆ ಹಬ್ಬ ಮುಂತಾದ ಆಚರಣೆಗಳನ್ನು ಇವರ ಪುರಾತನರು ರೂಢಿಯಲ್ಲಿ ತಂದರು. ಆ ಆಚರಣೆಗಳ ಹಿಂದಿನ ವೈಜ್ಞಾನಿಕ ಸತ್ಯವನ್ನು ಮನಗಂಡು ಆಚಾರಗಳನ್ನು ರೂಪಿಸಿಕೊಳ್ಳುತ್ತಾ ಬಂದಿದ್ದಾರೆ. ಆದರೆ ಇಂದು ಈ ಆಚರಣೆಗಳ ಮಧ್ಯದಲ್ಲಿ ಅನೇಕ ದೋಷಗಳು ತೂರಿಕೊಂಡು ಮೂಲಾರ್ಥವೇ ಕಳೆದು ಹೋಗಿದೆ. ಹಾಗಾಗಿ ವೈಜ್ಞಾನಿಕ ತಳಹದಿಯ ಮೇಲಿನ ಕೆಲವು ಆಚರಣೆಗಳ ಹಿಂದಿನ ಮೂಲ ನಗ್ನಸತ್ಯದತ್ತ ಒಂದು ಸಂಕ್ಷಿಪ್ತ ನೋಟವನ್ನು ಬೀರಲಾಗಿದೆ. ಪ್ರೌಢಾವಸ್ಥೆಯಲ್ಲಿ ವೈಶ್ಯರಲ್ಲಿ ಮಾಡುವ ಮುಖ್ಯವಾದ ಆಚರಣೆ ಉಪನಯನ.

ಉಪನಯನ

ಉಪ ಎಂದರೆ ಹತ್ತಿರ, ನಯನ ಎಂದರೆ ಕರೆದೊಯ್ಯುವುದು ಎಂಬ ಅರ್ಥವನ್ನು ಎಲ್ಲರೂ ಉಲ್ಲೇಖಿಸಿದ್ದಾರೆ. ಆದರೆ ಇದು ಪೂರ್ಣಾರ್ಥವಲ್ಲ. ನಯನ ಎಂದರೆ ಕಣ್ಣು. ಈ ಕಣ್ಣುಗಳಿಂದ ಸಾಮಾನ್ಯ ಪ್ರಪಂಚವನ್ನು ಮಾತ್ರ ಕಾಣಬಹುದು. ಆದರೆ ಕಣ್ಣಿದ್ದವನೂ ತಿಳಿಯಲಾಗದಂತಹ ಲೌಕಿಕ -ಪಾರಮಾರ್ಥಿಕ ಜ್ಞಾನವನ್ನು ತಿಳಿಯಲು ವಟುವು ಗುರುಗಳಿಗೇ ಶರಣಾಗಬೇಕು. ಉಪ+ನಯನವನ್ನು ಕೊಡುವ ಅರ್ಥಾತ್ ವಿಶೇಷ ಜ್ಞಾನ ಚಕ್ಷುವನ್ನು ತೆರೆಸುವ ಗುರುಕುಲಕ್ಕೆ ವಿದ್ಯಾರ್ಥಿಯು ತೆರಳುವ ಮುನ್ನ ಹೆತ್ತವರು ಮಾಡುವ ಮುಂಜಾಗ್ರತಾ ಕ್ರಮವೇ 'ಉಪನಯನ' ಕಾರ್ಯಕ್ರಮ.

ಏಳು ವರ್ಷ ಪೂರ್ಣ ತುಂಬಿದ ನಂತರ ವಿದ್ಯಾರ್ಥಿಯು ಗುರುಕುಲಕ್ಕೆ ತೆರಳಿ ಅಲ್ಲಿ ಹದಿನಾಲ್ಕು ವರ್ಷಗಳ ಕಾಲ ವಿದ್ಯಾರ್ಜನೆ ಮಾಡಬೇಕಾಗಿತ್ತು. ಅಷ್ಟು ದೀರ್ಘಕಾಲ ಆತನ ದೈಹಿಕ-ಮಾನಸಿಕ ಸ್ವಾಸ್ಥ್ಯಕ್ಕಾಗಿ ಹೆತ್ತವರು ಅಥವಾ ಪೋಷಕರು ಮುಂಜಾಗ್ರತೆ ವಹಿಸಬೇಕಾಗಿತ್ತು, ಇದು ಇವರ ಕರ್ತವ್ಯ. ಹಾಗಾಗಿ ಉಪನಯನ ಕಾಲದಿಂದ ವಿದ್ಯಾರ್ಥಿ ಜೀವನ ಪೂರೈಸುವವರೆಗೆ ರೋಗ ನಿರೋಧಕ ಶಕ್ತಿ ಇರುವ ಅರಿಶಿನದ ನೀರಿನಲ್ಲಿ ಅದ್ದಿ ಒಣಗಿಸಿದ ವಸ್ತ್ರಗಳನ್ನೇ ಅಲ್ಲಿ ವಿದ್ಯಾರ್ಥಿಯು ಧರಿಸಬೇಕಿತ್ತು. ಇಡಿ ಆರ್ಯಾವರ್ತದ ಎಲ್ಲಾ ಗುರುಕುಲಾಶ್ರಮಗಳಲ್ಲೂ ಈ ಸಮವಸ್ತ್ರವು ಕಡ್ಡಾಯವಾಗಿತ್ತು. ಜೊತೆಗೆ ಮುಂಜ ಹುಲ್ಲಿನ ಉಡದಾರ, ಕಾವೇನ ಮತ್ತು ಯಜ್ಞೋಪವೀತ ಧಾರಣೆಯಾಗಬೇಕು. ಗಾಯತ್ರಿ ಮಂತ್ರದ ಉಪದೇಶ ಆಗಬೇಕು. ಅನವರತ ಕೈಯಲ್ಲಿ ಮುತ್ತುಗದ ದಂಡ ಇರಬೇಕು. ವಿಶ್ರಾಂತಿಗೆ ಅರಳಿಮರವನ್ನೇ ಆಶ್ರಯಿಸಬೇಕು. ಭಿಕ್ಷಾಟನೆಯನ್ನು ಅಭ್ಯಾಸ ಮಾಡಿಕೊಳ್ಳಬೇಕು. ಇವೆಲ್ಲವುಗಳ ಆರಂಭವೇ ಉಪನಯನ ಎಂದು ವೈಶ್ಯರ ಅಭಿಪ್ರಾಯವಾಗಿದೆ.

ಹಿಂದಿನ ಕಾಲದಲ್ಲಿ ಜಾತಿ-ಲಿಂಗ ಬೇಧವಿಲ್ಲದೆ ಗುರುಕುಲಕ್ಕೆ ತೆರಳುವ ಪ್ರತಿಯೊಬ್ಬ ಮಾನವ ಜೀವಿಗೂ ಉಪನಯನ ಸಂಸ್ಕಾರ ಕಡ್ಡಾಯವಾಗಿತ್ತು. ಆದರೆ ವಿದ್ಯೆ ತಲೆಗೆ ಹತ್ತದೆ ಬೇಸರ ಮೂಡಿ ಹಿಂದಿರುಗಿದವರು ಸಮಾಜದ ತೀರಾ ಸಾಮಾನ್ಯ ಕೆಲಸಗಳನ್ನು ಮಾಡಿಕೊಂಡು ಜೀವನ ನಿರ್ವಹಿಸುತ್ತಿದ್ದರು. ಮುಂದೆ ತಮ್ಮ

ಮಕ್ಕಳ ತಲೆಯಲ್ಲಿ ವಿದ್ಯೆ ಕಲಿಯುವುದು ಬಹಳ ಕಷ್ಟವೆಂಬ ಬೀಜವನ್ನು ಬಿತ್ತಿ ಗುರುಕುಲಗಳಿಗೆ ಕಳುಹಿಸದೆ ತಮ್ಮಂತೆ ಮಕ್ಕಳನ್ನು ಅವರು ತಮ್ಮದೇ ಕಾಯಕದಲ್ಲಿ ಮುಂದುವರಿಯುವಂತೆ ಮಾಡಿ ಬದುಕು ಸಾಗಿಸುತ್ತಿದ್ದು ಗುರುಕುಲಗಳಿಗೆ ಹೋಗದ ಕಾರಣ ಅನಿವಾರ್ಯವಾಗಿ ಬೇರೆ ಜನಾಂಗದಲ್ಲಿ ಉಪನಯನ ಸಂಸ್ಕಾರ ಪದ್ಧತಿ ತಪ್ಪಿಹೋಯಿತು ಎಂದು ತಿಳಿಯುತ್ತದೆ.

ಗುರುಕಲಕ್ಕೆ ಹೋಗುವ ಎಲ್ಲರಿಗೂ ಉಪನಯನ ಸಂಸ್ಕಾರವಿತ್ತು ಎಂದ ಮೇಲೆ ಗಂಡಿನಂತೆ ಹೆಣ್ಣಿಗೂ ಈ ಉಪನಯನ ಸಂಸ್ಕಾರವಿತ್ತು ಎಂದಾಯಿತು. ರಾಮಾಯಣದ ಸೀತೆ, ಮಹಾವಾಗ್ಮಿ, ಗಾರ್ಗಿ, ಮೈಥಿಲಿ ಮತ್ತು ಶಂಕರಾಚಾರ್ಯರು ಹಾಗೂ ಮಂಡನ ಮಿಶ್ರರ ವಾದದಲ್ಲಿ ನ್ಯಾಯಪೀಠದಲ್ಲಿ ಕುಳಿತ ಭಾರತೀದೇವಿ ಮುಂತಾದ ಸ್ತ್ರೀ ರತ್ನಗಳಿಗೆ ಉಪನಯನ ಸಂಸ್ಕಾರವಾಗಿದ್ದ ಉಲ್ಲೇಖವಿದೆ. ಹಾಗಾದರೆ ಇಂದಿನ ಹೆಣ್ಣು ಮಕ್ಕಳಿಗೆ ಈ ಉಪನಯನ ಸಂಸ್ಕಾರ ತಪ್ಪಿದ್ದು ಯಾವಾಗ ಎಂಬುದು ವಿಶೇಷವಾಗಿದೆ.

ಭಾರತದ ವೀರಪುರುಷ ಪೃಥ್ವಿರಾಜ್ ಚವ್ಹಾನನ ಮೇಲೆ ಯುದ್ಧ ಸಾರಿ ೧೧೯೧-೯೨ರಲ್ಲಿ ದಂಡೆತ್ತಿ ಬಂದ ಘೋರಿ ಮಹಮ್ಮದನ ಆಕ್ರಮಣ ಮತ್ತು ನಂತರದ ಕಾಲದಲ್ಲಿ ನಿರಂತರವಾಗಿ ಆಕ್ರಮಣಕಾರಿಗಳಾಗಿ ಭಾರತಕ್ಕೆ ಕಾಲಿಟ್ಟ ಮುಸಲ್ಮಾನರ ದೃಷ್ಟಿಯಿಂದ ತಮ್ಮ ಹೆಣ್ಣು ಮಕ್ಕಳನ್ನು ಕಾಪಾಡಿಕೊಳ್ಳುವ ಸಲುವಾಗಿ ಎಲ್ಲರೂ ತಮ್ಮ-ತಮ್ಮ ಹೆಣ್ಣು ಮಕ್ಕಳನ್ನು ಗುರುಕುಲಗಳಿಗೆ ಕಳುಹಿಸುವುದನ್ನು ನಿಲ್ಲಿಸಿದರು. ಹಾಗಾಗಿ ಅಂದಿನಿಂದ ಹೆಣ್ಣು ಮಕ್ಕಳಿಗೆ ಉಪನಯನ ಸಂಸ್ಕಾರ ಮುಗಿಯಿತೆಂದು ವೈಶ್ಯರಲ್ಲಿ ಪೂರ್ವಜರು ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ.

ದುರದೃಷ್ಟದ ಸಂಗತಿಯೆಂದರೆ ಆಗ ಮದುವೆಯಾಗದ ತಮ್ಮ ಯೌವ್ವನಾವಸ್ಥೆ ಹೆಣ್ಣು ಮಕ್ಕಳನ್ನು ಆಕ್ರಮಣಕಾರಿಗಳಿಂದ ರಕ್ಷಿಸಿಕೊಳ್ಳುವುದೇ ಕಷ್ಟವಾಯಿತು. ಮದುವೆಯಾದ ಹೆಣ್ಣುಗಳಿಗೆ ಈ ತೊಂದರೆ ಇರಲಿಲ್ಲ. ಹಾಗಾಗಿ ಮೈನೆರೆಯುವ ಮುನ್ನವೇ ವಿವಾಹ ಮಾಡುವ ಸಂಪ್ರದಾಯ ಬೆಳೆಯಿತು. ಇದೇ ಬಾಲ್ಯವಿವಾಹ. ವಿವಾಹಸ್ಥ ಹೆಣ್ಣು ಎಂಬುದಾಗಿ ಕಾಣುವಂತಾಗಲು ಚಿನ್ನದ ಮಾಂಗಲ್ಯಧಾರಣೆಯ ಪದ್ಧತಿ ಯನ್ನು ಆರಂಭಿಸಿದರು. ಹಾಗಾಗಿ ೧೩ನೇ ಶತಮಾನದಿಂದ ಭಾರತಿಯ ನಾರಿಗೆ ಉಪನಯನ ನಿಂತಿತು ಎಂದು ವೈಶ್ಯರು ಹೇಳುತ್ತಾರೆ. ಅಂದಿನಿಂದ ಬಾಲ್ಯವಿವಾಹ ಮತ್ತು ಚಿನ್ನದ ಮಾಂಗಲ್ಯಧಾರಣೆ ಆರಂಭ ವಾಯಿತು.

ಅರಳಿ

ಈ ಪ್ರಪಂಚದಲ್ಲಿ ಎಲ್ಲಾ ಸಸ್ಯಗಳೂ ಬೇರುಗಳ ಮೂಲಕ ನೀರನ್ನು ಮತ್ತು ಎಲೆಗಳ ಮೂಲಕ ವಾಯು ವನ್ನು ಸೇವಿಸುತ್ತವೆ. ಹಗಲು ಹೊತ್ತು ವಾಯುವನ್ನು ಸೇವಿಸಿ ಆಮ್ಲಜನಕವನ್ನು ಹೊರಸೂಸುತ್ತವೆ. ಆದರೆ ರಾತ್ರಿ ಕಾಲದಲ್ಲಿ ಆಮ್ಲಜನಕವನ್ನು ಉಪಯೋಗಿಸಿಕೊಂಡು ತಮಗೆ ಬೇಡವಾದ ಅಶುದ್ಧ ವಾಯುವನ್ನು

[illegible]

ಹೊರಸೂಸುತ್ತವೆ ಎಂಬ ವಿಚಾರ ಎಲ್ಲರಿಗೂ ಗೊತ್ತು ಆದರೆ ನಮ್ಮ ಪುರಾತನರು ತಮ್ಮ ವಿಶೇಷ ಜ್ಞಾನದಿಂದ ಕಂಡುಕೊಂಡ ಸತ್ಯವೊಂದನ್ನು ಪ್ರತಿ ಮಾನವರಿಗೂ ತಿಳಿಸಿ ಪ್ರತಿಯೊಬ್ಬನನ್ನೂ ಪರಿಸರ ಪ್ರೇಮಿಯನ್ನಾಗಿಸಿದರು. ಸಸ್ಯಗಳನ್ನು ಬದುಕಿಗಾಗಿ ಬಳಸಿಕೊಳ್ಳಬೇಕೆ ವಿನಃ ಭೋಗಕ್ಕಾಗಿ ಅಲ್ಲ. ಅನಿವಾರ್ಯವಾಗಿ ಒಂದು ಪಕ್ಷ ಬದುಕಿಗೋ, ಬೋಗಕ್ಕೋ ಯಾವುದೇ ಮರವನ್ನು ಕಡಿದರೂ ಚಿಂತೆಯಿಲ್ಲ. ಆದರೆ ಯಾವ ಕಾರಣಕ್ಕೂ ಅರಳಿಮರವನ್ನು ಕಡಿಯಬಾರದು ಎಂಬ ತತ್ವವನ್ನು "ತ್ರಿಮೂರ್ತಿಗಳ ವಾಸಸ್ಥಾನ" ವೆಂಬ ಧಾರ್ಮಿಕ ಭಾವನೆಯ ಹೊದಿಕೆಯಲ್ಲಿಟ್ಟು ಅರಳಿ ಮರವನ್ನು ಕಾಪಾಡುತ್ತಾ ಬಂದರು. ಇಂದಿಗೂ ಎಂತಹ ಅಜ್ಞಾನಿಯೂ ಸಹ ಅರಳಿಮರವನ್ನು ಕಡಿಯಲಾರನು ಆದರೆ ಆತನಿಗೆ ಕಾರಣ ಮಾತ್ರ ತಿಳಿದಿಲ್ಲ.

ಸತ್ಯವೇನೆಂದರೆ ವಾಯುವನ್ನು ಸೇವಿಸಿ ಸೋನೆ, ಹಗಲು-ರಾತ್ರಿ ಎನ್ನದೆ ದಿನದ ೨೪ ಗಂಟೆಗಳಲ್ಲೂ ನಿರಂತರವಾಗಿ ಆಮ್ಲಜನಕವನ್ನು ಕೊಡುವ ಪ್ರಪಂಚದ ಏಕೈಕ ಸಸ್ಯವೆಂದರೆ "ಅರಳಿಮರ" ಮಾತ್ರ ವರ್ಷಕ್ಕೆ ೪-೫ ಬಾರಿಯಾದರೂ ಅರಳಿ ಎಲೆಯಲ್ಲಿ ಊಟ ಮಾಡಬೇಕು. ಅರಳಿಯಿಂದ ಮಾತು ಶುದ್ಧ ಸ್ಪಷ್ಟವಾಗುತ್ತದೆ. ಮೌಢ್ಯ ದೂರವಾಗುತ್ತದೆ. ಜಾಣತನ ಹೆಚ್ಚುತ್ತದೆ. ತೊದಲು ನಿವಾರಣೆಯಾಗಿ ಲವಲವಿಕೆಯುಂಟಾಗುತ್ತದೆ. ಹಾಗಾಗಿಯೇ ವಟುವಿಗೆ ಸತ್ಯವನ್ನು ತಿಳಿಸಿ ಆತ ತನ್ನ ಪ್ರಯಾಣ ಕಾಲದಲ್ಲಿ ಬೇರೆ ಮರಗಳ ಅಡಿಯಲ್ಲಿ ರಾತ್ರಿ ಮಲಗಬಾರದೆಂದೂ ಮಲಗಲೇಬೇಕಾದ ಅನಿವಾರ್ಯತೆ ಇದ್ದಾಗ ಕನಿಷ್ಟ ತನ್ನ ಪಕ್ಕದಲ್ಲಿ ಒಂದು ಅರಳಿ ಟೊಂಗೆಯನ್ನಾದರೂ ಇಟ್ಟುಕೊಳ್ಳಬೇಕೆಂದು ತಿಳಿಸಿ ಅರಳಿ ಟೊಂಗೆಯನ್ನು ವಟುವಿಗೆ ಕೊಡುತ್ತಾರೆ. ಅನ್ಯ ಜೀವಿಗಳ ಬದುಕಿಗೆ ಅವಿರತವಾಗಿ ಆಮ್ಲಜನಕವನ್ನು ನೀಡುವ ಅರಳಿಮರವನ್ನು ಬಾಗಿ, ನಮಿಸಿ, ಪೂಜಿಸುವ ಮತ್ತು ಅದನ್ನು ರಕ್ಷಿಸಿಕೊಳ್ಳುವ ಅನಿವಾರ್ಯತೆಯು ಬದುಕಲು ಬಯಸುವ ಮನುಷ್ಯರ ಪ್ರಥಮ ಕರ್ತವ್ಯ.

ದಂಡ

ಉಪನಯನ ಕಾಲದಲ್ಲಿ ಬ್ರಹ್ಮಚಾರಿಗೆ ಮುತ್ತುಗದ ಕೋಲನ್ನು ದಂಡರೂಪದಲ್ಲಿ ಕೊಡಬೇಕು. ಈ ಮುತ್ತುಗದ ಕೋಲು ಆತನು ಗೃಹಸ್ಥನಾಗುವವರೆಗೆ ಆತನ ಕೈಯಲ್ಲಿರಬೇಕು. ಮುತ್ತುಗದ ಸ್ಪರ್ಶದಿಂದ ಅಥವಾ ಮುತ್ತುಗದ ಎಲೆಯಲ್ಲಿ ಊಟ ಮಾಡುವುದರಿಂದ ಗುಲ್ಮರೋಗ, ಮಹೋದರ ರೋಗ, ಕ್ರಿಮಿರೋಗ ಪಿತ್ತ ಉಂಟಾಗುವುದಿಲ್ಲ. ಮುಂಗೋಪಿತನ, ಸಿಡುಕು ನಾಶವಾಗಿ ಚಿತ್ತಶಾಂತಿ ಉಂಟಾಗುತ್ತದೆ.

ಯಜ್ಞೋಪವೀತ

ಗುರುಕುಲದಲ್ಲಿ ಭುಜವನ್ನು ತಟ್ಟಿ ಉತ್ತೇಜನ ನೀಡಲು ಹೆತ್ತವರು ಅಥವಾ ಸನಿಹದ ಬಂಧುಗಳು ಇರುವುದಿಲ್ಲ. ಹಾಗಾಗಿ ಯಾರನ್ನೂ ಕಾಯುವ ಹಂಗಿಲ್ಲದೆ ವಿದ್ಯಾರ್ಥಿಯು ಸ್ವತಃ ಪ್ರಯತ್ನಶೀಲನಾಗಿ ಚಟುವಟಿಕೆಯಿಂದಿರಲು ಭುಜದಲ್ಲಿರುವ ಲಕ್ಷಾಂತರ ಜ್ಞಾನವಾಹಿನಿ ನರಗಳನ್ನು ಪ್ರತಿಕ್ಷಣವೂ ತನ್ನ ಸೂಕ್ಷ್ಮ

[illegible]

ಸ್ಪರ್ಶದಿಂದ ಸದಾ ಚಲನಶೀಲತೆಯಿಂದಿರುವಂತೆ ಎಚ್ಚರಿಸುವುದೇ ಯಜ್ಞೋಪವೀತ. ಇದರ ಧಾರಣೆಯೇ 'ಯಜ್ಞೋಪವೀತ ಧಾರಣೆ'.

ಪಿತೃಋಣ, ದೇವ ಋಣ, ಗುರು ಋಣಗಳನ್ನು ಮೂರು ಎಳೆಯ ಜನಿವಾರವು ಸೂಚಿಸುತ್ತದೆ. ಈ ಋಣ ಪರಿಹಾರಾರ್ಥ ತ್ರಿಕಾಲ ಸಂಧ್ಯಾವಂದನೆ, ಪ್ರಾಣಾಯಾಮ, ದೇವತಾರ್ಚನೆ, ಗಾಯತ್ರಿ ಮಂತ್ರ ಪಠಣವನ್ನು ತಿಳಿಸುವುದೇ ಬ್ರಹ್ಮೋಪದೇಶ. ಜನಿವಾರವು ಹೊಕ್ಕುಳಿನಿಂದ ತೀರಾ ಮೇಲಕ್ಕೂ ಅಥವಾ ತೀರಾ ಕೆಳಕ್ಕೂ ಇರಲಾರದ ಹಾಗೆ ವೈಶ್ಯರು ಹಾಕಿರುತ್ತಾರೆ. ಸಾಧ್ಯವಾದಷ್ಟು ಹೊಕ್ಕುಳಿಗೆ ಸಮನಾಗಿ ಇರುವಂತೆ ಜನಿವಾರವನ್ನು ಧರಿಸಿರುತ್ತಾರೆ.

ಮುಂಜಿ

ಮುಂಜಿ ಅಥವಾ ಮೌಂಜ ಎಂಬ ಜಾತಿಯ ಹುಲ್ಲಿನಿಂದ ಹೆಣೆದ ದಾರವನ್ನು ವಟುವಿನ ಸೊಂಟಕ್ಕೆ ಉಡುದಾರವಾಗಿ ಕಟ್ಟಿರುತ್ತಾರೆ. ಮುಂದೆ ಪ್ರಾಯದಲ್ಲಿ ಸ್ವಪ್ನಸ್ಖಲನವಾಗುವಂತೆ, ವಿಷಯಾಸಕ್ತನಾಗದಂತೆ, ರಕ್ತವು ವೀರ್ಯವಾಗಿ ಆತನು ವೀರ್ಯವಂತನಾಗಿ ಆತನ ದೇಹದಲ್ಲಿ ಶಕ್ತಿ ಶೇಖರಣೆಯಾಗುವಂತೆ ಶರೀರವು ಕಾಂತಿಯುಕ್ತವಾಗುವಂತೆ ಮಾಡುವ ಗುಣ ಈ ಮುಂಜ ಉಡುದಾರಕ್ಕುಂಟು. ಇದರ ಧಾರಣೆಯೇ ಮುಂಜಿ ಎಂದು ವೈಶ್ಯರು ಆಚರಿಸುತ್ತಾರೆ.

ಗಾಯತ್ರಿ

ಚಕ್ರವರ್ತಿ ವಿಶ್ವಾಮಿತ್ರನು "ಬ್ರಹ್ಮರ್ಷಿ" ಆಗುವವರೆಗಿನ ಕಥೆಯು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ. ಸಿಟ್ಟು-ಸಿಡುಕಿನ ಪ್ರತಿರೂಪವಾಗಿದ್ದ ವಿಶ್ವಾಮಿತ್ರನು ಅಂತಿಮವಾಗಿ ವಸಿಷ್ಠರ ಬಾಯಿಂದಲೇ "ಬ್ರಹ್ಮರ್ಷಿ ವಿಶ್ವಾಮಿತ್ರ" ಎನ್ನಿಸಿಕೊಂಡಾಗ ಆತನಿಗೆ ಸಮಾಧಾನವಾಯಿತು. ಆದರೆ ನಿಜಕ್ಕೂ ವಿಶ್ವಾಮಿತ್ರನಿಗೆ ಬ್ರಹ್ಮರ್ಷಿಯಾಗಲು ಅಷ್ಟು ದೀರ್ಘಕಾಲ ಮತ್ತು ಅಷ್ಟು ದೀರ್ಘ ಹೋರಾಟದ ಅಗತ್ಯವಿರಲಿಲ್ಲ ಎಂಬ ಸತ್ಯ ಸಂಗತಿಯು ಆತನಿಗೆ ಅರಿವಾದದ್ದು ನಂತರದ ಕಾಲದಲ್ಲಿ. ಬ್ರಹ್ಮರ್ಷಿಯಾಗಲು ತನ್ನಲ್ಲಿ ನಿಜಕ್ಕೂ ಇರಬೇಕಾದ ಎಲ್ಲಾ ರೀತಿಯ ಅರ್ಹತೆಗಳಿದ್ದರೂ ಸಹ ಬ್ರಹ್ಮಷಿಯಾಗಲು ತುಂಬಾ ಸಮಯ ನಷ್ಟವಾದುದಕ್ಕೆ ಇದ್ದ ಕಾರಣ ಏನು ಎಂಬುದಾಗಿ ಚಿಂತಿಸಿ ಸತ್ಯವನ್ನು ಕಂಡುಕೊಂಡಾಗ ವಿಶ್ವಾಮಿತ್ರನಿಗೆ ಅಚ್ಚರಿಯಾಯಿತು.

ಒಳ್ಳೆಯ ಶ್ಯಾವಿಗೆ, ಸಕ್ಕರೆ, ತುಪ್ಪ, ಏಲಕ್ಕಿ, ಗೋಡಂಬಿ, ದ್ರಾಕ್ಷಿ, ಹಾಲು ಕೇಸರಿಗಳನ್ನು ಹುಡುಕಿ ತಂದು ಮಾಡಿದ ಖೀರನ್ನು ಕುಡಿದಾಗ ಅದು ಕಾಮಕೋಟಿ ವಿಷವಾದದ್ದು ಹೇಗೆ ಎಂದು ಪರೀಕ್ಷಿಸಿದಾಗ ಅದನ್ನು ತಯಾರಿಸಿದ ಪಾತ್ರೆಯು ಕಿಲುಬು ಹಿಡಿದದ್ದು ತಿಳಿಯಿತು. ಪಾತ್ರೆಯೊಂದು ಶುದ್ಧವಾಗಿದ್ದಲ್ಲಿ ಉಪ್ಪುಗಂಜಿಯನ್ನಾದರೂ ಮಾಡಿ ಕುಡಿಯಬಹುದಲ್ಲವೆ. ಅದರಂತೆಯೇ ಚಕ್ರವರ್ತಿಯಾಗಿದ್ದ ವಿಶ್ವಾಮಿತ್ರನಿಗೆ ಅಧಿಕಾರದ ಬಲವಿತ್ತು ಧನಕನಕಾದಿ ಅಷ್ಟೈಶ್ವರ್ಯ ಸಂಪತ್ತಿತ್ತು. ಅತುಳ ಸೈನಿಕ ಬಲವಿತ್ತು. ತ್ರಿಶಂಕುವನ್ನು

ಸಶರೀರಿಯಾಗಿ ಸ್ವರ್ಗಕ್ಕೆ ಕಳುಸುವೆನೆಂಬ ಛಲ ಹಾಗೂ ಸಾಹಸದ ಗುಣವಿತ್ತು. ಶಸ್ತ್ರಗಳ ಅನುಭವವಿತ್ತು, ಶಾಸ್ತ್ರಗಳ ಪಾಂಡಿತ್ಯವಿತ್ತು, ವಿಶೇಷವೆಂದರೆ ಆತನಿಗೆ ತಪೋಬಲವಿತ್ತು ಆದರೆ ಇದಾವುದೂ ಆತನನ್ನು ಬ್ರಹ್ಮರ್ಷಿಯನ್ನಾಗಿಸಲು ಉಪಯೋಗಕ್ಕೆ ಬರಲಿಲ್ಲ. ಕಾರಣ ಮುಖ್ಯವಾಗಿ ಆತನ ಪಾತ್ರೆಯೇ ಸರಿ ಇರಲಿಲ್ಲ ಅರ್ಥಾತ್ ಮನಸ್ಸು ಶುದ್ಧವಾಗಿರಲಿಲ್ಲ. ಕೋಪ-ತಾಪ-ದ್ವೇಷ-ಮತ್ಸರಗಳಿಂದಲೇ ತುಂಬಿರುವ ಹೃದಯ ವಂತನಿಗೆ ಏನೆಲ್ಲಾ ಇದ್ದರೂ ಉಪಯೋಗವಿಲ್ಲ ಎಂಬ ಸತ್ಯದ ಅರಿವಾದಾಗ ವಿಶ್ವಾಮಿತ್ರ ಮಮ್ಮಲ ಮರುಗಿದ ನಂತೆ.

ಈ ದೇಹದ ಬಾಹ್ಯ ಸೌಂದರ್ಯ, ಬಾಹ್ಯಬಲ, ಬಾಹ್ಯ ಸಂಪತ್ತು, ಬಾಹ್ಯ ಬಿರುದು ಬಾಹ್ಯ ಅಧಿಕಾರಿ ಗಳಿಂದ ಆತನಿಗೆ, ಆತನು ತಿಳಿದಿರುವ ರೀತಿಯಲ್ಲಿ 'ಸುಖ' ಎಂಬುದು ದೊರೆಯಬಹುದು. ಇನ್ನೂ ಹೆಚ್ಚೆಂದರೆ ಅಪಾರ ಕೀರ್ತಿಯು ಲಭಿಸಬಹುದು. ಇತಿಹಾಸದ ಪುಟಗಳಲ್ಲಿ ಆತನ ಹೆಸರು ಉಳಿಯಬಹುದು ಅಷ್ಟೇ. ಆದರೆ ಇದರಿಂದ ಆತನು ಭಗವಂತನ ಪ್ರೀತಿಗೆ ಪಾತ್ರನಾಗುವುದಿಲ್ಲ. ಆತನಲ್ಲಿ ಆಂತರಿಕವಾಗಿ ಮನೆ ಮಾಡಿಕೊಂಡಿರುವ ಅರಿಷಡ್ವರ್ಗಗಳ ಜೊತೆಯಲ್ಲಿ ಪರಪೀಡನೆ, ಪರನಿಂದನೆ, ಸಿಟ್ಟು, ಕೋಪ, ತಾಪ, ಈರ್ಷೆ ಮುಂತಾದ ತಮೋಗುಣಗಳು ಹೊರಹೋಗಿ ಶುದ್ಧ ಹಾಗೂ ನಿಷ್ಕಲ್ಮಷ ಹೃದಯವಂತನಾಗುತ್ತಾನೆ. ಶರೀರದ ಬಾಹ್ಯ ವ್ಯಾಯಾಮದಿಂದ ಶರೀರದ ಬಾಹ್ಯಕಾಂತಿ/ಸೌಂದರ್ಯವು ಹೆಚ್ಚಿ ಆರೋಗ್ಯವು ವೃದ್ಧಿಯಾಗುವು ದರಲ್ಲಿ ಆಂತರಿಕ ವ್ಯಾಯಾಮದಿಂದ ಶುದ್ಧ ಹೃದಯವಂತನಾಗಲು ಏಕೆ ಸಾಧ್ಯವಿಲ್ಲ ಎಂಬ ವಿಶ್ವಾಮಿತ್ರನ ಪುರುಷ ಪ್ರಯತ್ನದ ಫಲವಾಗಿ ದೊರೆತ ಮಹಾಮಂತ್ರವೇ "ಗಾಯತ್ರಿ" ಶಬ್ದರಹಿತ ಸ್ಮರಣೆಯ ಮೂಲಕವಾಗಿ ಬಾಯಿಯಿಂದ ಒಳಗೆ ಅಂತರ್ಮುಖಿಯಾಗಿ ಹೃದಯದ ಸನಿಹದ ಯಾವ ಭಾಗವಾದ ನಂತರ ಯಾವ ಭಾಗವು, ಯಾವ ರೀತಿ, ಎಷ್ಟು ಸೂಕ್ಷ್ಮವಾಗಿ ಸಂವೇದನಾಶೀಲವಾದಲ್ಲಿ ಯಾವ ಪರಿಣಾಮವೂ ದೊರೆಯುತ್ತದೆಂಬ ಸತ್ಯವನ್ನು ಅನುಭಾವದ ಮೂಲಕ ಕಂಡುಕೊಂಡ ವಿಶ್ವಾಮಿತ್ರನು ಈ ಪ್ರಪಂಚದ ಮನುಕುಲಕ್ಕೆ ಕೊಟ್ಟ ಅದ್ವಿತೀಯ ಕೊಡುಗೆಯೇ 'ಗಾಯತ್ರಿ ಮಂತ್ರ' ಎಂದು ವೈಶ್ಯರು ಸಂಪೂರ್ಣವಾಗಿ ಈ ಮಂತ್ರವನ್ನು ದಿನಕ್ಕೆ ೨-೩ ಬಾರಿ ಇದನ್ನು ಜಪಿಸುತ್ತಾರೆ.

ಗಾಯತ್ರಿ ಮಂತ್ರವನ್ನು ಬಾಯಲ್ಲಿ ಶಬ್ದರೂಪದಿಂದ ಹೊರಬರುವಂತೆ ಉಚ್ಚರಿಸುವುದಿಲ್ಲ. ಕಿವಿಯಲ್ಲಿ ಕೇಳುವುದಿಲ್ಲ. ಇದನ್ನು ಕೇವಲ ತನ್ನ ಧ್ವನಿ ಪೆಟ್ಟಿಗೆಯಿಂದ ಹೊರಡುವ ಗಾಯತ್ರಿಯನ್ನು ನಾಲಿಗೆಯಿಂದ ಹೊರ ಸೂಸದೆ ಸಂವೇದನೆಯ ಮೂಲಕ ಆಂತರಿಕ ಸಂಚಲನದಿಂದ ಭಾವಶುದ್ಧಿ ಮಾಡಿಕೊಳ್ಳುತ್ತಾರೆ. ರಾಮನ ರಾಮ ಬಾಣವು ಬಿಡದೆ ಬೆಂಬೆತ್ತಿ ಹೊರಗಿನ ಒಬ್ಬ ದುಷ್ಟನನ್ನು ನಾಶಪಡಿಸಬಹುದು. ಆದರೆ ವಿಶ್ವಾಮಿತ್ರನ ಗಾಯತ್ರಿ ಮಂತ್ರವು ಎಲ್ಲರ ಅಂತರ್ಯದ ಕಲ್ಮಶವನ್ನು ತೊಳೆದು ಬ್ರಹ್ಮತ್ವದೆಡೆಗೆ ಕರೆದೊಯ್ಯ ಬಹುದು. ಹಾಗಾಗಿ ಮನುಷ್ಯರೆಲ್ಲರೂ ಜಾತಿ-ಮತ-ಪಂಥ ಬೇದವಿಲ್ಲದೆ ಗಾಯತ್ರಿಯನ್ನು ಆಂತರಿಕವಾಗಿ ಪಠಿಸಿ ವಿಶ್ವಾಮಿತ್ರನಂತೆಯೇ ಬ್ರಹ್ಮರ್ಷಿಯಾಗಬಹುದು ಎಂದು ವೈಶ್ಯರು ನಂಬಿಕೆ ಇಟ್ಟುಕೊಂಡಿದ್ದಾರೆ.

೪.೧.೩. ಮದುವೆ

ಪ್ರತಿಯೊಂದು ಜನಾಂಗಗಳು ತನ್ನದೇ ಆದ ಸಂಪ್ರದಾಯ ಆಚರಣೆಗಳ ಮೂಲಕ ಮದುವೆ ಮಾಡುವುದನ್ನು ಪ್ರಾಚೀನ ಕಾಲದಿಂದಲೂ ಮುಂದುವರಿಸಿಕೊಂಡು ಬಂದಿವೆ. ಮದುವೆ ಎಂಬುದು ಸ್ವರ್ಗದಲ್ಲಿ ನಿರ್ಧಾರ ವಾಗಿರುತ್ತದೆ ಎಂಬ ಕಲ್ಪನೆ ಇದೆ. ಲೋಕದಲ್ಲಿ ಒಂದು ಗಂಡಿಗೆ ಒಂದು ಹೆಣ್ಣು ಎಂದು ಸೃಷ್ಟಿಯಾಗಿರುತ್ತದೆ. ಮದುವೆಯಾಗಿ ಮಕ್ಕಳನ್ನು ಪಡೆದರೆ ಮುಕ್ತಿ ದೊರಕುತ್ತದೆ. ಜನ್ಮ ಸಾರ್ಥಕವಾಯಿತು ಎಂಬ ನಂಬಿಕೆ ಇದೆ. ಗಂಡು ಹೆಣ್ಣಿನ ವಿವಾಹ ಅನುಬಂಧವನ್ನು ಸಂಸಾರ ಎಂಬ 'ರಥ'ಕ್ಕೆ ಹೋಲಿಸಲಾಗಿದೆ. ರಥ ಸಂಸಾರ ಬದುಕು ಆದರೆ ಅದು ಮುಂದುವರಿಯಬೇಕಾದರೆ ಗಂಡು-ಹೆಣ್ಣು ಎಂಬ ಗಾಲಿಗಳ ಅವಶ್ಯಕತೆ ಇದೆ.

ಮದುವೆ ಕುಟುಂಬಕ್ಕೆ ಪೂರಕವಾದ ಸಂಸ್ಥೆಯಾಗಿದೆ. ವಿವಾಹವು ಇಂದು ನಿನ್ನೆಯದಲ್ಲ. ವಿವಾಹದ ವಿಧಿ ವಿಧಾನಗಳು. ರೀತಿ ನೀತಿಗಳು ಹಾಗೂ ನಿರ್ಬಂಧ ಮತ್ತು ಪ್ರಕಾರಗಳು ಸಮೂಹದಿಂದ ಸಮೂಹಕ್ಕೆ ಭಿನ್ನವಾಗುತ್ತವೆ. ವಿವಾಹದ ಉದ್ದೇಶ ಮತ್ತು ಕಾರ್ಯವಿಧಾನಗಳ ಬಗ್ಗೆಯೂ ಬೇರೆ ಬೇರೆ ಸಮೂಹಗಳಲ್ಲಿ ಬೇರೆ ಬೇರೆ ವಿಚಾರಗಳೇ ಇವೆ. ಸಂಪ್ರದಾಯಗಳು ಒಂದು ಸಮುದಾಯಕ್ಕಿಂತ ಮತ್ತೊಂದು ಸಮುದಾಯಕ್ಕೆ ಭಿನ್ನವಾಗಿವೆ. ವಿವಾಹ ವ್ಯವಸ್ಥೆ ಇಲ್ಲದ ಸಮಾಜವೇ ಇಲ್ಲವೆನ್ನಬಹುದು. ವಿವಾಹ ಸಂಸ್ಥೆಯು ಸಾರ್ವತ್ರಿಕ ವಾದುದು ಅಂದರೆ ಈ ಸಂಸ್ಥೆಯು ಒಂದಲ್ಲೊಂದು ರೂಪದಲ್ಲಿ ಎಲ್ಲ ಸಮಾಜಗಳಲ್ಲಿಯೂ ಇರುತ್ತದೆ. ಎಲ್ಲಾ ಕಾಲಕ್ಕೂ ಇರುವುದನ್ನು ಕಾಣುತ್ತೇವೆ.

ಕಾಲ ಪರಿಸ್ಥಿತಿಗಳಿಗೆ ಅನುಗುಣವಾಗಿ ವಿವಾಹದ ಪದ್ಧತಿಗಳಲ್ಲಿ ಅನೇಕ ವ್ಯತ್ಯಾಸಗಳು ಕಂಡು ಬಂದರೂ ಅದು ಮಾನವನ ಜೀವನದೊಂದಿಗೆ ಒಂದಾಗಿ ಬೆಳೆದು ಬಂದಿದೆ. ಈ ವಿವಾಹವು ಧಾರ್ಮಿಕ ಸಂಸ್ಥೆಗಿಂತ ಪುರಾತನವಾದುದೆಂದು ಮನೋತಜ್ಞರು ಅಭಿಪ್ರಾಯಪಡುತ್ತಾರೆ. ಮಾನವನಿಗೆ ಜನನ, ಬಾಲ್ಯ, ಯೌವ್ವನ, ಮುಪ್ಪು ಸಾವುಗಳು ಸಹಜವಾದಂತೆ ವಿವಾಹವೂ ಕೂಡ ಸಹಜವೆಂದು ಸಮಾಜ ಭಾವಿಸಿದೆ. ವಿವಾಹ ಸಂಸ್ಥೆಯನ್ನು ಕಡೆಗಣಿಸಿ ಬಾಳಿದವರು ಹಾಗೂ ಬಾಳುತ್ತಿರುವವರ ಸಂಖ್ಯೆ ಅತಿ ವಿರಳ. ವಿವಾಹವು ಇದೊಂದು ಸಾಮಾಜಿಕ ಸಂಸ್ಥೆ ಗಂಡು ಹೆಣ್ಣು ಕೂಡಿ ಕುಟುಂಬವೊಂದನ್ನು ಕಟ್ಟಲು ವಿವಾಹ ಅತ್ಯವಶ್ಯಕ.

ವಿವಾಹದ ಪ್ರಾಚೀನತೆಯ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಮದುವೆಯ ಕಲ್ಪನೆಯಾಗಲಿ, ವ್ಯವಸ್ಥೆಯಾಗಲಿ ಇರದ ಜನಸಮೂಹವೇ ಬಹುಶಃ ಈ ಹೊತ್ತು ಪ್ರಪಂಚದಲ್ಲಿ ಇರಲಾರದು. ಮನುಷ್ಯ ಭೂಮಿಯಲ್ಲಿ ಕಾಣಿಸಿಕೊಳ್ಳುವ ಮೊದಲೇ ಕೆಲವು ವಾನರ ವರ್ಗಗಳಲ್ಲಿ ಅದಕ್ಕೂ ಮೊದಲು ಕೆಲವು ಪ್ರಾಣಿ ಗಳಲ್ಲಿ ಮತ್ತು ಪಕ್ಷಿಗಳಲ್ಲಿ ಇಂತಹ ಒಂದು ವ್ಯವಸ್ಥೆಯನ್ನು ಗುರುತಿಸುವುದು ಸಾಧ್ಯವೆಂಬುದನ್ನು ಸಮಾಜ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

ಒಂದು ಗಂಡು ಪ್ರಾಣಿಯೇ, ಪಕ್ಷಿಯೇ ಯಾವುದಾದರೊಂದು ಅವಧಿಯಲ್ಲಿ ಸಂಪ್ರದಾಯಗಳ ಮೂಲಕ ಹೆಣ್ಣಿನೊಂದಿಗೆ ಕೂಡಿಕೊಳ್ಳುವುದು ಕೂಡಿಕೊಂಡ ಮೇಲೆ ಜನಿಸಿದ ಮರಿಗಳ ಜವಾಬ್ದಾರಿಯನ್ನು ಒಟ್ಟಿಗೆ ನಿಭಾಯಿಸುವುದು ಗಂಡು ಮತ್ತು ಹೆಣ್ಣು ತಮ್ಮ ಮಕ್ಕಳೊಂದಿಗೆ ಒಟ್ಟು ಸೇರಿ ಒಂದು ಕುಟುಂಬದಂತೆ ಜೀವನ ಸಾಧಿಸುವುದು ಇದು ಪ್ರಕೃತಿಯ ಸಹಜವಾದ ಸಂತಾನೋತ್ಪತ್ತಿಗಾಗಿ ನಡೆಯುವ ಪ್ರಕ್ರಿಯೆಯಷ್ಟೇ. ವಿವಾಹವೊಂದು ಅನಿವಾರ್ಯ ಸಾಮಾಜಿಕ ಸಂಸ್ಥೆಯಾಗಿ ಹುಟ್ಟಿಕೊಂಡರೂ ನಂತರದ ದಿನಗಳಲ್ಲಿ ವಿವಾಹ ಸಂಸ್ಥೆ ಧಾರ್ಮಿಕ ಆಚರಣೆಯೆನ್ನುವಂತೆ ಭಾವಿತವಾಯಿತು. ಇಂದು ಬಹುತೇಕ ಸಮಾಜಗಳಲ್ಲಿ ವಿವಾಹವು ಒಂದು ಧಾರ್ಮಿಕ ಸಾಂಪ್ರದಾಯಿಕ ಸಂಸ್ಕಾರವಾಗಿದೆ. ಮಾನವನು ಪ್ರಾಣಿಗಳಂತೆ ಲೈಂಗಿಕ ಪ್ರಚೋದನೆಯನ್ನು ಹೊಂದಿದರೂ ಅದನ್ನು ಈಡೇರಿಸಿಕೊಳ್ಳುವಾಗ ಪ್ರಾಣಿ ವರ್ಗದಂತೆ ಎಲ್ಲಿ ಬೇಕಾದರೂ ಅಲ್ಲಿ ಪಡೆದುಕೊಳ್ಳಲು ಸಾಧ್ಯವಿಲ್ಲ. ಕಾರಣ ಮಾನವ ಸಮಾಜ ಇದನ್ನು ವೈಯಕ್ತಿಕ ಅಥವಾ ಜೈವಿಕವೆಂದು ಮಾತ್ರ ಭಾವಿಸದೆ ಸಾಮಾಜಿಕ ಹಾಗೂ ನೈತಿಕ ವಿಷಯವೆಂದು ಪರಿಗಣಿಸಿದೆ. ಈ ಕಾರಣದಿಂದ ಎಲ್ಲಾ ಮಾನವ ಸಮುದಾಯವೂ ನಿರ್ಧಿಷ್ಟ ಸಂಗಾತಿಗಳ ನಡುವೆ ಉನ್ನತ ಪ್ರಕಾರದ ಹಾಗೂ ಸ್ಥಿರವಾದ ಬಂಧನವೊಂದನ್ನು ಇಷ್ಟಪಡುತ್ತದೆ. ಇದನ್ನೇ 'ಮದುವೆ' ಎಂದು ಕರೆದು ಗಂಡು ಹೆಣ್ಣುಗಳನ್ನು ಒಂದು ವ್ಯವಸ್ಥಿತ ಕುಟುಂಬ ಜೀವನಕ್ಕೆ ಒಳಪಡಿಸುವುದು.

ಅತ್ಯಂತ ಪ್ರಾಚೀನ ಮಾನವನ ಕಾಲದಲ್ಲಿ ಲೈಂಗಿಕ ಸ್ವಚ್ಛಂದತೆ ಪ್ರಚಲಿತವಿದ್ದು ಯಾರು ಯಾರನ್ನಾದರೂ ಸೇರಬಹುದಾಗಿತ್ತು. ತಾಯಿ ಮಗನೊಡನೆ ತಂದೆ ಮಗಳೊಡನೆ ಕೆಲವು ಸಾರಿ ಅಣ್ಣ ತಂಗಿಯೊಡನೆ ಲೈಂಗಿಕ ಸಂಯೋಗ ನಡೆದು ಮಕ್ಕಳಾಗುತ್ತಿದ್ದವು. ಆದರೆ ಹಾಗೆ ಹುಟ್ಟಿದ ಮಕ್ಕಳು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲವಾಗಿರುತ್ತಿದ್ದವು. ಹೀಗೆ ಹುಟ್ಟಿದ ಮಕ್ಕಳು ಗರ್ಭಿಣಿಯರಿಗೆ ಸರಿಯಾದ ರಕ್ಷಣೆ ಸಿಕ್ಕುತ್ತಿರಲಿಲ್ಲ. ಈ ತೊಂದರೆಗಳ ಪರಿಹಾರಕ್ಕಾಗಿ ವಿವಾಹ ಪದ್ಧತಿ ಜಾರಿಗೆ ಬಂದಿತೆಂದು ಮಾನವ ಶಾಸ್ತ್ರಜ್ಞರು ಹೇಳಿದ್ದಾರೆ.

ಮದುವೆಯು ಮಾನವನ ಬದುಕಿನಲ್ಲಿ ಒಂದು ಮಹತ್ವದ ಘಟ್ಟ. ಅಪರಿಚಿತವಾದ ಗಂಡು ಹೆಣ್ಣನ್ನು ಒಂದುಗೂಡಿಸಿ ಜೀವನ ಸಂಗಾತಿಗಳನ್ನಾಗಿ ಮಾಡುವ ವಿಶಿಷ್ಟ ಸಂದರ್ಭ ಬದುಕಿನಲ್ಲಿ ಒಮ್ಮೆ ಮಾತ್ರ ನಡೆಯುವ ಘಟನೆ ಬದುಕಿಗೆ ಭದ್ರತೆಯನ್ನು, ಜವಾಬ್ದಾರಿಯನ್ನು ತಂದುಕೊಡುತ್ತದೆ. ಜೀವನದಲ್ಲಿ ಉತ್ಸಾಹ, ಆನಂದ ಹೆಚ್ಚುವಂತೆ ಮಾಡಿ ಗಂಡು ಹೆಣ್ಣುಗಳನ್ನು ಜೀವನದ ರಸಯಾನಕ್ಕೆ ತೊಡಗಿಸುವ ಒಂದು ಮಂಗಳಕರ ಪ್ರಸಂಗವಾಗುತ್ತದೆ. ಎರಡು ಕುಟುಂಬಗಳ ನಡುವೆ ಹೊಸ ಸಂಬಂಧವನ್ನು ಬೆಸೆಯುತ್ತದೆ. ಎರಡು ಕುಟುಂಬಗಳು ಎರಡು ಊರುಗಳಲ್ಲಿ ಸೇರಿಕೊಂಡಿದ್ದರೆ ಆ ಎರಡು ಊರುಗಳ ನಡುವೆ ಸಾಮರಸ್ಯ ಕಂಡು ಬರುತ್ತದೆ. ಒಟ್ಟಿನಲ್ಲಿ ಮದುವೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಬಹು ಮಹತ್ವದ ಪಾತ್ರವಹಿಸುತ್ತದೆ. ಮದುವೆಯ ಉದ್ದೇಶ ಪ್ರತಿ ಮಾನವ ಸಮಾಜಗಳಲ್ಲೂ ಒಂದೇ ಆದರೆ ಅದನ್ನು ನಡೆಸುವ ರೀತಿ ಮಾತ್ರ ಬೇರೆ ಬೇರೆ ಸಮಾಜ ನೆಲೆಗೊಂಡ ಪರಿಸರ ಬದುಕಿನ ಸ್ಥಿತಿಗತಿ ಧರ್ಮ ನಂಬಿಕೆ ಇವೇ ಮುಂತಾದ

ಅಂಶಗಳಿಗನುಗುಣವಾಗಿ ಮದುವೆ ಪದ್ಧತಿ ರೂಪ ಪಡೆದಿದೆ. ಕಾಲಕಾಲಕ್ಕೆ ಬದುಕಿನ ಇನ್ನಿತರ ಮಹತ್ವದ ಘಟ್ಟಗಳ ಅನುಕರಣೆಯಲ್ಲಿ ಅನೇಕ ವ್ಯತ್ಯಾಸಗಳುಂಟಾದಂತೆ ಮದುವೆ ಪದ್ಧತಿಯಲ್ಲೂ ಹಲವು ವ್ಯತ್ಯಾಸಗಳು ಸಾಧಿತವಾಗಿವೆ. ನಿರ್ಧಿಷ್ಟ ಸಮಾಜವೊಂದರಲ್ಲಿ ಜರಗುವ ಮದುವೆ ಆಚರಣೆಯ ಅಧ್ಯಯನವೆಂದರೆ ಆ ಸಮಾಜದ ಒಂದು ಸಾಂಸ್ಕೃತಿಕ ಕ್ರಿಯೆ. ಇಡೀ ಸಮಾಜ ಅಥವಾ ಆ ಸಮಾಜದ ಬಹುಪಾಲು ಸಮೂಹ ಆ ಕ್ರಿಯೆಯಲ್ಲಿ ಭಾಗಿಯಾಗುವುದನ್ನು ಕಾಣಬಹುದು. ಮದುವೆ ಬಂಧನಕ್ಕೆ ಹೈದ್ರಾಬಾದ್ ಕರ್ನಾಟಕದ ಸುತ್ತಲಿನ ವೈಶ್ಯರಲ್ಲಿ ವಿಶೇಷ ಪ್ರಾಶಸ್ತ್ಯವಿದೆ. ಇದೊಂದು ದೇವರ ಕಾರ್ಯ ಎಂಬ ಕಲ್ಪನೆ ಇದೆ. ಈ ಕಾರಣದಿಂದ ವಿವಾಹದ ಕಾರ್ಯ ಕಲಾಪಗಳೆಲ್ಲ ಅನೇಕ ಶಾಸ್ತ್ರ, ವಿಧಿ ವಿಧಾನಗಳನ್ನು ತಳಕು ಹಾಕಿಕೊಂಡಿದ್ದಾರೆ. ಮದುವೆಯ ಆಗು ಹೋಗುಗಳು ಕೇವಲ ಗಂಡು ಹೆಣ್ಣುಗಳಿಗೆ ಮಾತ್ರ ಸೀಮಿತವಾದುದಲ್ಲ ಇಡೀ ಸಮಾಜಕ್ಕೆ ಸಂಬಂಧಿಸಿದವು. ಸಾಮಾಜಿಕ ಸುವ್ಯವಸ್ಥೆ ಮತ್ತು ಸಾಮಾಜಿಕ ಭದ್ರತೆ ಮದುವೆಯನ್ನು ಅವಲಂಬಿಸಿದೆ ಎಂಬ ತಿಳುವಳಿಕೆ ಇವರಲ್ಲಿ ಬೇರೂರಿದೆ.

ವೈಶ್ಯರ ಉದ್ಯೋಗ ವ್ಯಾಪಾರವಾಗಿದೆ, ಈಗ ಈ ವ್ಯಾಪಾರದ ಜೊತೆಗೆ ಕೆಲವರು ರಾಜಕೀಯ, ಸಮಾಜ ಸೇವೆ, ಸಿನಿಮಾ ರಂಗದಲ್ಲಿ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಆದರೂ ವೈಶ್ಯರ ಮುಖ್ಯ ಕಸುಬು ವ್ಯಾಪಾರವೇ ಆಗಿದೆ. ಈ ಕೆಲಸಗಳನ್ನು ಸುಗಮವಾಗಿ ನಿರ್ವಹಿಸುವ ಸಲುವಾಗಿ ಮದುವೆಗೆ ವಿಶೇಷ ಮಹತ್ವ ನೀಡಿದ್ದಾರೆ. ಈ ಸಮಾಜ ಬ್ರಹ್ಮಚಾರ್ಯ ಜೀವನವನ್ನು ಪುರಸ್ಕರಿಸುವುದಿಲ್ಲ. ವಯಸ್ಕ ಅವಿವಾಹಿತರ ಮುಖ ನೋಡುವುದು ಒಳ್ಳೆಯದಲ್ಲ ಎಂದು ನಂಬುತ್ತಾರೆ. ಅಲ್ಲದೆ ಮದುವೆ ಇಲ್ಲದ ಬಾಳು ಬರಡು ಮತ್ತು ಗೋಳು ಎಂಬ ನಂಬಿಕೆ ಇದೆ. ಅಷ್ಟೇ ಅಲ್ಲ ಅವಿವಾಹಿತನಾದ ವ್ಯಕ್ತಿ ಮರಣವಪ್ಪಿದರೆ ಆತನಿಗೆ ಮುಕ್ತಿ ದೊರಕುವುದಿಲ್ಲ ಎಂದು ವೈಶ್ಯರಲ್ಲಿ ನಂಬಿಕೆ ಇದೆ.

ಮೋಕ್ಷದ ಮಾರ್ಗದಲ್ಲಿ ಸಾಗಬೇಕಾದರೆ ಮದುವೆಯಾಗಿ ಒಂದಾದರೂ ಗಂಡು ಮಕ್ಕಳನ್ನು ಪಡೆಯಬೇಕು. ಪುತ್ರ ಸಂತಾನವಿಲ್ಲದ ವ್ಯಕ್ತಿ ತಾನು ಪಿತೃಗಳಿಂದ ಪಿತೃ ಋಣವನ್ನು ತೀರಿಸದೆ ಋಣಸ್ಥನಾಗಿಯೇ ಉಳಿದು ಗತಿಸಿದ ನಂತರ ಮೋಕ್ಷ ಪ್ರಾಪ್ತವಾಗದೆ ದುಷ್ಕರ್ಮಿಯಾಗಿ ನರಕಕ್ಕೆ ಹೋಗಬೇಕಾಗುತ್ತದೆಂದೂ ನಂಬುವರು (ಅಂಬಳಿಕೆ ಹಿರಿಯಣ್ಣ) ಸೂಕ್ಷ್ಮವಾಗಿ ಇವರ ಈಗಿನ ಮದುವೆ ಸಂಪ್ರದಾಯವನ್ನು ಪರಿಶೀಲಿಸಿ ನೋಡಿದರೆ ಹಿಂದೆ ಇವರಲ್ಲಿ ಅನೇಕ ಬಗೆಯ ಪದ್ಧತಿಗಳು ಜಾರಿಯಲ್ಲಿದ್ದವೆಂದು ತಿಳಿದು ಬರುತ್ತದೆ. ಅನೇಕ ವಕ್ತೃಗಳು ಹೀಗೆ ಕೆಲವು ದಶಕಗಳ ಹಿಂದಿನವರೆಗೂ ಬೇರೆ ಬೇರೆ ಮದುವೆ ಪದ್ಧತಿಗಳು ರೂಢಿಯಲ್ಲಿದ್ದವೆಂಬುದನ್ನು ಖಚಿತಪಡಿಸಿದ್ದಾರೆ. ಅವುಗಳನ್ನು ಸ್ಥೂಲವಾಗಿ ವಿವೇಚಿಸಲಾಗಿದೆ.

೧. ಅಳಿಯ ಸಂತಾನ ಪದ್ಧತಿ

ಈ ವಿವಾಹ ಪದ್ಧತಿಯ ಪ್ರಕಾರ ಹೆಣ್ಣನ್ನು ಗಂಡನಮನೆಗೆ ಕಳಿಸುವುದಿಲ್ಲ. ಬದಲಾಗಿ ಗಂಡನ್ನೇ ತರುವ ಕ್ರಮ, ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚು ಹೆಣ್ಣು ಮಕ್ಕಳನ್ನು ಹೊಂದಿದ್ದ ತಂದೆ ತಾಯಿಗಳು ಈ ವಿಧಾನದ

ಮದುವೆ ಪದ್ಧತಿಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಿದ್ದರು. ಆದರೆ ಅವರು ತಮ್ಮ ಅನುಕೂಲಕ್ಕೆ ತಕ್ಕಂತೆ ಹಿರಿಯ ಇಲ್ಲವೆ ಕಿರಿಯ ಮಗಳಿಗೆ ಇಂಥ ಪದ್ಧತಿ ಅನುಸರಿಸುತ್ತಾರೆ. ಉಳಿದವರನ್ನು ಹೊರಕ್ಕೆ ಕೊಡುತ್ತಿದ್ದರು. ಹುಡುಗ ಸೋದರಿಕೆ ಸಂಬಂಧದವನು ಅಥವಾ ದೂರದ ಸಂಬಂಧಿಯೇ ಆಗಿರುತ್ತಿದ್ದ. ಗುರುತು ಪರಿಚಯ ಬಳಕೆಯಿದ್ದ ವ್ಯಕ್ತಿ ಮಾತ್ರ ಮುಂದೆ ಆ ಮನೆಯ ಯಜಮಾನನಾಗಿ ಯಶಸ್ಸು ಹೊಂದಲು ಸಾಧ್ಯವೆಂದು ತಿಳುವಳಿಕೆ ಇರುವುದರಿಂದಲೇ ಇಂತಹ ಪದ್ಧತಿ ಬಳಕೆಗೆ ಬರಲು ಕಾರಣವಾಗಿದೆ.

೨. ಸಾದಿನಿ ವಿವಾಹ ಪದ್ಧತಿ

ಹೆಂಡತಿ ಬಂಜೆಯಾಗಿದ್ದರೆ ಇಲ್ಲವೆ ಸಾವಿಗೀಡಾದರೆ ಹೆಂಡತಿಯ ತಂಗಿಯನ್ನು ಮದುವೆಯಾಗುವುದು ಹಿಂದೆ ಇದು ಕಡ್ಡಾಯವೆಂಬಂತೆ ನಡೆದು ಬರುತ್ತಿತ್ತು. ಈಗ ಹುಡುಗನಿಗೆ ಹುಡುಗಿ ಒಪ್ಪಿಗೆಯಾದರೆ ಮಾತ್ರ ಮಾಡಿಕೊಳ್ಳಬಹುದು. ಇಲ್ಲವಾದರೆ ಹೊಸ ಸಂಬಂಧವನ್ನು ಬೆಳೆಸಬಹುದು. ಈ ಪದ್ಧತಿ ಇಂದಿಗೂ ಅಲ್ಲಲ್ಲಿ ರೂಢಿಯಲ್ಲಿದೆ.

೩. ಬಹುಪತ್ನಿತ್ವ

ಒಬ್ಬಳಿಗಿಂತ ಹೆಚ್ಚು ಸ್ತ್ರೀಯರನ್ನು ಮದುವೆಯಾಗುವಿಕೆ ಈ ಪದ್ಧತಿ ಮೊನ್ನೆ ಮೊನ್ನೆಯವರೆಗೂ ರೂಢಿಯಲ್ಲಿತ್ತು. ಒಬ್ಬನೇ ಪುರುಷ ನಾಲ್ಕೈದು ಮದುವೆ ಮಾಡಿಕೊಳ್ಳುತ್ತಿದ್ದ ಉದಾಹರಣೆಗಳು ಕೆಲವಿದೆ. ಇದಕ್ಕೆ ಕಾರಣಗಳು ಇವೆ ಹಿಂದೆ ಬಾಣಂತನ ಬಹಳ ದೀರ್ಘಕಾಲ ನಡೆಯುತ್ತಿತ್ತು ಆ ಅವಧಿಯಲ್ಲಿ ಗಂಡನು ಕಾಮತೃಷೆಯನ್ನು ಇಂಗಿಸಿಕೊಳ್ಳಲು ಬೇರೊಬ್ಬಳನ್ನು ಸೇರುತ್ತಿದ್ದ ಇದರಿಂದ ಸಾಮಾಜಿಕ ಅಭದ್ರತೆಯುಂಟಾಗಿ ತೊಂದರೆಯಾಗಿರುವುದರಿಂದ ಅದಕ್ಕೆ ಪರಿಹಾರವಾಗಿ ಒಬ್ಬಳು ಬಾಣಂತನಕ್ಕೆ ಹೋದಾಗ ಇನ್ನೊಬ್ಬಳೊಂದಿಗೆ ಜೀವನ ನಡೆಸಲು ಈ ವಿವಾಹ ಪದ್ಧತಿಯನ್ನು ರೂಢಿಗೆ ತಂದಿರಬೇಕು. ಹೆಚ್ಚು ಹೆಂಡತಿಯರನ್ನು ಹೊಂದಿರುವುದು ತಮ್ಮ ಪ್ರತಿಷ್ಠೆಯ ವಿಷಯವೇ ಆಗಿತ್ತು.

೪. ಬಾಲ್ಯವಿವಾಹ

ಪ್ರಾಚೀನ ಕಾಲದಲ್ಲಿ ಈ ಪದ್ಧತಿ ಹೆಚ್ಚು ಪ್ರಚಲಿತವಿತ್ತು. ಬೇರೆ ಬೇರೆ ಕಾರಣಗಳಿಗಾಗಿ ಮಕ್ಕಳಿಗೆ ಅಪ್ರಾಪ್ತ ವಯಸ್ಸಿನಲ್ಲೇ ಮದುವೆ ಜರುಗಿಸುತ್ತಿದ್ದರು. ತಂದೆ ತಾಯಿಗಳ ಮುಪ್ಪಿನ ಕಾಲವೋ ರೋಗ ರುಜನಿಗಳ ಕಾರಣವೋ ಹೀಗೆ ಏನೋ ಒಂದು ಕಾರಣವಿರುತ್ತಿತ್ತು. ಹೆಣ್ಣು ದೊಡ್ಡವಳಾಗುವುದಕ್ಕಿಂತ ಮೊದಲೇ ಮದುವೆ ಮಾಡಿಕೊಟ್ಟರೆ ತಂದೆ ತಾಯಿಗಳಿಗೆ ಒಳ್ಳೆಯದು ಎಂಬ ನಂಬಿಕೆ ಪ್ರಬಲ ಕಾರಣ. ಗಂಡು ಮಕ್ಕಳಿಲ್ಲದ ಮನೆಯಲ್ಲಿ ಈ ಪದ್ಧತಿ ಹೆಚ್ಚು ಪ್ರಚಲಿತವಿತ್ತು. ಹುಡುಗ ಮತ್ತು ಹುಡುಗಿ ಇಬ್ಬರೂ ಅಪ್ರಾಪ್ತರಾಗುತ್ತಿದ್ದರು. ಇಂಥ ಮದುವೆಯನ್ನು 'ಕನ್ನೆಧಾರೆ' ಎಂದು ಇದನ್ನು ಎಂಟು ಹತ್ತು ವರ್ಷದವರೆಗೆ ಮಾಡುತ್ತಿದ್ದರು. ಆದರೆ ಈ ಬಾಲ್ಯವಿವಾಹ ವ್ಯವಸ್ಥೆ ಇಂದು ಕಣ್ಮರೆಯಾಗುತ್ತಾ ಬರುತ್ತದೆ.

೫. ತೊಟ್ಟಿಲ ಮದುವೆ

ಇದೂ ಬಾಲ್ಯ ವಿವಾಹವೇ. ಆದರೆ ಗಂಡು ಹೆಣ್ಣುಗಳಿಗೆ ಎಂಟು ಹತ್ತು ವರ್ಷಗಳಾದ ಮೇಲೆ ನಡೆಸುವ ವಿವಾಹವಲ್ಲ. ಹೆಣ್ಣು ಹುಟ್ಟಿ ಹನ್ನೊಂದು ರಾತ್ರಿ ಕಳೆದು ನಾಮಕರಣದ ದಿನ ಈ ಮಗುವನ್ನು ಸೊಸೆಯಾಗಿ ಬಯಸುವ ಸೋದರತ್ತೆ ತನ್ನ ಮಗನ ಹಸ್ತದಿಂದ ಕೊರಳಿಗೆ ಸರವನ್ನೋ ಕಡಗವನ್ನೋ ಹಾಕಿದರೆ ತೊಟ್ಟಿಲ ಮದುವೆ ಆದಂತೆ. ಮುಂದೆ ಅನುಕೂಲವಾದಾಗ ಮದುವೆ ಮಾಡಿಕೊಳ್ಳುತ್ತಿದ್ದರು. ಇದು ಸಂಪೂರ್ಣ ಸೋದರತ್ತೆ ಮತ್ತು ಸೋದರ ಮಾವನ ಹಕ್ಕಾಗಿತ್ತು. ಹೆಣ್ಣು ಗಂಡುಗಳು ಸಂಖ್ಯೆ ಅತಿ ಕಡಿಮೆಯಿದ್ದ ಕಾಲದಲ್ಲಿ ಈ ಪದ್ಧತಿ ತುಂಬ ಜನಪ್ರಿಯವಾಗಿತ್ತು.

೬. ಕೂತು ಮದುವೆ

ಬಹಳ ಸರಳ ವಿವಾಹ ಪದ್ಧತಿ ಸಾಮಾನ್ಯ ಪದ್ಧತಿ ಎಂದರೆ ಹುಡುಗಿಯ ಜೊತೆಯಲ್ಲಿ ಮದುವೆಯಾಗುವುದು. ಆದರೆ ಇಲ್ಲಿ ಹುಡುಗನ ಮನೆಯಲ್ಲಿ ಮದುವೆ ನಡೆಯುತ್ತದೆ. ಹುಡುಗಿ ಕುಟುಂಬದವರು ತೀರಾ ಬಡವರಾಗಿದ್ದರೆ, ಇಲ್ಲವೆ ಹುಡುಗ ಕುಂಟನೋ ಕುರುಡನೋ ಆಗಿದ್ದರೆ ಮಾತ್ರ 'ಕೂತು ಮದುವೆ' ನಡೆಸುತ್ತಿದ್ದರು. ಹೆಣ್ಣು ತನ್ನ ಮನೆಯಿಂದ ಹೊರಟು ಗಂಡಿನವರು ಕೊಟ್ಟ 'ಬಿಡದಿ ಮನೆ'ಯಲ್ಲಿ ಅಲಂಕರಿಸಿಕೊಂಡು ಮದುವೆ ಮಾಡಿಕೊಳ್ಳುತ್ತಿದ್ದಳು.

೭. ವಿನಿಮಯ ಪದ್ಧತಿ

ಹಿಂದಿನ ಕಾಲದಲ್ಲಿ 'ತೆರೆ' ಪದ್ಧತಿಯಿಂದ ಮದುವೆಯೇ ಕಷ್ಟವಾಗುತ್ತಿತ್ತು. ಈ ಪದ್ಧತಿಯನ್ನು ತಪ್ಪಿಸುವುದಕ್ಕಾಗಿ ವಿನಿಮಯ ವಿವಾಹವನ್ನು ಜಾರಿಗೆ ತಂದಿರಬೇಕು. ಹೆಣ್ಣಿಗೆ ಹೆಣ್ಣು ಎಂಬ ಹೆಸರಿನಲ್ಲಿ ಜನಪ್ರಿಯವಾಗಿದ್ದ ಪದ್ಧತಿ ಕೊಟ್ಟು ತರುವ ಪದ್ಧತಿ ಇದು. ಈ ವಿವಾಹ ಪದ್ಧತಿ ಈಗಲೂ ಕೆಲವು ಕಡೆ ಪ್ರಚಲಿತವಿದೆ.

ವೈಶ್ಯರಲ್ಲಿ ಹಲವು ಬಗೆಯ ಮದುವೆ ಪದ್ಧತಿಗಳು ಹಿಂದೆ ರೂಢಿಯಲ್ಲಿ ಇದ್ದವಾದರೂ 'ಏಕಪತ್ನಿತ್ವ'ಕ್ಕೆ ಹೆಚ್ಚು ಗೌರವವಿತ್ತು ಹಾಗೂ ಹೆಚ್ಚು ಪ್ರಚಲಿತವಿತ್ತು. ಈ ಪದ್ಧತಿಯಲ್ಲಿ ಪ್ರೀತಿ, ವಿಶ್ವಾಸ, ಸಹಬಾಳ್ವೆ, ಲೈಂಗಿಕ ತೃಪ್ತಿ, ಹೊಣೆಗಾರಿಕೆಗಳಿರುವುದರಿಂದ ಅಲ್ಲದೆ ಹಿಂದೆ ಇವರಲ್ಲಿ 'ಒಳ ಬಾಂಧವ್ಯ ಪದ್ಧತಿ' ಜನಪ್ರಿಯವಾಗಿತ್ತು. ನಾಗರಿಕ ಸಂಪರ್ಕ ಬೆಳೆದಂತೆ ಮೊದಲಿನ ಪದ್ಧತಿ ಮರೆಯಾಗಿ ಹೊರ ಬಾಂಧವ್ಯ ಬೆಳಕಿಗೆ ಬಂದಿದೆ. ತಮ್ಮ ಕುಲ ಮನೆತನದ ಹೊರಗಿನ ಯಾವ ಗಂಡನೊಡನೆಯೂ ವೈವಾಹಿಕ ಸಂಬಂಧ ನಡೆಸುವುದು ರೂಢಿಯಾಗಿತ್ತು. ತಮ್ಮ ಬದುಕಿನಲ್ಲಿ ಬರಬಹುದಾದ ತೊಂದರೆಗಳನ್ನು ಹೋಗಲಾಡಿಸಿಕೊಳ್ಳಲು ಹೊರಗಿನವರ ನೆರವನ್ನು ಪಡೆಯುವ ಉದ್ದೇಶದಿಂದಲೂ ಈ ವಿವಾಹ ಪದ್ಧತಿಗೆ ಹೆಚ್ಚಿನ ಮಹತ್ವ ದೊರಕಿತು. ಈ ಕಾರಣದಿಂದಾಗಿ ಒಳ ಬಾಂಧವ್ಯ ಪದ್ಧತಿಗಿಂತ ಹೊರ ಬಾಂಧವ್ಯವೇ ಹೆಚ್ಚು ಜನಪ್ರಿಯತೆ ಗಳಿಸಲು ಸಾಧ್ಯವಾಯಿತು.

ತಮ್ಮ ಮಗಳಿಗೆ ಒಂದು ವರವನ್ನು ನೋಡಿ ಒಪ್ಪಿಗೆ ನೀಡಿ ಮದುವೆಯ ಏರ್ಪಾಡು ಮಾಡುತ್ತಿದ್ದರು. ಇಲ್ಲಿ ಹುಡುಗಿಯ ಒಪ್ಪಿಗೆಯನ್ನು ಕೇಳುತ್ತಿರಲಿಲ್ಲ. ಆದರೆ ಈಗ ಇಂಥ ಮದುವೆ ಇಲ್ಲವೇ ಇಲ್ಲ ಎಲ್ಲವೂ ಹೆಣ್ಣು ಕೇಳುವವರ ಕೊಡುವವರ ಮತ್ತು ಪುರೋಹಿತರ ಕೈಯಲ್ಲಿದೆ. ಇವರು ನಡೆಸುವ 'ಶಾಸ್ತ್ರೋಕ್ತ' ರೀತಿಯ ವಿವಾಹ ಪದ್ಧತಿಯಲ್ಲಿ ಸಂಪ್ರದಾಯಗಳು, ವಿಧಿಗಳು ವಿಶಿಷ್ಟವಾಗಿವೆ. ಪರಂಪರಾನುಗತವಾಗಿ ಉಳಿದು ಕೊಂಡು ಬಂದ ಮದುವೆಯ ವೈಶಿಷ್ಟ್ಯಗಳು ಕಾಣಬಹುದು. ಈ ಪದ್ಧತಿಯಲ್ಲಿ ಮಾತ್ರ ಹೆಣ್ಣು ನೋಡುವುದರಿಂದ ಆರಂಭಿಸಿ ಅವಳನ್ನು ಮನೆತುಂಬಿಸಿಕೊಳ್ಳುವವರೆಗೆ ವಿವಿಧ ನಡಾವಳಿಗಳು ಈ ಜನರ ಸಂಸ್ಕೃತಿಯ ಸತಿಯನ್ನು ಸುರಳಿ ಬಿಚ್ಚಿಸುತ್ತದೆ.

ಮನುಧರ್ಮ ಶಾಸ್ತ್ರಕಾರರು ವಿವಾಹವನ್ನು ಬ್ರಾಹ್ಮ, ದೈವ, ಆರ್ಷ, ಪ್ರಜಾಪತ್ಯ, ಅಸುರ, ಗಂಧರ್ವ, ರಾಕ್ಷಸ ಮತ್ತು ಪೈಶಾಚ ಎಂದು ಎಂಟು ವಿಧಗಳಾಗಿ ವಿಭಾಗಿಸಿದ್ದಾರೆ.

೧. ಉತ್ತಮ ರೀತಿಯಿಂದ ಬ್ರಹ್ಮಚರ್ಯಾಶ್ರಮವನ್ನು ಪಾಲಿಸಿ, ವೇದಾಧ್ಯಯನ ಸಂಪನ್ನನೂ ಧಾರ್ಮಿಕನು ಸುಗಣಿಯೂ ಆದ ವರನಿಗೆ ಕನ್ಯೆಯನ್ನು ಕೊಟ್ಟು ಮದುವೆ ಮಾಡುವುದಕ್ಕೆ "ಬ್ರಾಹ್ಮವಿವಾಹ"ವೆಂದು ಹೆಸರು.

೨. ದೊಡ್ಡ ಯಜ್ಞದಲ್ಲಿ ಋತ್ವಿಜನಾಗಿಯೂ, ತರುಣನಾಗಿಯೂ, ವಿದ್ಯಾಸಂಪನ್ನನಾಗಿಯೂ ಬಂದ ವರನಿಗೆ ವಸ್ತ್ರಾಭರಣಗಳಿಂದ ಭೂಷಿತಳಾದ ಕನ್ಯೆಯನ್ನು ಕೊಟ್ಟು ಲಗ್ನ ಮಾಡಿಕೊಡುವುದಕ್ಕೆ "ದೈವ"ವೆಂತಲೂ

೩. ವರನ ಕಡೆಯಿಂದ ಒಂದು ಗೋವನ್ನಾಗಲೀ, ಒಂದು ಜತೆ ವೃಷಭಗಳನ್ನಾಗಲೀ ತೆಗೆದುಕೊಂಡು ಧರ್ಮ ಪೂರ್ವಕವಾಗಿ ಲಗ್ನ ಮಾಡಿಕೊಡುವುದು "ಆರ್ಷ ವಿವಾಹ"ವೆಂತಲೂ

೪. ಯಜ್ಞಶಾಲೆಯಲ್ಲಿ ವಧೂವರರನ್ನು ಸಂಬೋಧಿಸಿ ನೀವಿಬ್ಬರು ಅನ್ಯೋನ್ಯ ಪ್ರೇಮದಿಂದ ವರ್ತಿಸುತ್ತ ಧರ್ಮವನ್ನಾಚರಿಸಿ ಎಂದು ಅವರಿಗೆ ಭೋಧಿಸಿ ಅವರಿಂದ ಪ್ರತಿಜ್ಞೆ ಮಾಡಿಸಿ ವಿಧಿ ಪೂರ್ವಕವಾಗಿ ಲಗ್ನ ಮಾಡಿಕೊಡುವುದಕ್ಕೆ "ಪ್ರಜಾಪತ್ಯ ವಿವಾಹ"ವೆಂತಲೂ

೫. ಅಳಿಯನ ಕಡೆಯಿಂದ ಶುಲ್ಕವನ್ನು ತೆಗೆದುಕೊಂಡು ಕನ್ಯೆಯನ್ನು ಮದುವೆ ಮಾಡಿಕೊಡುವುದಕ್ಕೆ "ಅಸುರ ವಿವಾಹ"ವೆಂತಲೂ

೬. ವಧೂವರರು ಅನ್ಯೋನ್ಯವಾಗಿ ಒಪ್ಪಿ ಲಗ್ನ ಮಾಡಿಕೊಳ್ಳುವುದಕ್ಕೆ "ಗಾಂಧರ್ವ ವಿವಾಹ"ವೆಂತಲೂ

೭. ವಧುವಿನ ಕಡೆಯವರನ್ನು ಅತ್ಯಂತವಾಗಿ ಹಿಂಸಿಸಿ ಭಯಗ್ರಸ್ಥಳಾದ ಕನ್ಯೆಯನ್ನು ಬಲತ್ಕಾರವಾಗಿ ಅಪಹರಿಸಿಕೊಂಡು ಹೋಗುವುದಕ್ಕೆ "ರಾಕ್ಷಸ ವಿವಾಹ"ವೆಂತಲೂ

೮. ನಿದ್ರೆ ಮಾಡುತ್ತಿರುವವಳನ್ನಾಗಲೀ, ಮಧ್ಯಪಾನದಿಂದ ಮೈ ಮರೆತಿರುವವಳನ್ನಾಗಲೀ ಹುಚ್ಚಿಯನ್ನಾಗಲಿ ಆದ ಕನ್ಯೆಯೊಡನೆ ಕೂಡುವುದಕ್ಕೆ "ಪೈಶಾಚ ವಿವಾಹ"ವೆಂತಲೂ ಹೆಸರು. ಇವು ಮನು ಧರ್ಮನ ವಿವಾಹದ ಬಗೆಗಳು.

ವಿವಾಹದ ಕ್ರಮ ಮತ್ತು ವಿಶ್ಲೇಷಣೆ

ವೈಶ್ಯರ ಬದುಕಿನಲ್ಲಿ ಮದುವೆ ಬಹು ಮುಖ್ಯ ಘಟ್ಟ. ಬಹಳಷ್ಟು ಜನಾಂಗಗಳಲ್ಲೂ ಕೂಡಾ ಅದು ಮನೆತನದ ಗೌರವವನ್ನು ಪ್ರತಿನಿಧಿಸುತ್ತದೆ ಎಂದು ಅವರ ನಂಬಿಕೆ. ಕುಟುಂಬ ಮತ್ತು ಸಮಾಜ ವ್ಯಾಪ್ತಿಯನ್ನು ನಿರ್ಧರಿಸುವ ಪ್ರಮುಖ ಮಾನದಂಡವಾಗಿ 'ಮದುವೆ' ಅವರಲ್ಲಿ ಅನುಷ್ಠಾನಕ್ಕೆ ಬರುತ್ತದೆ.

ವೈಶ್ಯರ ಮದುವೆ ಮೊದಲ ಹಂತ ಆರಂಭವಾಗುವುದು 'ಗೋತ್ರ'ದ ಆಯ್ಕೆಯಲ್ಲಿ. ವಧುವರರ ಗೋತ್ರಗಳ ಜೋಡಣೆ ಮೂಲಕ ಆರಂಭವಾಗುವುದು. ವೈಶ್ಯರಲ್ಲಿ ೭೧೪ ಗೋತ್ರಗಳಿರುವುದು ತಿಳಿದು ಬಂದರೂ ಈಗ ಕೇವಲ ೧೦೨ ಗೋತ್ರದವರು ಮಾತ್ರ ಇದ್ದಾರೆ ಎಂದು ತಿಳಿದು ಬಂದಿದೆ. ಅದರಲ್ಲಿ ಕೆಲವು ಗೋತ್ರಗಳನ್ನು ನೋಡಬಹುದು.

೧. ಘನಪಶ ಶಿಲ ಇದು ವೈಶ್ಯರ ಆರಾಧ್ಯ ದೇವತೆ ವಾಸವಿ ಮನೆತನದ ಗೋತ್ರವಾಗಿದೆ.

೨. ಪೆಂಡ್ಲಿಕುಲ ೩. ಮಿಥುನ ಕುಲ ೪. ಮೌಂಚು ಕುಲ ೫. ಪುನಗುಶಿಲ

೬. ದೇವಿ ಚಟ್ಲ ೭.ವಸಂತ ಕುಲ ೮. ಶೇಕಬಳ್ಳಿ ೯. ಚನಶಟ್ಲ ೧೦. ವೇಳೀ ಚಟ್ಲೆ ೧೧. ಬರೀ ಚಟ್ಲೆ

೧೨. ಚಿನ ಚಟ್ಲೆ ೧೩. ತೋಟ ಕುಲ ೧೪. ತೊಲಿಯಾಟ ಕುಲ ೧೫. ಜನ ಕುಲ ೧೬.ಮುಪ್ಪಾಲ ಕುಲ ೧೭. ಚಿಂತಕುಲ ೧೮. ಚಿಲಕುಲ ಕುಲ ೧೯. ಚಂಡಂಡಿ ಕುಲ ೨೦. ನಾಗವೆಳ್ಳಿ ಕುಲ ೨೧ ಅನಂತ ಕುಲ ೨೨. ದಂಡ ಕುಲ

ವರನು ತನ್ನ ಗೋತ್ರವನ್ನು ಬಿಟ್ಟು ತನಗೆ ಸರಿ ಹೊಂದುವ ಗೋತ್ರವೊಂದನ್ನು ಆಯ್ದುಕೊಳ್ಳಬೇಕಾಗುತ್ತದೆ. ಇಂಥ ವರನ ತಂದೆ ಮತ್ತು ತಾಯಿಯವರ ಗೋತ್ರವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಾರೆ. ಆಸ್ತಿಯ ಒಡೆತನ ಹಾಗೆ ಗೋತ್ರವು ತಂದೆಯಿಂದ ಮಗನಿಗೆ ಇಳಿದು ಬರುವುದರಿಂದ ತಂದೆಯ ಗೋತ್ರದ ಹೆಣ್ಣನ್ನು ಮದುವೆಯಾಗುವಂತಿಲ್ಲ. ಆದರೆ ತಂದೆಯ ತಂಗಿಯನ್ನು ಬೇರೆ ಕಡೆಗೆ ಕೊಟ್ಟಿರುವುದರಿಂದ ಆಕೆಯಲ್ಲಿ ಜನಿಸಿದ ಹೆಣ್ಣನ್ನು ಮತ್ತೆ ಮನೆಗೆ ಮದುವೆಯ ಮೂಲಕ ತರಬಹುದು. ಮಗಳನ್ನು ಕೊಡಬಹುದು ಅದೇ ಪ್ರಕಾರ ಮಗಳನ್ನು ತಾಯಿಯ ಸಹೋದರನೇ ಮದುವೆ ಮಾಡಿಕೊಳ್ಳಬಹುದು. ಇಲ್ಲವೇ ಸೋದರ ಮಾವನ ಮಗನಾದರೂ ಮದುವೆ ಆಗಬಹುದು. ಆದರೆ ಒಂದೇ ಗೋತ್ರಗಳಲ್ಲಿ ಮದುವೆಯಾಗುವಂತಿಲ್ಲ. ಇದು ಮೂಲ ನಿಷೇಧ ಒಂದೇ ಗೋತ್ರದವರೆಲ್ಲ ಸಹೋದರ ಸಹೋದರಿಯರ ಸಂಬಂಧವಿರುತ್ತದೆ.

ಹೈದ್ರಾಬಾದ್ ಕರ್ನಾಟಕದ ವೈಶ್ಯರಲ್ಲಿ ಸುಮಾರು ೭೦% ಗೋತ್ರದವರು ಕಂಡು ಬರುತ್ತಾರೆ. ಇದು ಕ್ಷೇತ್ರಕಾರ್ಯದಿಂದ ದೊರಕಿದ ಮಾಹಿತಿ.

ಆಚರಣೆಗಳು

ಹೆಣ್ಣಿನ ಆಯ್ಕೆ

ಒಳ ಬಾಂದವ್ಯವಿದ್ದ ಸಂದರ್ಭದಲ್ಲಿ ಹಳೆಯ ಸಂಬಂಧದಲ್ಲಿ ಹೆಣ್ಣನ್ನು ತರುವುದು ರೂಢಿಯಲ್ಲಿತ್ತು. ಆದರೆ ಎಲ್ಲರಿಗೂ ಹಳೆಯ ಸಂಬಂಧಗಳು ದೊರಕುವುದು ಅಸಾಧ್ಯವಿರುವುದರಿಂದ ಇಂದು ಹೆಣ್ಣಿನ ಆಯ್ಕೆಯನ್ನು ಈ ರೀತಿ ಮಾಡುತ್ತಾರೆ. ಕನ್ಯ ಅಥವಾ ವರರ ಜಾತಕಗಳನ್ನು (ಕುಂಡಲಿಗಳನ್ನು) ಜಾಹಿರಾತುಗಳ ಮೂಲಕ ಜಾತಕಗಳನ್ನು ಹುಡುಕಿ ಆಯಾಯ ಕನ್ಯೆಗೆ ಯಾವ ಜಾತಕ ಕೂಡಿ ಬರುತ್ತದೆ ಎಂಬುದನ್ನು ಪುರೋಹಿತರ ಮೂಲಕ ತಿಳಿದು ಸರಿ ಹೊಂದುವ ಜಾತಕಗಳನ್ನು ತೆಗೆದುಕೊಂಡು ಆಯಾ ಕನ್ಯೆ ಮನೆಗೆ ಫೋನ್ ಮೂಲಕ ಅಥವಾ ಅಂಚೆ ಮೂಲಕ ಇಲ್ಲವೇ ಮಧ್ಯವರ್ತಿಗಳೊಂದಿಗೆ ಅವರ ಮನೆಗಳಿಗೆ ವಿಷಯ ತಿಳಿಸಿ ಆ ಕನ್ಯೆ ಮನೆಗೆ ಹೆಣ್ಣನ್ನು ನೋಡುವ ಕಾರ್ಯ ಆರಂಭಿಸುತ್ತಾರೆ. ಆ ಕನ್ಯೆಗೆ ಸಂಬಂಧಪಟ್ಟ ವಿವರಗಳು ಕನ್ಯೆ ಜಾತಕದಲ್ಲೇ ಕಂಡು ಬರುತ್ತದೆ. ವಧುವಿನ ವಯಸ್ಸು, ವಿದ್ಯಾರ್ಹತೆ, ಬಣ್ಣ, ತಂದೆ, ತಾಯಿ, ಅಕ್ಕ, ತಮ್ಮ, ಅಣ್ಣ, ತಂಗಿ ಈ ಎಲ್ಲಾ ವಿಷಯವನ್ನು ತಿಳಿದು ಹಿರಿಯರು ಮಧ್ಯವರ್ತಿಯ ಮೂಲಕ ಹೆಣ್ಣು ನೋಡಲು ಬರುವುದಾಗಿ ತಿಳಿಸುತ್ತಾರೆ. ಹೆಣ್ಣಿನ ಮನೆಯವರು ಮನೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು ಒಪ್ಪಿಗೆ ನೀಡುತ್ತಾರೆ.

ಒಂದು ಶುಭದಿನ ಗಂಡಿನ ಕಡೆಯಿಂದ ಐದು ಆರು ಜನರು ಹಾದಿ ನಿಮಿತ್ತ ನೋಡಿಕೊಂಡು ಹೆಣ್ಣಿನ ಮನೆಗೆ ಬರುತ್ತಾರೆ. ಈ ಸಂದರ್ಭದಲ್ಲಿ ಹೆಣ್ಣಿನ ಮನೆಯವರು ಬಹಳ ಮರ್ಯಾದೆಯಿಂದ ಬರಮಾಡಿಕೊಂಡು ಕೈ ಕಾಲುಗಳನ್ನು ತೊಳೆದುಕೊಳ್ಳಲು ನೀರು ಕೊಟ್ಟು ನಂತರ ಒರೆಸಿಕೊಳ್ಳಲು ಬಟ್ಟೆಯನ್ನು ಕೊಡುತ್ತಾರೆ. ಬಂದ ಅತಿಥಿಗಳನ್ನು ಚಾಪೆಯ ಮೇಲೋ ಕುರ್ಚಿಗಳ ಮೇಲೋ ಕೂರಿಸುತ್ತಾರೆ. ಹೆಣ್ಣು ಅಲಂಕೃತಳಾಗಿ ಪಾನೀಯ ಲೋಟಗಳನ್ನು ಹಿಡಿದುಕೊಂಡು ಬಂದು ಅತಿಥಿಗಳ ಮುಂದಿಡುತ್ತಾಳೆ. ಗಂಡಿನ ಕಡೆಯವರು ಸೂಕ್ಷ್ಮವಾಗಿ ಹೆಣ್ಣಿನ ಪರೀಕ್ಷೆಗೆ ತೊಡಗುತ್ತಾರೆ. ಹೆಣ್ಣಿನ ಸೌಂದರ್ಯ ಅವಳ ನಡೆ ನುಡಿ ಮತ್ತು ಧ್ವನಿ ಇವುಗಳನ್ನು ಸೂಕ್ಷ್ಮವಾಗಿ ಪರೀಕ್ಷೆ ಮಾಡುತ್ತಾರೆ. ಅನಂತರ ಈ ಎಲ್ಲಾ ಗುಣಗಳು ವರನಿಗೆ ಇಷ್ಟವಾದಲ್ಲಿ ಅವರು ತಮ್ಮ ಮನೆಯ ಹಿರಿಯ ಹೆಂಗಸರನ್ನು ಅಂದರೆ ವರನ ತಾಯಿಯನ್ನು ಮತ್ತು ಅಕ್ಕ ತಂಗಿಯರನ್ನು ಮತ್ತೊಮ್ಮೆ ನೋಡಲು ಕಳುಹಿಸುತ್ತೇವೆ ಎಂದು ಹೇಳಿ ಹೋಗುತ್ತಾರೆ. ಸಮಯವನ್ನು ನೋಡಿಕೊಂಡು ವರನ ಮನೆಯ ಹೆಂಗಸರು ಹೆಣ್ಣಿನ ಮನೆಗೆ ಬರುತ್ತಿದ್ದರು. ಹೆಣ್ಣಿನ ಕಡೆಯವರು ಈ ಹೆಂಗಸರಿಗೂ ಗಂಡಸರಿಗೆ ನೀಡಿದ ಆತಿಥ್ಯವನ್ನೇ ನೀಡುತ್ತಿದ್ದರು. ಆ ಹೆಂಗಸರಿಗೆ ಹುಡುಗಿ ಇಷ್ಟವಾದಲ್ಲಿ ಹೆಣ್ಣಿನ ಕಡೆಯವರಿಗೆ ಗಂಡಿನ ಮನೆಗೆ ಒಂದು ದಿನ ಬಂದು ಹೋಗುವಂತೆ ಹೇಳಿ ಬರುತ್ತಾರೆ. ಕರೆಯನ್ನು ಸ್ವೀಕರಿಸಿ ಒಂದು ಗೊತ್ತಾದ ದಿನ ಹೆಣ್ಣಿನ ಕಡೆಯ ಗಂಡಸರು ಗಂಡಿನ ಮನೆಗೆ ಬರುತ್ತಾರೆ. ಬರುವಾಗ ಮಾಮೂಲಿನಂತೆ ಶುಭಾಶುಭ ಶಕುನಗಳನ್ನು ಗಮನಿಸುತ್ತಾರೆ. ಆದರೆ ಗಂಡಿನವರು ಹೆಣ್ಣನ್ನು ಪರೀಕ್ಷಿಸಿ ನೋಡುವಂತೆ ಇವರು ಗಂಡನ್ನು

ಪರೀಕ್ಷಿಸಿ ನೋಡುವುದಿಲ್ಲ ಗಂಡು ಮತ್ತು ಅವರ ಮನೆತನ ಹಿಡಿಸಿದರೆ ಸಾಕು. ಆಗ ಗಂಡಿನ ಕಡೆಯ ಹಿರಿಯರು ಮತ್ತು ಹೆಣ್ಣಿನ ಕಡೆಯ ಹಿರಿಯರು ವರದಕ್ಷಿಣೆ ಮತ್ತು ಇನ್ನಿತರ ವಿಷಯಗಳ ಬಗ್ಗೆ ಎರಡೂ ಕಡೆಯ ಹಿರಿಯರು ಚರ್ಚಿಸಿ ಇಬ್ಬರಿಗೂ ಒಪ್ಪಿಗೆಯಾದ ಮೇಲೆ ನಿಶ್ಚಿತಾರ್ಥವನ್ನು ಗೊತ್ತುಪಡಿಸುತ್ತಾರೆ. ಈ ನಿಶ್ಚಿತಾರ್ಥದ ಉದ್ದೇಶ ಇಬ್ಬರಿಗೂ ಮದುವೆಯಾಗಲು ಒಪ್ಪಿಗೆಯಾಗಿದೆ ಎಂದು ತಿಳಿಸುವುದಕ್ಕಾಗಿ ಮತ್ತು ವಧು ವರರ ನಡುವೆ ಪರಿಚಯ ಅಂದಿನಿಂದ ಆರಂಭವಾಗಲಿ ಎನ್ನುವ ಉದ್ದೇಶದಿಂದ ನಿಶ್ಚಿತಾರ್ಥ ಮಾಡುತ್ತಾರೆ.

ನಿಶ್ಚಿತಾರ್ಥ

ಇದು ಎಲ್ಲಾ ಸಮುದಾಯದಲ್ಲಿ ಈ ನಿಶ್ಚಿತಾರ್ಥ ಸಾಮಾನ್ಯವಾಗಿ ಕಂಡು ಬರುತ್ತದೆ. ಇದನ್ನು ಕೆಲವು ಸಮುದಾಯಗಳಲ್ಲಿ ಇಳ್ಯಾ ಎಂತಲೂ ಕರೆಯುತ್ತಾರೆ. ವೈಶ್ಯರಲ್ಲಿ ಈ ನಿಶ್ಚಿತಾರ್ಥ ವಿಜೃಂಭಣೆಯಿಂದ ಅರ್ಧ ವಿವಾಹವಾದಂತೆ ಎಲ್ಲಾ ಜರುಗುವುದು. ಇದು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಗಂಡಿನ ಮನೆಯವರು ಹೆಣ್ಣನ್ನು ಒಪ್ಪಿದ ನಂತರ ಒಂದು ಗೊತ್ತಾದ ದಿನ ಹುಡುಗಿಯ ಮನೆಗೆ ಬಂದು ತಾವು ತಂದಿದ್ದ ಹೊಸ ಸೀರೆ, ಕುಪ್ಪಸ, ಹೂ ಹಣ್ಣು ಇತ್ಯಾದಿಗಳಿಂದ ಸಿಂಗರಿಸಿ ವರದಕ್ಷಿಣೆ ಕೊಡುವ ಮತ್ತು ತೆಗೆದುಕೊಳ್ಳುವ ವಿಚಾರ ಮಾತನಾಡಿ ಮುಂದೆ ನಡೆಯುವ ನಿಶ್ಚಿತಾರ್ಥ ಅಥವಾ ಇಳ್ಯಾ ದಿನವನ್ನು ತಿಳಿಸುತ್ತಾರೆ. ಆ ದಿನದ ಸಂತೋಷಕ್ಕಾಗಿ ಸಿಹಿ ಊಟವನ್ನು ಮಾಡಿ ಊರಿಗೆ ಬರುತ್ತಾರೆ.

ಈ ನಿಶ್ಚಿತಾರ್ಥದ ದಿನದಂದು ಎರಡು ಕಡೆಯ ಕುಲ ಬಾಂಧವರು ಸೇರುತ್ತಾರೆ. ಮಾತು ಕತೆಯಲ್ಲಿ ಕೊಡುವ ತೆಗೆದುಕೊಳ್ಳುವ ವಿಚಾರ ನಡೆಯುತ್ತದೆ. ಆದರೆ ಇಲ್ಲಿ ಹಾಗಲ್ಲ ತಮಗೆ ಬರಬೇಕಾದುದನ್ನು ತೆಗೆದುಕೊಳ್ಳುತ್ತಾರೆ. ಕೊಡುವುದಿದ್ದರೆ ಕೊಡುತ್ತಾರೆ. ಒಂದು ಒಳ್ಳೆಯ ದಿನ ಹೆಣ್ಣಿನ ಮನೆಗೆ ಗಂಡಿನ ಮನೆಯವರು, ಹಿರಿಯರು, ಮಹಿಳೆಯರು, ಆಪ್ತ ಬಂಧುಗಳು ಬರುತ್ತಾರೆ. ಹಾಗೆಯೇ ಹೆಣ್ಣಿನ ಊರಿನ ಆಪ್ತ ಬಂಧುಗಳು ಊರಿನವರು ಸೇರಿಕೊಂಡಿರುತ್ತಾರೆ. ಮುಖ್ಯವಾಗಿ ಆ ಊರಿನ ಆರ್ಯ ವೈಶ್ಯ ಸಂಘದ ಅಧ್ಯಕ್ಷರ ಸಮ್ಮುಖದಲ್ಲಿ ಎಲ್ಲಾ ಕಾರ್ಯಕ್ರಮ ನಡೆಯುತ್ತದೆ. ಅಂದು ಹೆಣ್ಣಿಗೆ ಹೊಸ ಸೀರೆ, ಒಡವೆ, ಆಭರಣಗಳಿಂದ ಸಿಂಗರಿಸಿರುತ್ತಾರೆ. ಹುಡುಗನು ಹೊಸ ಬಟ್ಟೆ ಧರಿಸುತ್ತಾನೆ. ತಾನು ತಂದ ಪ್ರಿಯ ಉಡುಗೊರೆ ಉಂಗುರವನ್ನು ಅವಳಿಗೆ ತೊಡಿಸುತ್ತಾನೆ. ಹಾಗೆ ಹುಡುಗಿಯ ಮನೆಯವರು ಏನಾದರೂ ಬಂಗಾರದ ಸರವನ್ನು ಅಥವಾ ಅವರ ಯೋಗ್ಯತೆಗೆ ತಕ್ಕ ಹಾಗೆ ಕೊಡುತ್ತಾರೆ.

ಲಗ್ನ ಪತ್ರಿಕೆಯ ರಚನೆ

ನಿಶ್ಚಿತಾರ್ಥ ಮುಗಿದ ನಂತರ ಅಥವಾ ಅಂದಿನ ದಿನವಾದರೂ ಮದುವೆಯ ದಿನಾಂಕವನ್ನು ಎಲ್ಲಾ ಹಿರಿಯರು ಸೇರಿ ಪಂಚಾಂಗವನ್ನು ನೋಡಿ ಪುರೋಹಿತರ ಮೂಲಕ ಒಳ್ಳೆಯ ಶುಭ ದಿನವನ್ನು ಗೊತ್ತು ಪಡಿಸುತ್ತಾರೆ. ಆ ದಿನವನ್ನು ವಧು-ವರರ ಕಡೆಯವರು ಒಪ್ಪಿದ ನಂತರ ಪುರೋಹಿತರ ಕೈಯಲ್ಲಿ ಅಂದಿನ

ದಿನ ಅಂದರೆ ಮದುವೆಯ ದಿನವನ್ನು ಅಂದಿನ ರಾಶಿ, ನಕ್ಷತ್ರ, ಸಮಯವನ್ನು ಅವರಿಂದ ಬರೆಸುತ್ತಾರೆ. ಅದನ್ನು ಮುದ್ರಣ ಹಾಕಿಸಿ ಆ ಲಗ್ನ ಪತ್ರಿಕೆ ಅಥವಾ ಮದುವೆಯ ಕರೆಯೋಲೆಗೆ ಅರಿಶಿಣ ಕುಂಕುಮ ಹಾಕಿ ಪೂಜೆ ಮಾಡಿ ನಂತರ ಎಲ್ಲರಿಗೂ ಕಳುಹಿಸುತ್ತಾರೆ.

ಮದುವೆಯ ಕರೆ

ಲಗ್ನ ಪತ್ರಿಕೆಗಳು ಅಚ್ಚಾದ ಮೇಲೆ ಅವುಗಳನ್ನು ಕಳುಹಿಸುವುದರ ಜೊತೆಗೆ ಹತ್ತಿರದ ನೆಂಟರನ್ನು ಮನೆಯವರೇ ಸ್ವತಃ ಹೋಗಿ ಕೈ ಜೋಡಿಸಿ ನಿಂತು ಕರೆದು ಬರುವ ಪದ್ಧತಿ ಇದನ್ನು **'ಮದುವೆಯ ಕರೆ'** ಎಂದು ಕರೆಯುತ್ತಾರೆ. ಇನ್ನೂ ದೂರ ದೂರ ಇರುವ ಸಂಬಂಧಿಕರಿಗೆ ಅಂಚೆ ಮೂಲಕ ಲಗ್ನ ಪತ್ರಿಕೆಗಳನ್ನು ಕಳುಹಿಸುತ್ತಾರೆ. ಇಲ್ಲವೇ ಫೋನ್ ಮೂಲಕ ಹಾಗೂ ಇಂಟರ್‌ನೆಟ್ ಮೂಲಕ ಸುದ್ದಿಯನ್ನು ಈಗ ಕಳುಹಿಸುತ್ತಾರೆ. ಇದಲ್ಲದೇ ಇನ್ನೂ ಅನೇಕರು ದಿನಪತ್ರಿಕೆಗಳ ಮೂಲಕ ಜಾಹೀರಾತು ನೀಡಿ ಮದುವೆ ಕರೆ ತಿಳಿಸುತ್ತಾರೆ. ಮದುವೆ ಗೊತ್ತಾದ ದಿನದಿಂದ ಅನೇಕ ಆಚರಣೆ ಸಂಪ್ರದಾಯಗಳು ನಡೆಯುತ್ತಲೆ ಇರುತ್ತವೆ. ಮದುವೆ ದಿನ ಸಮೀಪ ಬರುತ್ತಿರುವಾಗ ಆಚರಣೆ ಮತ್ತು ಸಂಪ್ರದಾಯಗಳು ಹೆಚ್ಚು. ಇನ್ನೂ ಊರಿನವರಿಗೆ ಹಾಗೂ ಅಲ್ಲಿನ ಆರ್ಯವೈಶ್ಯ ಸಮುದಾಯಗಳಿಗೆ ಮದುವೆಯ ಮುಂದಿನ ದಿವಸ ಮೆರವಣಿಗೆಯ ಮೂಲಕ ಎಲ್ಲಾ ವಾದ್ಯಗಳೊಂದಿಗೆ ಸಾಂಪ್ರದಾಯಿಕವಾಗಿ ವಧೂ ಅಥವಾ ವರರ ಮನೆಯ ಎಲ್ಲಾ ಸಂಬಂಧಿಕರು ವೈಶ್ಯರ ಮನೆ ಮನೆಗೆ ಮುತ್ತೈದೆಯರು ಕಳಸ ಮತ್ತು ಅರಿಶಿಣ ಕುಂಕುಮ ತಟ್ಟೆಯನ್ನು ಹಿಡಿದು ಎಲ್ಲಾ ವೈಶ್ಯ ಭಾಂದವರು ಮನೆಗೆ ಹೋಗಿ ಮಾಂಗಲ್ಯದ ಸಮಯ ಮತ್ತು ಇನ್ನಿತರ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ಹೇಳಿ ಲಗ್ನ ಪತ್ರಿಕೆ ಮತ್ತು ತಾಂಬೂಲ ಕೊಡುಗೆಗಳನ್ನು ಕೊಟ್ಟು ಆಹ್ವಾನಿಸುವ ಪದ್ಧತಿ ವೈಶ್ಯರ ಸಮುದಾಯದಲ್ಲಿದೆ.

ಹಂದರ

ಮನೆಯನ್ನು ಸುಣ್ಣ ಬಣ್ಣಗಳಿಂದ ಸ್ವಚ್ಛಗೊಳಿಸುತ್ತಾರೆ. ಮನೆಯ ಮುಂದಿನ ಅಂಗಳದಲ್ಲಿ ದೊಡ್ಡ ಚಪ್ಪರವನ್ನು ಹಾಕುತ್ತಾರೆ. ಈ ಕೆಲಸ ಕಾರ್ಯಗಳಲ್ಲಿ ಊರಿನವರು ಆಪ್ತ ಬಂಧುಗಳು ಸೇರಿಕೊಂಡಿರುತ್ತಾರೆ. ಚಪ್ಪರದ ಕಂಬಗಳಿಗೆ ಮಾವಿನ ತೋರಣ, ಹೂ ಕಟ್ಟಿ ಉಳಿದುದನ್ನು ಚಾವಣಿಗೆ ತೂಗಿ ಬಿಡುತ್ತಾರೆ. ಚಪ್ಪರದ ಕೆಳಭಾಗವನ್ನು ಸ್ವಚ್ಛಗೊಳಿಸಿರುತ್ತಾರೆ. ಚಪ್ಪರದ ಮೇಲಿನ ಭಾಗಕ್ಕೆ ತೆಂಗಿನಗರಿಗಳನ್ನು ಹೊದಿಸಿರುತ್ತಾರೆ. ಹಾಗೂ ಒಂದು ಹಿಡಿ ತೆಂಗಿನಕಾಯಿಯನ್ನು ಚಪ್ಪರದ ಮಧ್ಯೆ ಕಟ್ಟಿರುತ್ತಾರೆ. ಇದು ವೈಶ್ಯರಲ್ಲಿರುವ ಸಂಪ್ರದಾಯ ಮದುವೆಯ ಅನೇಕ ಶಾಸ್ತ್ರ ವಿಧಿಗಳು ಇದರ ತಳದಲ್ಲಿ ನಡೆಯುತ್ತವೆ. ಧಾರಾ ಮಂಟಪವನ್ನು ಅಲ್ಲಿಯೇ ಮಾಡಲಾಗುತ್ತದೆ. ನಾಲ್ಕು ಕಂಬಗಳನ್ನು ನೆಟ್ಟು ಆ ನಾಲ್ಕು ಕಂಬಗಳನ್ನು ಹೂವಿನಿಂದ ಅಥವಾ ಬಣ್ಣದ ಪೇಪರಿನಿಂದ ಅಲಂಕರಿಸಿರುತ್ತಾರೆ. ಹಾಗೂ ಚಪ್ಪರದ ಮೇಲಿನ ಭಾಗದಿಂದ ಹೂ ಮಾಲೆಯನ್ನು ಅಂದವಾಗಿ

ಕಾಣುವಂತೆ ಕ್ರಮವಾಗಿ ನೇತು ಬಿಡುತ್ತಾರೆ. ಹಾಗೂ ಹಂದರ ಹಾಕುವ ಮೂಲ ಉದ್ದೇಶ ಆ ಮನೆಯಲ್ಲಿ ಶುಭಕಾರ್ಯ ಇದೆ ಎನ್ನುವುದಕ್ಕೆ ಇದು ಒಂದು ಸಂಕೇತವಾಗಿದೆ.

ದೇವತಾ ಕಾರ್ಯ

ಮದುವೆಯ ಮುಂದಿನ ದಿನದಂದು ಮೊದಲಿಂಗ ಅಥವಾ ಮೊದಲಗಿತ್ತಿಯನ್ನು ವೈಶ್ಯರಲ್ಲಿ ಅನೇಕ ಸಂಪ್ರದಾಯ ಶಾಸ್ತ್ರಗಳಿಂದ ದೇವರ ಪೂಜೆಯ ಮೂಲಕ ಮೊದಲಿಂಗ ಅಥವಾ ಮೊದಲಗಿತ್ತಿಯನ್ನು ಊರಿನ ವೈಶ್ಯರಲ್ಲಿನ ಹಿರಿಯರು ಮತ್ತು ಅದೇ ಸಮುದಾಯದ ಮುತ್ತೈದೆಯರು ಈ ಕಾರ್ಯವನ್ನು ಮಾಡುತ್ತಾರೆ. ಇದನ್ನು ದೇವತಾ ಕಾರ್ಯ ಎಂದು ಕರೆಯುತ್ತಾರೆ. ಮೊದಲಿಂಗ ಅಥವಾ ಮೊದಲಗಿತ್ತಿಯನ್ನು ಅನೇಕ ಶಾಸ್ತ್ರಗಳಿಂದ ಆಚರಣೆಗಳಿಂದ ಮಾಡುತ್ತಾರೆ. ವಧು ಮತ್ತು ವರನಿಗೆ ಮೊದಲು ಎಣ್ಣೆ ನೀರು ಹಾಕುತ್ತಾರೆ. ಹಾಗೂ ಎಲ್ಲಾ ನೆಂಟರೂ ಸೇರಿ ವರನಿಗೆ ಆಗಲಿ ಅಥವಾ ವಧುವಿಗೆ ಆಗಲಿ ತಮಾಷೆ ಮಾಡುತ್ತಾ ಅನೇಕ ಬಣ್ಣ ಬಣ್ಣದ ನೀರು ಹಾಕಿ ಅವರನ್ನು ಆ ನೀರಿನ ಮೂಲಕ ಸ್ನಾನ ಮಾಡಿಸಿ ಅಂದು ಹೊಸ ಬಟ್ಟೆಯನ್ನು ಹಾಕಿ ಮದುಮಗ ಅಥವಾ ಮದುಮಗಳನ್ನು ಮಾಡುತ್ತಾರೆ. ನಂತರ ಮನೆಯ ಎಲ್ಲಾ ಸಂಬಂಧಿಕರ ಜೊತೆಗೆ ಊರಿನ ಎಲ್ಲಾ ದೇವಾಲಯಗಳಿಗೆ ಅನೇಕ ವಾದ್ಯಗಳ ಮೂಲಕ ದೇವಾಲಯಗಳಿಗೆ ಹೋಗಿ ಬರುತ್ತಾರೆ. ಅಂದಿನಿಂದ ಮದುವೆಗೆ ನಾಗೋಲಿಶಾಸ್ತ್ರ ಮುಗಿಯುವವರೆಗೆ ಮಡಿಯಿಂದ ಇರುತ್ತಾರೆ. ಅಂದರೆ ಕಸಬರಿಕೆ, ಪಾದರಕ್ಷೆ ಇಂತಹ ವಸ್ತುಗಳನ್ನು ಮುಟ್ಟಬಾರದು ಹಾಗೂ ಬರೀ ನೆಲದ ಮೇಲೆ ಕುಳಿತುಕೊಳ್ಳಬಾರದು ಎನ್ನುವ ಸಂಪ್ರದಾಯ ಇವರಲ್ಲಿದೆ. ಅಂದು ಮದುಮಗನ ಕೈಯಲ್ಲಿ ಒಂದು ತೆಂಗಿನ ಕಾಯಿ ಮತ್ತು ಒಂದು ವಸ್ತ್ರವನ್ನು ನೀಡುತ್ತಾರೆ. ಇವು ಮದುಮಗನ ಶುಭ ಸಂಕೇತಗಳು.

ದೈವದ ಊಟ

ಇದು ವೈಶ್ಯ ಸಮುದಾಯದಲ್ಲಿ ತಲ ತಲಾಂತರದಿಂದ ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿದೆ. ಮದುವೆಯ ಮುಂದಿನ ದಿನ ವಧು ವರರ ಊರಿನಲ್ಲಿ ಎಲ್ಲಾ ವೈಶ್ಯರ ಮನೆಯವರಿಗೆ ಊಟ ಹಾಕುವ ಪದ್ಧತಿ ನಡೆದುಕೊಂಡು ಬಂದಿದೆ. ಅಂದಿನ ದಿನ ಎಲ್ಲಾ ಮನೆಯವರು ವಧು ಅಥವಾ ವರರ ಮನೆಗೆ ಬಂದು ಊಟ ಮಾಡಿಕೊಂಡು ತಾಂಬೂಲ ತೆಗೆದುಕೊಂಡು ವಧುವರರಿಗೆ ಆಶೀರ್ವಾದ ಮಾಡಿ ಹೋಗುವ ಪದ್ಧತಿ ನಡೆದುಕೊಂಡು ಬಂದಿದೆ. ದೈವದ ಊಟವನ್ನು ಒಂದು ವೇಳೆ ಹಾಕಿಸಲು ಆಗದೇ ಹೋದಾಗ ಅಲ್ಲಿನ ಆರ್ಯವೈಶ್ಯ ಸಂಘದವರಿಗೆ ಇಂತಿಷ್ಟು ಹಣವನ್ನು ಸಂಘಕ್ಕೆ ನೀಡುವ ಪದ್ಧತಿ ರೂಢಿಯಲ್ಲಿದೆ. ಇದು ಅವರವರ ಇಷ್ಟವಾಗಿರುತ್ತದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಮದುವೆಯ ಮುಂದಿನ ದಿನವೇ ಮಾಡುತ್ತಾರೆ. ಅಂದು ಸಂಜೆ ಮದುವೆಯನ್ನು ಕಲ್ಯಾಣ ಮಂಟಪಗಳಲ್ಲಿ ಏರ್ಪಡಿಸಿದ್ದರೆ ಅಲ್ಲಿಗೆ ಹೋಗಲು ತಯಾರಾಗುತ್ತಾರೆ. ಇಲ್ಲವೇ ಗಂಡಿನ ಮನೆಯ ಅಥವಾ ವಧುವಿನ ಮನೆಯ ಮುಂದೆ ಏರ್ಪಟ್ಟಿದ್ದರೆ ಅಲ್ಲಿಗೆ

ಹೋಗಲು ವಾಹನಗಳನ್ನು ತೆಗೆದುಕೊಂಡು ಎಲ್ಲಾ ಅವರ ಸಂಬಂಧಿಕರು ಮತ್ತು ಊರಿನ ಹಿರಿಯರು ವೈಶ್ಯ ಬಂಧು ಬಾಂದವರು ಅವರವರ ಲಗೇಜುಗಳನ್ನು ತೆಗೆದುಕೊಂಡು ಅನೇಕ ಒಡವೆ ಆಭರಣಗಳನ್ನು ರೇಷ್ಮೇ ಸೀರೆಗಳನ್ನು ಧರಿಸಿಕೊಂಡು ಮದುವೆಗೆ ಸಿದ್ಧರಾಗುತ್ತಾರೆ. ಒಟ್ಟಾಗಿ ಮದುವೆ ಎಲ್ಲೇ ಆದರೂ ಮದುವೆಯ ಮುಂಚಿನ ದಿನ ಎರಡೂ ಕಡೆಯವರು ಮದುವೆಯ ಮುಂಚಿನ ದಿನ ಸಂಜೆ ಸೇರಿ ಕಾರ್ಯಕ್ರಮಗಳಿಗೆ ಸಿದ್ಧರಾಗಿರುತ್ತಾರೆ. ಇದು ವೈಶ್ಯರಲ್ಲಿನ ಪ್ರಮುಖ ಕಾರ್ಯಕ್ರಮವಾಗಿರುತ್ತದೆ.

ಎದುರುಗೊಳ್ಳುವುದು

ಮದುವೆಗೆ ಬಂದವರನ್ನು ಹಾಗೂ ವರನ ಕಡೆಯವರನ್ನು ಕನ್ಯಾದಾತನು ಎದುರ್ಗೊಂಡು ಮಂಗಳ ವಾದ್ಯದೊಂದಿಗೆ ಅವರನ್ನು ವಿವಾಹ ಮಂಟಪಕ್ಕೆ ಕರೆತರುವುದು ಅವರಿಗೆ ಉಪಚಾರ ಮಾಡಿ ಬಿಡದಿ ಮನೆಯನ್ನು ಕಲ್ಪಿಸುವುದು. ವರನು ತನ್ನ ಊರಿನಿಂದ ವಧುವಿನ ಊರಿಗೆ ಅಥವಾ ಹತ್ತಿರದ ಯಾವುದಾದರೂ ಕಲ್ಯಾಣ ಮಂಟಪದಲ್ಲಿ ವಿವಾಹ ಏರ್ಪಾಡಾಗಿರುವುದು ತಿಳಿಸುತ್ತಾರೆ. ಆಗ ವರನ ಕಡೆಯ ಎಲ್ಲಾ ಸಂಬಂಧಿಕರು ಮತ್ತು ಹಿರಿಯರು ಬಂದ ಕೂಡಲೇ ವರನನ್ನು ಅಲ್ಲಿನ ದೇವಸ್ಥಾನಗಳಲ್ಲಿ ಇರುವಂತೆ ಹೇಳಿ ನಂತರ ವಧುವಿನ ಕಡೆಯವರು ಕಲ್ಯಾಣ ಮಂಟಪಕ್ಕೆ ಅನೇಕ ವಿವಿಧ ವಾದ್ಯಗಳ ಮೂಲಕ ವರನನ್ನು ವಧುವಿನ ಕಡೆಯವರು ದೇವಸ್ಥಾನದಿಂದ ಮೆರವಣಿಗೆಯ ಮೂಲಕ ಕರೆ ತರುತ್ತಾರೆ. ಅಲ್ಲಿ ಕಲ್ಯಾಣ ಮಂಟಪದ ಎದುರು ವಧು ವರನಿಗಾಗಿ ಸ್ವಾಗತಕ್ಕೆ ಕಾಯುತ್ತಿರುತ್ತಾರೆ. ವರನು ರಿಬ್ಬನ್ ಕಟ್ ಮಾಡುವ ಮೂಲಕ ಕಲ್ಯಾಣ ಮಂಟಪಕ್ಕೆ ಪಾದಾರ್ಪಣೆ ಮಾಡುತ್ತಾನೆ. ಅಲ್ಲಿ ವಧುವರನಿಗೆ ಗುಲಾಬಿ ಪ್ರೀತಿಯ ಸಂಕೇತ ಇನ್ನಿತರ ಹೂವುಗಳನ್ನು ನೀಡಿ ಸ್ವಾಗತ ಕೋರುತ್ತಾಳೆ. ಇದು ವೈಶ್ಯರಲ್ಲಿನ ಪ್ರಮುಖ ಸಂಪ್ರದಾಯವಾಗಿದೆ. ಎಲ್ಲರೂ ಕಲ್ಯಾಣ ಮಂಟಪಕ್ಕೆ ಬಂದಾಗ ವರನ ಕಡೆಯವರಿಗೆ ಅತಿಥ್ಯ ಆರಂಭವಾಗುವುದು. ಆಗ ಎಲ್ಲರಿಗೂ ಕುಡಿಯಲು ಪಾನಕ ಮತ್ತು ತಿನ್ನಲು ಕೋಸಂಬರಿಯನ್ನು ನೀಡಿ ವರನ ಕಡೆಯವರಿಗೆ ಆತಿಥ್ಯವನ್ನು ನೀಡುತ್ತಾರೆ. ಇದಾದ ನಂತರ ಮುಂದಿನ ಕಾರ್ಯಕ್ರಮಗಳಿಗೆ ಸಿದ್ಧತೆಯನ್ನು ನಡೆಸಿಕೊಳ್ಳುತ್ತಾರೆ.

ವರ ಪೂಜೆ

ಮದುವೆಗೆ ಬಂದ ವಧೂವರರ ಕಡೆಯವರು ಯಾವುದಾದರೂ ಕಲ್ಯಾಣ ಮಂಟಪಕ್ಕೆ ಅಥವಾ ಮನೆಗೆ ಹತ್ತಿರವಿರುವ ದೇವಾಲಯಕ್ಕೆ ಹೋಗುವುದು. ದೇವರ ಮಂಗಳಾರತಿಯಾದ ಮೇಲೆ ಕನ್ಯಾಧಾತನು ತನ್ನ ಧರ್ಮಪತ್ನಿಯೊಂದಿಗೆ ವರನನ್ನು ಮುಂದೆಮಾಡಿಕೊಂಡು ಮಂಗಳವಾದ್ಯಗಳೊಂದಿಗೆ ಎಲ್ಲರೂ ವಿವಾಹ ಮಂಟಪಕ್ಕೆ ಬರುತ್ತಾರೆ. ಮಗನಿಗೆ ಸಮನಾದ ಭಾವಿ ಅಳಿಯನ ಕಾಲನ್ನು ಅತ್ತೆ-ಮಾವಂದಿರು ತೊಳೆದು ಸಿಂಗಾರಮಾಡುವಂತಹ 'ವರ' ಪೂಜೆ ವೈಶ್ಯರಲ್ಲಿ ಕಂಡು ಬರುತ್ತದೆ.

ಬಿಡದಿ ಮನೆ

ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಒಂದು ದಿನ ಮೊದಲೇ ಬರುತ್ತಾರೆ. ಗಂಡಿನ ಮನೆಯಿಂದ ಹೊರಡುವಾಗ ಒಳ್ಳೆಯ ಸಮಯ ಮತ್ತು ಶುಭ ಶಕುನ ನೋಡಿ ಬರುತ್ತಾರೆ. ವರನ ಮನೆಯಲ್ಲಿಯೂ ಚಪ್ಪರವನ್ನು ಹಾಕಲಾಗುತ್ತದೆ. ಧಾರಣೆ ಮೊದಲೆ ಹೆಚ್ಚು ಗಂಡಿನ ಮನೆಯನ್ನು ಪ್ರವೇಶ ಮಾಡುವಂತಿಲ್ಲ. ಈ ಕಾರಣದಿಂದಾಗಿ ಅವರಿಗಾಗಿ ತಮ್ಮ ಮನೆಯ ಹೊರಗಿನ ಕೊಠಡಿಯನ್ನು ಬಿಟ್ಟು ಕೊಡುತ್ತಾರೆ. ಇದನ್ನು ಬಿಡದಿ ಮನೆ ಎಂದು ಕರೆಯಲಾಗುತ್ತದೆ. ಬಂದ ಅತಿಥಿಗಳನ್ನು ಸ್ವಾಗತ ಮಾಡುವ ಮೊದಲೇ ಅವರಿಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿರುತ್ತಾರೆ.

ನಿಶ್ಚಿತಾರ್ಥ

ವಿವಾಹ ಮಂಟಪದಲ್ಲಿ ವಧೂವರರು ಮತ್ತು ಅವರ ತಂದೆ ತಾಯಿಯವರು ಮೇಲೆ ಕುಳಿತು ಕೊಳ್ಳುತ್ತಾರೆ. ಗಣಪತಿಯನ್ನು ಪೂಜೆ ಮಾಡುತ್ತಾರೆ. ನಂತರ ವಧೂವರರ ಗೋತ್ರ ಪ್ರವರಗಳನ್ನು ಹೇಳುತ್ತಾರೆ. ಅನಂತರ 'ವಾಚದತ್ತಾ-ಸುಖೀಭವ' ವಧುವಿನ ತಂದೆ ಕನ್ಯೆಯನ್ನು ಕೊಡಲು ಒಪ್ಪಿರುವನು, ಇವಳನ್ನು ನಿನ್ನ ಮಗನ ಹೆಂಡತಿಯಾಗಿ ಸ್ವೀಕರಿಸು ಎಂದು ಅವಳನ್ನು ಸರಿಯಾಗಿ ನೋಡಿಕೋ ಎಂದು ಸುಖಿಯಾಗು ಎಂದು ಕನ್ಯಾಧಾತನು ಹೇಳುತ್ತಾನೆ. ನೀನು ಕೊಡಲು ಒಪ್ಪಿರುವ ಕನ್ಯೆಯನ್ನು ನನ್ನ ಮಗನಿಗಾಗಿ ಸ್ವೀಕರಿಸುತ್ತೇನೆ ಎಂದು ವರನ ತಂದೆ ಹೇಳುವನು. ವಧೂ-ವರರ ಕಡೆಯವರು ಒಪ್ಪಿದ ಮೇಲೆ ಲಗ್ನಪತ್ರಿಕೆಯನ್ನು ಓದುತ್ತಾರೆ. ವಧೂ-ವರರ ತಂದೆಯವರು ಗೌರವ ಪೂರ್ವಕವಾಗಿ ಆ ಲಗ್ನಪತ್ರಿಕೆಯನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಹಿರಿಯರಿಗೆ ಸಾಕ್ಷಿಯಾಗಿ ತಾಂಬೂಲವನ್ನು ಕೊಡುತ್ತಾರೆ.

ಮದುವೆಯ ದಿನ

ಈ ದಿನ ಹೆಣ್ಣಿನ ಕಡೆಯ ವೈಶ್ಯರಲ್ಲಿ ವಿಶೇಷವಾದ ದಿನ ಎಂದು ಹೇಳಬಹುದು. ಏಕೆಂದರೆ ವೈಶ್ಯರಲ್ಲಿ ಅನೇಕ ಸಂಪ್ರದಾಯಗಳು ಹಾಗೂ ತುಂಬಾ ವರದಕ್ಷಿಣೆ ಪದ್ಧತಿ ಜಾರಿಯಲ್ಲಿರುವುದರಿಂದ ವಧುವಿನ ತಾಯಿ ತಂದೆಯವರು ಅನೇಕ ಕಷ್ಟಪಟ್ಟು ಮದುವೆಗೆ ಎಲ್ಲಾ ಜೋಡಣೆಯನ್ನು ಮಾಡಿಕೊಂಡಿರುತ್ತಾರೆ. ಮದುವೆಯ ಅನೇಕ ಶಾಸ್ತ್ರಗಳು ಧಾರೆಯ ದಿನವೇ ನಡೆಯುವುದರಿಂದಾಗಿ ಜನಪದರು ಅಂದಿನ ದಿನವನ್ನೇ ಮದುವೆಯ ದಿನವೆನ್ನುತ್ತಾರೆ. ಆ ದಿನ ಮುಂಜಾನೆಯಿಂದಲೇ ವಧು ವರರ ಸಂಬಂಧಿಕರು, ಮದುವೆಯ ಕಾರ್ಯಗಳಲ್ಲಿ ನೆರವು ನೀಡಲು ಸೇರಿರುತ್ತಾರೆ. ಹಾಡುಗಾರ್ತಿಯರ ಹಾಡಿನ ಮಧುರ ರಂಗಲಾಪ ಮುಂಜಾನೆಯಿಂದಲೇ ತೇಲಿ ಬರುತ್ತದೆ. ಮದುವೆಗೆ ಬೇಕಾದ ಹೂ ತೆಂಗಿನಕಾಯಿ, ವೀಳ್ಯೆದೆಲೆ, ಅಡಿಕೆ ಬಾಳೆಯಎಲೆ ಅಲ್ಲಲ್ಲಿ ತುಂಬಿಕೊಂಡಿರುತ್ತವೆ.

ಸುರಗಿ ಸುತ್ತುವುದು

ಐದು ಜನ ಮುತ್ತೈದೆಯರು ಗಂಗೆಯನ್ನು ಪೂಜಿಸಿ ಬಿಂದಿಗೆಗಳನ್ನು ತುಂಬಿಸಿಕೊಂಡು, ನೀರು ತುಂಬಿದ ಬಿಂದಿಗೆಗಳನ್ನು ಮನೆ ಮುಂದೆ ಆಗಲೇ ನಿರ್ಮಿಸಿದ ಹಂದರದ ಕೆಳಗೆ ಕ್ರಮವಾಗಿ ಇಡುತ್ತಾರೆ. ಅವುಗಳನ್ನು ಒಂದು ವೃತ್ತಾಕಾರದಲ್ಲಿ ಇಟ್ಟು ಆ ಬಿಂದಿಗೆಗಳ ಕಂಠಕ್ಕೆ ಅರಿಸಿನ ಕುಂಕುಮ ಲೇಪಿತ ದಾರವನ್ನು ಐದು ಸುತ್ತು ಸುತ್ತುತ್ತಾರೆ. ವೃತ್ತಾಕಾರವು ದೊಡ್ಡದಾಗಿರುತ್ತದೆ. ಹೀಗೆ ಮಾಡುವುದರ ಮೂಲಕ ಸಾಮಾನ್ಯವಾದ ಸ್ಥಳವನ್ನು ಅ-ಸಾಮಾನ್ಯಗೊಳಿಸಲಾಯಿತು. ಅಂದರೆ ಆ ಸ್ಥಳಕ್ಕೆ 'ಪ್ರತ್ಯೇಕ ಅಸ್ತಿತ್ವ'ವೊಂದು ಸಿದ್ಧವಾಗುತ್ತದೆ.

ಆಗ ಅದರ ಮಧ್ಯ ಮದುಮಗಳು ಅವರ ತಂದೆ ತಾಯಿಗಳು ಅಲ್ಲಿ ಅವರಿಗೆ ನೀರನ್ನು ಹಾಕುತ್ತಾರೆ. ಆಗ ಅವರ ಸಂಬಂಧಿಕರು ಅವರಿಗೆ ಹೊಸ ಬಟ್ಟೆಗಳನ್ನು ಮತ್ತು ಉಡುಗೊರೆಯನ್ನೂ ನೀಡುತ್ತಾರೆ. ಹೀಗೆ ನೀಡುವುದನ್ನು ಸುರಿಗೆ ಬಟ್ಟೆ ಎಂದು ಕರೆಯುತ್ತಾರೆ. ಇವುಗಳನ್ನು ಸಾಮಾನ್ಯವಾಗಿ ತವರು ಮನೆಯವರು ತಂದು ಕೊಡುವ ಪದ್ಧತಿ ಇವರಲ್ಲಿ ಇದೆ.

ಸುರಿಗೆ ನೀರು (ಮಂಗಳ ಸ್ನಾನ)

ವಿವಾಹ ಕಾರ್ಯವು ಪ್ರಾರಂಭವಾಗುವ ಮುನ್ನ ವಧೂವೂ, ವರನೂ ತಮ್ಮ ತಮ್ಮ ಬಿಡಾರಗಳಲ್ಲಿ ಕೆಲವು ಮಂತ್ರಗಳನ್ನಾಚರಿಸುತ್ತಾ ಸುಗಂಧಿತವಾದ ಜಲದಿಂದ ಸ್ನಾನ ಮಾಡುತ್ತಾರೆ.

ಓಂ ಕಾಮವೇದ ತೇ ನಾಮ ಮದೋ ನಾಮಾಸಿ ಸಮಾನಯಾ
ಮುಂ ಸುರಾ ತೇ ಅಭವತ್। ಪರಮತ್ರ ಜನ್ಮಾಗ್ರೇ ತಪಸೋ ನಿರ್ಮಿ
ತೋಸಿ ಸ್ವಾಹಾ ॥೧॥

ಓಂ ಇಮಂತ ಉಪಸ್ಥಂ ಮಧುನಾ ಸಂಸೃ ಜಾಮಿ ಪ್ರಜಾಪತೇ
ರ್ಮುಖಮೇತದ್ವಿತ್ವೀಯಂ। ತೇನ ಪುಂ ಸೋಭಿ ಭವಾಸಿ ಸರ್ವಾನ
ವಶಾನ್ವಶಿನ್ಯಸಿ ರಾಜ್ಞೀ ಸ್ವಾಹ ॥೨॥

ಓಂ ಅಗ್ನಿಂ ಕ್ರವ್ಯಾದಮಕೃಣ್ವನ್ ಗುಹಾನಾಃ ಸ್ತ್ರೀಣಾಮುಪಸ್ಥ
ಮೃಷಯ ಪುರಾಣಾಃ। ತೇನಾಜ್ಯಮಕೃಣ್ವಂ ಸ್ತ್ರೈಶಂಗಂ ತ್ವಾಷ್ಟ್ರಂ
ತ್ವಯಿ ತದ್ದಧಾತು ಸ್ವಾಹಾ ॥೩॥ (ಆರ್ಯ ವೈಶ್ಯ ಮಾರ್ಗದರ್ಶಿ, ಪು. ೪೪)

ಸುರಗಿ ನೀರು ಅಥವಾ ಸುರಗಿ ನೀರು ಹಾಕುವುದಕ್ಕೆ ಹಿನ್ನಲೆ ಕುಲಕಥನದಲ್ಲಿರುವ ಒಂದು ಘಟನೆಯನ್ನು ಈ ಆಚರಣೆಗೆ ಪೂರಕವಾಗಿ ಬಳಸುತ್ತಾರೆ.

ಆ ಕತೆಯೆಂದರೆ ಒಂದು ಸಾರಿ ಕುಲದ ಗಂಡಸರೆಲ್ಲಾ ದಂಡಿಗೆ ಹೋದರಂತೆ ಹೋಗುವಾಗ ತಮ್ಮ ಜೊತೆಯಲ್ಲಿದ್ದ ನಾಯಿಗಳನ್ನು ಕರೆದುಕೊಂಡು ಹೋದರಂತೆ ಯುದ್ಧದಲ್ಲಿ ಗೆದ್ದರೆ ನಾವೇ ಬರುತ್ತೇವೆ.

ಇಲ್ಲದಿದ್ದರೆ ನಮ್ಮ ಜೊತೆಯಲ್ಲಿರುವ ಈ ನಾಯಿಗಳು ಮಾತ್ರ ಬರುತ್ತವೆ ಎಂದು ಹೇಳಿ ಹೋದರಂತೆ ಯುದ್ಧದಲ್ಲಿ ಇವರೇ ಗೆದ್ದರು ವಿಜಯೋತ್ಸವವನ್ನು ಆಚರಿಸುವ ಸಂಭ್ರಮದಲ್ಲಿ ತಮ್ಮ ಜೊತೆಯಲ್ಲಿ ತಂದಿದ್ದ ನಾಯಿಗಳನ್ನು ಮರೆತು ಬಿಟ್ಟರು. ಆಗ ನಾಯಿಗಳು ಊರನ್ನು ಇವರಿಗಿಂತ ಮೊದಲೇ ಸೇರಿಬಿಟ್ಟವು. ಓ ನಮ್ಮ ಗಂಡಂದಿರೆಲ್ಲಾ ಯುದ್ಧದಲ್ಲಿ ಸತ್ತು ಹೋದರೆಂದು ಕುಲದ ಹೆಂಗಸರೆಲ್ಲಾ ಬೆಂಕಿಗೆ ಆಹುತಿ ಮಾಡಿ ಕೊಂಡರು. ಇದು ಇವರಲ್ಲಿ ಇರುವ ಒಂದು ನಂಬಿಕೆ ಅಥವಾ ಸಂಪ್ರದಾಯ, ಸುರಗಿ ನಡೆದ ಮೇಲೆ ನಂತರ ಕಾರ್ಯಕ್ರಮಗಳು ಆರಂಭವಾಗುವವು. ಹೀಗೆಲ್ಲಾ ಮಾಡುವುದರಿಂದ ಮದುಮಗಳನ್ನು ಸಾಮಾನ್ಯ ಜೀವನ ಕ್ರಮದಲ್ಲಿ ಪ್ರತ್ಯೇಕಿಸುತ್ತದೆ. ಹಾಗೆ ಪ್ರತ್ಯೇಕಿಸುವುದರಿಂದಾಗಿ ಮಾತ್ರ ಸಾಮಾನ್ಯ ಜೀವನ ಕ್ರಮದಲ್ಲಿ ಅವರು 'ಅಸಾಮಾನ್ಯ'ರಾಗಿ ಪ್ರತ್ಯೇಕ ಸ್ಥಾನವನ್ನು ಗಳಿಸಿಕೊಡುತ್ತಾರೆ. ಇದು ಸ್ಪಷ್ಟವಾಗಲು ಅವರಿಗೆ ಸ್ನಾನ ಮಾಡಿಸುತ್ತಾರೆ. ಅರಿಷಿಣ ಮುಂತಾದ ನೀರಿನಿಂದ ಸ್ನಾನವಾದ ಮೇಲೆ ಸ್ವಚ್ಛವಾಗಲು ಮತ್ತೊಮ್ಮೆ ಸ್ನಾನ ಮಾಡಿಸುತ್ತಾರೆ. ನಂತರ ಇವರಿಗೆ ಅಲಂಕಾರ ಮಾಡುತ್ತಾರೆ. ಇಷ್ಟೆಲ್ಲಾ ಆದ ನಂತರ ಮದುಮಗಳನ್ನು ಬಿಡದಿ ಮನೆಗೆ ಕರೆದೊಯ್ಯುತ್ತಾರೆ. ಇಲ್ಲ ಮದುಮಗಳ ಅಲಂಕಾರ ಮಾಡುತ್ತಾರೆ. ಇಲ್ಲಿ ಹೆಂಗಸರದೆ ಮೇಲುಗೈ, ಇತ್ತ ಗಂಡಿಗೂ ಅಲಂಕಾರ ಮಾಡುತ್ತಾರೆ.

ವಧುವಿನ ಬಿಡಾರದಲ್ಲಿನ ಕಾರ್ಯ

ಸ್ನಾನಾನಂತರ ವಧುವು ಸುಂದರ ವಸ್ತ್ರಾಲಂಕಾರ ಭೂಷಿತೆಯಾಗಿ ಮೊದಲೇ ಸಿದ್ಧವಾಗಿರುವ ಯಜ್ಞವೇದಿಕೆಯ ಮೇಲೆ ಪೂರ್ವಾಭಿಮುಖಳಾಗಿ ಕುಳಿತುಕೊಳ್ಳುತ್ತಾಳೆ. ಏಕಾಗ್ರಚಿತ್ತಳಾಗಿ ಬಂಧು ಬಾಂದವರೊಂದಿಗೆ ಈ ವೇದ ಮಂತ್ರಗಳನ್ನು ಉಚ್ಚರಿಸುತ್ತಾರೆ.

ಓಂ ವಿಶ್ವಾನಿ ದೇವ ಸವಿತರ್ದುರಿತಾನಿ ಪರಾಸುವ ಯುದ್ಭದ್ರನ್ತನ್ನ
ಆಸುವೆ ||೧|| (ಯಜು)
ಓಂ ಹಿರಣ್ಯಗರ್ಭ ಸಮವರ್ತತಾಗ್ರೇ ಭೂತಸ್ಯಜಾತ ಪತಿರೇಕ
ಆಸೀತ್ ಸದಾಧಾರ ಪೃಥಿವೀಂ ದ್ಯಾಮುತೇ ಮಾ ತಸ್ಮೈ ದೇವಾ
ಯ ಹವಿಷಾ ವಿಧೇಮ ||೨|| (ಯಜು)[೧] (ಸುರೇಶ್ ಗುಪ್ತ, ೧೯೯೫, ಪು. ೬೧)

ಮಧುಪರ್ಕ

ವರನ ಸಮಾರೋಹ ಯಾತ್ರೆಯು ವಧುವಿನ ಬಿಡಾರದ ಪ್ರವೇಶ ದ್ವಾರಕ್ಕೆ ಬಂದಾಗ, ವಧುವೂ, ಕಾರ್ಯಕರ್ತೃವೂ ವರನನ್ನು ಸ್ವಾಗತಿಸಿ, ಸತ್ಕರಿಸುತ್ತಾರೆ. ಅದರ ವಿಧಾನ ಹೀಗಿದೆ. ವರನು ವಧುವಿನ ಬಿಡಾರದಲ್ಲಿ ಪ್ರವೇಶಿಸಿ ಪೂರ್ವಾಭಿಮುಖವಾಗಿ ನಿಲ್ಲುತ್ತಾನೆ. ವಧುವೂ, ಕಾರ್ಯಕರ್ತನೂ ಆತನ ಹತ್ತಿರದಲ್ಲಿಯೇ ಉತ್ತರಾಭಿಮುಖವಾಗಿ ನಿಂತು ಈ ವಾಕ್ಯವನ್ನು ಉಚ್ಚರಿಸುತ್ತಾರೆ.

ಓಂ ಸಾಧು ಭವಾನಾಸ್ತಾಮರ್ಚಯಿಷ್ಯಾಮೋ ಭವಂತಂ

ಮದುವೆಗೆ ಬಂದ ವರನು ನಾರಾಯಣ ಸ್ವರೂಪನೆಂದು ಭಾವಿಸಿ ಅನಂತರ ಮಧುಪರ್ಕವನ್ನು (ಮೊಸರು ಬೆರತ ಜೇನು ತುಪ್ಪವನ್ನು) ಮತ್ತು ಮಹೂರ್ತದ ಬಟ್ಟೆಯನ್ನು ವರನಿಗೆ ಕೊಟ್ಟು ಉಪಚರಿಸುತ್ತಾನೆ. ವರನು ಮಧುಪರ್ಕವನ್ನು ತಿಂದು ಮಾವನು ಕೊಟ್ಟ ಬಟ್ಟೆಗಳನ್ನು ಗೃಹಸ್ಥಾಶ್ರಮ ಯೋಗ್ಯತಾಸಿದ್ಧಿಗಾಗಿ ದ್ವಿತೀಯ ಯಜ್ಞೋಪವೀತವನ್ನು ಮತ್ತು ಬಾಷಿಂಗವನ್ನು ಧರಿಸಿ ಮುಹೂರ್ತದ ದಾರಿ ನೋಡುತ್ತಿರುತ್ತಾನೆ.

ಗೌರಿ ಪೂಜೆ

ವಧುವು ಮುಹೂರ್ತದ ಬಟ್ಟೆಗಳನ್ನುಟ್ಟು ದೇವರ ಕೋಣೆಯನ್ನು ಗೌರಿ ಮತ್ತು ತವರು ಮನೆಯ ಮಾಂಗಲ್ಯ ಪೂಜೆಯನ್ನು ಮಾಡುತ್ತಿರುತ್ತಾಳೆ. ಗೌರಿಗೆ ಮತ್ತು ತಾಯಿಗೆ ಬಾಗಿನವನ್ನು ಕೊಡುತ್ತಾರೆ. ತವರು ಮನೆಯ ತಾಳಿಯನ್ನು ಮತ್ತು ಬಾಸಿಂಗವನ್ನು ಧರಿಸಿ ಮುಹೂರ್ತವನ್ನು ಕಾಯುತ್ತಿರುತ್ತಾಳೆ.

ವೈಶ್ಯರಲ್ಲಿ ಮುಖ್ಯವಾಗಿ ವಿವಾಹದ ದಿನ ತಪ್ಪದೇ ವಧು ಈ ಪೂಜೆಯನ್ನು ಸುಮಾರು ಎರಡು ಗಂಟೆಗಳ ಕಾಲ ಪೂಜೆಯನ್ನು ಮಾಡುತ್ತಾಳೆ. ಕನ್ಯೆಯನ್ನು ಆ ಪೂಜೆಯಿಂದಲೇ ವಿವಾಹ ಮಂಟಪಕ್ಕೆ ವಧುವಿನ ಸೋದರ ಮಾವಂದಿರು ಮಂಟಪಕ್ಕೆ ಕರೆತರುತ್ತಾರೆ. ವಧು ಗೌರಿ ಪೂಜೆಯನ್ನು ಬಹಳ ಶ್ರದ್ಧಾಪೂರಕವಾಗಿ ಆಚರಿಸುತ್ತಾಳೆ.

ಅಥಃ ಗೌರೀ ಪೂಜನಮ್

ಶ್ರೀ: ಅಥ ಕನ್ಯಾ ಸ್ನಾತಾ ಪರಿಹಿತೋ ಹತವಸ್ತ್ರಾ ಗೃಹಾಂತೆ!
ಸೂತ್ರ ವೇಷ್ಠಿತೋ ಪಲ ಸಹಿತ ದೃಷದುಪರಿ ಹರಿದ್ರಾ ನಿರ್ಮಿತಾ ಗೌರೀ ಹರೌ
ಸೌಭಾಗ್ಯಾದಿ ಕಾಮನಯಾಮಮ ಅಖಂಡ ಸೌಭಾಗ್ಯಾದಿ ಸಕಲೈಶ್ವರ್ಯ ಸಂಪತ್ಯರ್ಥಂ
ಶ್ರೀ ಗೌರೀ ಹರೌ ಪೂಜಯಿಷ್ಯ॥
ಇತಿ ಸಂಕಲ್ಪ ಪೂರ್ವಕಂ ಯಥಾ ವಿಭವಂ ಪೂಜಯಿತ್ವಾ ಪ್ರಾರ್ಧಯೇತ್॥ ತತಃ ಮಂತ್ರ॥
ಗೌರಿಹರೌವಾ ಸತತಂ ನಮೋಸ್ತು ಭಕ್ತಪ್ರಯಾಭ್ಯಾಂ ಸುರಸೇವಿತಾಭ್ಯಾಂ॥
ಅಖಂಡ ಸೌಭಾಗ್ಯಯಶಃ ಸುಪುತ್ರ ವಸೂಲಿ ಮೇದತ್ತಮನಾಪ್ರಯಶ್ಚ॥
ಇತಿ ತತ ಇಂದ್ರಾಣೀಂಚ ತತ್ರೈವಾಕ್ಷತ ಪುಂಜೆ ಸಂಪೂಜ್ಯ ಪ್ರಾರ್ಥಯೇತ್॥
ದೇವಿಂದ್ರಾಣಿ ನಮಸ್ತುಭ್ಯಂ ದೇವೇಂದ್ರ ಪ್ರಿಯ ಭಾಮಿನಿ॥
ವಿವಾಹೆ ಭಾಗ್ಯಮಾರೋಗ್ಯಂ ಪುತ್ರಲಾಭಂಚ ದೇಹಿಮೆ॥
ಧಾನ್ಯಂ ದೇಹಿ ಧನಂ ದೇಹಿ ಪಶೂನ್ ದೇಹಿಂದ್ರ ಸುಂದರಿ
ಯಶೋ ದೇಹಿ ಸುಖಂ ದೇಹಿ ಸರ್ವ ಕಾರ್ಯಕರೀಭವ ಇತಿ
ತತಃ ತತ್ರೈವ ಗೌರೀಂ ಪ್ರತಿ ಸೌಭಾಗ್ಯಾದಿ ಪ್ರಾರ್ಧಯ ಮಾನಾಲೆಷ್ಮೇತ್ ^{2}

(ಎಂ.ನರೇಂದ್ರ, ವಿವಾಹ ಸಂಸ್ಕಾರದ ವಿವಿಧ ಹಂತಗಳು, ೧೯೯೮, ಪು. ೪೮)

[illegible]

ವಿವಾಹ ಕನ್ಯೆವು ತನಗೆ ಸೌಭಾಗ್ಯವನ್ನು ಹಾಗೂ ಸುಮಂಗಲಿಯಾಗಿ ನನಗೆ ಆಶೀರ್ವದಿಸಿ ಮತ್ತು ಸಂತಾನ ಭಾಗ್ಯವನ್ನು ನೀಡು ಎಂದು ಆ ದಿನ ಗೌರಿ ಪೂಜೆಯನ್ನು ವಧು ಮಾಡುತ್ತಾಳೆ. ಹಾಗೂ ಇಷ್ಟೆಲ್ಲಾ ಅನಿಸಿಕೆಗಳು ಈಡೇರುತ್ತವೆ ಎನ್ನುವುದು ವೈಶ್ಯರ ನಂಬಿಕೆ.

ಕಾಶೀಯಾತ್ರೆ

ಹಿಂದಿನ ಕಾಲದಲ್ಲಿ ಐದು ವರ್ಷ ಇದ್ದಾಗಲೇ ಋಷಿ ಆಶ್ರಮದಲ್ಲಿ ವಿದ್ಯೆ ಕಲಿಯಲು ಗಂಡು ಮಕ್ಕಳನ್ನು ಬಿಟ್ಟು ಋಷಿ ಮುನಿಗಳಿಗೆ ಒಪ್ಪಿಸುತ್ತಿದ್ದರು. ಈಗಿನ ಕಾಲದಲ್ಲಿ ಎಲ್ಲಾ ಶಾಲಾ ಕಾಲೇಜು ಇರುತ್ತವೆ. ಆಗಿನ ಕಾಲದ ವಾತಾವರಣವೇ ಬೇರೆ ಆಗಿನ ಕಾಲದಲ್ಲಿ ಋಷಿ ಆಶ್ರಮದಲ್ಲಿ ಸೇರಿದ ಹುಡುಗರು ವಿದ್ಯಾಪಾರಂಗತ ರಾಗಿ ಗುರುಗಳಿಂದ ಆಶೀರ್ವಾದ ಪಡೆದು ಪುಣ್ಯ ಕ್ಷೇತ್ರ ಕಾಶೀಗೆ ಹೋಗಿ ಅಲ್ಲಿ ಮಹಾನ್ ಪಂಡಿತರ ಹತ್ತಿರ ತನ್ನ ಸುಸಂಸ್ಕೃತ ವಿದ್ಯೆ ಹೇಳಿ ತಮ್ಮ ಗುರುಗಳಿಗೆ ಹೆಮ್ಮೆ ಹೆಸರು ತರುತ್ತಿದ್ದರು. ಹೀಗೆ ಹೋಗುವಾಗ ಯಾರೋ ಒಬ್ಬ ಮಹಾಮುನಿ ಆ ವ್ಯಕ್ತಿಗೆ ಹೇಳುತ್ತಾರೆ. ನಿನಗೆ ಕಾಶೀಯಾತ್ರೆ ಮಾಡಲು ಅರ್ಹತೆಯಿಲ್ಲ ದಾಂಪತ್ಯ ಸಹಿತ ಹೋದರೆ ಕಾಶಿ ವಿಶ್ವನ ದರ್ಶನದಲ್ಲಿ ಪ್ರಗತಿ ಎಂದು ತಿಳಿಸಿದರು. ಹಾಗೆ ಕಾಶಿಗೆ ಹೋಗುವಾಗ ದಾರಿಯಲ್ಲಿ ತನ್ನ ಪದ್ಧತಿ ಮೇರೆಗೆ ಯಜ್ಞೋಪವೀತ ಧರಿಸಿ ವಿವಾಹ ಆಗ ನಡೆದು ದಂಪತಿ ಸಹಿತ ಕಾಶೀಯಾತ್ರೆ ಮಾಡುವುದು ಸಂಪ್ರದಾಯ ಇತ್ತು. ಆದರೆ ಈಗಿನ ಕಾಲದ ಹಾಗೆ ಬಸ್ಸು, ರೈಲು, ವಿಮಾನಗಳು ಇರಲಿಲ್ಲ.

ಆಗಿನ ಕಾಲದಲ್ಲಿ ಕಾಶೀಯಾತ್ರೆಗೆ ನಡೆದುಕೊಂಡು ಹೋಗಬೇಕಿತ್ತು. ಕಾಶೀ ಯಾತ್ರೆಗೆ ಹೋಗುವವನು ಎಲ್ಲಾ ತಿಳಿದಿರಬೇಕು. ಹಿಂದಿನ ಕಾಲದಲ್ಲಿ ಋಷಿ ಆಶ್ರಮದಲ್ಲಿ "ವಿದ್ಯೆ ಕಲಿಯಲೇ ಬೇಕಿತ್ತು" ವೈಶ್ಯರು ಕಾಶೀಯಾತ್ರೆಯ ಕಾರ್ಯಕ್ರಮವನ್ನು ವಿವಾಹದ ಸಂದರ್ಭದಲ್ಲಿ ಮಾಂಗಲ್ಯಧಾರಣೆಯ ದಿವಸ ಕಾಶೀಯಾತ್ರೆಯ ನಾಯಮಗಳನ್ನು ವರನಿಗೆ ಪುರೋಹಿತರು ಹೇಳಿಕೊಡುತ್ತಾರೆ. ಮತ್ತು ವರನು ಕಾಶೀಯಾತ್ರೆಗೆ ಹೊರಡುವ ಸಂದರ್ಭದಲ್ಲಿ ತನ್ನ ಕುಟುಂಬದವರಲ್ಲಿ ಭಿಕ್ಷಾಟನೆಯನ್ನು ಮಾಡುತ್ತಾನೆ. ಇದು ದಾರೆಯ ಮಧ್ಯದಲ್ಲಿ ತನ್ನ ಉಪಯೋಗಕ್ಕಾಗಿ ಬೇಕಾಗುತ್ತದೆ ಎನ್ನುವ ಸಂಪ್ರದಾಯ ವೈಶ್ಯರಲ್ಲಿ ಇಂದಿಗೂ ಕಂಡುಬರುತ್ತದೆ.

೧. ಆಧ್ಯಾತ್ಮಿಕ ಪ್ರಪಂಚದ ಬಗ್ಗೆ

೧. ಪ್ರಾಣ ೨. ಕರ್ಮೇಂದ್ರಿಯ ೩. ಜ್ಞಾನೇಂದ್ರಿಯ ೪. ಮನಸ್ಸು ೫. ಬುದ್ಧಿ ೬. ಸುಖ ೭. ದುಃಖ ೮. ವೇದಗಳು

೨. ಚತುರ್ವೇಧ ಪುರುಷಾರ್ಥ ಬಗ್ಗೆ

೧. ಧರ್ಮ ೨. ಅರ್ಥ ೩. ಕಾಮ ೪. ಮೋಕ್ಷ

೩. ದೇಹದಲ್ಲಿನ ಚಲನವಲನದ ಬಗ್ಗೆ

೧. ಸುಪ್ತ ಮನಸ್ಸು ೨. ಜಾಗೃತಿ ಮನಸ್ಸು

೪. ದೇಹದಲ್ಲಿ ಕ್ರಿಯೆಯ ಬಗ್ಗೆ

೧. ಸ್ವಾರ್ಥ ೨. ಆಲೋಚನಾ ಶಕ್ತಿ ೩. ನಿಸ್ವಾರ್ಥ ಶಕ್ತಿ ೪. ಶಾಂತಿ ಕ್ರಿಯೆ ಶಕ್ತಿ ೫. ದೇವತಾ ಭಕ್ತಿ ಶಕ್ತಿ

೫. ಶಾರೀರಕ ಕ್ರಿಯೆ

೧. ನಿದ್ರೆ ೨. ಆಹಾರ ೩. ಮಲ ಮೂತ್ರ ೪. ಲೈಂಗಿಕತೆ ೫. ಸ್ವಚ್ಛತೆ

ಈ ಮೇಲಿನ ವಿದ್ಯೆಗಳೆಲ್ಲಾ ಹಿಂದಿನ ಕಾಲದಲ್ಲಿ ಸಪ್ತ ಋಷಿಗಳಲ್ಲಿ ಕಲಿತು ವೇದ ಪುರಾಣಗಳ ಪಾಂಡಿತ್ಯನಾಗಿ ಗುರುದಕ್ಷಿಣೆ ಸಲ್ಲಿಸಿ ಕಾಶೀಯಾತ್ರೆ ಮುಗಿಸಿ ದಂಪತಿ ಸಹಿತ ವಿದ್ಯೆ ಪಾರಂಗತನಾಗಿ ತಂದೆ, ತಾಯಿ, ಗುರು ಹಿರಿಯರ ಸೇವೆ ಮಾಡುತ್ತಾ ಹೋಗುವುದೇ ಎಂದು ವೈಶ್ಯರಲ್ಲಿ ಇರುವ ಧಾರ್ಮಿಕ ನಂಬಿಕೆಯಾಗಿದೆ. ಇದು ವೈಶ್ಯರಲ್ಲಿ ವಿವಾಹದ ದಿನ ನಡೆಯುವ ಮುಖ್ಯವಾದ ಸಂಪ್ರದಾಯವಾಗಿದೆ.

ವಧೂ ನಿರೀಕ್ಷಣೆ

ವರನು ಪೂರ್ವಾಭಿಮುಖವಾಗಿಯೂ ವಧುವು ಪಶ್ಚಿಮಾಭಿಮುಖವಾಗಿಯೂ ಧಾರಾ ಮಂಟಪದಲ್ಲಿ ನಿಂತಿರುತ್ತಾರೆ. ಅವರಿಬ್ಬರ ಬಲಗೈಯಲ್ಲಿ ಜೀರಿಗೆ ಬೆಲ್ಲವಿರುತ್ತದೆ. ಇಬ್ಬರ ಮಧ್ಯೆ ತೆರೆಯು ಇರುತ್ತದೆ. ಇಂದ್ರಾದಿ ದೇವತೆಗಳು ಯೋಗಿಗಳು, ಮುನಿಗಳು, ಅರುಂಧತಿ ಮೊದಲಾದ ಮಹಾಸತಿಯರು ವೇದ, ಶಾಸ್ತ್ರ, ಪುರಾಣ, ಇತಿಹಾಸ ಕಾವ್ಯಗಳು ಎಲ್ಲಾ ದೇಶಗಳು ಪುಣ್ಯ ಕ್ಷೇತ್ರಗಳು ಸಕಲ ನದಿಗಳು ಅರಣ್ಯಗಳು, ವನಸ್ಪತಿಗಳು ವಾದ್ಯಗಳು ಕಲ್ಪವೃಕ್ಷ ಕಾಮಧೇನು ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳು ಸಪ್ತಕುಲ ಪರ್ವತಗಳು ದ್ವೀಪಗಳು ಸಮುದ್ರಗಳು, ಅಷ್ಟಾವಸುಗಳು, ದಿಗ್ಗಜಗಳು, ಅಷ್ಟೈಶ್ವರ್ಯಗಳು, ನವಗ್ರಹಗಳು, ನವನದಿಗಳು, ನವಮಣಿಗಳು, ದಶಾವತಾರಗಳು ಏಕಾದಶ ರುದ್ರರು, ದ್ವಾದಶಾದಿತ್ಯರು, ಹದಿನಾಲ್ಕು ಲೋಕಗಳು ಹದಿನೈದು ಆಹುತಿಗಳು, ಹದಿನಾರು ಕಲೆಗಳು, ಹದಿನೆಂಟು ಪುರಾಣಗಳು ವಧೂವರರಿಗೆ ಶುಭವನ್ನುಂಟು ಮಾಡಲಿ ಎಂಬ ಚೂರ್ಣಿಕೆಯನ್ನು ವಧೂವರರಿಗೆ ಮಂಗಳವನ್ನುಂಟು ಮಾಡಲಿ ಎಂಬ ನಂಬಿಕೆ ವೈಶ್ಯರಲ್ಲಿ ಇದೆ. ಅದಕ್ಕಾಗಿ ವಧೂವರರು ಒಬ್ಬರಿಗೊಬ್ಬರು ತಲೆಯ ಮೇಲೆ ಜೀರಿಗೆ ಬೆಲ್ಲವನ್ನು ಇಡುತ್ತಾರೆ. ನಂತರ ತೆರೆಯನ್ನು ತೆಗೆಯುತ್ತಾರೆ.

ಮುಹೂರ್ತ ನಿರ್ಣಯ

ವಿವಾಹ ವಿಧಿಯಲ್ಲಿ ಸಪ್ತಪದಿಯು ಪ್ರಧಾನವೆಂದು ಧರ್ಮ ಶಾಸ್ತ್ರಗಳ ಅಭಿಪ್ರಾಯವಾಗಿದೆ. ಇದಾದ ಮೇಲೆ ಮದುವೆಯು ಸ್ಥಿರವಾಗುತ್ತದೆ. ಪಾಣಿಗ್ರಹಣ, ಕನ್ಯಾಧಾನ, ಮಾಂಗಲ್ಯಧಾರಣೆ ಇವು ವೈಶ್ಯರ ಮದುವೆ ಸಂಪ್ರದಾಯದ ಮುಖ್ಯ ಅಂಗಗಳು.

ಒಂದೂವರೆ ಘಂಟೆ ಮೂರು ಮುಕ್ಕಾಲು ಘಳಿಗೆಯ ಕಾಲಕ್ಕೆ ಮುಹೂರ್ತವೆಂದು ಕರೆಯುತ್ತಾರೆ.

ಕನ್ಯಾದಾನ

ವಧೂ-ವರರು ಲಕ್ಷ್ಮೀನಾರಾಯಣನ ಸ್ವರೂಪವೆಂದು ವೈಶ್ಯರು ಭಾವಿಸುತ್ತಾರೆ. ಗಂಧ ಪುಷ್ಪ ಮೊದಲಾದವುಗಳು ಅವರನ್ನು ಅಲಂಕರಿಸುತ್ತಾರೆ. ಧಾರಾಮಂಟಪದಲ್ಲಿ ವರನು ಪಶ್ಚಿಮಾಭಿಮುಖವಾಗಿಯೂ ವಧುವು ಪೂರ್ವಾಭಿಮುಖವಾಗಿಯೂ ನಿಂತಿರುತ್ತಾರೆ. ಕನ್ಯಾಧಾನಕ್ಕಾಗಿ ಬಂಧು ಬಳಗ ಮತ್ತು ಮಹಾಜನರು ಅಪ್ಪಣೆಯನ್ನು ಕರ್ತನು ಪಡೆಯುತ್ತಾನೆ. ವರನ ಎರಡು ಅಂಗೈಗಳ ಮೇಲೆ ಫಲ-ತಾಂಬೂಲ ಚಿನ್ನದ ನಾಣ್ಯವನ್ನು ಮತ್ತು ತುಲಸಿ ದಳವನ್ನು ಇಡುತ್ತಾರೆ. "ಕನ್ಯಾಂ..... ತ್ರಿವಾಚಕಂ" ಎಂಬ ಶ್ಲೋಕಗಳನ್ನು ಹೇಳುತ್ತಾ ಮೂರು ಸಾರಿ ಕಾಶಿ ತೀರ್ಥವನ್ನು ಧಾರೆ ಎರೆದು ಗೋತ್ರದಲ್ಲಿ ಹುಟ್ಟಿದ ಅವರ ಮರಿಮೊಮ್ಮಗ ಅವರ ಮೊಮ್ಮಗ ಅವರ ಮಗ ಹೆಸರುಳ್ಳವನಾದ ವರನಿಗೆ ಕೊಡುವನು ಎಂದು ಹೇಳುತ್ತಾನೆ. ನಂತರ ಕನ್ಯಾಧಾತನು ಕನ್ಯೆಯನ್ನು ವರನಿಗೆ ದಾನ ಮಾಡುತ್ತಾನೆ. ಅಂದರೆ ಫಲ-ತಾಂಬೂಲದಿಂದ ಕೂಡಿದ ಕನ್ಯೆಯ ಬಲಗೈಯನ್ನು ವರನ ಕೈಗೆ ಕೊಡುತ್ತಾನೆ. ತಂದೆ ತಾಯಂದಿರು ಮಾತ್ರ ಕನ್ಯಾದಾನಕ್ಕೆ ಅರ್ಹರು. ಅವರಿಲ್ಲ ದಿದ್ದಲ್ಲಿ ಅವರ ಪರವಾಗಿ ಪೋಷಕರು ಕನ್ಯಾದಾನವನ್ನು ಮಾಡುತ್ತಾರೆ.

ಕಾರ್ಯಕರ್ತ: ಓಂ .... ಗೋತ್ರೋತ್ಪನಾಮಿಮಾಂ.... ನಾಮ್ನೀ
ಮಲಂಕೃತಾಂ ಕನ್ಯಾಂ ಪ್ರತಿಗೃಹ್ಣಾತು ಭವಾನ್ ॥
ವರನು ಈ ಶ್ಲೋಕವನ್ನು ಉಚ್ಚರಿಸುತ್ತಾನೆ.
ವರ ಓಂ ಪ್ರತಿಗೃಹ್ಣಾಮಿ ॥ (ವಿವಾಹ ಸಂಸ್ಕಾರ ವಿಧಿಗಳು)

ಕಂಕಣಧಾರಣೆ

ವೈಶ್ಯ ಸಮುದಾಯದ ವದೋವರರು ಗೃಹಸ್ಥಾಶ್ರಮದ ಕರ್ಮಗಳನ್ನು ಆಚರಿಸುತ್ತಾ ಸಂತಾನವನ್ನು ಪಡೆಯೋಣ ಎಂದು ಮೊದಲನೆಯ ಸಾರಿ ಸಂಕಲ್ಪವನ್ನು ಮಾಡುತ್ತಾರೆ. ಬಳಿಕ ವಧು ವರರ ರಕ್ಷಣೆಗಾಗಿ ಪಾಣಿಗ್ರಹಣಾಂಗವಾದ ರಕ್ಷಾ ಬಂಧನವನ್ನು ಮಾಡುವೆನು ಎಂದು ಸಂಕಲ್ಪಮಾಡಿ ರಕ್ಷಾ ಬಂಧನದ ಪೂಜೆಯನ್ನು ವೈಶ್ಯ ಸಮುದಾಯದ ವಧು-ವರರು ಮಾಡುತ್ತಾರೆ. 'ವಿಶೇತ್ತಾತೇ' ಎಂಬ ಮಂತ್ರವನ್ನು ಪುರೋಹಿತರು ಹೇಳಿದ ಮೇಲೆ ವಧುವು ವರನ ಬಲಕೈಗೆ ಕಂಕಣವನ್ನು ಕಟ್ಟುತ್ತಾಳೆ. 'ಬೃಹತ್ಸಾಮ' ಎಂಬ ಮಂತ್ರವನ್ನು ಪುರೋಹಿತ ಹೇಳಿದ ಮೇಲೆ ವರನು ವಧುವಿನ ಎಡಕೈಗೆ ಕಂಕಣವನ್ನು ಕಟ್ಟುತ್ತಾನೆ.

ಸಾಮಾನ್ಯವಾಗಿ ಇದಕ್ಕೆ ಮೊದಲು ಒಮ್ಮೆ ನಿಶ್ಚಿತಾರ್ಥ ನಡೆದಿರುತ್ತದೆ. ಅದು ಕೇವಲ ವರರ ಕೊಡು ತೆಗೆದುಕೊಳ್ಳುವುದರ ಬಗ್ಗೆ ಇರುತ್ತದೆ. ಆದರೆ ವೈಶ್ಯರಲ್ಲಿ ಮದುವೆಯ ಮೊದಲ ದಿನ ನಡೆಯುವ ನಿಶ್ಚಿತಾರ್ಥ ವಿಶೇಷವಾಗಿರುತ್ತದೆ. ಅಂದು ಸಂಜೆಯಿಂದ ಕಾರ್ಯಕ್ರಮಗಳು ಆರಂಭಗೊಂಡು ರಾತ್ರಿಯವರೆಗೆ ಕಾರ್ಯ ಕ್ರಮಗಳು ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಇದು ಸಾಮಾನ್ಯವಾಗಿ ವಧು-ವರರ ನಡುವೆ ಒಂದು

[illegible]

[illegible]

[illegible]

[illegible]

ಸಹಜತೆ ಹಾಗೂ ಪರಿಚಯ ಆರಂಭವಾಗುವುದು ವಧು-ವರರು ಸೇರುವುದು ಸಾಂಪ್ರದಾಯಿಕವಾಗಿ ಅದೇ ಪ್ರಥಮವಾಗಿರುತ್ತದೆ. ಅಂದಿನ ದಿನ ವಧುವು ಬಹಳ ಅಲಂಕೃತಳಾಗಿ ಎಲ್ಲಾ ಬಂಗಾರದ ಆಭರಣಗಳನ್ನು ಧರಿಸಿ ಒಳ್ಳೆಯ ರೇಷ್ಮೆ ಸೀರೆಯನ್ನು ಹಾಕಿಕೊಂಡು ಅಲಂಕೃತಳಾಗಿರುತ್ತಾಳೆ. ಅದೇ ರೀತಿಯಾಗಿ ವರನು ಸಹ ಒಳ್ಳೆಯ ಬಟ್ಟೆಗಳನ್ನು ಅಥವಾ ಸೂಟು, ಬೂಟು, ಧರಿಸಿಕೊಂಡು ನಿಶ್ಚಿತಾರ್ಥಕ್ಕೆ ಬರುತ್ತಾರೆ. ಪುರೋಹಿತರು ಅವರಿಬ್ಬರ ನಡುವೆ ಹೆಚ್ಚಿನ ಪರಿಚಯ ಬೆಳೆಯಲಿ ಎನ್ನುವ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳನ್ನು ಮಾಡಿಸುತ್ತಾರೆ, ಆಟಗಳನ್ನು ಆಡಿಸುತ್ತಾರೆ. ಅಂದರೆ ಅಲ್ಲೇ ಕುಳಿತುಕೊಂಡು ಆಡುವಂತಹ ಆಟಗಳಾಗಿರುತ್ತವೆ. ಇದೆಲ್ಲಾ ಆದನಂತರ ಅಲ್ಲಿ ಸೇರಿರುವ ಎಲ್ಲಾ ಬಂದು ಬಳಗದವರು ತಾವುತಂದಿದ್ದ ಉಡುಗೊರೆಗಳನ್ನು ಕೊಟ್ಟು ಸಂತೋಷ ಪಡಿಸುತ್ತಾರೆ. ಅದೇ ವೇಳೆಯಲ್ಲಿ ವರನ ಕಡೆಯವರು ಮತ್ತು ವಧುವಿನ ಕಡೆಯವರು ತಾಂಬೂಲಗಳನ್ನು ಬದಲಾಯಿಸಿಕೊಳ್ಳುತ್ತಾರೆ. ಅಲ್ಲಿ ಸೇರಿರುವ ಎಲ್ಲಾ ಬಂಧುಗಳಿಗೆ ಫೋಟೋ ಅಥವಾ ವೀಡಿಯೋವನ್ನು ತೆಗೆಸುತ್ತಾರೆ. ಇದು ವೈಶ್ಯರು ನಿಶ್ಚಿತಾರ್ಥದ ವಿಶೇಷತೆ ಅಲ್ಲಿಗೆ ಇವರಲ್ಲಿ ಅರ್ಧ ವಿವಾಹ ಆದ ಹಾಗೆ ಆಗುತ್ತದೆ. ಈ ನಿಶ್ಚಿತಾರ್ಥದ ನಂತರ ಎಲ್ಲರಿಗೂ ಊಟದ ವ್ಯವಸ್ಥೆ ಇರುತ್ತದೆ. ಅದನ್ನು ಬಫೇ ಎಂತಲೂ ಕರೆಯುತ್ತಾರೆ. ಅನೇಕ ತರಹದ ವಿಧವಿಧವಾದ ಸಿಹಿ ತಿಂಡಿ ತಿನಿಸುಗಳನ್ನು ಅಂದಿನ ದಿನ ಮಾಡಿಸಿರುತ್ತಾರೆ. ಅಂದಿನ ದಿನ ರಾತ್ರಿ ಕಲ್ಯಾಣ ಮಂಟಪವಾಗಲಿ ಅಥವಾ ವರನ ಮನೆಯನ್ನಾಗಲಿ ಅನೇಕ ವಿದ್ಯುತ್ ದ್ವೀಪಗಳಿಂದ ಅಲಂಕರಿಸುತ್ತಾರೆ.

ಮಾಂಗಲ್ಯ ಧಾರಣೆ

ವಿವಾಹ ಮಂಟಪಕ್ಕೆ ಕನ್ಯೆಯನ್ನು ಅವಳ ಸೋದರ ಮಾವ ಅಂದರೆ ತಾಯಿಯ ಅಣ್ಣ ಅಥವಾ ತಮ್ಮ ಕನ್ಯೆಯನ್ನು ಗೌರಿ ಪೂಜೆಯ ಸ್ಥಳದಿಂದ ಕರೆದುಕೊಂಡು ಬರುತ್ತಾರೆ. ಅಷ್ಟರಲ್ಲಿ ಪುರೋಹಿತರು ನಾನಾಲಂಕಾರಗಳಿಂದ ಹಲವಾರು ಪೂಜೆಗಳನ್ನು ಮಾಡುತ್ತಾ ಮಾಂಗಲ್ಯ ಮಂಟಪವನ್ನು ಸಿದ್ಧಗೊಳಿಸಿರುತ್ತಾರೆ. ವಿವಾಹ ಕನ್ಯೆಯ ಅಲಂಕಾರವು ಸಾಮಾನ್ಯವಾಗಿ ಬಿಡದಿ ಮನೆಯಲ್ಲಿಯೇ ನಡೆಯುತ್ತದೆ.

ಅಂದು ಧಾರೆಗೆಂದೇ ತಂದಿದ್ದ ಮದುವೆಯ ಸೀರೆಯನ್ನು ಹಾಕಿ, ಗುರು ಹಿರಿಯರ ಅನುಮತಿ ಪಡೆದು ವಿವಿಧ ಒಡವೆಗಳಿಂದ ಅವಳನ್ನು ಶೃಂಗರಿಸುತ್ತಾರೆ. ಹೀಗೆ ಶೃಂಗರಿಸಿದ ಹೆಣ್ಣನ್ನು ಮನೆಯ ಅಥವಾ ಕಲ್ಯಾಣ ಮಂಟಪದ ಕನ್ಯೆಗೆಂದೇ ಕೊಟ್ಟಿದ್ದ ಕೊಠಡಿಯ ಒಳಗಿನಿಂದ ಧಾರಾಮಂಟಪಕ್ಕೆ ಸೋದರ ಮಾವ ಕರೆತರುತ್ತಾರೆ. ಗಂಡು ಆಗಲೇ ಮೆರವಣಿಗೆಯಿಂದ ಕಾಶೀಯಾತ್ರೆ ಮುಗಿಸಿಕೊಂಡು ಮರಳಿರುತ್ತಾನೆ. ಗಂಡು ಮಂಟಪದ ಹೊರಗಿನಿಂದ ಒಳಗೆ ಬಂದು ಮಂಟಪದಲ್ಲಿ ಹಸಿಮಣೆ ಏರುತ್ತಾನೆ. ಪುರೋಹಿತರು ಮಂತ್ರ ಜಪಿಸುತ್ತಾರೆ. ಹೆಣ್ಣಿನ ತಂದೆ ತಾಯಿ ಧಾರೆ ಎರೆದು ಕೊಡಲು ಸಿದ್ಧರಾಗಿರುತ್ತಾರೆ. ಗಂಡಿನ ಎರಡು ಹಸ್ತಗಳ ಮೇಲೆ ಹೆಣ್ಣಿನ ಹಸ್ತವನ್ನು ಇರಿಸಿ ಅದರ ಮೇಲೆ ತಾಂಬೂಲವನ್ನು ಇಡುತ್ತಾರೆ. ಪುರೋಹಿತರು ಹೆಣ್ಣಿನ ತಂದೆ ತಾಯಿಗೆ ಹಾಲು -ನೀರು ಬಿಡುವಂತೆ ಸೂಚಿಸುತ್ತಾರೆ ಮತ್ತು ವರನ ಪಾದ ಪೂಜೆ ಮಾಡಿ ಕನ್ಯೆಯನ್ನು ಧಾರೆಯೆರೆಯುತ್ತಾರೆ.

ನಿಗದಿತ ವೇಳೆ ಬಂದಾಗ ಗಂಡಿನಿಂದ ಹೆಣ್ಣಿನ ಕೊರಳಿಗೆ ಮಾಂಗಲ್ಯವನ್ನು ಕಟ್ಟಿಸಿ ವಧೂವರರು ತೊಟ್ಟ ಉಡುಗೆಗೆ ಗಂಟು ಹಾಕಿ ಅವರನ್ನು ಒಂದು ಮಾಡುತ್ತಾರೆ. ಆಗಾಗಲೇ ಸೇರಿದ್ದ ಎಲ್ಲ ಸಂಬಂಧಿಕರಿಗೂ ಮಂತ್ರಾಕ್ಷತೆಯನ್ನು ನೀಡಿರುತ್ತಾರೆ. ಮಾಗಲ್ಯ ಆದ ತಕ್ಷಣವೇ ಗಂಡು ಹೆಣ್ಣಿನ ತಲೆಯ ಮೇಲೆ ಮಂತ್ರಾಕ್ಷತೆಯನ್ನು ಹಾಕುತ್ತಾರೆ. ಅನಂತರ ವಧೂ-ವರರಿಗೆ ಸೂರ್ಯ ನಮಸ್ಕಾರ ಮಾಡಿಸಿ ಮತ್ತೆ ಮಂಟಪದ ಒಳಗೆ ಕರೆತಂದು ಕುರ್ಚಿಯ ಮೇಲೆ ಕೂರಿಸುತ್ತಾರೆ. ನಂತರ ವಧೂ-ವರರು ಮದುವೆಯ ಉಡುಪನ್ನು ಬದಲಾಯಿಸಿಕೊಂಡು ಅಲಂಕರಿಸಿದ ಮಂಟಪಕ್ಕೆ ಬಂದು ಕೂಡುತ್ತಾರೆ. ಗಂಡು ಮದುವೆಗೆಂದೇ ತಂದಿದ್ದ ಶೂಟು ಬೂಟು ಧರಿಸಿಕೊಂಡಿರುತ್ತಾನೆ. ಹೆಣ್ಣು ರೇಷ್ಮೆ ಸೀರೆ ಇನ್ನಿತರ ಮೌಲ್ಯವಾದಂತಹ ಉಡುಪುಗಳನ್ನು ಧರಿಸಿಕೊಂಡು ಬರುತ್ತಾರೆ. ಈ ಸಮಯದಲ್ಲಿ ಮದುವೆಗೆ ಬಂದ ಎಲ್ಲರೂ ಮಂತ್ರಾಕ್ಷತೆಯನ್ನು ಅವರ ಮೇಲೆ ಹಾಕಿ ತಮ್ಮ ಕೈಯಿಂದ ಹಣವನ್ನು ಕೊಟ್ಟು ಅದಕ್ಕೆಂದೇ ಕುಳಿತ ಒಬ್ಬನಲ್ಲಿ ತಮ್ಮ ಹೆಸರು ಮತ್ತು ಹಣವನ್ನು ಕೊಟ್ಟು ಬರೆಸುತ್ತಾರೆ. ಇದಕ್ಕೆ ಮುಯ್ಯಿ ಎಂದು ಕರೆಯುತ್ತಾರೆ. ಮುಯ್ಯಿ ಮುಗಿದ ನಂತರ ಮದುಮಕ್ಕಳು ಧಾರಾಮಂಟಪದಿಂದ ಹೊರಗೆ ಬರುತ್ತಾರೆ. ಈ ಪ್ರತ್ಯೇಕಿಸಲಾದ ಸ್ಥಳ, ಕಾಲ ಮತ್ತು ಗಂಡು ಹೆಣ್ಣುಗಳು ಒಂದು ಹಂತದಲ್ಲಿ ಐಕ್ಯರಾಗುವುದಕ್ಕೆ ಮುಖ್ಯವಾದ ಎರಡು ಉದ್ದೇಶಗಳಿರಬಹುದು. ದಂಪತಿಗಳ ಭವಿಷ್ಯದಲ್ಲಿ ಒಳಿತಾಗಲಿ ಎಂಬ 'ಮಂಗಳದ ಕಲ್ಪನೆ' ಇದು ಅಲೌಕಿಕ ಸ್ವರೂಪದಲ್ಲಿಲ್ಲ. ಮುಂದಿನ ದಾಂಪತ್ಯದಲ್ಲಿ ಕೆಡಕಾಗದೆ ಇರಲಿ ಎಂಬ ಸದಾಶಯ ಹೊಸ ತಲೆಮಾರಿನ ಜೀವನ ಕ್ರಮಕ್ಕೆ ಸಂಬಂಧಿಸಿದೆ. ತಾಳಿ ಕಟ್ಟಿದ ನಂತರ ವಧೂವರರು ಹೆಂಡತಿ ಮತ್ತು ಗಂಡರಾಗಿ ಮಾರ್ಪಡುವುದರಿಂದ ವಂಶಾಭಿವೃದ್ಧಿಗೆ ಅನುಮತಿ ದೊರೆಯುತ್ತದೆ. ಪರೋಕ್ಷವಾಗಿ ಉತ್ತರಾಧಿಕಾರಿಯ ನೇಮಕಾತಿ ನಡೆಯುತ್ತದೆ. ಅಂದು ನೆರೆದವರೆಲ್ಲಾ ಸಾಕ್ಷಿಗಳಾಗುತ್ತಾರೆ. ಇದು ಮಹೂರ್ತಕ್ಕೆ ಇರುವ ಆರ್ಥಿಕ ಮತ್ತು ಸಾಮಾಜಿಕ ಆಯಾಮವಾಗಿದೆ.

ಮಾಂಗಲ್ಯ ಮುಗಿದ ತಕ್ಷಣವೇ ಅಲ್ಲಿ ಬಂದವರಿಗೆ ಊಟವಿರುತ್ತದೆ. ಊಟ ಮುಗಿದ ಕ್ಷಣವೇ ಬಂದ ಅತಿಥಿಗಳೆಲ್ಲಾ ಅವರವರ ಊರಿಗೆ ಹಿಂತಿರುಗುತ್ತಾರೆ. ನಂತರ ಗಂಡು ಹೆಣ್ಣು ಎಲ್ಲಾ ಕಾರ್ಯಕ್ರಮಗಳು ಮುಗಿದ ಮೇಲೆ ಊಟ ಮಾಡುತ್ತಾರೆ. ಈ ವೈಶ್ಯರಲ್ಲಿ ಸಾಮಾನ್ಯವಾಗಿ ವಿವಾಹವು ಹೆಣ್ಣಿನ ಕಡೆಯವರೇ ನೆರವೇರಿಸುತ್ತಾರೆ. ವೈಶ್ಯರಲ್ಲಿ ಪ್ರಸ್ಥವು ಮದುವೆಯ ದಿನದಂದೇ ನಡೆಯುತ್ತದೆ. ಎಲ್ಲಾ ಸಮುದಾಯಗಳಲ್ಲಿ ೧೬ ದಿವಸ ಇಲ್ಲವೇ ಮೂರು ತಿಂಗಳಲ್ಲಿಯೋ ನಡೆಯುತ್ತದೆ. ಆದರೆ ವೈಶ್ಯರಲ್ಲಿ ಮದುವೆಯ ದಿನವೇ ಪ್ರಥಮ ರಾತ್ರಿಯನ್ನು ಮುಗಿಸುತ್ತಾರೆ. ಸಂಜೆಯವರೆಗೆ ಹೆಣ್ಣಿನ ಜೊತೆಗೆ ಅಕ್ಕ-ತಂಗಿಯರು ಅಣ್ಣ -ತಮ್ಮಂದಿರು ಗಂಡಿನ ಜೊತೆಗೂಡಿ ಕಾಲ ಕಳೆಯುತ್ತಾರೆ.

ಅಕ್ಷತಾರೋಪಣೆ

ವಧುವು ಪೂರ್ವಾಭಿಮುಖವಾಗಿಯೂ ವರನು ಪಶ್ಚಿಮಾಭಿಮುಖವಾಗಿಯೂ ನಿಂತಿರುತ್ತಾರೆ. ವರನು ತನ್ನ ಎರಡು ಅಂಗೈಗಳನ್ನು ಹಾಲಿನಲ್ಲಿ ಅದ್ದಿ ವಧುವಿನ ಎರಡು ಅಂಗೈಗಳಿಗೂ ವರನು ಸವರುತ್ತಾನೆ.

ಅನಂತರ ಹೆಂಡತಿಯ ಬೊಗಸೆಯಲ್ಲಿ ಅಕ್ಕಿಯನ್ನು ಹಾಕುತ್ತಾನೆ. ವರನು ಕೂಡ ಬೊಗಸೆಯಲ್ಲಿ ಅಕ್ಕಿಯನ್ನು ಹಾಕಿಕೊಳ್ಳುತ್ತಾನೆ. ಹೆಂಡತಿಯ ಬೊಗಸೆಯ ಮೇಲೆ ಗಂಡನು ಬೊಗಸೆಯ ನೀಡುತ್ತಾನೆ. ಅದರ ಮೇಲೆ ನೀರಿನ ಕಲಶವನ್ನಿಡುತ್ತಾರೆ. ಪುಣ್ಯವು ಹೆಚ್ಚಲಿ, ಶಾಂತಿಯಾಗಲಿ, ಪುಷ್ಟಿಯಾಗಲಿ, ಸಂತೋಷವಾಗಲಿ, ಏಳಿಗೆಯಾಗಲಿ, ವಿಘ್ನಗಳಾಗದಿರಲಿ, ಆಯಸ್ಸು ಹೆಚ್ಚಲಿ, ಆರೋಗ್ಯವುಂಟಾಗಲು ಮಂಗಳವಾಗಲಿ, ಕಾರ್ಯವು ಪೂರ್ಣವಾಗಲಿ, ದಂಪತಿಗಳ ಜನ್ಮ ನಕ್ಷತ್ರಗಳು ಗ್ರಹಗಳು ಮತ್ತು ದೇವತೆಗಳು ಶಾಂತಿಯನ್ನುಂಟು ಮಾಡಲಿ. ದಂಪತಿಗಳಿಗೆ ಸುಖ ಸಂತೋಷವುಂಟಾಗಲಿ, ಸಂತಾನವಾಗುವುದರಿಂದ ಸಮಾಧಾನವಾಗಲಿ ಎಂದು ವೈಶ್ಯ ಸಮುದಾಯದ ಹಿರಿಯರು ಆಶೀರ್ವಧಿಸುತ್ತಾರೆ. ಬಳಿಕ ಕಲಶವನ್ನು ತೆಗೆದು ವರನ ಬೊಗಸೆಯಲ್ಲಿರುವ ಅಕ್ಕಿಯನ್ನು ಮೊದಲು ವಧುವಿನ ತಲೆಯ ಮೇಲೆ ಅನಂತರ ವಧುವು ವರನ ತಲೆಯ ಮೇಲೂ ಹಾಕುತ್ತಾರೆ. ಎರಡನೆಯ ಸಾರಿ ವಧುವು ಬೊಗಸೆಯಲ್ಲಿ ತೆಗೆದುಕೊಂಡು ಅಕ್ಕಿಯನ್ನು ಮೊದಲು ವರನ ತಲೆಯ ಮೇಲೂ ಆಮೇಲೆ ವರನು ವಧುವಿನ ತಲೆಯ ಮೇಲೂ ಹಾಕುತ್ತಾರೆ. ಮೂರನೆಯ ಸಾರಿ ವರನ ಬೊಗಸೆಯಲ್ಲಿ ತೆಗೆದುಕೊಂಡ ಅಕ್ಕಿಯನ್ನು ಮೊದಲು ವಧುವಿನ ತಲೆಯ ಮೇಲೂ ಆಮೇಲೆ ವಧು ವರನ ತಲೆಯ ಮೇಲೆ ಹಾಕುತ್ತಾರೆ. ನಾಲ್ಕನೆಯ ಸಾರಿಯೂ ಅದೇ ರೀತಿಯಾದ ಬೊಗಸೆಯಲ್ಲಿ ತೆಗೆದುಕೊಂಡ ಅಕ್ಕಿಯನ್ನು ಒಟ್ಟಿಗೆ ಒಬ್ಬರ ತಲೆಯ ಮೇಲೆ ಮತ್ತೊಬ್ಬರು ಹಾಕುತ್ತಾರೆ.

ಸಭಾಪೂಜೆ

ವೈಶ್ಯ ಸಮುದಾಯವದವರು ಅಕ್ಷತಾರೋಪಣೆಯಾದ ಮೇಲೆ ನವ-ದಂಪತಿಗಳು ಹಸೆ ಮಣೆ ಮೇಲೆ ಕುಳಿತು ಕೊಳ್ಳುತ್ತಾರೆ. ಅವರಿಬ್ಬರ ಸೆರಗನ್ನು ಗಂಟು ಹಾಕುತ್ತಾರೆ. ವಧೂ ವರರ ತಂದೆ ತಾಯಿಗಳು ಕೂಡ ಹಸೆ ಮಣೆಯ ಮೇಲೆ ಕುಳಿತುಕೊಳ್ಳುತ್ತಾರೆ. ಅವರಿಗೆ ಫಲ ತಾಂಬೂಲವನ್ನು ಕೊಟ್ಟು ವೈಶ್ಯ ಮುತ್ತೈದೆಯರು ಆರತಿ ಬೆಳಗುವರು. ನವ ದಂಪತಿಗಳನ್ನು ಬಿಟ್ಟು ಉಳಿದವರು ಹಸೆಯನ್ನು ಬಿಟ್ಟು ಬೇರೆ ಕಡೆ ಹೋಗುತ್ತಾರೆ.

ಸಪ್ತಪದಿ

ವರನು ಪ್ರಾಣಾಯಾಮ ಮಾಡಿ ಆಗತಾನೆ ಮದುವೆಯಾದ ವಧುವಿನೊಂದಿಗೆ ವಿವಾಹ ಪ್ರಧಾನ ಹೋಮವನ್ನು ಮಾಡುವೆನು ಎಂದು ಸಂಕಲ್ಪ ಮಾಡುತ್ತಾನೆ. ಅಗ್ನಿಯನ್ನು ಸ್ಥಾಪಿಸಿದ ಮೇಲೆ ವರನು ನಿಂತು ವಧುವಿನ ತಲೆಯ ಮೇಲೆ ಅಂಗೈಯನ್ನಿಡುತ್ತಾನೆ. ಆಗ ಪುರೋಹಿತರು "ಸೋಮ ಪ್ರಥಮ, ವಧುವೇ ನಿನ್ನನ್ನು ಮೊದಲು ಸೋಮನು ಮದುವೆಯಾದನು ಬಳಿಕ ಗಂಧರ್ವನು ಮದುವೆಯಾದನು. ಮೂರನೆಯ ಗಂಡ ಅಗ್ನಿ, ನಾಲ್ಕನೆಯ ಗಂಡ ಮನುಷ್ಯ ಸೋಮನು ನಿನ್ನನ್ನು ಗಂಧರ್ವನಿಗೆ ಕೊಟ್ಟನು. ಗಂಧರ್ವನು ಅಗ್ನಿಗೆ ಕೊಟ್ಟನು. ಸಂತಾನವನ್ನು ಪಡೆಯುವುದಕ್ಕಾಗಿ ಅಗ್ನಿಯು ನನಗೆ ಕೊಟ್ಟಿರುವನು" ಎಂಬ ಮಂತ್ರವನ್ನು ಹೇಳುತ್ತಾರೆ. ಅಗ್ನಿಯು ಪಶ್ಚಿಮದಲ್ಲಿ ಸಾಣೆಕಲ್ಲು-ಅತ್ನಯ ಎಡ ಭಾಗದಲ್ಲಿ ಗೌರಿಯನ್ನು ಇಡುತ್ತಾರೆ.

[illegible]

[illegible]

[illegible]

[illegible]

[illegible]

[illegible]

ಅಗ್ನಿಗೆ ಈಶಾನ್ಯದಲ್ಲಿ ಅಕ್ಕಿಯ ಏಳು ರಾಶಿಗಳನ್ನು ಮಾಡಿರುತ್ತಾರೆ. ವರನು ತನ್ನ ಬಲ ಅಂಗೈಯಿಂದ ವಧುವಿನ ಬಲ ಅಂಗೈಯನ್ನು ಹಿಡಿದು 'ಗೃಬ್ಣಾಮಿ' ಐಶ್ವರ್ಯ ಸಂತಾನಾಧಿ ಸೌಭಾಗ್ಯ ಪ್ರಾಪ್ತಿಗಾಗಿ ಪರಮಾತ್ಮನನ್ನು ಪ್ರಾರ್ಥಿಸುತ್ತಾ ವರನು ವಧುವಿನ ಕೈಯನ್ನು ಹಿಡಿಯುತ್ತಾನೆ. ನಂತರ ಅಕ್ಕಿಯ ರಾಶಿಗಳ ಹತ್ತಿರ ವಧು ವರರನ್ನು ಕರೆದುಕೊಂಡು ಬರುತ್ತಾರೆ. ಅಕ್ಕಿಯ ಏಳು ರಾಶಿಗಳ ಮೇಲೆ ಅವಳನ್ನು ಪೂರ್ವಾಭಿಮುಖವಾಗಿಯೋ ಉತ್ತರಾಭಿಮುಖವಾಗಿಯೋ ನಡೆಸುತ್ತಾನೆ.

ಅವಳು ಮೊದಲನೆಯ ಹೆಜ್ಜೆಯನ್ನು ಇಟ್ಟಾಗ-ಇಷ ಏಕಪದೀಭವ ಗೃಹ ರಕ್ಷಕಳಾಗು ಎಂದು.

ಎರಡನೆಯ ಹೆಜ್ಜೆಯನ್ನು ಇಟ್ಟಾಗ-ಊರ್ಜೆ ದ್ವಿಪದೀಭವ ಶಕ್ತಿವಂತಳಾಗು.

ಮೂರನೆಯ ಹೆಜ್ಜೆಯನ್ನು ಇಟ್ಟಾಗ-ವೃತಾಯ ತ್ರಿಪದೀಭವ ನನ್ನ ನಿಯಮಗಳೇ ನಿನ್ನ ನಿಯಮಗಳಾಗಲೀ.

ನಾಲ್ಕನೆಯ ಹೆಜ್ಜೆಯನ್ನು ಇಟ್ಟಾಗ-ಮಯೋಭವಾಯ ಚತುಷ್ಪದೀಭವ ಆರೋಗ್ಯ ಸಾಧಕಳಾಗ ಎಂದು.

ಐದನೆಯ ಹೆಜ್ಜೆಯನ್ನು ಇಟ್ಟಾಗ-ಪ್ರಜಾಭ್ಯ: ಪಂಚಪದೀಭವ ಮಕ್ಕಳನ್ನು ಪಡೆ ಎಂದು.

ಆರನೆಯ ಹೆಜ್ಜೆಯನ್ನು ಇಟ್ಟಾಗ-ಋತಭ್ಯ: 'ಷಟ್‌ಪದೀಭವ ಋತು ನಿಯಮಗಳನ್ನು ಕಾಪಾಡು' ಎಂದು.

ಏಳನೇಯ ಹೆಜ್ಜೆಯನ್ನು ಇಟ್ಟಾಗ -'ಸಖಾ ಸಪ್ತಪದೀಭವ ನನ್ನ ಬಾಳ ಗೆಳತಿಯಾಗು' ಎಂದು

ಸಖಾಸಪ್ತ ಪದಾಭವ-ವರನೇ ನೀನು ನನ್ನೊಂದಿಗೆ ಏಳು ಹೆಜ್ಜೆ ಇಟ್ಟಿರುವುದರಿಂದ ಈ ಪರಮ ಮಿತ್ರಳಾದೆ ನಮ್ಮಿಬ್ಬರ ಸ್ನೇಹ-ವಿಯೋಗವು ಎಂದೆಂದಿಗೂ ಅಗಲದಿರಲಿ ನಾವಿಬ್ಬರು ಹೊಂದಿಕೊಂಡು ಸತ್ಕರ್ಮಗಳನ್ನು ಮಾಡಿ ಒಳ್ಳೆಯ ಕೀರ್ತಿಯನ್ನು ಹೊಂದಿ ಕೂಡಿಬಾಳಬೇಕು. ನಮ್ಮ ಅಂತರಂಗ ಮತ್ತು ಬಹಿರಂಗ ವ್ಯಾಪಾರಗಳಲ್ಲಿ ಸಾಮರಸ್ಯವುಂಟಾಗಿ ಒಳ್ಳೆಯ ಸಂತಾನವನ್ನು ಪಡೆಯೋಣ ಎಂದು ವೈಶ್ಯ ಸಮುದಾಯದಲ್ಲಿ ಈ ಸಪ್ತಪದಿಯ ಉದ್ದೇಶವಾಗಿದೆ ಎಂದು ಅವರ ನಂಬಿಕೆ.

ವಿವಾಹ ಹೋಮ

ವೈಶ್ಯರಲ್ಲಿ ಹೋಮಕ್ಕೆ ಆದ್ಯತೆ ನೀಡುತ್ತಾರೆ. ಮಾಂಗಲ್ಯಧಾರಣೆ ಮುಗಿದ ನಂತರ ನೂತನ ವಧೂವರರು ಹೋಮ ಪೂಜೆಗೆ ಕೂಡುತ್ತಾರೆ. ಮೊದಲು ಹೋಮಕ್ಕೆ ಅಗ್ನಿ ಕುಂಡವನ್ನು ಪುರೋಹಿತರು ಶಾಸ್ತ್ರೋಕ್ತರವಾಗಿ ಇಟ್ಟಿಗೆ ಮೂಲಕ ನಿರ್ಮಾಣ ಮಾಡುತ್ತಾರೆ. ಈ ಅಗ್ನಿ ಕುಂಡದಲ್ಲಿ ಹೋಮಕ್ಕೆ ಗಂಧದ ಕಟ್ಟಿಗೆ ಮತ್ತು ತುಪ್ಪದ ಮೂಲಕ ಈ ಪೂಜೆಯನ್ನು ಮಾಡುತ್ತಾರೆ. ವಧುವರರು ಸಪ್ತಪದಿಯನ್ನು ತಿರುಗುತ್ತಾರೆ. ಈ ಪೂಜೆಯ ಉದ್ದೇಶ ಈ ಮಂಗಳ ಕಾರ್ಯದಲ್ಲಿ ಶಾಂತಿ ಲಭಿಸಲಿ ಹಾಗೂ ಮುಂದಿನ ಜೀವನದಲ್ಲಿ ಯಶಸ್ಸು ದೊರಕಲಿ ಎಂದು ಈ ಪೂಜೆಯನ್ನು ಮಾಡಿಸುತ್ತಾರೆ. ಈ ಹೋಮ ವಿಶಿಷ್ಟವಾದದ್ದಾಗಿರುತ್ತದೆ. ಮದುವೆ ದಿನ ಇದನ್ನು ಮಾಡುತ್ತಾರೆ. ಇದಕ್ಕೇ ಆದಂತಹ ಶ್ಲೋಕವನ್ನು ನೋಡಬಹುದು. ವರೋ ವೇದ್ಯಾಂ ಪ್ರಾಙ್ಮುಖ

ಉಪದಿಶ್ಯ ಸ್ವದಕ್ಷಿಣತೋ ನಿಯಮಿತ ವಾಚಂ ವಧೂಂಚ ಉಪ ವಿಶ್ವದವರಾಚಮ್ಮ ಪ್ರಾಣನಾಯಮ್ಮ ದೇಶಕಾತಾ ಸಂಕೀರ್ತ್ಯ ಪ್ರತಿ ಗೃಹಿತಾಯಾ ಮಸ್ಯಾಂ ವದ್ವಾಂ ಭಾರ್ಯತ್ವಸಿದ್ವಯ ಗೃಹಾಗ್ನಿ ಸಿದ್ವಯಚ ವಿವಾಹ ಹೋಮಂ ಕರೀಷ್ಯೆ॥

ತದಂಗ ಸ್ಥಿಂಡಿಲೋಲ್ಲೇಖನಾದಿ ಯೋಜಕ ನಾಮಾಗ್ನಿ ಪ್ರತಿಷ್ಠಾಪನಾಂತಂ ಕೃತ್ವಾ ಅಗ್ನೇಃ

ಪ್ರತ್ಯಗ್ಪಷ್ಯದಂ ಸೋವಲಾಂ ಪ್ರತಿಷ್ಠಾಪ್ಯ ಪ್ರಾಗುದೀಚ್ಯಾಂ ಧಾನ್ಯರಾಶರುಪರಿ ಉದಕೆ. ಪೂರ್ಣ ಕುಂಭಂ ವಿಧಾಯ ತಲ ಪಲ್ಲವೈರವೆಧಾಯ್ಯ ಗಂಧ ಪುಷ್ಪೈರಲಂಕೃತ್ಯ ಉದಗಗ್ನೆ ಪ್ರಾಕ್ಷಂಸ್ಥಂ ಸಪ್ತತಂಡುಲ ರಾಶೀನುಪಕಲ್ಪ್ಯ ನಮ್ಮಿದ್ಧ್ವಯ ಮಾದಾಯ ದೇಶಕಾತಾ ಸಂಕೀರ್ತ್ಯ ಕ್ರಿಯಾಮಾಣೆ ವಿವಾಹ ಹೋಮೇ ದೇವತಾ ಪರಿಗ್ರರಾರ್ಥ ಮಿತ್ಯದ್ಯಾಕ್ಷಾರಾವಾ ಜ್ಯೇನ॥ ಅತ್ರ ಪ್ರಧಾನಮ ತ್ರಿರಗ್ನೇಂ ಪವಮಾನೆಂ ಸಕೃದಗ್ನಂ ಪ್ರಜಾಪತಿಂ ಚಾಜ್ಯೆನ ಆರ್ಯಮಾಗ್ನಿಂ ವರೋನಾಗ್ನಿಂ ಪೊಷಗ್ನಂ ಪ್ರಜಾಪತಿಂ ಚ ರಾಜದ್ರವ್ಯಣ ಶೇಷಣ ಸ್ಪಿಷ್ಟಿಕೃತಂ ಇತ್ಯಾದಿ ಷಟ್ ಪಾತ್ರಾ ಸಾಧನಾಂತ ಕೃತ್ವಾ ಪಾತ್ರ ಪಶ್ಚಿಮಾತೋ ಲಾಜಸೋರ್ಪಮಾ ಸಾಧ್ಯ ಅಜ್ಯಾಧಿಶ್ರಯ ಣಾಂತಂ ಕೃತಜಂ ಲಾಜೈಃ ಸಹ ತ್ರಿ ಪರ್ಯಾಗ್ನಿ ಕೃತ್ವಾ ಅಜ್ಯೋತ್ವವ ಸಿ ಕೃತೆ ಲಾಜಾನ್ ತ್ರಿಃ ಪ್ರೋಷ್ಯೇ ಬರ್ಹರಾಸ್ತ ರಣಾದ್ಯಾಷಾರ ಹೋಮಂತಂ ಕೃತ್ವಾ ॥ ಅಗ್ನೇ ಪೋಮೌ ಚಕ್ಷುಕೀ ನಸ್ತಃ ॥ ಅತ್ರ ಪ್ರಧಾನ ಹೋದು ಅಗ್ನ ಅಯೂಂಕ್ಷೀತಿ ತಿಸೃಣಾ ಶತಂ ವೈಖಾನಸಾ ಋಷಯಃ ಅಗ್ನೇ ಪವಮಾನೋ ದೇವತಾ ಗಾಯತ್ರೀ ಛಂದಃ ವಿವಾಹ ಪ್ರಧಾನಾಜ್ಯ ಹೋಮೇ ವಿನಿಯೊಗ, ಪಿತ್ರಾ ಪ್ರತ್ತಾಮಾದಾಯ ನಿಷ್ಕಾಮತಿ॥ ಯದೈಷೆ ಅಥರ್ವಣೋನುಷ್ಟುಪ್ ಲಿಂಗೋಕ್ತಾ ನಿಷ್ಕ್ರಮಣೆವಿನಿಯೋಗೆ.

ಓಂ ಯದೈಷೆ ಮನಸಾ ದೊರಂ ದಿಶೋನು ಪವಮಾನೊವಾ ॥ ಹಿರಣ್ಯ ಪರ್ಣೋ ಪೈಕರ್ಣ ಸತ್ವಾ ಮನ್ ಮನಸಾಂ ಕರೋತ್ವಸಾ ॥ ಅಸಾವಿತ್ಯತ್ರ ಕಮಾರ್ಯ ಸಂಭುಧ್ಯಂತಂ ನಾಮಗ್ರಹಣಮ್ ವಿಷ್ಕ್ರಮಣ ಪ್ರಭೃಉತೆ ಕೋದೃಢ ಪುರುಷ ಉದಕುಂಭಂ ಕೃತ್ವಾ ಅಗ್ನೇರ್ದಕ್ಷಿಣತೋ ವಾಗ್ಯತೆ ಸ್ಥಿರೋಭವತ್ಯಭಿಷೇಕ ಪರ್ಯಂತಂ ಉತ್ತರತೊವಾ ಅಥ ವನೌ ವೇದಿಸಮೀಪಲ ಗತಾ ವಧೂವರೌ ಪ್ರೀಕ್ಷಯಲೆ ಪಿತಾ "ಪರಸ್ಪರು ಸಮೀಕ್ಷೇಥಾ" ಮಿಲಿ ॥ ತತಸ್ತಾ ವಧೂವರೂ ಪರಸ್ಪರಲಿ ಸಮೀಕ್ಷ್ಣಂ ಕುರುತಃ ಸತ್ರ ಮಂತ್ರಾಃ ಓಂ ಅಘೋರ ಚಕ್ಷಂ ಅಪತ್ಯಘೇದಿ ಶಿವಾ ಪಸುಭ್ಯಃ ಸುಮನಾ ಸುವರ್ಚ್ಚಾ ಈ ರೀತಿಯಾಗಿ ಪುರೋಹಿತರು ವಧು ವರವಿನ ಜೊತೆ ಹೋಮ ಪೂಜೆಯನ್ನು ಮಾಡುತ್ತಾರೆ.

ಕಾರ್ಯ

ವೈಶ್ಯ ಸಮುದಾಯದಲ್ಲಿ ಈ ಕಾರ್ಯ ಮದುವೆಯ ದಿನವೇ ನಡೆಯುತ್ತದೆ. ಅದೇ ದಿನ ಸಂಜೆ ವಧುವಿನ ತಂಗಿ ಕೋಣೆಯಲ್ಲಿ ಹಾಸಿಗೆ ಸಿದ್ಧಪಡಿಸಿ ಬರುತ್ತಾಳೆ. ಆ ಕೋಣೆಯನ್ನು ಅನೇಕ ಹೂವಿನ ಅಲಂಕಾರಗಳಿಂದ ಸಿದ್ಧಪಡಿಸಿರುತ್ತಾರೆ. ಸೋಬಾನ ಅಥವಾ ಪ್ರಥಮರಾತ್ರಿ ಗಂಡು ಹೆಣ್ಣುಗಳ ಜೀವನದ ಬಹುಮುಖ್ಯ ಹಾಗೂ

[illegible]

[illegible]

[illegible]

[illegible]

ಮನಸೆಳೆಯುವ ಕಾರ್ಯ ಇದಾಗಿದೆ. ಬದುಕಿನ ನಿಜವಾದ ತಿರುವು ಇಲ್ಲಿಂದಲೇ ಪ್ರಾರಂಭ. ಇವರಿಬ್ಬರ ಸಂಭ್ರಮದ ಘಟ್ಟ ಎನ್ನಬಹುದು. ಮೈ ನೆರೆದಾಗ ಹೆಣ್ಣಿಗೆ ಭಯ, ನಡುಕ ಜವಾಬ್ದಾರಿಯ ಭೀತಿ. ಮದುವೆಯಾಗುವಾಗ ಒಮ್ಮೊಮ್ಮೆ ಸಂತೋಷವಾದರು ತವರು ಮನೆಯಿಂದ ಗಂಡನ ಮನೆಗೆ ಬರಬೇಕಾಯಿತಲ್ಲ ಎಂಬ ಕೊರಗು ಏನೇನೋ ಅನುಮಾನಗಳು, ದುಃಖ ದುಮ್ಮಾನಗಳು ಹೆಣ್ಣನ್ನು ಆವರಿಸಿರುತ್ತದೆ. ಮೊದಲ ರಾತ್ರಿಯ ಸಮಾಗಮದಲ್ಲಿಯೂ ಹೆಣ್ಣಿನ ಒಳಗೊಳಗೆ ಹೆದರಿಕೆ, ಭಯ, ಭೀತಿ ಇಲ್ಲದಿಲ್ಲ. ಅವೆಲ್ಲಾ ಗಂಡನನ್ನು ಅರ್ಥಮಾಡಿಕೊಂಡ ಕ್ಷಣದಲ್ಲಿ ಮಾಯವಾಗುತ್ತದೆ.

ಒಂದು ಕೋಣೆಯಲ್ಲಿ ಅಲಂಕರಿಸಿ ಹೆಣ್ಣಿನ ಮನೆಯವರು ತಂದಿದ್ದ ಹಾಸಿಗೆಯನ್ನು ಸಿದ್ಧಮಾಡಿ ಹಾಕಲಾಗುತ್ತದೆ. ಆರತಿ ತಟ್ಟೆ, ನೀರು ಹಣ್ಣು ಹಂಪಲು ಇಟ್ಟಿರುತ್ತಾರೆ. ಮದುಮಗಳು ಹಾಲನ್ನು ಹಿಡಿದುಕೊಂಡು ಮುತ್ತೈದೆಯರೊಟ್ಟಿಗೆ ಕರೆತಂದು ಕೋಣೆಯೊಳಗೆ ಕಳುಹಿಸಿ ಬಾಗಿಲು ಹಾಕಿಕೊಳ್ಳುವರು. ಇದು ವೈಶ್ಯರಲ್ಲಿ ನಡೆಯುವ 'ಕಾರ್ಯ'ವಾಗಿರುತ್ತದೆ.

ಗೃಹ ಪ್ರವೇಶ

ಗಂಡು ಹೆಣ್ಣಿನ ಮನೆಯಲ್ಲಿ ಎಲ್ಲಾ ಕಾರ್ಯಗಳನ್ನು ಮುಗಿಸಿಕೊಂಡು ಕೆಲವು ದಿನಗಳ ನಂತರ ಮದುವೆಗೆ ಹೆಂಡತಿಯನ್ನು ಮನೆ ತುಂಬಿಸಿಕೊಳ್ಳಲು ಬರುತ್ತಾನೆ. ಅಂದಿನ ದಿನ ಗಂಡಿನ ಮನೆಯವರು ಬಾಗಿಲ ಪಕ್ಕಕ್ಕೆ ದೀಪ ಹಚ್ಚಿಟ್ಟು ಪ್ರಧಾನ ಬಾಗಿಲ ಮಧ್ಯದಲ್ಲಿ ಬಂದು ಸಿದ್ದಕ್ಕಿ ತುಂಬಿಟ್ಟು ಬಾಗಿಲ ಎರಡೂ ಬದಿಗೆ ಎಲೆ ಅಡಿಕೆ ಇಟ್ಟಿರುತ್ತಾರೆ. ವಧೂವರರು ಬಂದ ಕೂಡಲೇ ಅವರಿಗೆ ದೃಷ್ಟಿ ತೆಗೆದು ಚಲ್ಲುತ್ತಾರೆ. ಹೆಣ್ಣು ಮನೆಯನ್ನು ಪ್ರವೇಶ ಮಾಡುವಾಗ ಬಲಗಾಲ ಮುಂದಿಟ್ಟು ಒಳಗೆ ಪ್ರವೇಶಿಸಬೇಕು ಪ್ರಧಾನ ಬಾಗಿಲಲ್ಲಿ ತುಂಬಿಟ್ಟ ಆಸಕ್ತಿಯನ್ನು ಕಾಲಿನಿಂದ ತೂರಿ ಒಳಗೆ ಹೋಗಬೇಕು. ಇದರ ರೀತಿ ಮೂರು ಸಾರಿ ನಡೆಯುತ್ತದೆ. ಹೆಣ್ಣಿಗೆ ಮುತ್ತೈದೆಯರು ಮದುಮಗ ಮತ್ತು ಮೊದಲಗಿತ್ತಿಯ ಆರತಿ ಮಾಡಿ ಮನೆ ತುಂಬಿಸಿಕೊಳ್ಳುತ್ತಾರೆ.

ಹೊಸಲಿಗೆ ಮಳೆ ಹೊಡೆಯುವುದು

ಮೊದಲಗಿತ್ತಿ ಪ್ರಪ್ರಥಮವಾಗಿ ಮನೆಯನ್ನು ಪ್ರವೇಶ ಮಾಡುವಾಗ ಆ ವೇಳೆಯಲ್ಲಿ ತನ್ನ ಬಲಗಾಲನ್ನು ಇಟ್ಟು ಮನೆಯನ್ನು ಪ್ರವೇಶ ಮಾಡಬೇಕಾಗುತ್ತದೆ. ಹಾಗೆ ಮಾಡುವಾಗ ಬಲಭಾಗದ ಪಾದದ ಹೆಬ್ಬೆರಳಿನ ಸಂದಿಯಲ್ಲಿ ಹೊಸಲಿಗೆ ಮಳೆಯನ್ನು ತನ್ನ ಗಂಡ ಹೊಡೆಯುತ್ತಾನೆ. ಅಂದಿನಿಂದ ಆ ಹೆಣ್ಣಿಗೆ ಮನೆಯಲ್ಲಿ ಅಧಿಕಾರ ಸಿಕ್ಕಿತು. ಕೆಲವು ಸಂದರ್ಭದಲ್ಲಿ ಅತ್ತೆ ಸೊಸೆಯಲ್ಲಿ ಜಗಳ ಕಾದರೆ, ಸೊಸೆ ಹೀಗೆ ಹೇಳುತ್ತಾಳೆ. "ನಾನೇನು ನಿನ್ನ ಮಗನ ಜೊತೆ ಓಡಿ ಬಂದಿಲ್ಲ. ಹೊಸಲಿಗೆ ಮಳೆ ಬಡಿಸಿಕೊಂಡು ಬಂದೀನಿ".

ಮಡಿಲಕ್ಕಿ ಅಥವಾ ಉಡಿಯಕ್ಕಿ

ಮಡಿಲಕ್ಕಿಗೆ ಅನೇಕ ಹೆಸರುಗಳಿವೆ. ಮಡಿಲು ತುಂಬುವುದು, ಸುವಾಸಿನಿಯರ ಪೂಜೆ ಅನೇಕ ರೀತಿ

ಹೇಳುತ್ತಾರೆ. ಆದರೆ ಇದರ ಅರ್ಥ ಮಾತ್ರ ಮಡಿಲಕ್ಕಿ ತುಂಬುವುದು. ಈ ಶಾಸ್ತ್ರ ವೈಶ್ಯರು ಕಲ್ಯಾಣ ಮಂಟಪದಲ್ಲಿ ಮದುವೆಯ ದಿನದಿಂದ ಪ್ರಾರಂಭವಾಗುತ್ತದೆ. ಹೆಣ್ಣಿಗೆ ಮೊದಲು ಮಡಿಲು ತುಂಬುವುದು. ತಾಯಿ ವೈಶ್ಯರಿಗೆ ಇದನ್ನು ಮೊದಲು ತಾಯಿ ಜಗನ್ಮಾತೆಯ ಪ್ರಕೃತಿಯನ್ನು ತುಂಬುವುದರ ಮೂಲಕ ಮಕ್ಕಳಿಗೂ ಮಡಿಲು ತುಂಬುವುದರ ಪಾಠವನ್ನು ಕಲಿಸಿದ್ದಾಳೆ. ಮಡಿಲಕ್ಕಿಗೆ ಬೇಕಾಗುವ ಸಾಮಾನುಗಳು ಅಕ್ಕಿ, ಒಣಕೊಬ್ಬರಿ, ಅಡಿಕೆ, ಅರಿಷಿಣ, ಕೊಂಬು, ಮಂಗಳ ದ್ರವ್ಯಗಳು ಮತ್ತು ಚಕ್ಕುಲಿ, ಪಾಕದ ಕಡ್ಲೆ, ಹಾಲುಸಕ್ಕರೆ, ತಾಂಬೂಲ, ವೀಳ್ಯದ ಎಲೆ, ಬಾಳೆಹಣ್ಣು ಮತ್ತು ಮಂಗಳ ದ್ರವ್ಯಗಳಾದ ಅರಿಷಿಣ ಕುಂಕುಮ.

ಅಕ್ಕಿ

ಅಕ್ಕಿ ಇದು ಅನ್ನ ಬ್ರಹ್ಮ ಎಂದು ಯಾಕೆ ಹೇಳ್ತೀವಿ ಅಂದರೆ ಭತ್ತವು ತುಂಬಿದ ಮೇಲೆ ಬಾಗಿ ಭಗವಂತನಿಗೆ ನಾನು ನಿಮ್ಮಿಂದ ತುಂಬಿದ್ದೇನೆ ಎಂದು ವಂದಿಸುತ್ತದೆ. ಅಂದರೆ ಭತ್ತದ ತೆನೆಗಳು ಭಾಗುತ್ತವೆ. ಬೇರೆ ಯಾವುವು ಇದರಂತೆ ಭಾಗುವುದಿಲ್ಲ. ಆದ್ದರಿಂದ ಅಕ್ಕಿ ಅನ್ನ ಬ್ರಹ್ಮ ಮತ್ತು ಅಕ್ಕಿ ಚಂದ್ರ ಗ್ರಹವಿದ್ದಂತೆ ಚಂದ್ರ ಪೂರ್ಣತೆ. ಶಾಂತತೆಯ ಸಂಕೇತ. ಇವನು ಚಂಚಲತೆಯನ್ನು ಬಿಟ್ಟು ಪೂರ್ಣ ಸ್ಥಿತಿಯನ್ನು ತಲುಪಲಿ, ಶಾಂತಿಯಿಂದ ಇರಲಿ, ಆನಂದವಾಗಲಿ ಎಂಬ ಕಾರಣಕ್ಕೆ ಅಕ್ಕಿಯನ್ನು ಇಡುತ್ತೇವೆ. ಅಂದರೆ ಇಲ್ಲಿ ಅಕ್ಕಿ ಪರಿಪೂರ್ಣತೆಯ ಸಂಕೇತ ಹಾಗೂ ಇದು ಬೀಜೋತ್ಪತ್ತಿ ಅಂದರೆ ಎಲ್ಲಾ ಶುಭಕಾರ್ಯಗಳಲ್ಲೂ ಅಕ್ಕಿಯನ್ನು ಬಳಸುತ್ತಾರೆ. ಮಡಿಲಕ್ಕಿಗೆ ಪಂಚತತ್ವಗಳ ಸಂಕೇತವಾಗಿ ಐದು ಪಾವು ಅಕ್ಕಿಗಳನ್ನು ವೈಶ್ಯರು ಮಡಿಲು ತುಂಬುತ್ತಾರೆ.

ಬೆಲ್ಲ

ಬೆಲ್ಲ ಶಿವೆಯ ಸ್ವರೂಪ. ಆದ್ದರಿಂದ ಬೆಲ್ಲ ಇಡುತ್ತಾರೆ. ಬೆಲ್ಲದಂತೆ ನಮ್ಮ ಮನಸ್ಸು ಹಾಗೂ ಅಂತರಂಗವು ಶುದ್ಧವಾಗಿ ಸಿಹಿಯಾಗಿರಲಿ ಎಂದು ಅರ್ಥ.

ಕಾಯಿ

ಕಾಯಿ ಮೂರು ಕಣ್ಣುಗಳ ಮುಕ್ಕಣ್ಣನ ಸ್ವರೂಪ ಹಾಗೂ ಕಾಯಿಯ ಒಳಗೆ ನಿರ್ಮಲವಾದ ಗಂಗಾ ಜಲ ಇದೆ. ಇದು ಸ್ವಚ್ಛತೆಯ ಸಂಕೇತ. ಇಲ್ಲಿ ತೆಂಗಿನ ಕಾಯಿ ಶಿವನು. ಬೆಲ್ಲವು ಶಿವೆಯು ಆಗಿ ಶಿವಶಕ್ತಿಯರ ಸಮ್ಮಿಲನ ಆದ್ದರಿಂದ ಮಗಳ ಜೀವನವು ಸಿಹಿಯಾದ ಬೆಲ್ಲದಂತಿರಲಿ ಎಂದು ಬೆಲ್ಲವನ್ನೂ ಸಹ ಇಡುತ್ತಾರೆ.

ಬಾಳೆಹಣ್ಣು

ಇದು ಶುಭ್ರತೆಯ ಸಂಕೇತ. ಇದು ಕದಳೀ ಫಲವಾದ್ದರಿಂದ ಹೆಣ್ಣು ಮಕ್ಕಳಿಗೆ ಉಡಿ ತುಂಬಲು ಬಾಳೆಹಣ್ಣುಗಳನ್ನು ಇವರು ಬಳಸುತ್ತಾರೆ.

ಅರಿಶಿನ ಕೊಂಬು

ಅರಿಶಿನ ಕೊಂಬು ಅಂದರೆ ಶುಭದ ಸಂಕೇತ. ಅರಿಶಿಣವನ್ನು ಮುಖಕ್ಕೆ ಹಚ್ಚಿ ಕುಂಕುಮದ ಬಟ್ಟು

ಇಟ್ಟುಕೊಂಡರೆ ಎಂತಹವರಿಗೂ ಪೂಜ್ಯಭಾವನೆ ಬರುತ್ತದೆ. ಅರಿಶಿಣವನ್ನು ಅನೇಕ ರೀತಿಯಲ್ಲಿ ಉಪಯೋಗಿಸಬಹುದು.

ಸೀರೆ ಕುಪ್ಪಸ

ಸೀರೆ ಕುಪ್ಪಸ ಕೊಟ್ಟು ಮಡಿಲು ತುಂಬಿದರೆ ಹೊಸ ಸೀರೆ ಕುಪ್ಪಸ ತೊಟ್ಟ ಹೆಣ್ಣು ಮಕ್ಕಳು ತವರು ಚನ್ನಾಗಿರಲಿ ಎಂದು ಹಾರೈಸುತ್ತಾರೆ. ಒಟ್ಟಿನಲ್ಲಿ ಮಡಿಲಕ್ಕಿ ಕಟ್ಟುವುದು ವೈಶ್ಯರ ಮನೆಗೆ ಬಂದ ಹೆಣ್ಣು ಮತ್ತು ಮನೆಯಿಂದ ಹೊರ ಹೋದ ಹೆಣ್ಣು ಮಕ್ಕಳಿಗೂ ಆನಂದ ಸಂತೃಪ್ತಿ ಸಿಗಲಿ ಅವರು ತವರು ಮನೆಯಲ್ಲಿ ಎಲ್ಲರೂ ಚನ್ನಾಗಿರಲಿ ತಮ್ಮ ತಾಯಿ ಅಣ್ಣ ತಮ್ಮಂದಿರು ಚೆನ್ನಾಗಿರಲಿ ಎಂದು ಹಾರೈಸುತ್ತಾರೆ.

ಸರ್ವ ಮಂಗಳ ಮಾಂಗಲ್ಯ ಶಿವೆ ಸರ್ವಾರ್ತ ಸಾಧಕೇ ॥
ಶರಣ್ಯ ತ್ರಂಬ ಕೇ ದೇವಿ ನಾರಾಯಣ ನಮೋಸ್ತುತೇ ॥

ಎಂಬಂತೆ ಯಾವಾಗಲೂ ಸರ್ವದಲ್ಲಿಯೂ ಪರ್ವರಲ್ಲಿಯೂ ಮಂಗಳವಾಗಿದ್ದು, ವೈಶ್ಯರನ್ನು ಸದಾ ಹರಸುತ್ತಿರುವ ಜಗನ್ಮಾತೆ, ಎಲ್ಲರಿಗೂ ಮಂಗಳವನ್ನುಂಟು ಮಾಡಲಿ ಇದ್ದವರಿಗೆ ಕಟ್ಟುವುದು ಹೆಚ್ಚಲ್ಲ ಇಲ್ಲದವರಿಗೆ, ಬಡವರಿಗೆ, ತಾಯಿ ಇಲ್ಲದವರಿಗೆ ಕಟ್ಟಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಶ್ರೀ ವಾಸವಿ ಸಂಘದವರು ಹೆಣ್ಣು ಮಕ್ಕಳಿಗೆ ಮಡಿಲಕ್ಕಿ ಕಟ್ಟಿರುತ್ತಾರೆ. ಶ್ರೀ ವಾಸವಿ ದೇವಸ್ಥಾನದಲ್ಲಿ ದೇವರ ಸನ್ನಿಧಿಯಲ್ಲಿ ಮಡಿಲಕ್ಕಿ ಕಟ್ಟಿಸಿಕೊಳ್ಳುವುದು ಒಂದು ಸೌಭಾಗ್ಯ

ನಮಸ್ತೆ ವಾಸವಿ ದೇವಿ ನಮಸ್ತೇ ವಿಶ್ವ ವಾಸವಿ ।
ನಮಸ್ತೇ ವೃತ ಸಂಬದ್ದೇ ಕಾಮತ್ರೇತೇ ನಮೋ ನಮಃ ॥

ಅಗ್ನೇಯ ಸ್ಥಾಲೀ ಪಾಕ

ಸಾಯಂಕಾಲ ಹೋಮ ಮಾಡಲಿರುವ ಅಗ್ನಿಯ ಮೇಲೆ ಪತ್ನಿಯು ಅನ್ನವನ್ನು ಮಾಡುತ್ತಾಳೆ. ಆ ಅನ್ನಕ್ಕೆ ತುಪ್ಪವನ್ನು ಹಾಕಿ ದಂಪತಿಗಳು ಹೋಮ ಮಾಡುತ್ತಾರೆ.

ಇಲ್ಲಿಗೆ ವೈಶ್ಯರ ವಿವಾಹ ಕಾರ್ಯಕ್ರಮಗಳು ಮುಕ್ತಾಯವಾಗುತ್ತವೆ. ಒಟ್ಟಿನಲ್ಲಿ ವೈಶ್ಯರಲ್ಲಿ ಮದುವೆಯ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಾರೆ.

ನಂಬಿಕೆ ಮತ್ತು ಶಕುನಗಳು

ವೈಶ್ಯರು ಹಿಂದೆ ತಮ್ಮ ನಿತ್ಯ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಶಕುನ ನೋಡಿ ಕೆಲಸ ಮಾಡುತ್ತಿದ್ದರೆಂಬುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ. ಇತ್ತೀಚೆಗೆ ಶಕುನ ನೋಡುವುದನ್ನು ಮಂಗಲ ಕಾರ್ಯದಲ್ಲಿ ಮಾತ್ರ ಸೀಮಿತಗೊಳಿಸಿಕೊಂಡಿದ್ದಾರೆ. ಮಂಗಲ ಕಾರ್ಯಕ್ಕೆ ಸಂಬಂಧಿಸಿದ ಶಕುನಗಳನ್ನು ನೋಡಿದರೆ ಬಹುಪಾಲು

[illegible]

ಶಕುನಗಳು 'ಮದುವೆ' ಸಂದರ್ಭಕ್ಕೆ ಮೀಸಲಿದ್ದಂತಿವೆ. ಇವರು ಜಾತಕ ಮತ್ತು ಹೆಣ್ಣು ನೋಡುವ ಸಂದರ್ಭದಿಂದ ಹಿಡಿದು ಮದುವೆ ಮುಗಿದು ಗಂಡು ಹೆಣ್ಣು ಹಳಬರಾಗುವವರೆಗೂ ಶಕುನಗಳನ್ನು ಗಮನಿಸುತ್ತಾರೆ.

೧. ಶುಭ ಶಕುನಗಳು

ಹಣ್ಣು, ಹೂ, ಅಡ್ಡಬಂದರೆ ಒಳ್ಳೆಯದು

ನರಿ ಮುಂಗಸಿ ಮುಖ ತೋರಿಸಿದರೆ ಒಳ್ಳೆಯದು

ಸಾಂಬಾರ ಕಾಗೆ ಅಡ್ಡ ಬಂದರೆ ಒಳ್ಳೆಯದು

ತುಂಬಿದ ಕೊಡ ನೋಡಿದರೆ ಒಳ್ಳೆಯದು

೨. ಅಶುಭ ಶಕುನಗಳು

ನಾಗರಹಾವು, ಬೆಕ್ಕು, ಅಡ್ಡ ಬಂದರೆ ಅಪಶಕುನ

ವಿಧವೆ, ಒಂಟಿ ಬ್ರಾಹ್ಮಣ, ಅಡ್ಡಬಂದರೆ ಅಪಶಕುನ

ಅಂಗ (ಒಂದು ಜಾತಿಯ ಹಕ್ಕಿ) ಬಲದಿಂದ ಎಡಕ್ಕೆ ಹೋದರೆ

ಕಾಗೆ ಬಲದಿಂದ ಎಡಕ್ಕೆ ಹೋದರೆ

ಹೆಣ್ಣಿನ ಮನೆಗೆ ಹೊರಡಬೇಕು ಎನ್ನುವಾಗ ಹಲ್ಲಿ ಲೊಚಗುಟ್ಟಿದರೆ ಅಶುಭ

ಕಟ್ಟಿಗೆ ಹೊರೆ ಅಡ್ಡ ಬರಬಾರದು

ಕ್ಷೌರಿಕ ಮತ್ತು ಗಾಣಿಗ ಜಾತಿಯವರು ಅಡ್ಡ ಬರಬಾರದು

ಗುದ್ದಲಿ ಸಲಿಕೆ ಎದುರಾಗಬಾರದು

ಹೆಣ್ಣಿನ ಮನೆಗೆ ಹೋದಾಗ ಹೆಣ್ಣು ಕಸಬರಕೆ ಹಿಡಿದಿರಬಾರದು

ಈ ವಿಷಯಗಳನ್ನು ಗಮನಿಸಿದರೆ ಮುಖ್ಯವಾಗಿ ಪ್ರಾಣಿ, ಮನುಷ್ಯ, ಸಸ್ಯ ಮತ್ತು ಇತರ ವಸ್ತುಗಳು ಶಕುನ ಸೂಚಕಗಳಾಗಿರುವುದು ಕಂಡು ಬರುತ್ತದೆ. ಮೃಗ ಪಕ್ಷಿ ಜಂತುಗಳಾದಿಗಳ ದೈಹಿಕ ಕ್ರಿಯೆ ಪ್ರತಿಕ್ರಿಯೆಗಳಲ್ಲಿ ಶಕುನ ಫಲ ಕಂಡುಕೊಳ್ಳುವುದು ವಿಲಕ್ಷಣವಾಗಿ ತೋರುತ್ತದೆ. ಹಕ್ಕಿಗಳು ಹಾರುವುದು, ಹಲ್ಲಿ ಲೊಚಗುಟ್ಟುವುದು, ನರಿ ಬೆಕ್ಕು, ಹಾವು ಇತ್ಯಾದಿಗಳು ದಾರಿಯನ್ನು ಆಚೆ ಈಚೆ ದಾಟುವುದು ಆಯಾಯ ಪ್ರಾಣಿಗಳ ಸ್ವಭಾವ ಸಿದ್ಧವಾದ ನಡವಳಿಗಳು. ಈ ಪ್ರಾಣಿ, ಪಕ್ಷಿ ಸ್ವಭಾವವನ್ನೇ ಶುಭ ಅಶುಭ ಎಂದು ತಿಳಿಯುವುದು ತೀರ ವಿಚಿತ್ರವಾಗಿ ಕಾಣುತ್ತದೆ. ಇನ್ನೊಂದು ಗಮನಿಸಬೇಕಾದ ಅಂಶ ಎಂದರೆ ವಾಸ್ತವಿಕ ಬದುಕಿನಲ್ಲಿ ಯಾವ ವಸ್ತು ಮತ್ತು ವ್ಯಕ್ತಿಗಳನ್ನು ಗೌರವ ಭಾವನೆಯಿಂದ ಕಾಣುವುದಿಲ್ಲವೋ! ಅವು ಅಲ್ಲಿ ಶಕುನಗಳಾಗಿ ಕಾಣುತ್ತವೆ. ತುಂಬಿದ ಕೊಡದ ಮೇಲು ನೋಟದ ಅರ್ಥವಲಯ ತೀರ ಸಾಮಾನ್ಯವಾಗಿ ಕಂಡರೂ ಜನಪದರು ಅದನ್ನು ಹಗುರುವಾಗಿ ಕಾಣುವುದಿಲ್ಲ, ಅದರ ಒಳ ಅರ್ಥ ಸದಾ ದವಸ ದಾನ್ಯ ಹಣ,

ಸಂಪತ್ತಿನಿಂದ ಮನೆ ಮನ ತುಂಬಿರಲಿ ಎನ್ನುವುದೇ ಆಗಿರುತ್ತದೆ. ಇದು ನಿಜಕ್ಕೂ ಅರ್ಥಪೂರ್ಣವಾಗಿ ಕಂಡು ಬರುತ್ತದೆ.

೩. ನಂಬಿಕೆಗಳು

ಮೂಲಗಣ್ಣಿನ ಹುಡುಗಿಯರು ಅದೃಷ್ಟವಂತರು

ಹೆಣ್ಣು ನೋಡಲು ಹೊರಟಾಗ ದಾರಿಯುದ್ದಕ್ಕೂ ಶುಭ ಸೂಚನೆಗಳೇ ಕಂಡು ಬಂದರೆ ಆ ಸಂಬಂಧದಿಂದ ಒಳ್ಳೆಯದುಂಟು

ಹುಡುಗನಿಗೆ ತಲೆಯಲ್ಲಿ ಎರಡು ಸುಳಿ ಇದ್ದರೆ ಎರಡು ಮಂದಿ ಹೆಂಡಂದಿರು ಆಗುತ್ತಾರೆ

ಹೆಣ್ಣು ನೋಡಲು ಹೋದಾಗ ಹೆಣ್ಣಿನ ಮನೆಬಾಗಿಲು ಹಾಕಿರಬಾರದು

ಮದುವೆ ಚಪ್ಪರದಲ್ಲಿ ತೂಗಿ ಹಾಕಿದ ತಳಿರು ತೋರಣಗಳು ಅವಿವಾಹಿತರ ತಲೆಗೆ ತಾಗಿದರೆ ಅವರಿಗೂ ಬೇಗನೆ ಮದುವೆ ಯೋಗ ಕೂಡಿ ಬರುತ್ತದೆ.

ಮದುವೆಯಾಗದೆ ಸತ್ತ ಯುವಕ ಅಥವಾ ಯುವತಿ ದೆವ್ವ ಅಥವಾ ಮೋಹಿನಿಯರಾಗಿ ಉಳಿದವರನ್ನು ಕಾಡುತ್ತಾರೆ.

ನಂಬಿಕೆಗಳ ಹಿಂದೆ ಸದುದ್ದೇಶಗಳಿರುತ್ತವೆ. ಉದಾ. ಮೂಲಗಣ್ಣಿನ ಹುಡುಗಿ ಅದೃಷ್ಟವಂತೆ ಸುಂದರವಾಗಿರುವ ಹೆಣ್ಣೊಬ್ಬಳನ್ನು ಮದುವೆ ಮಾಡುವಾಗ ಆಯ್ಕೆ ಕಷ್ಟ ಆಗಬಾರದು. ಅದೇ ಎಲ್ಲಾ ಅಂಗಾಂಶಗಳು ಸರಿ ಇದ್ದು ಕೆಲವು ಅಂಗಗಳು ವಕ್ರವಾಗಿದ್ದರೆ ಅಂತಹ ಹೆಣ್ಣನ್ನು ಮದುವೆ ಮಾಡಿಕೊಳ್ಳಲು ಜನ ಮುಂದೆ ಬರುವುದಿಲ್ಲ. ಈ ಕಾರಣಕ್ಕಾಗಿ ಒಂದು ಹುಡುಗಿಯ ಮದುವೆ ನಡಿಯದೇ ಹೋಗಬಹುದು ಎಂಬ ಕಾರಣಕ್ಕಾಗಿ ಈ ನಂಬಿಕೆ ರೂಪು ಗೊಂಡಿರಬೇಕೆಂದು ತಿಳಿಯಬಹುದು. ಜನಪದರ ಎಲ್ಲಾ ನಂಬಿಕೆಗಳ ಹಿಂದೆಯೂ ಒಂದು ಮಹತ್ವದ ಅಂಶ ಅಡಗಿರುತ್ತದೆ. ಮೆಲು ನೋಟಕ್ಕೆ ನಂಬಿಕೆಗಳು ಹುರುಳಿಲ್ಲದಂತೆ ತೋರಿದರೂ ಆ ನಂಬಿಕೆಗಳು ಹೊರಗೆಡುವ ಒಂದು ವಾಸ್ತವ ಸತ್ಯವನ್ನು ಯಾರು ಅಲ್ಲಗಳೆಯುವಂತಿಲ್ಲ. ಈ ಮಾತನ್ನು ಉದಾಹರಣೆಯೊಂದಿಗೆ ಬಾಂಧವ್ಯ ಬೆಳೆಸಲು ಇಷ್ಟ ವಿಲ್ಲದಿದ್ದಾಗ ಅವರು ತಮ್ಮ ಮನೆಬಾಗಿಲು ಮುಚ್ಚುವ ರೂಪದಲ್ಲಿ ಪ್ರಕಟಿಸಬಹುದು. ಮುಖಾ ಮುಖಿಯಾಗಿ ಈ ಸಂಬಂಧ ಇಷ್ಟ ಇಲ್ಲ ಎಂದು ಹೇಳಿ ವಾತಾವರಣವನ್ನು ಕಹಿಗೊಳಿಸಿಕೊಳ್ಳುವುದರ ಬದಲು ಮೌನವಾಗಿಯೇ ಪ್ರತಿಕ್ರಿಯೆ ಅರ್ಥಪೂರ್ಣವಾಗಿ ತೋರುತ್ತದೆ.

ತಳಿರು ತೋರಣಗಳನ್ನು ಮಂಗಲ ಕಾರ್ಯಗಳಲ್ಲಿ ಸಾಮಾನ್ಯವಾಗಿ ಕಾಣುವ ದೃಷ್ಯವಾಗಿದೆ. ಹದಿಹರೆಯದವರ ಜೀವನ ಚಿಗುರಿನಂತೆ ದಟ್ಟವಾಗಿ ಚಿಗುರಲಿ ಎನ್ನುವ ಸತ್ಯ ಇಲ್ಲಿ ಅಡಗಿದೆ. ಮದುವೆಯಾಗದ ಗಂಡು ಹೆಣ್ಣುಗಳ ತಲೆಯ ಮೇಲೆ ಇಂತಹ ತಳಿರು ತೋರಣಗಳು ತಾಗುವುದರಿಂದ ಅವರಿಗೂ ಕಂಕಣ ಬಲ ಕೂಡಿ ಬರುತ್ತದೆ ಎಂದು ನಂಬುವುದು ಅವಾಸ್ತವಿಕವಾಗಿ ಕಂಡರೂ ಸದಾ ಮಂಗಲ ಕಾರ್ಯಗಳು ನಡೆಯಲಿ ಎನ್ನುವ ಸದುದ್ದೇಶ ಅವರಲ್ಲೆಲ್ಲ ಅಡಗಿರಬಹುದು.

೪.೧.೪ ಸೀಮಂತ

ವೈಶ್ಯರ ಕುಟುಂಬದಲ್ಲಿ ಈ ಕಾರ್ಯಕ್ರಮವನ್ನು ಬಹಳ ಅದ್ದೂರಿಯಿಂದ ಆಚರಿಸುತ್ತಾರೆ. ವೈಶ್ಯರಲ್ಲಿ ಮಹಿಳೆ ಆರ್ಥಿಕ ಸ್ತಂಭದಂತೆ, ಪ್ರತಿಯೊಂದು ಕೆಲಸದ ನಿರ್ವಹಣೆ ಈಕೆಯದ್ದೇ, ತವರು ಮನೆಯಿಂದ ತಿಂಗಳಿಗೊಮ್ಮೆ ಅಥವಾ ಹಬ್ಬಕ್ಕೆ ಮಗಳನ್ನು ಕರೆಯುವುದು, ಕಳುಹಿಸುವುದು ಮಾಡುತ್ತಿರುತ್ತಾರೆ. ಒಂದು ಶುಭ ಗಳಿಗೆಯಲ್ಲಿ ಆಕೆಗೆ ಮುಟ್ಟು ನಿಲ್ಲುತ್ತದೆ. ಐದು, ಏಳು ಅಥವಾ ಒಂಬತ್ತು ತಿಂಗಳು ತುಂಬುವ ಮೊದಲೇ ತನ್ನ ತಾಯಿ ಬಂದು ಹೆರಿಗೆಗಾಗಿ ಕರೆದುಕೊಂಡು ಹೋಗಬೇಕು. ಅಷ್ಟರೊಳಗೆ ಗರ್ಭಿಣಿಯಾಗಿದ್ದಾಳೆ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಸಿಹಿಯಾದ ಅಡುಗೆಗಳನ್ನು ಮಾಡಿಕೊಂಡು ಮಗಳನ್ನು ಮಾತನಾಡಿಸಿಕೊಂಡು ಹೋಗಿರುತ್ತಾರೆ. ಏಳನೆಯ ತಿಂಗಳು ತುಂಬಿದಾಗ ಸೀಮಂತ ಕಾರ್ಯ ಮಾಡುತ್ತಾರೆ. ಚೊಚ್ಚಲ ಹೆರಿಗೆ ಮತ್ತು ಬಾಣಂತನ ತಾಯಿಯ ಮನೆಯಲ್ಲಿಯೇ ಆಗಬೇಕು. ಅದರಲ್ಲೂ ಮೊದಲ ಹೆರಿಗೆ ಬಹಳ ಕಷ್ಟ. ತಾಯಿಯ ಸಾಮಿಪ್ಯ ಶುಶ್ರೂಷೆ, ಧೈರ್ಯ, ಮನಸ್ಸಿಗೆ ನೋವಾಗದಂತೆ ನೋಡಿಕೊಳ್ಳುವುದು ಮುಂತಾದ ಜವಾಬ್ದಾರಿ ಇರುವುದು ತಾಯಿಯಲ್ಲಿ ಮಾತ್ರ. ಏಳು ತಿಂಗಳಾಗಿದೆ ಎಂಬುದನ್ನು ತಿಳಿದ ಮೇಲೆ 'ಸೀಮಂತ'ವನ್ನು ಮಾಡಿ ಕರೆದುಕೊಂಡು ಹೋಗಲು ತವರು ಮನೆಗೆ ಹೇಳಿ ಕಳಿಸುತ್ತಾರೆ. ಈ ಸುದ್ದಿ ತಿಳಿದ ತವರು ಮನೆಯವರು ಪುರೋಹಿತರ ಬಳಿ ಹೋಗಿ ಶುಭದಿನ ಸೂಚಿಸಿದ ದಿನ ಮುತ್ತೈದೆಯರೊಂದಿಗೆ ಮಗಳನ್ನು ಕರೆದುಕೊಂಡು ಮಗಳ ಮನೆಗೆ (ಅಳಿಯನ ಮನೆಗೆ) ಬರುತ್ತಾರೆ. ಬೀಗರ ಮನೆಯಲ್ಲಿ ಅಂದು ತನ್ನ ಎಲ್ಲಾ ಸಂಬಂಧಿಕರನ್ನು ಆಹ್ವಾನಿಸಿರುತ್ತಾರೆ ಹಾಗೂ ಊರಿನ ವೈಶ್ಯ ಕುಟುಂಬದ ಎಲ್ಲಾ ಮುತ್ತೈದೆಯರನ್ನು ಕರೆಯಿಸಿರುತ್ತಾರೆ ಅಂದು ಸಿಹಿ ಊಟದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಹೋದವರೆಲ್ಲರಿಗೂ ಆದರದ ಸ್ವಾಗತಕೋರಿ ಅವರನ್ನು ಕುಳ್ಳರಿಸಿ ಕುಡಿಯಲು ತಂಪಾದ ಪಾನೀಯಗಳನ್ನು ಕೊಟ್ಟು ಉಪಚಾರ ಮಾಡಲಾಗುತ್ತದೆ. 'ಆತಿಥ್ಯಕ್ಕೆ ಹೈದ್ರಾಬಾದ್ ಕರ್ನಾಟಕ ಚಂದ' ಎಂಬ ಮಾತು ನಿಜವಾಗಿದೆ.

'ಸೀಮಂತ'ದ ಹೆಣ್ಣಿಗೆ ಗಂಡಿನ ಮನೆಯವರು ಹೊಸ ಸೀರೆ, ಕುಪ್ಪಸ ತೊಡಿಸಿ, ಹೂವು ಮುಡಿಸಿ, ಹೊಸ ಬಳೆ ತೊಡಿಸಿ ಅಲಂಕಾರ ಮಾಡಿ ಹಸೆ ಗೋಡೆಯ ಎದುರಿಗೆ ಕೂಡಿಸುತ್ತಾರೆ. ಯಥಾ ಪ್ರಕಾರ ಕಳಸ, ಅಕ್ಷತೆ ಇರುತ್ತದೆ. ಒಂದು ತಟ್ಟೆಯಲ್ಲಿ ಅಕ್ಷತೆ, ಹಣ್ಣು, ಹೂ, ಎಲೆ, ಅಡಿಕೆ ಅರಿಶಿಣದ ಕೊಂಬು ಮುಂತಾದವು ಇರುತ್ತದೆ. ಬಸುರಿಯ ಕೈಯಲ್ಲಿ ಇಟ್ಟು ಅಕ್ಷತೆ ಹಾಕುತ್ತಾರೆ. ಹೀಗೆ ಹೆಣ್ಣಿನ ಮನೆಯವರು ಹೊಸ ಸೀರೆ ಕುಪ್ಪಸ ತಂದು ಮಡಿಲು ತುಂಬುವರು. ಇದಕ್ಕೆ ಮಡಿಲು ತುಂಬುವಶಾಸ್ತ್ರ ಎಂದು ಕರೆಯುತ್ತಾರೆ. ಅಂದು ತವರು ಮನೆಯವರು ವಿವಿಧ ಸಿಹಿ ತಿಂಡಿ ತಿನಿಸುಗಳನ್ನು ಮಾಡಿಕೊಂಡು ಬಂದಿರುತ್ತಾರೆ. ಇದು ವೈಶ್ಯರಲ್ಲಿ ಇರುವ ಸಂಪ್ರದಾಯವಾಗಿದೆ ಹೆಣ್ಣಿನ ಬಯಕೆಯನ್ನು ತೀರಿಸುವುದಾಗಿದೆ. ಹೀಗೆ ಸೀಮಂತ ಮಾಡಿಸಿಕೊಂಡು ಬಂದ ಹೆಣ್ಣು ಒಂದು ಮಗುವಿಗೆ ಜನ್ಮ ಕೊಟ್ಟು ಆ ಮಗುವಿಗೆ ಸುಮಾರು ೫ ತಿಂಗಳು ಅಥವಾ ಒಂದು ವರ್ಷ ತುಂಬುವವರೆಗೆ ತವರುಮನೆಯಲ್ಲಿ ಇದ್ದು ಬರುತ್ತಾರೆ. ಅಥವಾ ಮೂರು ತಿಂಗಳಿಗೆ ಗಂಡನ ಮನೆಗೆ ಬರಬೇಕು. ಇದೊಂದು ಹಿರಿಯರ ಆಶೀರ್ವಾದ ಮತ್ತು ಚೊಚ್ಚಲ ಬಸುರಿಗೆ ಧೈರ್ಯ ತುಂಬುವ ಶಾಸ್ತ್ರ

ಎನ್ನಬಹುದು. ಭೂಮಿ ಹುಣ್ಣಿಮೆಯಂದು ಭೂಮಿಗೆ, ಗದ್ದೆಗೆ, ಫಲವಂತಿಕೆ ಹಬ್ಬವನ್ನು ಆಚರಿಸುತ್ತಾರೆ. ಭೂಮಿಯನ್ನು ಸ್ತ್ರೀಯೆಂದು ತಿಳಿದು ಆಕೆಗೆ ಬಯಕೆ, ಸೀಮಂತ ಕಾರ್ಯ ಮಾಡುತ್ತಾರೆ.

೪.೧.೫ ಮರಣ

ಹುಟ್ಟು-ಸಾವು ಬದುಕಿನ ಎರಡು ಪ್ರಮುಖ ಘಟ್ಟಗಳು. ಇವು ಬದುಕಿನ ಮಹತ್ವದ ಕ್ಷಿತಿಜಗಳಾಗಿವೆ. ಒಂದಲ್ಲಾ ಒಂದು ದಿನ ಸಾವನ್ನು ಎದುರಿಸಲೇ ಬೇಕು. ಇದು ವ್ಯಕ್ತಿಯ ಬೆನ್ನ ಹಿಂದೆಯೇ ಇರುತ್ತದೆ. ಅಂದರೆ ವ್ಯಕ್ತಿಯ ಬದುಕಿನ ಕಾಲ ಅನಿಶ್ಚಿತ. ಇತರ ಜನಾಂಗಗಳಂತೆ ವೈಶ್ಯರೂ ಸಾವೇ ಮನುಷ್ಯನ ಜೀವನದ ಕೊನೆಯಲ್ಲ ಎಂದು ನಂಬುತ್ತಾರೆ. ಶರೀರ ನಶ್ವರ, ಆತ್ಮ ಶಾಶ್ವತವಾದದ್ದು ಅವನ ದೇಹದಲ್ಲಿ ಅಗೋಚರವಾದಂತಹ ಒಂದು ಚೇತನ ಅಥವಾ ಆತ್ಮ ಇದೆ ಎಂದೂ ಅದಕ್ಕೆ ಎಂದೂ ಸಾವಿಲ್ಲ. ಮತ್ತೆ ಮತ್ತೆ ಆತ್ಮ ಈ ಭೂಮಿಯ ಮೇಲೆ ಅನೇಕ ಜನ್ಮಗಳನ್ನು ಪಡೆಯುತ್ತದೆ. ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ಮಾಡಿದ ಪಾಪ ಪುಣ್ಯಗಳ ಮೇಲೆ ಸತ್ತ ನಂತರ ಅವನ ಆತ್ಮವು ಮುಂದಿನ ಜನ್ಮದಲ್ಲಿ ಅದಕ್ಕನುಸರಿಸಿ ಜನ್ಮ ಪಡೆಯುತ್ತದೆ ಎಂದು ದೃಢವಾಗಿ ವೈಶ್ಯರು ನಂಬುತ್ತಾರೆ. ಈ ಕಾರಣದಿಂದಲೇ ವ್ಯಕ್ತಿ ಸತ್ತಾಗ ಮತ್ತು ಸತ್ತ ಅನಂತರ ಅನೇಕ ರೂಢಿ, ವಿಧಿ ವಿಧಾನಗಳಿಗೆ ಆಧಾರವಾಗಿದೆ. ಮೃತ ವ್ಯಕ್ತಿಯು ತನ್ನ ಜೀವಿತಾವಧಿ ಯಲ್ಲಿಯೇ ಒಳ್ಳೆಯವನಾಗಿದ್ದರೆ, ಆತ ಮರಣಿಸಿದಾಗ ಅವನನ್ನು ಜನ ಕೊಂಡಾಡುತ್ತಾರೆ. "ಶರಣರ ಜೀವನವನ್ನು ಮರಣದಲ್ಲಿ ನೋಡು" ಎಂಬ ಗಾದೆಯಂತೆ ಉತ್ತಮ ವ್ಯಕ್ತಿಯ ಸಾವಿನಲ್ಲಿ ಜನ ಹೆಚ್ಚಾಗಿ ಪಾಲ್ಗೊಳ್ಳುತ್ತಾರೆ. ಹೊಗಳಿ ಕೊಂಡಾಡುತ್ತಾರೆ. ಇದು ಆ ವ್ಯಕ್ತಿಯ ಬದುಕಿನ ಸಾರ್ಥಕತೆಗೆ ಸಾಕ್ಷಿಯಾಗಿದೆ.

ವ್ಯಕ್ತಿಯ ಸಾವು ಸಮೀಪಿಸಿದಾಗ ಅವನ ಶರೀರವನ್ನು ಮನೆಯ ಅಂಗಳಕ್ಕೆ ಅಥವಾ ಪಡಸಾಲೆಗೆ ತಂದು ಒಂದು ಚಾಪೆಯ ಮೇಲೆ ಹಾಕುತ್ತಾರೆ. ಆ ಸಂದರ್ಭದಲ್ಲಿ ಆತನ ಬಾಯಿಗೆ ಆತನ ಮಕ್ಕಳು ಮತ್ತು ಹತ್ತಿರದ ಸಂಬಂಧಿಗಳು ನೆರೆಹೊರೆಯವರು ಬಾಯಿಗೆ ತುಳಸಿ-ನೀರನ್ನು ಬಿಡುತ್ತಾರೆ. ಇದಕ್ಕೆ "ಬಾಯಿಗೆ ನೀರು ಬಿಡುವುದು" ಎಂದು ಕರೆಯುತ್ತಾರೆ. ವ್ಯಕ್ತಿಯು ಸತ್ತ ನಂತರ ಮನೆಯ ಅಂಗಳದಲ್ಲಿ ಬೆಂಕಿ ಹಾಕುತ್ತಾರೆ. ಇದು ಆ ಮನೆಯ ಯಾರೋ ಮರಣ ಹೊಂದಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ.

ತುಳಸಿ ನೀರನ್ನು ವ್ಯಕ್ತಿಯ ಸಂಬಂಧಿಕರೆಲ್ಲಾ ಬಿಟ್ಟ ನಂತರ ಆತನ ತಲೆಯ ಬಲಭಾಗಕ್ಕೆ ದೀಪ ಹಚ್ಚಿಡುತ್ತಾರೆ. ಮತ್ತು ತಂಬಿಗೆ ನೀರನ್ನು ತುಂಬಿಡುತ್ತಾರೆ. ಪೂಜೆಗೆ ಬೇಕಾದ ಸಾಮಗ್ರಿಗಳನ್ನು ಹೂವು, ಕಾಯಿ, ಹಣ್ಣು ಎಲ್ಲವನ್ನು ಇಟ್ಟಿರುತ್ತಾರೆ. ಮೃತ ವ್ಯಕ್ತಿಗೆ ಅಂತಿಮ ಗೌರವವನ್ನು ಸಲ್ಲಿಸುತ್ತಾರೆ. ನಂತರ ಆ ಕುಟುಂಬದ ಹಿರಿಯರು ಎಲ್ಲಾ ವ್ಯವಸ್ಥೆಯನ್ನು ಮಾಡುತ್ತಾರೆ. ನಂತರ ಸತ್ತ ಸುದ್ದಿಯನ್ನು ಊರಿನ ಚಲುವಾದಿ ಜನಾಂಗದವರು ಆ ಕುಟುಂಬದ ಸಂಬಂಧಿಕರಿಗೆ ಸುದ್ದಿಯನ್ನು ತಿಳಿಸಲು ಹೊರಡುತ್ತಾರೆ. ಇಲ್ಲವೇ ದೂರವಾಣಿಯ ಮೂಲಕ ಮಾಹಿತಿಯನ್ನು ತಿಳಿಸುತ್ತಾರೆ. ಸುದ್ದಿಯನ್ನು ತಿಳಿದ ಬಂಧುಗಳ ಮೃತವ್ಯಕ್ತಿಯ ಮನೆಯ ಮುಂದೆ ಬಂದು ಸೇರುತ್ತಾರೆ.

ಶವಕ್ಕೆ ಸ್ನಾನ ಮಾಡಿಸಿ ಎಲ್ಲಾ ಸಿದ್ಧತೆಯನ್ನು ಮಾಡುತ್ತಾರೆ. ಮೃತ ವ್ಯಕ್ತಿಯ ಹಿರಿಯ ಮಗನು ಅಂಗಳದಲ್ಲಿ ಉರಿಯುವ ಬೆಂಕಿಯ ಮೇಲೆ ಹೊಸ ಮಡಿಕೆಯನ್ನು ಇಟ್ಟು ನೀರು ಹಾಕಿ ಒಂದು ಹಿಡಿ ಅಕ್ಕಿಯನ್ನು ಹಾಕಿ, ಅರೆಬರೆ ಬೇಯಿಸುತ್ತಾರೆ. ಬೆಂಕಿಯನ್ನು ಒಂದು ಸಣ್ಣ ಮಡಿಕೆಗೆ ಹಾಕಿಕೊಂಡು ಬೆರಣಿ ಹಾಕಿ, ಗಂಧದ ಚೆಕ್ಕೆಯನ್ನು ಹಾಕಿ ಮಡಿಕೆಯನ್ನು ಆಗಲೇ ಸಿದ್ಧಪಡಿಸಿಕೊಂಡ ತ್ರಿಕೋನದ ಮೇಲೆ ಇಟ್ಟು ಹಗ್ಗದ ಹಿಡಿಕೆಯನ್ನು ಹಿಡಿದುಕೊಂಡು ಮುನ್ನಡೆಯುತ್ತಾನೆ. ಆತನ ಹಿಂದೆ ಮೃತವ್ಯಕ್ತಿಯನ್ನು ಹೊತ್ತುಕೊಂಡ ಮಕ್ಕಳು ಮತ್ತು ಬಂಧುಗಳು ಹೋಗುತ್ತಾರೆ. ಶವವನ್ನು ಹೊತ್ತವರು ಮಾರ್ಗದಲ್ಲಿ ಅಲ್ಲಲ್ಲಿ ಇಳಿಸಿ ಹಿಂದೆ ಹೊತ್ತವರು ಮುಂದೆ ಮುಂದೆ ಹೊತ್ತವರು ಹಿಂದೆ ಹೆಗಲನ್ನು ಬದಲಾಯಿಸಿಕೊಂಡು ಹೋಗುವ ಪದ್ಧತಿ ಇವರಲ್ಲೂ ಉಂಟು. ಹೋಗುವಾಗ ದಾರಿಯ ಉದ್ದಕ್ಕೂ 'ಗೋವಿಂದ' 'ಗೋವಿಂದ' ಎಂತಲೂ ಹೇಳುತ್ತಾ ಹೋಗುತ್ತಾರೆ. ದಾರಿ ಉದ್ದಕ್ಕೂ ಶವದ ಮೇಲೆ ಕಾಸು ಮತ್ತು ಮಂಡಕ್ಕಿ ಎಲೆ, ಅಡಿಕೆ ಎರಚುತ್ತಾರೆ. ರುದ್ರಭೂಮಿಯಲ್ಲಿ ಎರಡು ಗಾಡಿ ಕಟ್ಟಿಗೆಯನ್ನು ಮಂಚದ ಆಕಾರವಾಗಿ ಹೊಂದಿಸಿರುತ್ತಾರೆ. ಅದರ ಮೇಲೆ ಶವವನ್ನು ಇಡುತ್ತಾರೆ. ನಂತರ ವ್ಯಕ್ತಿಯ ಹಿರಿಯ ಮಗ ಶವಕ್ಕೆ ಬೆಂಕಿಯನ್ನು ಹಚ್ಚುತ್ತಾರೆ. ನಂತರ ಶವಸಂಸ್ಕಾರ ಮುಗಿದ ನಂತರ ಹತ್ತಿರದಲ್ಲಿರುವ ನದಿ ಅಥವಾ ಬಾವಿಗೆ ಹೋಗಿ ಸ್ನಾನ ಮಾಡುತ್ತಾರೆ. ಯಾವುದೇ ಕಾರಣಕ್ಕೂ ಸೋಪನ್ನು ಬಳಸುವುದಿಲ್ಲ. ನಂತರ ನೇರವಾಗಿ ಮೃತವ್ಯಕ್ತಿಯ ಮನೆಗೆ ಬಂದು ಸ್ನಾನ ಮಾಡಿ ಅವರವರ ಊರಿಗೆ ಹೊರಡುತ್ತಾರೆ. ಹೊರಡುವಾಗ ಯಾರಿಗೂ ಹೇಳದೇ ತಮ್ಮ ತಮ್ಮ ಪಾಡಿಗೆ ಹೋಗುತ್ತಾರೆ.

ಮೂರನೇ ದಿನ ಸ್ವರ್ಗಸ್ತರಾದವರ ಜಾಗಕ್ಕೆ ಹೋಗಿ ಹಾಲು ಅನ್ನ ಪಿಂಡ ಇಟ್ಟು ಶವದ, ಉಳಿದ ಅಸ್ತಿ (ಮೂಳೆ) ಸರಿಯಾಗಿ ಸುಟ್ಟಿದೆಯೋ ಇಲ್ಲವೋ ನೋಡಿ ತಿರುಗಿ ಬೆಂಕಿ ಹಾಕಿ ಅಗ್ನಿಸ್ಪರ್ಶ ಮಾಡಿ ಬರುತ್ತಾರೆ.

ನಾಲ್ಕನೇ ದಿನ ಶವಸಂಸ್ಕಾರದ ಸ್ಥಳಕ್ಕೆ ಹೋಗಿ ಪುನಃ ಪಿಂಡವನ್ನು ಇಟ್ಟು ಬರುತ್ತಾರೆ.

ಐದನೇ ದಿನ ಒಂದು ಕಾಯಿ ಊದಬತ್ತಿ ಹಾಲು ಅನ್ನ ತೆಗೆದುಕೊಂಡು ಹೋಗಿ ಪೂಜೆ ಮಾಡಿ ಸ್ವರ್ಗಸ್ತ ರಾದವರ ಸುಟ್ಟ ಬೂದಿ ಮತ್ತು ಅಸ್ತಿಯನ್ನು ತೆಗೆದುಕೊಂಡು ನದಿಗೆ ಹಾಕಿ ಬರುತ್ತಾರೆ. ಶವಸಂಸ್ಕಾರದ ಸ್ಥಳದಲ್ಲಿ ಶಿಲೆಗಳನ್ನು ಒಂದೆರಡು ಅಸ್ತಿಗಳನ್ನು ಬಚ್ಚಿಟ್ಟು ಬರುತ್ತಾರೆ.

ಆರನೇ ದಿನ ಸ್ವರ್ಗಸ್ತರಾದವರ ಸ್ಥಳಕ್ಕೆ ಹೋಗಿ ಆ ಸ್ಥಳವನ್ನು ಸಗಣಿಯಿಂದ ನೆಲವನ್ನು ಸಾರಿಸಿ ಅನ್ನಹಾಲು ಒಂದು ಪಿಂಡವನ್ನು ಇಟ್ಟು ಪೂಜೆಮಾಡಿ ಬರುತ್ತಾರೆ.

ಏಳನೇ ದಿನ ಅನ್ನ ಹಾಲು ಪಿಂಡವನ್ನು ಇಟ್ಟು ಬರುತ್ತಾರೆ. ೧೩ನೇ ದಿನದವರೆಗೆ ಇದೇ ರೀತಿ ಮಾಡಿ ಬರುತ್ತಾರೆ.

೧೩ನೇ ದಿನ ಕರ್ತೃ ಆದವನು ನದಿಗೆ ಹೋಗಿ ತನ್ನ ತಲೆ ಕೂದಲನ್ನು ತೆಗೆದುಕೊಳ್ಳುತ್ತಾರೆ. ನಂತರ ಬೌದ್ಧ ಸನ್ಯಾಸಿಯಾಗಿ ತಾಂಬ್ರದ ತಂಬಿಗೆ, ತಟ್ಟೆ, ಲೋಟ ಇಟ್ಟುಕೊಂಡು ಒಂದು ಹೊಸ ಗಡಿಗೆಯಲ್ಲಿ ಅನ್ನ ಮಾಡಿ ಪೂಜೆ ಸಾಮಾನುಗಳನ್ನು ತೆಗೆದುಕೊಂಡು ಶಿಲೆ(ಕಲ್ಲು)ಗೆ ಪೂಜೆ ಮಾಡಿ ಅನ್ನವನ್ನು

ನೈವೇದ್ಯಮಾಡಿ, ಕೈಗೆ ಶವ ದಹನ ಕಾರ್ಯದಲ್ಲಿ ಹರಿದ ಬಟ್ಟೆಯನ್ನು ಕಟ್ಟಿಕೊಂಡು ಶ್ರದ್ಧಾ ಭಕ್ತಿಯಿಂದ ಪವಿತ್ರವಾಗಿ ಪೂಜೆ ಮಾಡಿ ಮನೆಗೆ ಬರುತ್ತಾರೆ.

೧೪ನೇ ದಿನ ಮೇಲಿನಂತೆ ನದಿಗೆ ಹೋಗಿ ಅಸ್ತಿ(ಮೂಳೆ)ಗಳನ್ನು ಇಟ್ಟು ಪುನಃ ಅನ್ನಮಾಡಿ ಅವುಗಳಿಗೆ ನೈವೇದ್ಯ ಇಟ್ಟು ಒಂದು ಪಿಂಡವನ್ನು ಇಟ್ಟು ಆ ಅಸ್ತಿಗಳಿಗೆ ತುಪ್ಪ ಹಾಕಿ ಗಂಧದ ಕಟ್ಟಿಗೆಯಿಂದ ಸುಟ್ಟು ಬರುತ್ತಾರೆ. ನಂತರ ಅಕ್ಕಿ ಪಿಂಡವನ್ನು ಇಟ್ಟು ಬರುತ್ತಾರೆ.

೧೫ನೇ ದಿನ ಕರ್ತೃ ಮತ್ತು ಬಂಧು ಬಾಂದವರು ರಕ್ತ ಸಂಬಂಧಿಕರು ನದಿಗೆ ಹೋಗಿ ಸ್ನಾನ ಮಾಡಿ, ಅನ್ನ ಮಾಡಿ ನಾಲ್ಕು ಪಿಂಡಗಳನ್ನು ಇಟ್ಟು. ಕಾಯಿ ಒಡೆದು ಪೂಜಿಸಿ, ಎಳ್ಳಕ್ಕಿ ನೀರನ್ನು ಎಲ್ಲರೂ ಆ ಪಿಂಡದ ಮೇಲೆ "ರಿಣಾನು ಬಂಧೆನಾ ಪರಿ ತ್ಯಾಗಹ" ಎಂದು ನೀರು ಬಿಟ್ಟು ಬರುತ್ತಾರೆ. ಮೇಲಿನ ಪಿಂಡವನ್ನು ಅಲ್ಲಿರುವ ಕಾಗೆಗಳಿಗೆ ಇಟ್ಟು ನಮಸ್ಕಾರ ಮಾಡಿ ಬರುತ್ತಾರೆ.

೧೬ನೇ ದಿನ ನದಿಗೆ ಹೋಗಿ ಅನ್ನ ಮಾಡಿ ನಾಲ್ಕು ಪಿಂಡವನ್ನು ಇಟ್ಟು ಪೂಜೆ ಮಾಡಿ ಮನೆಗೆ ಬರುತ್ತಾರೆ, ಪಿಂಡಗಳನ್ನು ನದಿಯಲ್ಲಿ ಹಾಕಿ ಬರುತ್ತಾರೆ.

ಮನೆಗೆ ಬಂದ ಮೇಲೆ ಸ್ನಾನ ಮಾಡಿ ಆಕಳು ಗೋಮೂರ್ತವನ್ನು ಮನೆಯಲ್ಲಿ ಹಾಕಿ ಪುಣ್ಯೋಚನೆ ಮಾಡಿಸಿ ಮನೆಯಲ್ಲಾ ಚುಮುಕಿಸಿ ಮನೆಯಲ್ಲಿಯೇ ನೈವೇದ್ಯ ಮಾಡಿ ಬಂಧು ಬಾಂದವರೆಲ್ಲರ ಎದುರಿಗೆ ಕರ್ತೃ ಆದವನು ಒಂದು ಮಣೆಯ ಮೇಲೆ ಮೂರು ಗೋದಿ ಪಿಂಡ ಇಟ್ಟು ಪೂಜಿಸಿ ಆರತಿ ಮಾಡಿ ಮಂತ್ರಾಕ್ಷತೆ ಹಾಕುತ್ತಾರೆ. ಮತ್ತು ಆದಿನ ಕರ್ತೃ ಆದವನ ಊಟದ ನಂತರ ಮನೆಯವರೆಲ್ಲರೂ ಊಟವನ್ನು ಮಾಡುತ್ತಾರೆ. ಆದಿ ಕರ್ತೃ ಆದವರಿಗೆ ಮನಃಶಾಂತಿಗಾಗಿ ಬಂಧು ಬಾಂಧವರು ಬಟ್ಟೆಕೊಟ್ಟು ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ಸತ್ತವರ ನೆನಪಿಗಾಗಿ ಅವರ ಯೋಗ್ಯತೆಯ ಮೇಲೆ ದಾನ ಧರ್ಮ ಮಾಡುವ ಪದ್ಧತಿ ವೈಶ್ಯರಲ್ಲಿ ಇದೆ.

೧೭ನೇ ದಿನ ವೈಕುಂಠ ಸಮಾರಾಧನೆ. ಸ್ವರ್ಗಸ್ಥರಾದವರ ಫೋಟೋ ಇಟ್ಟು ಪೂಜೆ ಮಾಡಿ ಶ್ರಮಕ್ಕೆ ಬಂದವರಿಗೂ, ಬಂಧು ಬಾಂದವರಿಗೂ ಆಪ್ತರಿಗೂ ಸಿಹಿ ಊಟ ಹಾಕಿಸಿ ಶಾಂತಿ ಮಾಡಿಸುತ್ತಾರೆ.

ಈ ರೀತಿಯಾಗಿ ವೆಶ್ಯರಲ್ಲಿ ಸತ್ತ ದಿನದಿಂದ ೧೭ನೇ ದಿನದವರೆಗೆ ಕಾರ್ಯಕ್ರಮಗಳನ್ನು ನಡೆಸಿ ಅಂದಿನಿಂದ ಅವರ ಮೈಲಿಗೆ ತೀರುತ್ತದೆ.

೪.೨. ವಾರ್ಷಿಕಾವರ್ತನದ ಆಚರಣೆಗಳು

೪.೨.೧. ಹಬ್ಬಗಳು ಮತ್ತು ವ್ರತಗಳು

ಹಬ್ಬಗಳು ಭಾರತೀಯರ ಜೀವನದ ಅಂಗವಾಗಿವೆ. ಹಬ್ಬಗಳನ್ನು ಭಾರತೀಯರು ಅತ್ಯಂತ ಪ್ರಾಚೀನ ಕಾಲದಿಂದಲೂ ಆಚರಿಸುತ್ತಾ ಬಂದಿದ್ದಾರೆ. ಹಬ್ಬಗಳ ಆಚರಣೆ ಕೇವಲ ಭಾರತೀಯರಿಗೆ ವಿಶೇಷವಾಗಿ

ಹಿಂದೂಗಳಿಗಷ್ಟೇ ಸೀಮಿತವಾಗಿಲ್ಲ. ವಿಶ್ವದಾದ್ಯಂತ ಎಲ್ಲಾ ಧರ್ಮೀಯರು ಒಂದಲ್ಲಾ ಒಂದು ಹಬ್ಬವನ್ನು ಆಚರಿಸುತ್ತಾ ಬಂದಿದ್ದಾರೆ. ಹಬ್ಬಗಳು ಮನುಷ್ಯನ ಜೀವನದ ಏಕತಾನತೆಯನ್ನು ಬದಲಿಸುವಲ್ಲಿ ಸಹಾಯಕವಾಗಿವೆ. ಅವರಿಗೆ ಆನಂದ ತಂದುಕೊಡುವುದಲ್ಲದೇ ನವ ಚೈತನ್ಯವನ್ನು ಸಹ ತರುತ್ತದೆ. ಕೆಲವು ಹಬ್ಬಗಳಿಗೆ ವೈಜ್ಞಾನಿಕ ಆಧಾರವು ಇದೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಹಬ್ಬಗಳ ಆಚರಣೆ ನಡೆಸುತ್ತಾ ಬಂದಿದ್ದರೂ ಕೂಡ ನಮ್ಮ ಜನಗಳಲ್ಲಿ ಇವುಗಳ ಬಗ್ಗೆ ಆಸಕ್ತಿ ಕಡಿಮೆಯಾಗಿಲ್ಲ. ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಆಚರಿಸುತ್ತಾ ಬರುತ್ತಿರುವುದು ಅವರ ಧಾರ್ಮಿಕ ನಂಬುಗೆಯ ದ್ಯೋತಕ. ಆಧುನಿಕರಲ್ಲಿ ಹಬ್ಬಗಳ ಬಗ್ಗೆ ಗೊಂದಲವಿರುವುದರಿಂದ ಅದನ್ನು ಸ್ವಲ್ಪವಾದರೂ ನೀಗಿಸುವಲ್ಲಿ ಈ ಅಧ್ಯಯನ ಸಹಾಯಕವಾಗಬಹುದೆಂಬುದು ನನ್ನ ನಂಬಿಕೆ. ಅದರಲ್ಲಿ ವೈಶ್ಯ ಸಮುದಾಯದವರು ಆಚರಿಸುವಂತಹ ಹಬ್ಬ ಮತ್ತು ವ್ರತಗಳನ್ನು ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನಪಟ್ಟಿದ್ದೇನೆ.

ಉಗಾದಿ

ಯುಗದ ಆದಿಯೇ ಯುಗಾದಿ ಅಥವಾ ಉಗಾದಿ. ಅಂದರೆ ವರ್ಷದ ಮೊದಲ ದಿನ ಚೈತ್ರ-ಶುಕ್ಲ-ಪಾಡ್ಯದಂದು ಈ ಹಬ್ಬ ಆಚರಿಸಲಾಗುತ್ತದೆ. ಚೈತ್ರ ಮಾಸದ ಪೂರ್ಣಿಮೆಯಂದು ಚಂದ್ರ ಚಿತ್ರಾ ನಕ್ಷತ್ರದಲ್ಲಿರುವುದರಿಂದ ಈ ಮಾಸವನ್ನು ಚೈತ್ರ ಮಾಸವೆಂದು ಕರೆಯಲಾಗಿದೆ. ಪ್ರಕೃತಿಯಲ್ಲಿ ವಸಂತನ ಆಗಮನವೂ ಈಗಲೇ ಆಗುತ್ತದೆ ಮರ ಗಿಡಗಳು ಚಿಗುರಿ ಪ್ರಕೃತಿ ದೇವತೆಗೆ ಹಸಿರಿನ ಹೊದಿಕೆ ಹಾಕಲಾಗುತ್ತದೆ. ಸಹಜವಾಗಿ ಈ ಹೊಸದಿನಗಳು ವ್ಯಕ್ತಿಯ ಜೀವನದಲ್ಲಿ ಹೊಸ ಆಸೆಗಳಿಗೆ ಅಂಕುರಾರ್ಪಣ ಮಾಡಿಸುತ್ತವೆ.

ವೈಶ್ಯರು ಈ ದಿನ ಮನೆಯನ್ನು ಮಾವಿನ ಮತ್ತು ಬೇವಿನ ಸೊಪ್ಪಿನ ತೋರಣಗಳಿಂದ ಅಲಂಕರಿಸುತ್ತಾರೆ. ಮನೆ ಮಂದಿ ಎಲ್ಲಾ ಅಭ್ಯಂಜನ ಸ್ನಾನ ಮಾಡಿ ದೇವರನ್ನು ಪೂಜಿಸಿ ನೈವೇದ್ಯಕ್ಕೆ ಬೇವು ಬೆಲ್ಲವನ್ನು ಅರ್ಪಿಸುವುದಲ್ಲದೇ ಅದನ್ನೇ ಎಲ್ಲರೂ ಹಂಚಿಕೊಂಡು ಸೇವಿಸುತ್ತಾರೆ. ಬೇವು-ಬೆಲ್ಲ ವ್ಯಕ್ತಿ ಜೀವನದ ಕಷ್ಟ-ಸುಖಗಳ ಸಂಕೇತ. ಮನುಷ್ಯ ಜೀವನದಲ್ಲಿ ಬರುವ ಕಷ್ಟ ಸುಖಗಳನ್ನು ಬೆರೆಸಿ ಸಮಾನವಾಗಿ ಅನುಭವಿಸಬೇಕೆಂಬುದರ ದ್ಯೋತಕವಾಗಿದೆ. ಈ ಹಬ್ಬದ ಸಂದರ್ಭದಲ್ಲಿ ಜಾತಿ ಭೇದವಿಲ್ಲದೇ ಎಲ್ಲಾ ವರ್ಗದ ಜನರು ಹಿರಿಯರಿಂದ ಕಿರಿಯರು ಬೇವು ಬೆಲ್ಲ ಪಡೆದು ಆಶೀರ್ವಾದ ಪಡೆಯುತ್ತಾರೆ.

ಶ್ರೀರಾಮ ನವಮಿ

ಚೈತ್ರಮಾಸದ ಶುದ್ಧ ನವಮಿಯನ್ನು ಶ್ರೀರಾಮ ನವಮಿ ಆಚರಿಸಲಾಗುತ್ತದೆ. ಶ್ರೀರಾಮನು ಚೈತ್ರ ಶುಕ್ಲ ನವಮಿಯಂದು 'ಪುರ್ನವಸು' ನಕ್ಷತ್ರದಲ್ಲಿ ಜನಿಸಿದನು. ಶ್ರೀರಾಮನು ಶ್ರೇಷ್ಠ ರಾಜ ಮತ್ತು ಆದರ್ಶ ಪುತ್ರನಾಗಿದ್ದ ಈತನ ಎಲ್ಲಾ ಆದರ್ಶಗಳು ಇಡೀ ದೇಶದಲ್ಲಿ ಎಲ್ಲಾ ಮನುಕುಲಕ್ಕೆ ಆದರ್ಶ ಪ್ರಾಯವಾಗಿದೆ. ದೇಶಾದ್ಯಂತ ಶ್ರೀರಾಮನ ಉತ್ಸವಗಳು ಪೂಜೆ ಪುನಸ್ಕಾರಗಳೊಂದಿಗೆ ನಡೆಯುತ್ತವೆ. ವೈಶ್ಯ ಸಮುದಾಯದವರು

[illegible]

[illegible]

[illegible]

ಅಂದಿನ ದಿನ ಮಡಿ ಪುರಸ್ಕಾರದಿಂದ ಆಂಜನೇಯನ ಪೂಜೆಯನ್ನು ಮಾಡುತ್ತಾರೆ. ಹಾಗೂ ಬೆಳಗಿನ ಜಾವ ಮಡಿಯಿಂದ ಶ್ರೀ ಆಂಜನೇಯ ರಥೋತ್ಸವವನ್ನು ಆಚರಿಸುತ್ತಾರೆ.

ಶ್ರೀವಾಸವಿ ಜಯಂತಿ

ಶ್ರೀ ಮಾತೆ ವಾಸವಿ ಆರ್ಯ ವೈಶ್ಯ ಜನಾಂಗದವರ ಕುಲ ದೇವತೆ, 'ಅಖಿಲಾಂಡ ಕೋಟಿ ಬ್ರಹ್ಮಾಂಡ' ನಾಯಕಿಯಾದ ಈಕೆ ಆದಿಶಕ್ತಿಯ ಸ್ವರೂಪಳೂ ಹೌದು ವೈಶಾಖ ಶುದ್ಧ ದಶಮಿಯಂದು ಪೆನುಗೊಂಡೆಯ ಸಾಮಂತ ರಾಜನಾಗಿದ್ದ ಕುಸುಮ ಶ್ರೇಷ್ಠಿ ಮತ್ತು ಕುಸುಮಾಂಬೆಯ ಸುಪುತ್ರಿಯಾಗಿ ಜನ್ಮತಾಳಿದವಳು ಈ ದಿನವನ್ನು ಆರ್ಯವೈಶ್ಯ ಜನಾಂಗದವರು "ವಾಸವಿ ಜಯಂತಿ" ಎಂದು ಶ್ರದ್ಧಾ ಭಕ್ತಿಗಳಿಂದ ಆಚರಿಸುತ್ತಾರೆ. ಇದು ಈ ಜನಾಂಗದವರ ಅತಿ ದೊಡ್ಡ ಪವಿತ್ರವಾದ ಹಬ್ಬ.

ಏಕಾದಶಿ

ಆಷಾಡ ಮಾಸದ ಶುದ್ಧ ಏಕಾದಶಿಯಂದು ಚಾತುರ್ಮಾಸ ವ್ರತಾರಂಭವಾಗುತ್ತದೆ. ಈ ಹಬ್ಬಕ್ಕೆ ಪ್ರಥಮೈಕಾದಶಿ ಎಂದೂ ಹೇಳುತ್ತಾರೆ. ಈ ವ್ರತ ಆಚರಿಸುವ ಧಾರ್ಮಿಕರು ಅವರವರ ಇಚ್ಛಾನುಸಾರ ಹಬ್ಬದ ಸಡಗರದೊಂದಿಗೆ ಆಚರಿಸುತ್ತಾರೆ. ಹೊಸದಾಗಿ ಮದುವೆಯಾದ ವಧೂವರರಿಗೆ ಅತ್ತೆಯ ಮನೆ ಪ್ರವೇಶ ನಿಷಿದ್ಧ. ಆಗ ವಧುವಿನ ಮನೆಯವರು ಅಳಿಯನಿಗೆ ವಿಶೇಷ ಭಕ್ಷಗಳೊಂದಿಗೆ ಯಥೋಚಿತ ಉಡುಗೊರೆ ಗಳನ್ನು ಕಳುಹಿಸಿಕೊಡುತ್ತಾರೆ.

ಭೀಮನ ಅಮವಾಸ್ಯೆ

ಆಷಾಡ ಮಾಸದ ಅಮವಾಸ್ಯೆಯನ್ನು 'ಭೀಮನ ಅಮವಾಸ್ಯೆ' ಎಂದೂ ಕರೆಯುತ್ತಾರೆ. 'ಭೀಮ' ಎಂಬುದು ಶಿವನ ಮತ್ತೊಂದು ಹೆಸರು (ಮಹಾಭಾರತದ ಭೀಮನಲ್ಲ). ಸುಮಂಗಲಿಯರು ವ್ರತದಲ್ಲಿ ತಮ್ಮ ಪತಿಯಿಂದ ಕಂಕಣ ಕಟ್ಟಿಸಿಕೊಂಡು ಆಶೀರ್ವಾದ ಪಡೆಯುತ್ತಾರೆ. ಕನ್ಯೆಯರು ಒಳ್ಳೆಯ ಪತಿ ದೊರೆಯಲೆಂದು ಭೀಮೇಶ್ವರನ ಪೂಜೆ ಮಾಡುತ್ತಾರೆ.

ನಾಗಚೌತಿ

ಶ್ರಾವಣ ಶುದ್ಧ ಚೌತಿಯೆಂದು ನಾಗ ಪೂಜೆಯನ್ನು ವಿಶೇಷವಾಗಿ ಆಚರಿಸುತ್ತಾರೆ. ಮಹಿಳೆಯರು ಸಂತಾನ ಪ್ರಾಪ್ತಿ ಮತ್ತು ಅಭಿವೃದ್ಧಿಗಾಗಿ ಈ ಹಬ್ಬವನ್ನು ಶ್ರದ್ಧಾ ಭಕ್ತಿಗಳಿಂದ ಆಚರಿಸುವರು. ಈ ವ್ರತದ ಆಚರಣೆ ಮಾಡುವವರು ಕೇವಲ ಹಣ್ಣು ಹಂಪಲು ಮಾತ್ರ ಸೇವಿಸಬೇಕು ಎಂದು ವೈಶ್ಯ ಸಮುದಾಯದವರ ಸಂಪ್ರದಾಯವಾಗಿದೆ.

ನಾಗಪಂಚಮಿ

ಶ್ರಾವಣ ಶುದ್ಧ ಪಂಚಮಿಯಂದು ನಾಗ ಪಂಚಮಿ ಹಬ್ಬವನ್ನು ಆಚರಿಸುತ್ತಾರೆ. ಶ್ರೀ ಕೃಷ್ಣನು ಕಾಲೀಯನಂತಹ ತಾಮಸವನ್ನು ಸಾತ್ವಿಕನನ್ನಾಗಿ ಮಾಡಿದ ದಿನವಿದು.

ಅನಂತನೆಂಬ ನಾಗ ತನ್ನ ಹೆಡೆಗಳಲ್ಲಿ ಈ ವಿಶ್ವವನ್ನು ಎತ್ತಿ ಹಿಡಿದಿದ್ದಾನೆಂದು ವೈಶ್ಯರಲ್ಲಿ ನಂಬಿಕೆ ಇದೆ. ಶ್ರೀಮನ್ನಾರಾಯಣ ಪನ್ನಗಶಯನನಾದರೆ, ಶಿವ ನಾಗಭೂಷಣ.

'ಮಾನಸಾ' ಒಬ್ಬ ನಾಗದೇವತೆ, ಈಕೆ ದೀರ್ಘ ಆಯಸ್ಸು, ಮತ್ತು ಆರೋಗ್ಯವನ್ನು ನೀಡುವಳೆಂದು ಜನ ಪೂಜಿಸುತ್ತಾರೆ. ಸತ್ತ ನಾಗನನ್ನು ಶಾಸ್ತ್ರೋಕ್ತ ರೀತಿಯಲ್ಲಿ ಸಂಸ್ಕಾರ ಮಾಡುತ್ತಾರೆ. ನಾಗನ ಶಾಪ ವಿಮೋಚನೆಗಾಗಿ ನಾಗದರ್ಶನ, ನಾಗಮಂಡಲ, ನಾಗಪ್ರತಿಷ್ಠೆಗಳನ್ನು ಮಾಡುತ್ತಾರೆ ಎಂದು ಈ ಜನಾಂಗದವರ ನಂಬಿಕೆಯಾಗಿದೆ. ಜನಮೇಜಯನ ಸರ್ಪ ಯಜ್ಞದಲ್ಲಿ ಆಹುತಿ ನಡೆಯುತ್ತಿದ್ದಾಗ ಅದನ್ನು ತಡೆದವನು "ಆಸ್ತೀಕ" ಈ ನಾಗಯಜ್ಞ ನಿಂತ ದಿನ ಪಂಚಮಿ ಇದು ನಾಗಗಳಿಗೆ ಶುಭ ದಿನ, "ಆಸ್ತೀಕನು" ನಾಗರಿಗೆ ಗೌರವ ತಂದ ದಿನವಾದ ಪಂಚಮಿಯೆಂದು ಭಕ್ತರು ನಾಗಪೂಜೆ ಮಾಡಿ ಧನ್ಯರಾಗುತ್ತಾರೆ.

ಈ ನಾಗಪಂಚಮಿಗೆ ಸಂಬಂಧ ಪಟ್ಟಹಾಗೆ ಈ ಜನಾಂಗದವರಲ್ಲಿ ಒಂದು ಕಥೆಯನ್ನೇ ಹೇಳುತ್ತಾರೆ. ತೀರ ಬಡವನಾದ ಅಣ್ಣನೊಬ್ಬ ತನ್ನ ಸಿರಿವಂತಳಾದ ವಿವಾಹಿತ ತಂಗಿಯನ್ನು ತನ್ನ ಮನೆಗೆ ಕರೆದೊಯ್ಯುತ್ತಿದ್ದಾಗ ಆಕೆಯ ಮೈಮೇಲಿದ್ದ ಒಡವೆಗಳನ್ನು ಕಂಡು ದುರಾಸೆಗೆ ಬಿದ್ದು ಅವಳನ್ನು ಕೊಲ್ಲಬೇಕೆಂದು ಕಲ್ಲೊಂದನ್ನು ಎತ್ತಲು ಅದರ ಅಡಿಯಲ್ಲಿದ್ದ ಸರ್ಪ ಅವನನ್ನು ಕಚ್ಚಿ ಬಿಟ್ಟಿತಂತೆ, ಆದರೆ ತಂಗಿಯು ನಾಗನನ್ನು ವಿಧವಿಧವಾಗಿ ಪ್ರಾರ್ಥಿಸಿ ಅಣ್ಣನನ್ನು ಬದುಕಿಸಿಕೊಂಡಳು. ಇದು ಪಂಚಮಿಯೆಂದು ನಡೆದಿದ್ದರಿಂದಾಗಿ ನಾಗ ಪಂಚಮಿ ಅಣ್ಣ ತಂಗಿಯರ ಶ್ರೇಷ್ಠ ಹಬ್ಬ. ಹೆಣ್ಣು ಮಕ್ಕಳು ತಮ್ಮ ಒಡ ಹುಟ್ಟಿದವರನ್ನು ಕಷ್ಟ ಕಾರ್ಪಣ್ಯದಿಂದ ಮುಕ್ತರನ್ನಾಗಿಸಲು ನಾಗದೇವತೆಯನ್ನು ಪೂಜಿಸುತ್ತಾರೆ, ಆರಾಧಿಸುತ್ತಾರೆ, ಸೋದರ ಸಂಬಂಧದ ಮಧುರ ಬಾಂಧವ್ಯಗಳು ನಿರಂತರವಾಗಿ ಉಳಿದು ಬೆಳೆಯಲು ಈ ಹಬ್ಬ ಇಂದಿಗೂ ರೂಢಿಯಲ್ಲಿದೆ.

ಮಂಗಳ ಗೌರಿ ವ್ರತ

ಶ್ರಾವಣ ಮಾಸದ ಮೊದಲನೆಯ ಮಂಗಳವಾರದಿಂದ ಕೊನೆಯ ಮಂಗಳವಾರದವರೆಗೂ ಸುಮಂಗಲಿಯರು ತಮ್ಮ ಮಾಂಗಲ್ಯ ಭಾಗ್ಯಕ್ಕಾಗಿ ಮಂಗಳ ಗೌರಿ ವ್ರತ ಆಚರಿಸುವ ಪದ್ಧತಿಯಿದೆ. ಹಿಂದೂ ಸಂಪ್ರದಾಯದಲ್ಲಿ ವಿಶೇಷವಾಗಿ ಬ್ರಾಹ್ಮಣ, ವೈಶ್ಯರಲ್ಲಿ ಈ ವ್ರತ ಆಚರಿಸುವ ಪದ್ಧತಿ ಹಿಂದಿನಿಂದಲೂ ಇದೆ. ವಿವಾಹ ಯೋಗ್ಯ ಕನ್ಯೆಯರು ಐದು ವರ್ಷ ಈ ವ್ರತ ಆಚರಿಸಬೇಕು. ಆಮೇಲೆ ಉದ್ಯಾಪನೆ ಕೊಡಬೇಕೆಂಬುದು ಇವರ ನಂಬಿಕೆ. ಉದ್ಯಾಪನೆ ಕೊಟ್ಟವರಿಗೆ ಪುಣ್ಯ ತೆಗೆದುಕೊಂಡವರು ಈ ವ್ರತ ನಡೆಸಲು ನಾಂದಿಯಾಗಿದೆ.

ವಿನಾಯಕ ಚೌತಿ

ಶ್ರೀ ಗಣೇಶ, ದ್ವೈಮಾತುರ, ವಿಘ್ನನಾಶಕ, ಗಣಾಧಿಪತಿ ಅತ್ಯಂತ ಪ್ರಾಚೀನ ಕಾಲದಿಂದಲೂ ವಿಶ್ವದಾದ್ಯಂತ ಗಣಪತಿಗೆ ಅಗ್ರ ಪೂಜೆ ಸಲ್ಲುತ್ತದೆ. ಋಗ್ವೇದದಲ್ಲಿ "ಸಂಘಾಧ್ಯಕ್ಷ" ಎಂಬರ್ಥದಲ್ಲಿ ಗಣಪತಿಯನ್ನು ಹೆಸರಿಸಲಾಗಿದೆ.

ಶ್ರೀ ವಿನಾಯಕನನ್ನು ಕೇವಲ ನಮ್ಮ ದೇಶದಲ್ಲಿ ಅಲ್ಲದೇ ವಿದೇಶಗಳಲ್ಲಿಯೂ ಸಹ ಆರಾಧಿಸಲಾಗುತ್ತದೆ. ದೈವಕಲ್ಪನೆಯನ್ನು ವಿರೋಧಿಸುವ ವಿಜ್ಞಾನಿಗಳು ಸಹ ಗಣೇಶನನ್ನು ಸ್ತುತಿಸುತ್ತಾರೆ. ಗಣೇಶನನ್ನು ಹಲವು ರೂಪಗಳಲ್ಲಿ ಪೂಜಿಸಲಾಗುತ್ತದೆ. ಪುರಾಣಗಳಲ್ಲಿ ಗಣೇಶನ ಹುಟ್ಟು ಕತೆ ವೈಶಿಷ್ಟ್ಯ ಪೂರ್ಣವಾಗಿದೆ. ಒಮ್ಮೆ ಪಾರ್ವತಿ ತನ್ನ ಮೈಗೆ ಅಂಗರಾಗವನ್ನು ಹಚ್ಚಿಕೊಳ್ಳುವಾಗ ನೆಲದ ಮೇಲೆ ಬಿದ್ದ ಅಂಗರಾಗವನ್ನೆಲ್ಲಾ ಒಟ್ಟು ಗೂಡಿಸಿ ಪುರುಷಾಕಾರದ ಬೊಂಬೆಯನ್ನು ಮಾಡಿ ಜೀವವನ್ನಿತ್ತಳು. ದಕ್ಷ ಯಜ್ಞ ಧ್ವಂಸ ಸಂದರ್ಭದಲ್ಲಿ ವೀರಭದ್ರ ವಿನಾಯಕನ ತಲೆಯನ್ನು ಕಡೆದ ಈ ರೀತಿಯಾಗಿ ವಿಘ್ನರಾಜನೇ ಮಾಡಿದುದರಿಂದ ತಮ್ಮ ಕಾರ್ಯ ನಿರ್ವಿಘ್ನವಾಗಿ ನಡೆಯಲಾರವೆಂದು ಹೆದರಿದ ಬ್ರಹ್ಮಾದಿಗಳು ಶಿವನನ್ನು ಮೊರೆಹೊಕ್ಕು ಹೇಗಾದರೂ ಬದುಕಿಸಿ ಕೊಡಬೇಕೆಂದು ಬೇಡಿಕೊಂಡರು. ಆಗ ಕರುಣಾಶಾಲಿಯಾದ ಶಿವ "ಉತ್ತರ ದಿಕ್ಕಿಗೆ ತಲೆ ಹಾಕಿ ಮಲಗಿರುವ ಯಾವುದಾದರೊಂದು ಪ್ರಾಣಿಯ ತಲೆ ತಂದು ಈ ಮುಂಡಕ್ಕೆ ಸೇರಿಸಿ" ಎನ್ನಲು ಉತ್ತರ ದಿಕ್ಕಿಗೆ ಮಲಗಿದ್ದ ಆನೆಯೊಂದರ ಕೊರಳು ಕೊಯ್ದು ಈ ಮುಂಡಕ್ಕೆ ಸೇರಿಸಿದರು. ಹೀಗೆ ವಿನಾಯಕನೇ ಗಜಾನನನಾದ ಯಾವುದೇ ಶುಭಕಾರ್ಯದ ಆರಂಭಕ್ಕೆ ವಿನಾಯಕನಿಗೆ ಪೂಜೆ ಸಲ್ಲಿಸುವುದು ವಾಡಿಕೆ.

ಭಾದ್ರಪದ ಮಾಸದ ಶುದ್ಧ ಚೌತಿಯಂದು ಅಂದರೇ ಸ್ವರ್ಣ ಗೌರಿ ವ್ರತದ ಮೂರನೇ ದಿನವೇ ವಿನಾಯಕ ಚೌತಿ. ಈ ದಿನ ದೇಶಾದ್ಯಂತ ಗಣೇಶ ಪೂಜೆ ಒಳಗಾಗುತ್ತಾನೆ. ಮನೆ ಮನೆಗಳಲ್ಲಿ ಗಣಪತಿಯ ಮಣ್ಣಿನ ಪ್ರತಿಮೆ ತಂದು ಪೂಜಿಸಿ ತಮಗೆ ಇಷ್ಟಾರ್ಥ ಸಿದ್ಧಿಯಾಗಲೆಂದು ಪ್ರಾರ್ಥಿಸುತ್ತಾರೆ. ಈ ದಿನ ಮೋದಕ (ಕಡುಬು) ವಿಶೇಷವಾದ ಖಾದ್ಯವಾಗಿರುತ್ತದೆ.

ಮಹಾಲಯ ಅಮಾವಾಸ್ಯೆ

ಪ್ರತಿ ತಿಂಗಳು ಅಮವಾಸ್ಯೆ ಬಂದರೂ ಸಹ ಭಾದ್ರಪದ ಮಾಸದ ಅಮವಾಸ್ಯೆಗೆ ವಿಶೇಷವಾದ ಮಹತ್ವವಿದೆ. (ಇದು ಪಿತೃ ಕಾರ್ಯ ಮಾಡುವವರಿಗೆ ವಿಶೇಷವಾದ ದಿನವೆಂದು ಪರಿಗಣಿಸಲ್ಪಟ್ಟಿದೆ. ಈ ದಿನ ನೈವೇದ್ಯಕ್ಕೆಂದು ಇರಿಸಲಾಗುವ ವಸ್ತ್ರ ಪ್ರಸಾದಗಳು ಪಿತೃ ಲೋಕದಲ್ಲಿರುವ ಪಿತೃಗಳಿಗೆ ತಲುಪುತ್ತವೆಂಬ ಭಾವನಾತ್ಮಕ ನಂಬಿಕೆ ವೈಶ್ಯರ ಸಂಪ್ರದಾಯದಲ್ಲಿದೆ). ಹೊಸ ಬಟ್ಟೆಯನ್ನು ಕಳಸಕ್ಕೆ ಇಟ್ಟು ಪೂಜೆ ಮಾಡಿ ಧೂಪವನ್ನು ಹಾಕುತ್ತಾರೆ. ವಿವಿಧ ಜನಾಂಗಗಳಿಗನುಗುಣವಾಗಿ ನೈವೇದ್ಯ ಇರಿಸುವುದುಂಟು.

ನವರಾತ್ರಿ

ಪ್ರತಿ ವರ್ಷವೂ ಆಶ್ವಯುಜ ಶುದ್ಧ ಪಾಡ್ಯದಿಂದ ನವಮಿಯವರೆಗೆ ನವರಾತ್ರಿ ಹಬ್ಬವನ್ನು ಆಚರಿಸುತ್ತಾರೆ.

ಶಕ್ತಿ ದೇವತೆಯಾದ ಚಾಮುಂಡೇಶ್ವರಿಯೇ ಈ ಹಬ್ಬದ ಆದಿಪ್ಪಾತ್ರಿ. ಈ ಒಂಭತ್ತೂ ದಿನಗಳಲ್ಲಿ ಎಲ್ಲಾ ದೇವಾನುದೇವತೆಗಳಿಗೆ ಪೂಜೆ ಸಲ್ಲಿಸಲಾಗುತ್ತದೆ. ಮೊದಲನೆಯ ದಿನದಲ್ಲಿಯೇ ಬೊಂಬೆಗಳನ್ನು ಮನೆಗಳಲ್ಲಿ ವೈಶ್ಯರು ಕೂರಿಸುತ್ತಾರೆ. ಇದನ್ನು ನೋಡಲೆಂದೆ ಸ್ನೇಹಿತರನ್ನು ಅಕ್ಕಪಕ್ಕದ ಮನೆಯವರನ್ನು ಕರೆಯುತ್ತಾರೆ.

ನವರಾತ್ರಿ ಶಕ್ತಿ ದೇವತೆಯ ಉತ್ಸವ ಶಿಷ್ಟ ರಕ್ಷಣೆಗಾಗಿ ಮತ್ತು ದುಷ್ಟರ ಮರ್ಧನಕ್ಕಾಗಿ ಪರಮೇಶ್ವರಿಯು ಚಾಮುಂಡೇಶ್ವರಿಯಾಗಿ ಅವತರಿಸಿ ಮಹಿಷಾಸುರನನ್ನು ಸಂಹರಿಸಿದಳಂತೆ. ಸರಸ್ವತಿ ದುರ್ಗಾ ದೇವತೆಗಳ ಆರಾಧನೆ ಈ ದಿನಗಳಲ್ಲಿ ನಡೆಸುತ್ತಾರೆ.

ಇವರ ಮತ್ತೊಂದು ವಿಶೇಷ ಶಮೀ ಪೂಜೆ ಇದು ಅತ್ಯಂತ ಪವಿತ್ರವಾದ ವೃಕ್ಷ. ಇದು ಶನಿದೇವರ ಪ್ರೀತಿಯ ವೃಕ್ಷವೆಂದು ಹೇಳುತ್ತಾರೆ. ಪಾಂಡವರು ಅಜ್ಞಾತವಾಸ ಕಾಲದಲ್ಲಿ ಈ ವೃಕ್ಷದಲ್ಲಿ ಆಯುಧಗಳನ್ನು ಇಟ್ಟು ಹೋದರು. ವರ್ಷದ ನಂತರ ಶಮೀ ವೃಕ್ಷದಿಂದ ಆಯುಧ ಪಡೆದ ಮೇಲೆ ಅವರ ಉತ್ಕರ್ಷವಾಗುತ್ತಾ ಹೋಯಿತು. ಅದಕ್ಕಾಗಿ ನವರಾತ್ರಿಯ ಕಾಲದಲ್ಲಿ ವಿಜಯದಶಮಿಯ ದಿನ ಸರ್ವ ವಿಜಯಕ್ಕಾಗಿ ಸರ್ವಶಕ್ತನಾದ ಅಗ್ನಿ ನಾರಾಯಣನನ್ನು ಪೂಜಿಸುವುದು ಪದ್ಧತಿಯಲ್ಲಿದೆ.

ನವರಾತ್ರಿಯ ಏಳನೇ ದಿನ ಸರಸ್ವತೀ ಪೂಜೆಯನ್ನು, ಎಂಟನೇ ದಿನವನ್ನು ದುರ್ಗಾಷ್ಟಮಿ ಎಂದೂ, ಒಂಬತ್ತನೇಯ ದಿನ ಆಯುಧ ಪೂಜೆ ಹಾಗೂ ಹತ್ತನೇ ದಿನ ವಿಜಯದಶಮಿ ಎಂದೂ ಆಚರಿಸಲಾಗುತ್ತದೆ. ವಿಜಯದಶಮಿ ವೈಶ್ಯರಿಗೆ ನಾಡ ಹಬ್ಬ ಮೈಸೂರಿನಲ್ಲಿ ವಿಶ್ವ ಪ್ರಸಿದ್ಧ ದಸರಾ ಹಬ್ಬವನ್ನು ಅತ್ಯಂತ ವಿಜೃಂಭಣೆ ಯಿಂದ ಆಚರಿಸಲಾಗುತ್ತದೆ.

ದೀಪಾವಳಿ

ಆಶ್ವಯುಜ ಬಹುಳ ತ್ರಯೋದಶಿಯಂದು ನೀರು ತುಂಬುವ ಹಬ್ಬ. ಇದರ ಮಾರನೇ ದಿನವೇ ನರಕಚತುರ್ದಶಿ. ಈ ದಿನ ಅಭ್ಯಂಜನ ಸ್ನಾನದ ಪದ್ಧತಿ ರೂಢಿಯಲ್ಲಿದೆ. ಈ ದಿನವೇ ಕೇದಾರೇಶ್ವರ ವ್ರತ ಮತ್ತು ಧನಲಕ್ಷ್ಮೀ ಪೂಜೆ ಮಾಡಲಾಗುತ್ತದೆ. ಸ್ವರ್ಣಗೌರಿ ಇಲ್ಲವೇ ವರ ಮಹಾಲಕ್ಷ್ಮಿಯನ್ನು ಆಚರಿಸುವ ರೀತಿಯಲ್ಲಿಯೇ ಈ ಹಬ್ಬವನ್ನು ಆಚರಿಸುವರು. ಕೃಷ್ಣಪಕ್ಷ ಅಥವಾ ಅಮವಾಸ್ಯೆಯೆಂದು ಬಲೀಂದ್ರ ಪೂಜೆ ಮಾಡುತ್ತಾರೆ. ಅವರವರ ಪದ್ಧತಿಗಳಿಗನುಗುಣವಾಗಿ ಕೋಟೆರಾಯನನ್ನು ನಿರ್ಮಿಸಿ ಕಳಸವಿಟ್ಟು ಪೂಜಿಸುತ್ತಾರೆ.

ಶ್ರೀ ಮಹಾನ್ ವಿಷ್ಣುವು ವಾಮನ ರೂಪದಲ್ಲಿ ಬಂದು ಬಲಿ ಚಕ್ರವರ್ತಿಯಲ್ಲಿ ಮೂರು ಪಾದಗಳಷ್ಟು ಭೂಮಿಯನ್ನು ಕೇಳಲಾಗಿ, ಅದಕ್ಕನುಸಾರವಾಗಿ ಬಲಿಯು ಅಷ್ಟು ಭೂಮಿಯನ್ನು ದಾನವಾಗಿ ಕೊಡಲು ಒಪ್ಪಿದ. ಆಗ ವಾಮನ ತ್ರಿವಿಕ್ರಮನಾಗಿ ಬೆಳೆದು ಒಂದು ಪಾದದಿಂದ ಇಡೀ ಭೂಮಂಡಲವನ್ನೇ ಅಳೆದ, ಎರಡನೇ ಪಾದದಿಂದ ಇಡೀ ಆಕಾಶವನ್ನೇ ಅಳೆಯಲು ಇನ್ನೊಂದು ಪಾದವನ್ನು ಎಲ್ಲಿಡಲೆಂದು ಕೇಳಲಾಗಿ ಬಲಿಯು ತನ್ನ ತಲೆಯ ಮೇಲೆ ಇಡಲು ಹೇಳಿದ, ಹೀಗೆ ವರ್ಷದಲ್ಲಿ ಒಂದು ದಿನ ಬರಲು ವಾಮನನು

ವರವನ್ನು ಕೊಟ್ಟನು, ಆ ದಿನವೇ ಬಲಿ ಪಾಡ್ಯಮಿ. ದುಷ್ಟ ಶಿಕ್ಷೆ ಶಿಷ್ಟ ರಕ್ಷೆಯೂ ಸಂತೋಷದ ಸಂಕೇತವೇ ಆಗಿರುವುದರಿಂದ ಪಟಾಕಿ ಸಿಡಿಸಿ ಶುಭವನ್ನು ಹಾರೈಸಿ ಪ್ರತಿ ಮನೆಯ ಬಾಗಿಲಲ್ಲೂ ದೀಪ ಹಚ್ಚಿ ಸಂತೋಷದ ಸ್ವಾಗತ ಕೋರುತ್ತಾರೆ.

ಮಕರ ಸಂಕ್ರಾಂತಿ

ಇದು ಪುಷ್ಯ ಮಾಸದಲ್ಲಿ ಬರುವ ಅತಿ ದೊಡ್ಡ ಹಬ್ಬ. ಸಾಮಾನ್ಯವಾಗಿ ಇಂಗ್ಲಿಷ್ ತಾರೀಖಿನ ಜನವರಿ ೧೪ ಅಥವಾ ೧೫ ರಂದು ಈ ಹಬ್ಬ ಬರುತ್ತದೆ. ಸೂರ್ಯ ಪಥವನ್ನಾಧರಿಸಿ ಸಂಕ್ರಾಂತಿಯನ್ನು ಆಚರಿಸಲಾಗುತ್ತದೆ. ವಿಶೇಷವಾಗಿ ಇದು ರೈತರ ಹಬ್ಬ. ಅಂದು ರೈತರು ತಮ್ಮ ಜೀವನದ ಸಂಗಾತಿಗಳಾದ ಎತ್ತು, ದನಕರಗಳನ್ನು ಸ್ವಚ್ಛಗೊಳಿಸಿ ಹೂಗಳಿಂದ ಅಲಂಕರಿಸಿ ಮೆರವಣಿಗೆ ಮಾಡುತ್ತಾರೆ. ಸಂಕ್ರಾಂತಿಯ ವಿಶೇಷ ಖಾದ್ಯ, ಎಳ್ಳು, ಕಡಲೆ ಬೀಜ, ಕಬ್ಬು, ಬೆಲ್ಲ ಇತ್ಯಾದಿ. ಸಂಕ್ರಾತಿಯ ದಿನ ವೈಶ್ಯರೆಲ್ಲರೂ ಕುಟುಂಬದ ಹಿರಿಯರ ಆಶೀರ್ವಾದ ಪಡೆದುಕೊಳ್ಳುತ್ತಾರೆ ಮತ್ತು ಎಳ್ಳು ಬೆಲ್ಲ ಅಥವಾ ಎಳ್ಳು ಸಕ್ಕರೆಯನ್ನು ಎಲ್ಲರಿಗೂ ಹಂಚುತ್ತಾರೆ. ಮನೆಯಲ್ಲಿ ಅಂದು ಸಿಹಿ ಅಡುಗೆಯನ್ನು ಮಾಡುತ್ತಾರೆ.

ಶ್ರೀವಾಸವಿ ಅಗ್ನಿ ಪ್ರವೇಶ ದಿನ

ಮಾಘಮಾಸದ ಶುದ್ಧ ಬಿದಿಗೆಯಂದು ವಾಸವಿ ಅಗ್ನಿ ಪ್ರವೇಶದ ದಿನವೆಂದು ಆರ್ಯವೈಶ್ಯ ಕುಲಬಾಂಧವರು ಆಚರಿಸುತ್ತಾರೆ. ತಮ್ಮ ಕುಲದೇವತೆಯಾದ ಶ್ರೀ ವಾಸವಿಯು ಅಗ್ನಿ ಪ್ರವೇಶ ಮಾಡಿದ ದಿನವನ್ನು 'ಆತ್ಮಾರ್ಪಣಾ' ದಿನವೆಂದು ಆಚರಿಸುತ್ತಾರೆ.

ಶಿವರಾತ್ರಿ

ಮಾಘ ಬಹುಳ ತ್ರಯೋದಶಿ-ಚತುರ್ಧಶಿಯಂದು ದೇಶಾದ್ಯಂತ ಜಾಗರಣೆ ಉಪವಾಸ ವ್ರತ ಆಚರಣೆಗಳೊಂದಿಗೆ ಶಿವರಾತ್ರಿ ಹಬ್ಬವನ್ನು ವೈಶ್ಯರು ಆಚರಿಸುತ್ತಾರೆ. ಶಿವನೇ ಈ ಹಬ್ಬದ ಆದಿದೇವತೆ ಶಿವ ವೈರಾಗ್ಯದ ಪ್ರತೀಕ. ಬಡವಬಲ್ಲಿದ ಭೇದವಿಲ್ಲದೆ ಪೂರ್ಣಅರ್ಪಣಾ ಮನೋಭಾವದಿಂದ ಈ ಹಬ್ಬವನ್ನು ಆಚರಿಸುತ್ತಾರೆ.

ಶ್ರೀ ಸತ್ಯನಾರಾಯಣ ಸ್ವಾಮಿ ವ್ರತ

ಶ್ರೀಮನ್ನಾರಾಯಣನನ್ನೇ ಪೂಜಿಸುವ ವ್ರತ ಯಾರು ಬೇಕಾದರೂ ಈ ವ್ರತವನ್ನು ಸಕಲ ಆರೋಗ್ಯ ಮತ್ತು ಸಂಪತ್ತಾಭಿವೃದ್ಧಿಗಾಗಿ ಮಾಡುವ ಸರಳ ವ್ರತ. ದೇವರಿಗೆ ನೈವೇದ್ಯ ನೀಡಿ ಶಾಸ್ತ್ರೋಕ್ತವಾಗಿ ವೇದ ಮಂತ್ರಗಳನ್ನು ಕಲಿತವರ ಮಾರ್ಗದರ್ಶನದಲ್ಲಿ ಮಾಡಿದರೆ ಪೂರ್ಣ ಫಲ ಲಭಿಸುತ್ತದೆ ಎಂಬುದು ವೈಶ್ಯರ ನಂಬಿಕೆಯಾಗಿದೆ.

೪.೨.೨. ಶ್ರೀ ವಾಸವಿ ಜಯಂತಿ

ಭಾರತವು ಪುಣ್ಯಭೂಮಿ. ಇಲ್ಲಿ ಲೆಕ್ಕವಿಲ್ಲದಷ್ಟು ಸಾಧು ಸತ್ಪುರುಷರು ಹುಟ್ಟಿರುವರು. ಅವರು ಅಸಾಧಾರಣವಾದ ಜಪ ತಪಸ್ಸು ಹೋಮ ಯಾಗಗಳನ್ನು ಮಾಡಿರುವ ಸಿದ್ಧಿಯನ್ನು ಪಡೆದಿರುವರು. ಶಿಷ್ಯರಿಗೆ ಧರ್ಮೋಪದೇಶ ಮಾಡಿರುವರು. ಅವರ ಅನುಭವಗಳು ಗ್ರಂಥರೂಪವಾಗಿ ಕೆಲವು ಉಳಿದಿವೆ. ಅವು ಧರ್ಮ ಕರ್ಮ ಸಂಸ್ಕೃತಿಗಳಿಗೆ ಆಧಾರವಾಗಿವೆ. ಭಾರತೀಯರಿಗೆ ಅವು ಪ್ರಮಾಣವಾಗಿವೆ. ಎಷ್ಟೋ ಕಾಲವಾದ ಮೇಲೆ ಮತಚಾರ್ಯರು ಹುಟ್ಟಿದರು ಅನೇಕ ಜನ ಮಹಾಪುರುಷರೂ ಹುಟ್ಟಿದರು. ಅವರು ಪ್ರಾಚೀನವಾದ ಸನಾತನ ಧರ್ಮವನ್ನು ಅನುಷ್ಠಾನ ಮಾಡಿದರು. ಮಹಾಜನರಿಗೆ ತತ್ತ್ವೋಪದೇಶ ಮಾಡಿರುವರು. ಲೋಕಪೂಜ್ಯರಾಗಿ ಅವರು ಕಣ್ಮರೆಯಾಗಿರುವರು. ಅವರ ಮಹೋಪಕಾರವನ್ನು ನೆನೆಯುತ್ತಾ ಪ್ರತಿವರ್ಷ ಜನರು ಅವರ ಜಯಂತಿಯನ್ನು ಆಚರಿಸುತ್ತಾರೆ.

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮ ಸಂಸ್ಥಾಪನಾರ್ಥಾಯ ಸಂಭಾವಾಮಿ ಯುಗೇ ಯುಗೇ ॥

(ಸತ್ಪುರುಷರನ್ನು ಕಾಪಾಡುವುದಕ್ಕಾಗಿ ದುಷ್ಟರನ್ನು ನಾಶ ಮಾಡುವುದಕ್ಕಾಗಿ ಮತ್ತು ಧರ್ಮವನ್ನು ನೆಲೆಗೊಳಿಸುವುದಕ್ಕಾಗಿ ಪ್ರತಿಯೊಂದು ಯುಗದಲ್ಲಿಯೂ ಅವತರಿಸುತ್ತೇನೆ) ಎಂದು ಶ್ರೀ ಕೃಷ್ಣ ಪರಮಾತ್ಮನು ಹೇಳಿರುವನು. ಅಂತೆಯ ಭಗವಂತನು ಮತ್ಸ್ಯಾದಿ ದಶಾವತಾರಗಳನ್ನು ತಾಳಿರುವನು. ಲೋಕ ಕಂಟಕರನ್ನು ಸಂಹಾರ ಮಾಡಿರುವನು, ಸತ್ಪುರುಷರನ್ನು ಕಾಪಾಡಿರುವನು.

ಈಗ ಮಾಡುತ್ತಿರುವ ಶ್ರೀ ರಾಮೋತ್ಸವ, ಶ್ರೀ ಕೃಷ್ಣಾಷ್ಟಮಿ, ಶ್ರೀ ನರಸಿಂಹ ಜಯಂತಿ ಮೊದಲಾದವುಗಳು ಪರಮಾತ್ಮನ ಅವತಾರವನ್ನು ನಡೆಯುವುದಕ್ಕಾಗಿ ಅಲ್ಲವೆ ಲೋಕ ಮಾತೆಯಾದ ವಾಸವಿ ದೇವಿಯು ಕೂಡ ಕಲಿಯುಗದಲ್ಲಿ ಅವತಾರ ಮಾಡಿರುವಳು ದಶಾವತಾರಗಳಲ್ಲಿ ದುಷ್ಟ ರಾಕ್ಷಸರ ಸಂಹಾರವಾಗಿದೆ. ವಾಸವಿಯು ಕೆಟ್ಟವರನ್ನು ಸಂಹಾರ ಮಾಡಲಿಲ್ಲ. ಅಹಿಂಸೆಯಿಂದ ಮತ್ತು ಲೋಕೋತ್ತರವಾದ ಆತ್ಮ ಬಲಿದಾನದಿಂದ ದುಷ್ಟರನ್ನು ನಿಗ್ರಹಿಸಿರುವಳು. ಲೋಕಕ್ಕೆ ಶಾಂತಿಯನ್ನುಂಟು ಮಾಡಿರುವಳು. ಧರ್ಮವನ್ನು ಕಾಪಾಡಿರುವಳು ಇದೊಂದು ವಿಶೇಷವಾಗಿದೆ. ವಾಸವಾಂಬೆಯ ವಿಷಯವಾಗಿ ಸಂಸ್ಕೃತ, ತೆಲುಗು, ಕನ್ನಡ, ತಮಿಳು ಭಾಷೆಗಳಲ್ಲಿ ಅನೇಕ ಪುರಾಣಗಳ ಅಥವಾ ಗ್ರಂಥಗಳ ರಚನೆಯಾಗಿದೆ. ವಾಸವಿಯನ್ನು ವಿಷ್ಣುವರ್ಧನ ಮಹಾರಾಜನು ಮೋಹಿಸಿದನೆಂದು ಆ ಗ್ರಂಥಕಾರರೆಲ್ಲಾ ನಿರೂಪಿಸಿರುವರು.

ವೆಂಗಿ ದೇಶದಲ್ಲಿ ರಾಜ್ಯಭಾರ ಮಾಡಿದ ಪೂರ್ವ ಚಾಲುಕ್ಯ ರಾಜರಲ್ಲಿ ವಿಮಲಾದಿತ್ಯ ಅಥವಾ ಏಳನೇಯ ವಿಷ್ಣುವರ್ಧನನೇ ವಾಸವಿ ಕನ್ಯೆಯನ್ನು ಮೋಹಿಸಿದನೆಂದು, ಇತಿಹಾಸದಿಂದ ತಿಳಿಯ ಬರುತ್ತದೆ. ಆ ವಿಷ್ಣುವರ್ಧನನ ಕ್ರಿ.ಶ. ೧೦೧೫ರಿಂದ ೧೦೨೨ರವರೆಗೆ ಏಳು ವರ್ಷಗಳ ಕಾಲ ರಾಜ್ಯಭಾರ ಮಾಡಿದನೆಂದು ಚರಿತ್ರೆಯಲ್ಲಿ ಉಲ್ಲೇಖಿಸಿರುವುದರಿಂದ ವಾಸವಿಯು ಆ ಕಾಲದವಳೆಂದು ನಿರ್ಧರಿಸಬಹುದು.

ವಸಂತ ಋತು ವೈಶಾಖ ಮಾಸ ಶುಕ್ಲಪಕ್ಷ ಶುಕ್ರವಾರ ವಾಸವಿಯು ಜನಿಸಿದಳೆಂದು ಪುರಾಣಕಾರರೆಲ್ಲಾ ಒಮ್ಮತವಾಗಿ ಹೇಳಿರುವರು. ಜನ್ಮ ತಿಥಿ ಜನ್ಮ ನಕ್ಷತ್ರಗಳ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ವಾಸವಿಯ ಜನ್ಮ ನಕ್ಷತ್ರದ ವಿಷಯವಾಗಿ ಪುನರ್ವಸು ಶ್ರವಣ ಉತ್ತರಾ ಎಂಬುದಾಗಿ ಒಬ್ಬೊಬ್ಬರು ಒಂದೊಂದು ನಕ್ಷತ್ರವನ್ನು ಬರೆದಿರುವರು. ಹಾಗೆಯೇ ವಾಸವಿಯು ದಶಮಿಯ ದಿನ ಹುಟ್ಟಿದವಳೆಂದು ಅನೇಕರು ಬರೆದಿದ್ದಾರೆ. ಸಪ್ತಮಿಯ ದಿನದಂದು ಜನಿಸಿದಳೆಂದು ಕೆಲವು ಪುರಾಣಕಾರರು ಬರೆದಿರುವರು. ಎಲ್ಲಾ ಮಾಸಗಳ ಪೂರ್ಣಿಮೆಯ ದಿನ ಮಾಸಕ್ಕನುಗುಣವಾದ ನಕ್ಷತ್ರವಿರುತ್ತದೆ. ಅಂತೆಯೇ ವೈಶಾಖ ಮಾಸದ ಪೌರ್ಣಮಿಯ ವಿಶಾಖ ನಕ್ಷತ್ರದಿಂದ ಕೂಡಿರುತ್ತದೆ. ಇದು ಜ್ಯೋತಿಶಾಸ್ತ್ರದ ಸಿದ್ಧಾಂತವಾಗಿದೆ. ಆ ವಿಶಾಖ ನಕ್ಷತ್ರಕ್ಕನುಗುಣ ವಾಗಿ ಪರಿಗಣಿಸಿದರೆ ಪುನರ್ವಸು ನಕ್ಷತ್ರವು ವೈಶಾಖ ಶುದ್ಧ ಸಪ್ತಮಿಗೆ ಬರುವುದು. ಉತ್ತರಾ ನಕ್ಷತ್ರವು ದಶಮಿಯ ದಿನಕ್ಕೆ ಹೊಂದಿಕೆಯಾಗುವುದು. ಶ್ರವಣ ನಕ್ಷತ್ರವು ಸಪ್ತಮಿ ಅಥವಾ ದಶಮಿ ತಿಥಿಗಳಿಗೆ ಹೊಂದಿಕೆ ಯಾಗುವುದಿಲ್ಲ. ಆದ್ದರಿಂದ ಆ ನಕ್ಷತ್ರವನ್ನು ವಾಸವಿಯ ಜನನದ ವಿಷಯದಲ್ಲಿ ಪ್ರಮಾಣವಾಗಿ ಅಂಗೀಕರಿಸು ವುದಿಲ್ಲ. ವೈಶ್ಯರು ಸ್ಮಾರ್ತ ಸಂಪ್ರದಾಯದವರು ಅವರು ಹಬ್ಬ ಹರಿದಿನಗಳನ್ನು ಆಚರಿಸುವಾಗ ತಿಥಿಗೆ ಪ್ರಾಧಾನ್ಯತೆ ಕೊಡುವರೇ ಹೊರತು ನಕ್ಷತ್ರಕ್ಕಲ್ಲ. ಶ್ರೀ ಕೃಷ್ಣನು ಹುಟ್ಟಿದ್ದು ಅಷ್ಟಮಿ ತಿಥಿ, ರೋಹಿಣಿ ನಕ್ಷತ್ರವಾದರೆ, ವೈಶ್ಯರು ಶ್ರಾವಣ ಬಹುಳ ಅಷ್ಟಮಿಯ ದಿನ ಶ್ರೀ ಕೃಷ್ಣನ ಜನ್ಮೋತ್ಸವವನ್ನು ಆಚರಿಸುವರೇ ಹೊರತು ರೋಹಿಣಿ ನಕ್ಷತ್ರದ ದಿನವಲ್ಲ. ಹಾಗೆಯೇ ಶ್ರೀ ರಾಮೋತ್ಸವ ಮೊದಲಾದವು ಆದ್ದರಿಂದ ವೈಶ್ಯರು ವಾಸವಿಯ ಜಯಂತಿಯನ್ನು ಆಚರಿಸುವಾಗ ಜನ್ಮ ನಕ್ಷತ್ರವನ್ನು ಪರಿಗಣಿಸದೆ ಜನ್ಮ ತಿಥಿಯನ್ನು ಪುರಸ್ಕರಿಸ ಬೇಕಾದರೆ ಹಾಗಾದರೆ ವಾಸವಿಯ ಜಯಂತಿಯು ಸಪ್ತಮಿಯೆ ಅಥವಾ ದಶಮಿಯೇ ವಾಸವಿಯ ಜನ್ಮವು ದಶಮಿಯ ದಿನವೆಂದು ಬಹಳ ಗ್ರಂಥಗಳಲ್ಲಿ ಪ್ರತಿಪಾದಿಸಿರುವುದರಿಂದಲೂ ದಕ್ಷಿಣ ಭಾರತದ ಅನೇಕ ಕಡೆ ಆರ್ಯವೈಶ್ಯರು ದಶಮಿಯ ದಿನ ವಾಸವಿ ಜಯಂತಿಯನ್ನು ಆಚರಿಸುತ್ತಿರುವುದರಿಂದಲೂ ಎಲ್ಲಾ ಪಂಚಾಂಗಗಳಲ್ಲಿ ವೈಶಾಖ ಶುದ್ಧ ದಶಮಿ 'ವಾಸವಿ ಜಯಂತಿ' ಎಂದು ಉಲ್ಲೇಖಿಸುತ್ತಿರುವುದರಿಂದಲೂ ನಾಡಿನಲ್ಲಿರುವ ಆರ್ಯ ವೈಶ್ಯರೆಲ್ಲಾ ವೈಶಾಖ ಶುದ್ಧ ದಶಮಿಯ ದಿನವೇ ವಾಸವಿ ಜಯಂತಿಯನ್ನು ಸಂದೇಹ ವಿಲ್ಲದೆ ಆಚರಿಸಬಹುದು. ಒಂದು ದಿನಕ್ಕಿಂತ ಹೆಚ್ಚು ದಿನಗಳವರೆಗೆ ಜಯಂತಿಯನ್ನು ಆಚರಿಸುವವರು ಸಪ್ತಮಿಯಿಂದಲೇ ಕಾರ್ಯಕ್ರಮವನ್ನು ಪ್ರಾರಂಭಿಸಬಹುದು.

ವಾಸವಿ ಜಯಂತಿಯಲ್ಲಿ ಸಾಮಾನ್ಯವಾಗಿ ಎಲ್ಲಾ ಊರುಗಳಲ್ಲಿ ದೇವಿಯ ವಿಶೇಷ ಪೂಜೆ ಅಲಂಕಾರ ವೈಭವೋಪೇತವಾದ ಉತ್ಸವ ಸಮಾರಾಧನೆ ಇವು ನಡೆಯುವುದು ರೂಢಿಯಾಗಿದೆ. ಇವಿಷ್ಟರಿಂದಲೇ ವೈಶ್ಯರು ದೇವಿಯ ಕೃಪೆಗೆ ಪಾತ್ರರಾದರೆಂದು ಭಾವಿಸುವುದು ಸರಿಯಲ್ಲ. ಭೋಗವಿಲಾಸಗಳನ್ನು ತೃಣೀಕರಿಸಿದ ಆ ದೇವಿಯೇ ವೈಭವದ ಮೆರವಣಿಗೆಯಿಂದ ಪ್ರಸನ್ನಳಾಗಲಾರಳು. ಭಕ್ತಿಯಿಲ್ಲದೆ ಅವಳ ಅನುಗ್ರಹ ದೊರೆಯು ವುದಿಲ್ಲ. ವಾಸವಿಯ ವಿಷಯವನ್ನು ನಾವು ಸರಿಯಾಗಿ ತಿಳಿಯಲಿಲ್ಲ. ಬೇರೆ ಜಾತಿಯವರಿಗೂ ತಿಳಿಸಲಿಲ್ಲ

[illegible]

ಕೇವಲ ವೈಭವವನ್ನು ಪ್ರದರ್ಶಿಸಿದರೆ ವಿವೇಕಿಗಳು ಮೆಚ್ಚಲಾರರು. ಕೆಲವು ಊರುಗಳಲ್ಲಿ ಹರಿಕಥೆ ಅಥವಾ ಕೀರ್ತನೆಗಳನ್ನು ಏರ್ಪಡಿಸುವರು. ವಾಸವಿ ಜಯಂತಿಯ ದಿನ ಯಾವುದೋ ಕಥಾ ಕಾಲಕ್ಷೇಪ ಮಾಡುವುದೂ ಸರಿಯಿಲ್ಲ. ನರಸಿಂಹ ಜಯಂತಿಯಲ್ಲಿ ಸೀತಾ ಕಲ್ಯಾಣ, ರಾಮೋತ್ಸವದಲ್ಲಿ ಶ್ರೀ ಕೃಷ್ಣಲೀಲೆ, ಕೃಷ್ಣಾಷ್ಟಮಿಯಲ್ಲಿ ಪ್ರಹ್ಲಾದ ಚರಿತ್ರೆ ಹರಿಕಥೆಗಳನ್ನು ಮಾಡಿಸಿದರೆ ಅಸಂಗತವಾಗುವುದು ಹಾಗೆಯೇ ವಾಸವಿ ಜಯಂತಿಯಲ್ಲಿ ಬೇರೆ ವಿಷಯದ ಪ್ರಸಂಗವೂ ಅಸಂಗತ.

ಕೆಲವರು ಕನ್ನಿಕಾ ಪರಮೇಶ್ವರಿ ವಿಷಯವಾಗಿಯೇ ಪ್ರವಚನ ಅಥವಾ ಕಥಾ ಕಾಲಕ್ಷೇಪ ಮಾಡುವುದಾಗಿ ಹೇಳುವರು. ಅವರಿಗೆ ಕನ್ನಿಕಾಪರಮೇಶ್ವರಿಯ ಸರಿಯಾದ ಕಥೆ ಗೊತ್ತಿದ್ದರೆ ಸಂತೋಷ ಅದಿಲ್ಲದೆ ವೈಶ್ಯಕುಲಕ್ಕೆ ಕಳಂಕವಾದ ಶಾಪಗಳೋ, ಕುಚೇಷ್ಟೆಗಳೋ ಇರುವ ಕನ್ನಿಕಾ ಪುರಾಣದ ಕಥೆಯನ್ನು ಹೇಳುತ್ತಾರೆ. ಅದಕ್ಕೆ ಅವಕಾಶ ನೀಡಬಾರದು. ಮೊದಲನೆಯ ದಿನದಲ್ಲಿ ವೈಶ್ಯ ಕುಲ ಮಾತೆಯ ದಿನವೆಂದು ಆಚರಿಸಬೇಕು. ಆ ದಿನ ವಾಸವಾಂಬೆಯ ತ್ಯಾಗ ಧರ್ಮನಿಷ್ಠೆ ಮತ್ತು ಆಧುನಿಕ ಮಹಿಳೆಯರ ಸಮಸ್ಯೆಗಳ ವಿಷಯವಾದ ವಿಚಾರ ಗೋಷ್ಠಿಯನ್ನು ನಡೆಸುತ್ತಾರೆ. ಇದರಲ್ಲಿ ಪುರುಷರೂ ಭಾಗಿಗಳಾಗುತ್ತಾರೆ. ಎರಡನೆಯ ದಿನ ಬಾಲ ನಗರರ ಗೋಷ್ಠಿಯನ್ನು ಏರ್ಪಡಿಸುತ್ತಾರೆ. ಆ ದಿನ ಮಕ್ಕಳ ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಕಂಠಪಾಠ ಸ್ಪರ್ಧೆ, ವ್ಯಾಯಾಮ ಸ್ಪರ್ಧೆ, ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಿ ಅವುಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಡುತ್ತಾರೆ. ಪ್ರಸಿದ್ಧ ಪರೀಕ್ಷೆಗಳಲ್ಲಿ ಉತ್ತಮ ರೀತಿಯಿಂದ ತೇರ್ಗಡೆಯಾದ ಆಯಾ ಊರಿನ ವೈಶ್ಯ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಡುತ್ತಾರೆ.

ಮೂರನೆಯ ದಿನ ವೈಶ್ಯಕುಲ ಸೇವಕರ ದಿನವೆಂದು ಆಚರಿಸುತ್ತಾರೆ. ವೈಶ್ಯ ಕುಲದ ಸೇವೆಯನ್ನು ವಿಶೇಷ ವಾಗಿ ಮೊದಲಿನಿಂದಲೂ ಮಾಡಿದ ಮಹಾ ಪುರುಷರನ್ನು ಆ ದಿನ ಸ್ಮರಿಸುತ್ತಾರೆ ಮತ್ತು ಉತ್ತಮ ಕುಲ ಸೇವೆಯನ್ನು ಮಾಡುತ್ತಿರುವವರಲ್ಲಿ ವರ್ಷಕ್ಕೊಬ್ಬರನ್ನಾದರೂ ಆಹ್ವಾನಿಸಿ ಅವರಿಗೆ ಸನ್ಮಾನ ಮಾಡುತ್ತಾರೆ.

ವಾಸವಿ ಜಯಂತಿಯ ಅಂಗವಾಗಿ ಸಾಮೂಹಿಕ ಉಪನಯನ ಹಾಗೂ ಮದುವೆಗಳನ್ನು ಎಲ್ಲಾ ಊರುಗಳ ವೈಶ್ಯ ಸಂಘದವರು ಸರಳ ರೀತಿಯಾಗಿ ಆಚರಿಸುವುದು ಉಚಿತವಾಗಿದೆ. ಕರ್ಮವು ವೇದ ವಿಧಿಯಂತೆ ಸಾರಂಗವಾಗಿ ನಡೆಸುತ್ತಾರೆ.

ವಾಸವಿ ಜಯಂತಿಯಲ್ಲಿ ವೈಶ್ಯ ಕುಲದ ವಿದ್ವಾಂಸರಿಂದ ಪ್ರವಚನ ಅಥವಾ ಭಾಷಣವನ್ನು ಏರ್ಪಡಿಸುತ್ತಾರೆ. ಸೂಕ್ತ ಧಾರ್ಮಿಕ ವಿಚಾರ ಗೋಷ್ಠಿಯನ್ನು ಏರ್ಪಡಿಸಿ ವೈಶ್ಯ ಕುಲದ ಸರಿಯಾದ ಧರ್ಮ ಕರ್ಮ ಆಚಾರಗಳ ವಿಷಯವಾಗಿ ವಿಮರ್ಶೆ ಮಾಡುತ್ತಾರೆ. ಈ ರೀತಿಯಾಗಿ ವಾಸವಿ ಜಯಂತಿಯನ್ನು ಇನ್ನೂ ಅದ್ದೂರಿಯಿಂದ ಆಚರಿಸುತ್ತಾರೆ.

೪.೨.೩. ಸಂಧ್ಯಾವಂದನೆ

ವೈಶ್ಯರು ಪ್ರತಿನಿತ್ಯ 'ಸಂಧ್ಯಾವಂದನೆ'ಯನ್ನು ಮಾಡುತ್ತಾರೆ. ವಿವಾಹವಾದ ನಂತರ ಈ ಕಾರ್ಯಕ್ರಮವನ್ನು ಮಾಡುವ ಪದ್ಧತಿ ಇವರಲ್ಲಿದೆ. ಸಂಧ್ಯಾವಂದನೆಯನ್ನು ಮಾಡಿದರೆ ಮಾತ್ರ ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆ ಇವರಲ್ಲಿ ಇದೆ. ಕ್ಷೇತ್ರಕಾರ್ಯದಲ್ಲಿ ಸಂಧ್ಯಾವಂದನೆಯ ಬಗ್ಗೆ ದೊರೆತ ಮಾಹಿತಿ ಹೀಗಿದೆ.

'ಸಂಧ್ಯಾವಂದನೆ'ಯನ್ನು ದಿನಕ್ಕೆ ಮೂರು ಬಾರಿ ಮಾಡಬೇಕೆಂದು ಶಾಸ್ತ್ರ ಹೇಳುತ್ತದಂತೆ. ಸಂಧ್ಯಾ ಎಂದರೆ ಸಂಧಿ ಸಮಯವೆಂದು ತಿಳಿದು ಬರುತ್ತದೆ. ಪ್ರಾತಃಕಾಲ ಸೂರ್ಯ ಹುಟ್ಟುವ ಮುಂಚೆ ಕತ್ತಲಿರುತ್ತದೆ. ಸೂರ್ಯ ಹುಟ್ಟಿದ ನಂತರ ಬೆಳಕಾಗುತ್ತದೆ. ಈ ಕತ್ತಲು ಮತ್ತು ಬೆಳಕಿನ ಮಧ್ಯದ ಕಾಲವನ್ನೇ "ಸಂಧ್ಯಾಕಾಲ" ಎಂದು ವೈಶ್ಯರು ಕರೆಯುತ್ತಾರೆ.

ಅದೇ ರೀತಿ ಮಧ್ಯಾಹ್ನ ಸೂರ್ಯನ ಪ್ರಖರತೆ ತುಂಬಾ ಜಾಸ್ತಿಯಾಗಿ ಸೂರ್ಯ ಕಿರಣಗಳು ಅಗ್ನಿಯಂತೆ ಸುಡುತ್ತದೆ. ಈ ಸಮಯಕ್ಕೆ "ಮಧ್ಯಾನ್ಹಿಕ" ಎಂದು ಹೇಳುತ್ತಾರೆ. ಹಾಗೆಯೇ ಸಾಯಂಕಾಲ ಬೆಳಕು ಹೋಗಿ ಕತ್ತಲು ಬರುವ ಸಮಯವನ್ನು ಸಂಧಿಕಾಲ ಎನ್ನುತ್ತಾರೆ. ಹೀಗೆ ವೈಶ್ಯರು ದಿನಕ್ಕೆ ಮೂರು ಬಾರಿ ಸಂಧ್ಯಾವಂದನೆಯನ್ನು ಮಾಡುತ್ತಾರೆ. ಈ ಸಂಧ್ಯಾವಂದನೆಯನ್ನು ಮಾಡುವಾಗ ಮುಂಜಾನೆ ಸಂಧ್ಯಾವಂದನೆಯನ್ನು ಮಾಡುವಾಗ "ಪ್ರಾರ್ಥ ಸಂಧ್ಯಾಮು ಪಾಸಿಶ್ಯೇ" ಎಂದು ಮಂತ್ರವನ್ನು ಹೇಳುತ್ತಾರೆ. ಮಧ್ಯಾಹ್ನಕ್ಕಾದರೆ "ಮಧ್ಯಾನ್ಹಿಕ ಸಂಧ್ಯಾಮುಪಾಸಿಶ್ಯೇ" ಎಂದು ಮಂತ್ರವನ್ನು ಉಪಚರಿಸುತ್ತಾರೆ. ಸಾಯಂಕಾಲ ಮಾಡುವಾಗ "ಸಾಯ ಸಂಧ್ಯಾಮುಪಾಸಿಶ್ಯೇ" ಎಂದು ಮಂತ್ರವನ್ನು ಹೇಳುತ್ತಾ ಸಂಧ್ಯಾವಂದನೆಯನ್ನು ದಿನಕ್ಕೆ ಮೂರು ಬಾರಿ ಮಾಡುವ ಸಂಸ್ಕೃತಿಯನ್ನು ಪುರಾತನ ಕಾಲದಿಂದಲೂ ವೈಶ್ಯರು ಮಾಡಿಕೊಂಡು ಬಂದಿದ್ದಾರೆ ಈ ಆಧುನಿಕ ಕಾಲದಲ್ಲಿಯೂ ಸಹ ಇಂತಹ ಸಂಪ್ರದಾಯವನ್ನು ಮರೆತಿಲ್ಲ ಎಂದು ತಿಳಿಯಬಹುದಾಗಿದೆ.

ಸಂಧ್ಯಾವಂದನೆಗೆ ಬಳಸುವ ಪೂಜಾ ಸಾಮಗ್ರಿಗಳು

ವೈಶ್ಯರು ಪೂಜಾ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಮಾಡಿಕೊಂಡು ಬಂದಿದ್ದಾರೆ. ಈಗಲೂ ಸಹ ಇಂತಹ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆ. ಈ ಸಂಧ್ಯಾವಂದನೆಗೆ ಬೇಕಾಗಿರುವ ಸಾಮಗ್ರಿಗಳ ವಿವರಗಳನ್ನು ನೀಡಿದ್ದಾರೆ.

ಒಂದು ತಂಬಿಗೆ ಶುದ್ಧ ನೀರು, ಒಂದು ತಟ್ಟೆ, ಎರಡು ಪಂಚಪಾತ್ರೆಗಳು, ಒಂದು ಉದ್ಧರಣೆ ಒಂದು ಕೈಗಂಟೆ, ಹರಿಶಿನ, ಕುಂಕುಮ, ಮಂತ್ರಾಕ್ಷತೆ, ಗಂಧ, ಬಿಡಿ ಹೂ, ತುಳಸೀ, ಕಟ್ಟಿದ ಹೂ ಊದಿನ ಕಡ್ಡಿ, ಕರ್ಪೂರ, ತುಪ್ಪದ ಬತ್ತಿ, ತೆಂಗಿನಕಾಯಿ, ಬಾಳೆಹಣ್ಣು, ಕಾಯಿಸದೇ ಇರುವ ಹಾಲು ಮೊಸರು, ಜೇನುತುಪ್ಪ, ತುಪ್ಪ, ಸಕ್ಕರೆ, ವೀಳ್ಯದೆಲೆ, ಅಡಿಕೆ, ನೈವೇದ್ಯಕ್ಕೆ ಹಣ್ಣುಗಳು, ಅಥವಾ ಒಣಗಿದ ಹಣ್ಣು (ದ್ರಾಕ್ಷಿ, ಖರ್ಜೂರ, ಅಂಜೂರ, ಬಾದಾಮಿ) ಕಲ್ಲುಸಕ್ಕರೆ ಕುಳಿತುಕೊಳ್ಳಲು ಚಾಪೆ ಅಥವಾ ಮಣೆ, ಏಕಾರತಿ, ಕರ್ಪೂರದಾರತಿ,

ದೀಪದ ಕಂಬ, ಬೆಂಕಿಪೊಟ್ಟಣ ದೀಪಕ್ಕೆ ಎಣ್ಣೆ, ಹೂ ಬತ್ತಿ, ವಿಶೇಷ ದಿನಗಳಲ್ಲಾದರೆ ಹೂವಿನ ಹಾರ, ಗೆಜ್ಜೆವಸ್ತ್ರಗಳು, ಜನಿವಾರ ಮೂರು ಮತ್ತು ಐದು ಆರತಿ ದೀಪಗಳು, ನೈವೇದ್ಯಕ್ಕೆ ಪಂಚಭಕ್ಷ್ಯ ಪರಮಾನ್ನಗಳು ಸಂಧ್ಯಾವಂದನೆಯ ಮತ್ತು ಸರಳ ಪೂಜೆಗೆ ಅತ್ಯಾವಶ್ಯಕವಾದ ಸಾಮಾಗ್ರಿಗಳು ವೈಶ್ಯರು ಈ ರೀತಿಯಾಗಿ ಈ ಎಲ್ಲಾ ವಸ್ತುಗಳೊಂದಿಗೆ ಈ ಪೂಜೆಯನ್ನು ಮಾಡುತ್ತಾರೆ.

ಸಂಧ್ಯಾವಂದನೆಯ ವಿಧಾನ

ಮೊದಲು ಸ್ನಾನ ಮುಗಿದ ನಂತರ ಒಂದು ಸ್ವಚ್ಛವಾದ ಸ್ಥಳದಲ್ಲಿ ಕುಳಿತುಕೊಂಡು ಚಾಪೆಯನ್ನು ಅಥವಾ ಮಣೆಯ ಮೇಲೆ ಕುಳಿತುಕೊಂಡು ಓಂ ಶ್ರೀ ಗುರುಭ್ಯೋ ನಮಃ ಎಂದು ಕೈ ಮುಗಿದುಕೊಂಡು ಗಣೇಶ ಪ್ರಾರ್ಥನೆಯನ್ನು ಮಾಡುತ್ತಾರೆ.

ವೈಶ್ಯರು ಗಣೇಶ ಪ್ರಾರ್ಥನೆ ಮಾಡುವಂತಹ ಸಂದರ್ಭದಲ್ಲಿ
ಶುಕ್ಲಾಂಬರಧರಂ ವಿಷ್ಣು ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ ॥

ಅಂದರೆ ಸಂಧ್ಯಾವಂದನೆ ಮಾಡುವ ಮುಂಚೆ ವೈಶ್ಯರು ಈ ಶ್ಲೋಕವನ್ನು ಜಪಿಸುತ್ತಾರೆ. ಏಕೆಂದರೆ ಮೊದಲು ನಮ್ಮಲ್ಲಿರುವ ಎಲ್ಲಾ ವಿಘ್ನಗಳು ನಾಶವಾಗಲಿ ಎನ್ನುವುದಕ್ಕಾಗಿ ಈ ಮಂತ್ರವನ್ನು ಜಪಿಸುತ್ತಾರೆ. ನಂತರ ಸಂಧ್ಯಾವಂದನೆಯನ್ನು ಪ್ರಾರಂಭಿಸುತ್ತಾರೆ. ತಂಬಿಗೆಯಿಂದ ಎರಡೂ ಪಂಚಪಾತ್ರೆಗಳಲ್ಲಿ ನೀರನ್ನಿಟ್ಟು ಕೊಂಡು ದೇವರಿಗೂ ಅವರಿಗೂ ಅಂದರೆ ಸಂಧ್ಯಾವಂದನೆಯನ್ನು ಮಾಡುವಂತಹ ವ್ಯಕ್ತಿಗೂ ಮಧ್ಯೆ ಸ್ವಲ್ಪ ಬಲಭಾಗದಲ್ಲಿಟ್ಟುಕೊಳ್ಳುತ್ತಾರೆ. ನಂತರ ಎಡಗೈನಲ್ಲಿ ಒಂದು ಉದ್ಧರಣೆ ನೀರನ್ನು ಇಟ್ಟುಕೊಂಡು ಬಲಗೈ ಹೆಬ್ಬೆರಳು, ಮಧ್ಯಮ ಮತ್ತು ಅನಾಮಿಕ ಬೆರಳುಗಳಿಂದ ಜಿಂಕೆ ಮೂತಿಯಂತೆ ಬೆರಳುಗಳನ್ನು ಜೋಡಿಸಿಕೊಂಡು ಉದ್ಧರಣೆ ನೀರನ್ನು ಅದ್ದಿಕೊಂಡು ಶಿರಸ್ಸಿಗೂ ಶರೀರಕ್ಕೂ ಪ್ರೋಕ್ಷಿಸಿಕೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ಉಪಯೋಗಿಸುವ ಮಂತ್ರ.

ಅಪವಿತ್ರಃ ಪವಿತ್ರೋವಾ ಸರ್ವಾವಾಸ್ಥಾಂ ಗತೋಪಿವಾ ।
ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರ ಶ್ಶುಚೀ ॥
ಎಂದು ಜಪಿಸುತ್ತಾರೆ ಈ ಸಂಧ್ಯಾವಂದನೆಯನ್ನು ಮಾಡುವ ಕ್ರಿಯೆ

ಒಂದು ಉದ್ಧರಣೆ ನೀರನ್ನು ಬಲ ಅಂಗೈ ಮೇಲೆ ಹಾಕಿಕೊಂಡು ಸೇವಿಸಿ, ಓಂ ಕೇಶವಾಯ ನಮಃ ಎಂದು ಹೇಳುತ್ತಾರೆ. ಓಂ ನಾರಾಯಣ ಸ್ವಾಹಾ, ಓಂ ಮಾಧಾವಾಯ ಸ್ವಾಹಾ, ಓಂ ಗೋವಿಂದಾಯ ನಮಃ ಎಂದು ಹೀಗೆ ಎಲ್ಲಾ ದೇವರ ನಾಮಸ್ಮರಣೆಸುತ್ತ ಸಂಧ್ಯಾವಂದನೆಯನ್ನು ವೈಶ್ಯರು ಮಾಡುತ್ತಾರೆ. ಇದನ್ನು ಮಾಡುವ ಉದ್ದೇಶ ಮನಸ್ಸಿನ ಏಕಾಗ್ರತೆ ಹಾಗೂ ಚಂಚಲತೆಯನ್ನು ಕಡಿಮೆ ಮಾಡುವ ಉದ್ದೇಶ ಎಂದು ವೈಶ್ಯರು ಹೇಳುತ್ತಾರೆ.

೪.೨.೪. ಯಜ್ಞೋಪವೀತ ಧಾರಣೆ

ವೈಶ್ಯರು ವಿವಾಹವಾದ ನಂತರ ಯಜ್ಞೋಪವೀತವನ್ನು ಧರಿಸುತ್ತಾರೆ. 'ಉಪವೀತ' ಎಂದರೆ ಜನಿವಾರ ಇದನ್ನು ರೇಷ್ಮೆ ಧಾರಗಳಿಂದ ತಯಾರಿಸುತ್ತಾರೆ. ಇದನ್ನು ಪ್ರತಿಯೊಬ್ಬ ವೈಶ್ಯ ಜನಾಂಗದವರು ಈ ಜನಿವಾರ ವನ್ನು ಧರಿಸುತ್ತಾರೆ. ವಿವಾಹವಾದ ನಂತರ ಇಲ್ಲವೇ ಉಪನಯನವಾದ ನಂತರವೇ ಇದನ್ನು ಧರಿಸಬೇಕು ಎನ್ನುವ ಸಂಪ್ರದಾಯ ವೈಶ್ಯರಲ್ಲಿ ನಡೆದು ಬಂದಿದೆ.

ಉಪವೀತ ಕ್ರಮ

ಈ ಜನಿವಾರವನ್ನು ಅಥವಾ ಯಜ್ಞೋಪವೀತಗಳನ್ನು ನೀರಿನಲ್ಲಿ ನೆನಸಿ ಗಂಟು ಮತ್ತು ಐದು ಕಡೆ ಅರಿಶಿನ ಕುಂಕುಮಗಳನ್ನು ಇರಿಸಿ ಕೈಯಲ್ಲಿ ಮುಚ್ಚಿಟ್ಟುಕೊಂಡು ಹತ್ತು ಸಾರಿ ಗಾಯತ್ರಿ ಮಂತ್ರವನ್ನು ಜಪಿಸಿ ನಂತರ ಒಂದೊಂದಾಗಿ ಇದನ್ನು ಧರಿಸುತ್ತಾರೆ. ಗಣೇಶ ಪ್ರಾರ್ಥನೆಯನ್ನು ಮಾಡುತ್ತಾರೆ. ಏಕೆಂದರೆ ತನ್ನಲ್ಲಿರುವ ವಿಘ್ನಗಳ ನಾಶಕ್ಕಾಗಿ ಗಣೇಶ ಪ್ರಾರ್ಥನೆಯನ್ನು ಮಾಡುತ್ತಾರೆ. ನಂತರ ಆಚಮನವನ್ನು ಮಾಡುತ್ತಾರೆ. ಹಾಗೂ ಪ್ರಾಣಾಯಾಮವನ್ನು ಮಾಡುತ್ತಾರೆ. ಸಂಕಲ್ಪ ಮಾಡಿಕೊಳ್ಳುತ್ತಾರೆ. ಯಜ್ಞೋಪವೀತವನ್ನು ಹಾಕಿ ಕೊಳ್ಳುವ ಸಂದರ್ಭದಲ್ಲಿ ಅವರು ಈ ಮಂತ್ರವನ್ನು ಜಪಿಸುತ್ತಾರೆ.

ಮಮ ಉಪಾತ್ತದುರಿತ ಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥ್ಯಂ ಶ್ರೌತ

ಸ್ಮಾರ್ತ ಕರ್ಮಾನುಷ್ಠಾನ ಯೋಗ್ಯತಾ ಸಿಧ್ಯರ್ಥಂ ಬ್ರಹ್ಮತೇಜೋಭಿವೃದ್ಧ್ಯರ್ಥಂ ಯಜ್ಞೋಪವೀತ

ಧಾರಣಂ ಕರಿಶ್ಯೆ ಎಂದು ಜನಿವಾರವನ್ನು ಹಾಕಿಕೊಳ್ಳುವ ಸಂದರ್ಭದಲ್ಲಿ ಇದನ್ನು ಹೇಳಿ ಹಾಕಿ ಕೊಳ್ಳುತ್ತಾರೆ.

ಶ್ರೌತ =ಬೆಳಗಿನ, ನಿತ್ಯ ಕರ್ಮಗಳು

ಸ್ಮಾರ್ತ= ಸಂಧ್ಯಾವಂದನೆ ಮತ್ತು ಇಷ್ಟದೇವತಾ ಪೂಜೆ

ಧಾರಣೆಯ ಕ್ರಮ

ಯಜ್ಞೋಪವೀತಂ ಪರಮ ಪವಿತ್ರಂ
ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ ।
ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ
ಯಜ್ಞೋಪವೀತಂ ಬಲಮಸ್ತು ತೇಜ ॥

ಈ ಮೇಲಿನ ಮಂತ್ರಗಳನ್ನು ಹೇಳಿಕೊಳ್ಳುತ್ತಾ ಒಂಟಿ ಯಜ್ಞೋಪವೀತವನ್ನು ಎರಡೂ ಕೈಗಳಿಂದಲೂ ಹಿಡಿದುಕೊಂಡು ಧರಿಸಿಕೊಳ್ಳುತ್ತಾರೆ. ಮದುವೆಯಾದವರು ಮತ್ತೆ ಆಚಮನ ಮಾಡಿ "ಗೃಹಸ್ಥಾಶ್ರಮ ಯೋಗ್ಯತಾ ಸಿಧ್ಯರ್ಥಂ ದ್ವಿತೀಯ ಯಜ್ಞೋಪವೀತ ದಾರಣಂ ಕರೀಶ್ಯೇ" ಎಂದು ಸಂಕಲ್ಪಮಾಡಿ ಮತ್ತೊಂದು ಜನಿವಾರವನ್ನು

ಎರಡೂ ಕೈಗಳಿಂದಲೂ ಹಿಡಿದುಕೊಂಡು ಧರಿಸಿಕೊಳ್ಳುತ್ತಾರೆ. ಈ ರೀತಿಯಾಗಿ ವೈಶ್ಯರು ಇಂತಹ ಸಂಪ್ರದಾಯಗಳನ್ನು ಆಚರಿಸುತ್ತಾ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದ್ದಾರೆ. ಈ ಜನಿವಾರವನ್ನು ಕೆಲವು ಸಂದರ್ಭದಲ್ಲಿ ವಿಸರ್ಜನೆ ಮಾಡುತ್ತಾರೆ.

ಅಶುಚಿ : ಮಾನಸಿಕವಾದ ಅಸ್ಥಿರತೆ ಅಥವಾ ಮಲಿನತೆ

ಅಶೌಚ : ಪುರುಡು, ಸೂತಕ ಮುಂತಾದವು

ಪುರುಡು : ಜನನಕಾಲದ ಮೈಲಿಗೆ

ಸೂತಕ : ಮರಣಕಾಲದ ಮೈಲಿಗೆ ಇಂತಹ ಸಂದರ್ಭದಲ್ಲಿ ವೈಶ್ಯರು ತಮ್ಮಲ್ಲಿರುವ ಹಳೆಯ ಜನಿವಾರವನ್ನು ತೆಗೆದು ಹೊಸ ಜನಿವಾರವನ್ನು ಧರಿಸಿಕೊಳ್ಳುತ್ತಾರೆ.

ಈ ಜನಿವಾರ ಧರಿಸಿರುವುದರಿಂದ ಉಪಯೋಗವೇನೆಂದರೆ ವೈಶ್ಯರು ತಮ್ಮಲ್ಲಿ ಸಂಪ್ರದಾಯ ಮತ್ತು ಇದರಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ವಿದ್ಯಾರ್ಜನೆ ಮಾಡುವವರು ಬುದ್ಧಿಶಕ್ತಿ, ಜ್ಞಾನ ಶಕ್ತಿಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಹೆಚ್ಚಾಗಿ ಮೆದುಳಿಗೆ ಮತ್ತು ಹೃದಯಕ್ಕೆ ಸಂಬಂಧಿಸಿದ ನರಗಳನ್ನು ಸ್ಥಿಮಿತದಲ್ಲಿಟ್ಟುಕೊಳ್ಳುವುದಕ್ಕಾಗಿ ಸೂತ್ರ ರೂಪದಲ್ಲಿರುವ ಯಜ್ಞೋಪವೀತವನ್ನು ಧರಿಸುತ್ತೇವೆ ಎಂದು ಹೇಳುತ್ತಾರೆ. ಈ ಯಜ್ಞೋಪವೀತವು ಆಯುಷ್ಯವನ್ನು ಬಲವನ್ನೂ ತೇಜಸ್ಸನ್ನೂ ನೀಡುತ್ತದೆ. ಇದು ಪರಮ ಪವಿತ್ರವಾದದು ಎಂದು ವೈಶ್ಯರು ಹೇಳುತ್ತಾರೆ. ಈ ಎಲ್ಲಾ ಮಾಹಿತಿಯನ್ನು ಪ್ರತ್ಯಕ್ಷವಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹ ಮಾಡಲಾಗಿದೆ.

ಕೊನೆ ಟಿಪ್ಪಣಿ

೧. ಸುರೇಶ್ ಗುಪ್ತ, ೧೯೯೫, ಪು. ೯೧

೨. ಎಂ.ನರೇಂದ್ರ, ೧೯೯೮, ಪು. ೪೮

ಅಧ್ಯಾಯ ೫

ವೈಶ್ಯ ಕುಲೋದ್ಧಾರಕರು (ವೈಶ್ಯ ರತ್ನಗಳು)

೫.೧. ವೈಶ್ಯರ ಜಗದ್ಗುರುಗಳು

೫.೨. ಶ್ರೀ ಪಾಮಡಿಯವರು

೫.೪. ಚಂಗಯ್ಯ ಶ್ರೇಷ್ಠಿಯವರು

೫.೫. ಪುಟ್ಟು ಗೋಪಾಲಕೃಷ್ಣ ಶ್ರೇಷ್ಠಿಯವರು

೫.೬. ಟೀಕಾವೆಂಕಟಾಚಲ ಗುಪ್ತರು

೫.೭. ದರ್ಶಿ ಚಂಚಯ್ಯ

೫.೮. ಪೊಟ್ಟಿ ಶ್ರೀರಾಮುಲು

೫.೯. ಲಕ್ಷ್ಮೀನರಸಿಂಹ ಸೋಮಯಾಜಿಯವರು

ಅಧ್ಯಾಯ ೫

ವೈಶ್ಯ ಕುಲೋದ್ಧಾರಕರು (ವೈಶ್ಯ ರತ್ನಗಳು)

೫.೧. ವೈಶ್ಯರ ಜಗದ್ಗುರುಗಳು

ಪ್ರಸ್ತುತವಾಗಿ ಹೈದ್ರಾಬಾದ್ ಕರ್ನಾಟಕದಲ್ಲಿ ವೈಶ್ಯ ಸಮುದಾಯದ ಪ್ರಖ್ಯಾತಿ ಹೊಂದಿದವರ ಬಗ್ಗೆ ಕ್ಷೇತ್ರಕಾರ್ಯ ನಡೆಸಿದಾಗ ಒಬ್ಬಿಬ್ಬರು ಸಿಗುತ್ತಾರೆ. ಆದ ಕಾರಣ ನಾನು ಇಡೀ ಕರ್ನಾಟಕದಾದ್ಯಂತ ಸಿಗುವಂತಹ ವೈಶ್ಯ ಸಮುದಾಯದಲ್ಲಿರುವಂತ, ನಾಡಿಗಾಗಿ ಸೇವೆ ಸಲ್ಲಿಸಿರುವಂತಹ ಮಹಾನ್ ವ್ಯಕ್ತಿಗಳ ಪರಿಚಯವನ್ನು ಕ್ಷೇತ್ರಕಾರ್ಯ ನಡೆಸಿ ಈ ಅಧ್ಯಯನದಲ್ಲಿ ಒಳಪಡಿಸಲಾಗಿದೆ. ಅವರಂದರೆ ವೈಶ್ಯರ ಜಗದ್ಗುರುಗಳು ಶ್ರೀ ಪಾಮಡಿಯವರು, ಎಸ್.ವಿ.ಶಟ್ಟರು, ಚಂಗಯ್ಯ ಶ್ರೇಷ್ಠಿಯವರು ದರ್ಶಿ ಚಂಚಯ್ಯ ಮುಂತಾದವರ ಬಗ್ಗೆ ಅಧ್ಯಯನದಲ್ಲಿ ಮಾಹಿತಿ ನೀಡಲಾಗಿದೆ. ಅಪರ ಶುಕಯೋಗಿ, ವೇದಾಂತೋಪನ್ಯಾಸ, ಚಕ್ರವರ್ತಿ, ವೇದಾಂತ ಕೇಸರಿ ಇತ್ಯಾದಿ ಬಿರುದಾಂಕಿತರಾದ, ಪರಮ ಪೂಜ್ಯ ಪರಿವ್ರಾಜಕಾಚಾರವರ್ಯರಾದ ಶ್ರೀ ಶ್ರೀ ಶ್ರೀ ಚಂದ್ರಶೇಖರಾನಂದ ಗಿರಿ ಮಹಾಸ್ವಾಮಿಗಳವರು ೧೩.೦೭.೧೯೬೪ನೆಯ ದಿನಾಂಕ ಬೆಂಗಳೂರು ನಗರದಲ್ಲಿ ಸಮಸ್ತ ಆರ್ಯ ವೈಶ್ಯರ ಪುಣ್ಯವೋ ಎಂಬಂತೆ ವಾಸವಿ ಪೀಠಾರೋಹಣ ಮಾಡಿ ವೈಶ್ಯ ಕುಲದ ಮೊದಲನೆಯ ಜಗದ್ಗುರುಗಳಾಗಿದ್ದಾರೆ.

ಶ್ರೀ ಗುರುಗಳನ್ನು ಪೂರ್ವಾಶ್ರಮದಲ್ಲಿ ಸತ್ಯನಾರಾಯಣ ಶೆಟ್ಟಿ ಎಂದು ಕರೆಯುತ್ತಿದ್ದರು. ಇವರು ೧೯೩೪ ರಲ್ಲಿ ಜನಿಸಿದರು. ಪಡೇಗಲ್ ಮನೆತನಕ್ಕೆ ಸೇರಿದ ಶ್ರೀ ಗಿರಿಯಪ್ಪ ಶ್ರೇಷ್ಠಿ ಶ್ರೀಮತಿ ಗೋಪಮ್ಮನವರು ತಂದೆ ತಾಯಿಗಳು ಆಂಧ್ರಪ್ರದೇಶದ ಆಧೋನಿಯು ಅವರ ವಾಸಸ್ಥಾನ. ಮೌದ್ಗಲ್ಯಸ (ನಾಬಳ್ಳಿ) ಗೋತ್ರಕ್ಕೆ ಸೇರಿದವರು.

ಶ್ರೀಮಂತರ ಮನೆತನದಲ್ಲಿ ಹುಟ್ಟಿ ಪ್ರಾಪ್ತವಯಸ್ಕರಾದವರು ಶ್ರೀ ಸತ್ಯನಾರಾಯಣ ಶ್ರೇಷ್ಠಿಯವರು ಪ್ರಾಪಂಚಿಕ ವಿಷಯಗಳಲ್ಲಿ ವೈರಾಗ್ಯವನ್ನು ಹೊಂದಿ ಮದುವೆಯಾಗದೆ ಬ್ರಹ್ಮಚಾರಿಗಳಾಗಿಯೇ ಇದ್ದರು. ಅವರು ನಲವತ್ತೆಂಟನೆಯ ವಯಸ್ಸಿನಲ್ಲಿ ೧೯೮೨ ಮನೆಯನ್ನು ಬಿಟ್ಟು ಸನ್ಯಾಸಾಶ್ರಮವನ್ನು ಸೇರಿದರು. ಆಗ ಶ್ರೀ ಚಂದ್ರಶೇಖರಾನಂದಗಿರಿ ಸ್ವಾಮಿಗಳೆಂಬ ಹೆಸರನ್ನು ಪಡೆದರು.

ಶ್ರೀ ಸ್ವಾಮಿಗಳವರು ಕಂಚಿಯ ಪರಮಾಚಾರ್ಯ ಮೊದಲಾದವರ ಸನ್ನಿಧಿಯಲ್ಲಿದ್ದು ಆಧ್ಯಾತ್ಮ ವಿದ್ಯೆಯನ್ನು ಮತ್ತು ಅಷ್ಟಾಂಗ ಯೋಗವನ್ನು ಅಭ್ಯಾಸಮಾಡಿ ಮುಕ್ತಿಯ ಸಾಧನಾ ಮಾರ್ಗದಲ್ಲಿ ಮುಂದುವರಿದರು. ಶ್ರೀ

ಶೈಲ, ಹೃಷಿಕೇಶ ಮೊದಲಾದ ಪುಣ್ಯಕ್ಷೇತ್ರಗಳ ಯಾತ್ರೆಯನ್ನು ಮಾಡಿರುವುದಲ್ಲದೇ ಹಲವಾರು ಚಾತುರ್ಮಾಸದ ವ್ರತಗಳನ್ನು ಮಾಡಿರುವರು. ಇವರ ನೂರಾರು ವಚನಗಳನ್ನು ಕೇಳಿ ಲಕ್ಷಾಂತರ ಭಗವದ್ಭಕ್ತರು ಧನ್ಯರಾಗಿದ್ದಾರೆ. ಶ್ರೀ ಗುರುಗಳು ಸಂಸ್ಕೃತ, ತೆಲುಗು, ಕನ್ನಡ, ಹಿಂದಿ, ಆಂಗ್ಲ, ತಮಿಳು ಭಾಷೆಗಳನ್ನು ಬಲ್ಲವರಾಗಿರುತ್ತಾರೆ. ಇವರ ಅಸಾಧಾರಣ ಪಾಂಡಿತ್ಯದಿಂದ ಅನೇಕ ಬಿರುದುಗಳನ್ನು, ಪ್ರಶಸ್ತಿಗಳನ್ನು ಪಡೆದಿರುವರು. ಹೀಗಿದ್ದು ಇವರು ಸರಳ ಜೀವನ ಉನ್ನತವಾದ ಚಿಂತನ ಮೊದಲಾದ ಮಹೋನ್ನತ ತತ್ವದಿಂದ ಮನುಕುಲಕ್ಕೆ ಆದರ್ಶಪ್ರಿಯರಾಗಿದ್ದಾರೆ. ಈ ಮಹತ್ಕಾರ್ಯದ ಹಿನ್ನೆಲೆಯನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳಬಹುದು. ವೈಶ್ಯರು ಬಹಳ ಮಟ್ಟಿಗೆ ಎಷ್ಟೋ ಕಾಲದಿಂದ ಶ್ರೀ ಶೃಂಗೇರಿ ಶಾರದಾ ಪೀಠಾಧಿಪತಿಗಳನ್ನು ಗುರುಗಳನ್ನಾಗಿ ಭಾವಿಸಿದ್ದರು. ವೈಶ್ಯಕುಲ ದೋಷಣೆಯಿಂದ ಕೂಡಿದ ವೈಶ್ಯ ವೇದೋಕ್ತ ಕ್ರಿಯಾ ವಿಚಾರ ವ್ಯವಸ್ಥಾ ಗ್ರಂಥವನ್ನು ಶೃಂಗೇರಿ ಮಠದಿಂದ ಪ್ರಕಟಿಸಿ ಪ್ರಚಾರ ಮಾಡಿದುದನ್ನು ಪ್ರತಿಭಟಿಸಿ ಶ್ರೀ ಶೃಂಗೇರಿ ಸ್ವಾಮಿಗಳಿಂದ ವೈಶ್ಯರು ದೂರವಾದರು. ಹೀಗಾಗಿ ೧೯೨೮ರಿಂದ ವೈಶ್ಯರಿಗೆ ಕುಲಗುರುಗಳಿಲ್ಲದಂತಾಯಿತು.

೧೯೭೮ರಲ್ಲಿ ಸ್ಥಾಪನೆಯಾದ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಧಾರ್ಮಿಕ ಶಾಖೆಯು ನಾಡಿನ ನಾನಾ ಭಾಗಗಳಲ್ಲಿ ಪ್ರವಾಸ ಮಾಡಿ, ಧಾರ್ಮಿಕ ವಿಚಾರಗೋಷ್ಠಿಗಳನ್ನು ನಡೆಸಿತು. ಗೋಷ್ಠಿಗಳ ಕಾರ್ಯಕ್ರಮದಲ್ಲಿ ವೈಶ್ಯಕುಲಗುರುಗಳು ಬೇಕೆಂದು ಪ್ರತಿಪಾದಿಸಿತು. ನಾವು ಸಂದರ್ಶಿಸಿದ ಎಲ್ಲಾ ಊರುಗಳ ವೈಶ್ಯ ಮಹಾಜನರು ಇದನ್ನು ಪುರಸ್ಕರಿಸಿರುವರು. ಇದರ ಪರಿಣಾಮವಾಗಿ ವೈಶ್ಯ ಜನಾಂಗದ ಧಾರ್ಮಿಕ ಕಾರ್ಯಗಳ ಮಾರ್ಗದರ್ಶನಕ್ಕೆ ಒಂದು ಗುರುಪೀಠ ಅವಶ್ಯವೆಂದು ೧೯೮೪ರ ಏಪ್ರಿಲ್‌ನಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ವೈಶ್ಯ ಮಹಾ ಸಮ್ಮೇಳನದಲ್ಲಿ ಸರ್ವಾನುಮತದಿಂದ ತೀರ್ಮಾನವಾಯಿತು.

ವೈಶ್ಯಕುಲದಲ್ಲಿ ದೈವಭಕ್ತಿಜ್ಞಾನ ವೈರಾಗ್ಯಗಳಿಂದ ಕೂಡಿದ ಸಾಧುಗಳು ಸಂತರು ಸನ್ಯಾಸಿಗಳು ತಪಸ್ವಿಗಳು ಅನೇಕರಿರುವರು. ಅವರಲ್ಲೊಬ್ಬರನ್ನು ಕುಲಗುರುಗಳನ್ನಾಗಿ ಮಾಡಬೇಕೆಂದು ಪ್ರಯತ್ನ ಮಾಡಲಾಯಿತು. ೨೬.೦೭.೧೯೯೨ರಂದು ಗುರುಗಳಿಗಾಗಿ ವಾಸವಿ ಪೀಠ ಟ್ರಸ್ಟನ್ನು ಸ್ಥಾಪಿಸಿದ್ದಾಯಿತು. ಹೀಗೆ ನಾನಾ ಪ್ರಯತ್ನಗಳ ಫಲವಾಗಿ ಈ ಗುರುಪೀಠ ಸ್ಥಾಪನೆಯಾಗಿದೆ.

ಬೆಂಗಳೂರು ವಾಸವಿ ಧರ್ಮಶಾಲೆಯ ಪಕ್ಕದ ವಿಶಾಲವಾದ ಆವರಣ ದಿವ್ಯವಾದ ಪೆಂಡಾಲಿನಲ್ಲಿ ಪೂಜ್ಯ ಗುರುಗಳ ಪೀಠಾರೋಹಣ ಕಾರ್ಯವು ವೈಭವದಿಂದ ನಡೆಯಿತು. ಆ ಸಮಾರಂಭಕ್ಕೆ ಆಂಧ್ರ ಕರ್ನಾಟಕ ಮಹಾರಾಷ್ಟ್ರ ತಮಿಳು ನಾಡುಗಳಿಂದ ಸಾವಿರಾರು ಜನ ಭಕ್ತರು ಹಾಗೂ ಶಿಷ್ಯರು ಬಂದು ಪಾಲ್ಗೊಂಡಿದ್ದರು. ಇದಾದ ಮೇಲೆ ಶ್ರೀ ಗುರುಗಳು ತುಮಕೂರು, ಮೈಸೂರು, ರಾಯಚೂರು, ಚಿತ್ರದುರ್ಗ ಮೊದಲಾದ ಕಡೆ ಹೋಗಿ ಬಂದರು. ಎಲ್ಲಾ ಕಡೆಯಲ್ಲಿ ಭಕ್ತರು ಹಾಗೂ ಶಿಷ್ಯರು ಜಗದ್ಗುರುಗಳನ್ನು ಸಡಗರ ಹಾಗೂ ಸಂಭ್ರಮದೊಂದಿಗೆ ಸ್ವಾಗತಿಸಿ, ಸತ್ಕರಿಸಿ, ಅವರ ಅನುಗ್ರಹವನ್ನು ಪಡೆದಿರುವರು. ರಾಷ್ಟ್ರೀಯ ಪತ್ರಿಕೆಗಳು ಆ ವಿಷಯವನ್ನು ಪ್ರಕಟಿಸಿರುವುದು ಸೋಜಿಗದ ವಿಷಯ ಹಾಗೂ ವಿಷಾದಕರ.

[illegible]

ಪೂಜ್ಯ ಗುರುಗಳು ಶ್ರೀಮಂತರ ಮನೆಯಲ್ಲಿ ಹುಟ್ಟಿ ೪೭ ವರ್ಷಗಳು ಕಳೆದರೂ ಐಶ್ವರ್ಯ ಸುಖ ಭೋಗಗಳಿಗೆ ವಶರಾಗದೆ, ಮನೆ ಧನಕನಕ ಆಸ್ತಿಯನ್ನು ಬಿಟ್ಟು ಸನ್ಯಾಸಿಗಳಾದರು. ಹದಿನಾರು ವರ್ಷಗಳು ಕಳೆದರೂ ತಮ್ಮ ವಾಸಕ್ಕಾದರೂ ಒಂದು ಮಠ ಅಥವಾ ಆಶ್ರಮವನ್ನು ಮಾಡಿಲ್ಲ ಇದು ಅವರ ಪರಮ ವೈರಾಗ್ಯದ ಲಕ್ಷಣವಾಗಿದೆ. ಅಂತಹವರು ಈಗ ವಾಸವಿ ಪೀಠಾಧಿಪತಿಗಳ ವೈಶ್ಯರ ಜಗದ್ಗುರುಗಳಾದುದು ವೈಶ್ಯಕುಲದ ಸೌಭಾಗ್ಯವೇ ಆಗಿದೆ.

ಪ್ರಕೃತ ಮೈಸೂರು, ಬೆಂಗಳೂರು, ಮದ್ರಾಸ್, ಹೈದರಾಬಾದ್, ಮಹಾರಾಷ್ಟ್ರ ಮೊದಲಾದ ದೊಡ್ಡ ನಗರಗಳಲ್ಲಿ ಶ್ರೀ ಸ್ವಾಮಿಗಳವರ ಮಠಗಳಾಗಿ, ಶಾಖಾ ಪೀಠಾಧಿಪತಿಗಳು ಆಗಬೇಕಾಗಿದೆ. ಮೊದಲು ಬೆಂಗಳೂರು ನಗರದಲ್ಲಿ ಮಠವಾಗಬೇಕಾಗಿದೆ. ಉದಾರಿಗಳಾದ ಶ್ರೀಮಂತರು ಈ ಮಹಾತ್ಕಾರ್ಯಕ್ಕಾಗಿ ಹೆಚ್ಚಾಗಿ ಧನವನ್ನು ಸಂಗ್ರಹ ಮಾಡುತ್ತಿದ್ದಾರೆ.

೫.೨. ಶ್ರೀ ಪಾಮಡಿಯವರು (ಮೊದಲನೆಯ ವೈಶ್ಯ ಮಂತ್ರಿಗಳು)

ಇವರು ರಾಜ್ಯದ ಮೊದಲನೆಯ ವೈಶ್ಯ ಮಂತ್ರಿ ಆಗಿದ್ದರು. ಶ್ರೀ ಸುಬ್ಬರಾಮ ಶ್ರೇಷ್ಠಿಯವರು ಪಾಮಡಿ ಮನೆತನಕ್ಕೆ ಸೇರಿದವರು. ಪಾಮಡಿ ಎಂಬುದು ಆಂಧ್ರ ಪ್ರದೇಶದ ಒಂದು ಊರಾಗಿದೆ. ಶ್ರೀ ಶ್ರೇಷ್ಠಿಯವರ ಹಿರಿಯೂರು ಪೂರ್ವದಲ್ಲಿ ಪಾಮಡಿಯಿಂದ ಬೆಂಗಳೂರಿಗೆ ಬಂದು ನೆಲಸಿದವರು. ಅವರಲ್ಲಿ ಶ್ರೀ ಮುದ್ದುರಾಮ ಶ್ರೇಷ್ಠಿಯವರು ಸದಾಚಾರ ಪರಾಯಣರೂ ವೈದಿಕ ಕರ್ಮಾನುಷ್ಠಾನ ವರಿಷ್ಟರೂ, ದೈವ ಭಕ್ತರೂ, ಅತಿಥಿ ಸತ್ಕಾರ ನಿರತರೂ ಆಗಿದ್ದರು. ಅವರ ಮೂರು ಜನ ಗಂಡು ಮಕ್ಕಳಲ್ಲಿ ಶ್ರೀ ಸುಬ್ಬರಾಮ ಶ್ರೇಷ್ಠಿಯವರು ಹಿರಿಯರಾಗಿದ್ದರು. ಅವರು ೧೮೮೩ರಲ್ಲಿ ಜನಿಸಿದರು. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ವಿಧ್ಯಾಭ್ಯಾಸವನ್ನು ಮುಗಿಸಿಕೊಂಡು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಕಾಲಿಟ್ಟರು. ಸ್ವಲ್ಪಕಾಲವಾಯಿತು. ದೇಹಾರೋಗ್ಯ ಕೆಟ್ಟಿತು. ವಿದ್ಯಾಭ್ಯಾಸ ಮುಂದುವರಿಯಲಿಲ್ಲ. ಆದರೂ ಅವರು ಇಂಗ್ಲೀಷ್ ಭಾಷೆಯಲ್ಲಿ ಬರೆಯಲು ಮತ್ತು ಭಾಷಣ ಮಾಡಲು ಸಮರ್ಥರಾಗಿದ್ದರು. ಶ್ರೀ ಶ್ರೇಷ್ಠಿಯವರು ತಂದೆಯವರೊಂದಿಗೆ ವ್ಯಾಪಾರ ಮಾಡತೊಡಗಿದರು. ಬೆಂಗಳೂರು ಬಸವನಗುಡಿಯಲ್ಲಿ ಇವರ ವಾಸ. ಚಿಕ್ಕಪೇಟೆಯಲ್ಲಿ ಜವಳಿ ವ್ಯಾಪಾರ ನಡೆಯಿತು. ಸ್ವಪ್ರತಿಭೆ, ಸರಳತೆ, ವ್ಯವಹಾರ ಕುಶಲತೆ, ಪ್ರಾಮಾಣಿಕತೆ, ಸದ್ವರ್ತನೆಗಳಿಂದ ಬಹು ಜನರನ್ನು ತಮ್ಮ ಅಂಗಡಿಯ ಗಿರಾಕಿಗಳನ್ನಾಗಿ ಮಾಡಿಕೊಂಡರು. ವ್ಯಾಪಾರವು ಚನ್ನಾಗಿ ಮುಂದುವರಿಯಿತು. ಸ್ವಲ್ಪ ಕಾಲದಲ್ಲಿಯೇ ಶ್ರೀಮಂತರಾದರು. ಅಂಗಡಿ ಜೊತೆಗೆ ರೇಷ್ಮೆ ನೇಯಿಗೆ ಗಿರಣಿಯನ್ನು ಅನೇಕ ವರ್ಷಗಳ ಕಾಲ ನಿರ್ವಹಿಸಿಕೊಂಡು ಬಂದರು. ಹೇಗಾದರೂ ಮಾಡಿ ಹಣಗಳಿಸಬೇಕೆಂಬ ಕ್ಷುಲ್ಲಕ ಮನೋಭಾವಕ್ಕೆ ಬಲಿಯಾಗದೆ ಸತ್ಯಕ್ಕೆ ಕಟ್ಟುಬಿದ್ದು ನ್ಯಾಯಬಿಡದೆ ಧರ್ಮ ಮಾರ್ಗದಲ್ಲಿಯೇ ಹಣವನ್ನು ಸಂಪಾದನೆ ಮಾಡಿ ಶ್ರೀಮಂತರಾದುದು ಅವರ ವೈಶಿಷ್ಟ್ಯ. ಒಂದೇ ತೆರನಾದ ಪ್ರೀತಿ ವಿಶ್ವಾಸಗಳನ್ನು ತಮ್ಮ ಗಿರಾಕಿಗಳಲ್ಲಿ ಗಳಿಸಿ ಉಳಿಸಿಕೊಂಡಿದ್ದುದು ಅವರ ಹೆಗ್ಗಳಿಕೆ.

ಹಣಗಳಿಸಿ ಉಪಭೋಗಿಸುವುದೊಂದೇ ತಮ್ಮ ಕರ್ತವ್ಯವಲ್ಲ. ಸಾರ್ವಜನಿಕ ಸೇವೆಯೂ ತಮ್ಮ ಪಾಲಿಗೆ ಬಂದಿದೆ ಎಂದು ಭಾವಿಸಿಕೊಂಡು ಮೊದಲಿನಿಂದಲೂ ಶ್ರೀ ಶ್ರೇಷ್ಠಿಯವರು ನಾನಾ ಸಂಘ ಸಂಸ್ಥೆಗಳಲ್ಲಿ ಸೇರಿ ಜನತೆಗೆ ಉಪಕಾರ ಮಾಡಿರುವರು. ಅವರ ಅಂಗಡಿಯ ಹತ್ತಿರವೇ ಪ್ರತ್ಯೇಕ ಕಾರ್ಯಾಲಯವಿದ್ದಿತು. ಅಲ್ಲಿ ಅನೇಕ ರಾಜಕೀಯ ಪ್ರಮುಖರ ಸಮಾವೇಶ ಚರ್ಚೆ ವಿಚಾರ ವಿನಿಮಯಗಳು ಪ್ರತಿದಿನವೂ ಅವರ ಸಮ್ಮುಖದಲ್ಲಿ ನಡೆದಿವೆ. ಹೀಗಾಗಿ ಅವರು ದೇಶದ ಅನೇಕ ಮುಖಂಡರ ಅಚ್ಚುಮೆಚ್ಚಿನವರಾಗಿದ್ದರು.

ಚುನಾವಣೆಯ ಸಂದರ್ಭದಲ್ಲಿ ತನ್ನ ಬಣ್ಣಿಸಬೇಡ ಅನ್ಯರನ್ನು ತೆಗಳ ಬೇಡ ಎಂಬ ತತ್ವವನ್ನು ಅನುಸರಿಸುತ್ತಿದ್ದರು. ಹೆಂಡ ಕುಡಿಸಿ ಲಂಚಕೊಟ್ಟು ಜನರ ಮತಗಳಿಸುವ ಪದ್ಧತಿಯೇ ಅವರಿಗಿರಲಿಲ್ಲ. ಯಾವ ಪೊಳ್ಳು ಭರವಸೆಗಳನ್ನೂ ಕೊಡುತ್ತಿರಲಿಲ್ಲ. ಪರರ ಸೊತ್ತನ್ನು ಲಪಟಾಯಿಸುವುದಿಲ್ಲ. ದೇಶಕ್ಕೆ ಹಾಗೂ ಜನತೆಗೆ ನಿಸ್ವಾರ್ಥ ಸೇವೆ ನನ್ನಿಂದಾಗುವುದೆಂಬ ವಿಶ್ವಾಸ ನಿಮಗಿದ್ದರೆ, ನಿಮ್ಮ ಮತ ನನಗೆ ಕೊಡಿ, ಇಲ್ಲವಾದರೆ ಬೇಡ ಎಂದು ಅನೇಕ ಬಹಿರಂಗ ಸಭೆಗಳಲ್ಲಿ ಧೈರ್ಯವಾಗಿ ಹೇಳುತ್ತಿದ್ದರು. ವೈಶ್ಯರ ಸಂಖ್ಯೆ ಕಡಿಮೆಯಾದರೂ ಎಲ್ಲಾ ಜಾತಿಯವರ ಮತದಿಂದ ಅವರು ಚುನಾವಣೆಯಲ್ಲಿ ಗೆಲ್ಲುತ್ತಿದ್ದರು. ಅದು ಅವರ ಪ್ರಾಮಾಣಿಕತೆಯಾಗಿತ್ತು. ಶ್ರೀ ಶ್ರೇಷ್ಠಿಯವರು ವರ್ತಕರಲ್ಲಿ ಸಂಘಟನೆ, ಶಿಸ್ತು ಸೌಹಾರ್ದತೆ ಸಹಕಾರಗಳನ್ನು ನೆಲೆಗೊಳಿಸಲು ಬೆಂಗಳೂರು ವರ್ತಕರ ಸಂಘದ ಅಧ್ಯಕ್ಷರಾಗಿ ಸ್ವಲ್ಪಕಾಲವಿದ್ದುದಲ್ಲದೆ, ಮೈಸೂರು ವಾಣಿಜ್ಯ ಮಹಾಸಭೆಗೆ ಎರಡು ಸಾರಿ ಅಧ್ಯಕ್ಷರಾಗಿದ್ದರು. ಅವರ ಲೋಕಾನುಭವ ವಾಣಿಜ್ಯ ವೃತ್ತಿಯ ಪರಿಶ್ರಮದ ಫಲವಾಗಿ ೧೯೩೦ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಕರ್ನಾಟಕ ವಾಣಿಜ್ಯ ಸಂಘಗಳ ಸಮ್ಮೇಳನದ ಅಧ್ಯಕ್ಷ ಪದವಿಯು ಅವರಿಗೆ ದೊರೆತಿದ್ದರಿಂದ ಕೀರ್ತಿಯು ಕನ್ನಡ ನಾಡಿನಲ್ಲೆಲ್ಲಾ ಹರಡಲು ಸಹಾಯ ವಾಯಿತು. ಅವರ ಉದಾತ್ತ ಸೇವೆಯನ್ನು ಮೆಚ್ಚಿ ಮೈಸೂರು ಮಹಾರಾಜರು ೧೯೪೧ರ ನವರಾತ್ರಿ ಉತ್ಸವದಲ್ಲಿ 'ರಾಜಸೇವಾಸಕ್ತ' ಎಂಬ ಬಿರುದನ್ನು ಖಿಲ್ಲತ್ತುಗಳನ್ನು ಅನುಗ್ರಹಿಸಿ ಕೊಡುವುದರ ಮೂಲಕ ಪ್ರಭುಗಳು ಶ್ರೀ ಶ್ರೇಷ್ಠಿಯವರ ಅಮರ ಕೀರ್ತಿಯನ್ನು ಮತ್ತಷ್ಟು ಬೆಳಗಿಸಿದರು. ೧೯೨೮ರಲ್ಲಿ ಬೆಂಗಳೂರು ನಗರದಲ್ಲಿ ಉಂಟಾದ ವಿದ್ಯಾಗಣಪತಿಯ ಸಂಬಂಧವಾದ ಹಿಂದೂ-ಮುಸ್ಲಿಂ ಗಲಭೆಯಲ್ಲಿ ಎದೆಗುಂದದೆ ಮುನ್ನುಗ್ಗಿ ಶಾಂತಿ ಸ್ಥಾಪನೆಗಾಗಿ ಶ್ರಮಿಸಿದರು. ಆಗಲೇ ಗೂಂಡಾಗಳ ಅಕ್ರಮಣಕ್ಕೂ ಒಳಗಾದರು. ಆಗ ಕಷ್ಟದಿಂದ ಅವರು ಪಾರಾದರು. ಅವರ ಕೀರ್ತಿಯು ಮೈಸೂರು ದೇಶದ ಜನಸಾಮಾನ್ಯರಲ್ಲಿಯೂ ಹರಡಿತು.

ಶ್ರೀ ಶ್ರೇಷ್ಠಿಯವರು ಬೆಂಗಳೂರು ಪೌರಸಭೆಯಲ್ಲಿ ಇಪ್ಪತ್ತು ವರ್ಷಗಳ ಕಾಲ ಗೌರವ ಸದಸ್ಯ ರಾಗಿದ್ದುದಲ್ಲದೆ ಆರು ವರ್ಷಗಳ ಕಾಲ ೧೯೨೯ರಿಂದ ೧೯೩೧ರವರೆಗೆ ಮತ್ತು ೧೯೩೬ರಿಂದ ೧೯೩೮ರ ವರೆಗೆ ಅಧ್ಯಕ್ಷರೂ ಆಗಿದ್ದು, ಬೆಂಗಳೂರಿನ ಜನರಿಗೆ ವಿಶೇಷ ಸೇವೆಯನ್ನು ಸಲ್ಲಿಸಿದರು ಮತ್ತು ಹದಿನೈದು ವರ್ಷಗಳ ಕಾಲ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿಯೂ, ಹತ್ತು ವರ್ಷಗಳ ಕಾಲ ನ್ಯಾಯವಿಧಾಯಕ ಶಾಸಕರ ಸಭೆಯ ಸದಸ್ಯರಾಗಿಯೂ ಇದ್ದು ಕನ್ನಡ ನಾಡಿಗೆ ಹಾಗೂ ಜನತೆಗೆ ಶ್ರೇಷ್ಠವಾದ ನಿಸ್ವಾರ್ಥ ಸೇವೆ ಸಲ್ಲಿಸಿರುವರು.

ಪ್ರಜಾಪ್ರತಿನಿಧಿ ಸಭೆ ಮತ್ತು ಶಾಸನ ಸಭೆಗಳಲ್ಲಿ ಯಾವುದಾದರೂ ಗೊತ್ತುವಳಿಯ ವಿಷಯವಾಗಿ ತಮ್ಮ ಕೈಯನ್ನು ಎತ್ತಿ ಸಮ್ಮತಿ ಸೂಚಿಸುವವರ ಗುಂಪಿಗೆ ಸೇರದೆ, ನ್ಯಾಯವೆಂದು ತೋರಿದ ಅಭಿಪ್ರಾಯಗಳನ್ನು ಶ್ರೀ ಶ್ರೇಷ್ಠಿಯವರು ಸಭೆಯಲ್ಲಿ ಮಂಡಿಸುತ್ತಿದ್ದರು. ಮತ್ತು ಅನ್ಯಾಯವಾದುದನ್ನು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಧೈರ್ಯವಾಗಿ ಖಂಡಿಸುತ್ತಿದ್ದರು. ವೃತ್ತ ಪತ್ರಿಕೆಗಳ ಕಾನೂನು ವಾಕ್ ಸ್ವಾತಂತ್ರ್ಯ ಮತ್ತು ಸಭಾ ಸ್ವಾತಂತ್ರ್ಯಗಳಿಗೆ ಕುಂದುಕ ಬಂದಾಗ ನಾಗರಿಕ ಹಕ್ಕು ಬಾಧ್ಯತೆಗಳಿಗಾಗಿ ಇವರು ಸರಕಾರದ ರೀತಿ-ನೀತಿಗಳನ್ನು ಖಂಡಿಸುತ್ತಿದ್ದರು.

ಶ್ರೀ ಶ್ರೇಷ್ಠಿಯವರು ಕೆಲವು ಕಾಲ ಬೆಂಗಳೂರಿನ ಹಿಂದೂ ಮಹಾಸಭೆಯ ಉಪಾಧ್ಯಕ್ಷರಾಗಿಯೂ ಅನಂತರ ಅಧ್ಯಕ್ಷರಾಗಿಯೂ ಹಿಂದೂ ಸಂಘಟನೆ ಹಾಗೂ ಸಮಾಜ ಸುಧಾರಣೆಗಾಗಿ ಶ್ರಮಿಸಿರುವರು. ಅವರ ರಾಜಕೀಯ ಪ್ರಜ್ಞೆಯನ್ನು ಮೆಚ್ಚಿ, ಮೈಸೂರು ಸರ್ಕಾರವೂ ಇವರನ್ನು ರಾಜಕೀಯ ಸುಧಾರಣಾ ಮತ್ತು ಪೊಲಿಟಿಕಲ್ ಅಫೇರ್ಸ್ ಕಮಿಟಿಯ ಸದಸ್ಯರನ್ನಾಗಿ ನಿಯಮಿಸಿತು.

ಮಹಾತ್ಮ ಗಾಂಧಿಯವರು ಹರಿಜನ ನಿಧಿಯನ್ನು ಸಂಗ್ರಹಿಸುವುದಕ್ಕಾಗಿ ಮೈಸೂರು ದೇಶದಲ್ಲಿ ಪ್ರವಾಸ ಮಾಡಿದರು. ಆಗ ಶ್ರೀ ಪಾಮಡಿಯವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದು ಮಹಾತ್ಮ ಗಾಂಧಿಯವರೊಂದಿಗೆ ನಮ್ಮ ನಾಡಿನಲ್ಲೆಲ್ಲಾ ಸಂಚರಿಸಿದರು. ಇದರ ಪರಿಣಾಮವಾಗಿ ಸುಮಾರು ೪೨೦೦೦ ರೂ.ಗಳನ್ನು ಆ ನಿಧಿಗಾಗಿ ಸಂಗ್ರಹಿಸಿದರು. ಅನಂತರ ಮೈಸೂರು ದೇಶದ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿ ಹರಿಜನೋದ್ಧಾರ ಕಾರ್ಯದಲ್ಲಿ ತೊಡಗಿದರು. ಇವರು ಮೈಸೂರು ದೇಶದ ಮುಜರಾಯಿ ಮಂತ್ರಿಗಳಾದ ಮೇಲೆ ಸಾರ್ವಜನಿಕ ದೇವಾಲಯಗಳಲ್ಲಿ ಹರಿಜನರು ಪ್ರವೇಶ ಮಾಡಬಹುದೆಂಬ ಸರಕಾರದ ಶಾಸನವಾದುದು ಗಮನಾರ್ಹವಾಗಿದೆ. ಶ್ರೀ ಶ್ರೇಷ್ಠಿಯವರು ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಮೈಸೂರು ಕಾಗದ ಕಾರ್ಖಾನೆ, ಮೈಸೂರು ಬ್ಯಾಂಕುಗಳ ಡೈರೆಕ್ಟರಾಗಿದ್ದುದಲ್ಲದೆ ಕೈಮಗ್ಗದ ಕೈಗಾರಿಕೆಯ ಸಮಿತಿ ಮತ್ತು ಗ್ರಾಮ ಕೈಗಾರಿಕೆ ಸಮಿತಿಗಳ ಸದಸ್ಯರಾಗಿಯೂ ವೈಶ್ಯ ಬ್ಯಾಂಕಿನ ಅಧ್ಯಕ್ಷರಾಗಿಯೂ ದೇಶೀಯ ಉದ್ದಿಮೆಗಳಿಗೆ ಹೆಚ್ಚಾಗಿ ಪ್ರೋತ್ಸಾಹ ಕೊಡುತ್ತಿದ್ದರು. ಎಲ್ಲಾ ಪಂಗಡಗಳನ್ನು ಒಂದುಗೂಡಿಸಿ, ನಾಡಿನ ಏಳಿಗೆಗಾಗಿ ದುಡಿಯಬೇಕೆಂಬ ಸಂಧಾನ ಮಾರ್ಗವೇ ಅವರಿಗೆ ಪ್ರಿಯವಾದುದು. ೧೯೩೦ರಲ್ಲಿ ಜನ್ಮತಾಳಿದ ಪ್ರಜಾಪಕ್ಷದ ಅಧ್ಯಕ್ಷರಾದ ಪ್ರಭಾವದಿಂದ ಪ್ರಜಾಮಿತ್ರ ಮಂಡಳಿಯ ಪ್ರಜಾಪಕ್ಷದೊಂದಿಗೆ ಐಕ್ಯವಾಯಿತು. ರಾಜಕೀಯದಲ್ಲಿ ಕೋಮುವಾದ ಭಾವನೆಯು ಇರಬಾರದೆಂಬ ಉದಾತ್ತ ಧ್ಯೇಯದಿಂದ ಮಧುಗಿರಿ ಮತ್ತು ಶಿವಮೊಗ್ಗ ನಗರಗಳಲ್ಲಿ ಸರ್ವ ಪಕ್ಷಗಳ ಸಮ್ಮೇಳನ ಏರ್ಪಡಿಸಿ, ಅವು ಫಲಕಾರಿಯಾಗುವಂತೆ ಪ್ರಯತ್ನಿಸಿದುದು ವಿಶಾಲ ಭಾವನೆಯ ನಿದರ್ಶನವಾಗಿದೆ.

೧೯೪೭ರಲ್ಲಿ ಭಾರತ ದೇಶಕ್ಕೆ ಸ್ವರಾಜ್ಯ ಲಭಿಸಿತು. ಮೈಸೂರು ದೇಶದಲ್ಲಿ ಪ್ರಜಾ ಸರಕಾರವು ಸ್ಥಾಪನೆಯಾಯಿತು. ಶ್ರೀ ಕೆ.ಚಂಗಲರಾಯ ರೆಡ್ಡಿಯವರು ಮೈಸೂರು ದೇಶದ ಮೊದಲ ಮುಖ್ಯಮಂತ್ರಿಯಾಗಿ ಮಂತ್ರಿಮಂಡಲ ರಚಿಸಿದರು. ಆಗ ನಿಷ್ಪಕ್ಷಪಾತ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ, ಸಾಧುಸ್ವಭಾವ, ಸದಾಚಾರ,

ದೈವಭಕ್ತಿ ಮೊದಲಾದ ಸದ್ಗುಣಗಳಿಂದ ಕೂಡಿದ ಶ್ರೀಸುಬ್ಬರಾಮ ಶ್ರೇಷ್ಠಿಯವರು ಮುಜರಾಯಿ ಮಂತ್ರಿಗಳಾಗಿ ೨೪.೧೦.೧೯೪೭ರಿಂದ ೫.೨.೧೯೫೦ರವರೆಗೆ ಮೈಸೂರು ದೇಶಕ್ಕೆ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಶ್ರೀ ಶ್ರೇಷ್ಠಿಯವರು ಬೆಂಗಳೂರು ಪೌರಸಭೆಯ ಅಧ್ಯಕ್ಷರಾದಾಗ "ರಾಜಸೇವಾಸಕ್ತ" ಬಿರುದನ್ನು ಮಹಾರಾಜರಿಂದ ಸ್ವೀಕರಿಸಿದಾಗ, ಮೈಸೂರು ದೇಶದ ಮಂತ್ರಿಗಳಾದಾಗ, ನಾಡಿನಲ್ಲೆಲ್ಲಾ ಇವರಿಗಾಗಿ ಅನೇಕ ಸತ್ಕಾರ ಕೂಟಗಳಾಗಿವೆ. ಸನ್ಮಾನ ಸಮಾರಂಭಗಳು ನಡೆದಿವೆ. ಸನ್ಮಾನ ಪತ್ರಗಳನ್ನೂ ಭಿನ್ನಹ ಪತ್ರಗಳನ್ನು ಸಮರ್ಪಿಸಿ, ಅವರ ಸೇವೆಯನ್ನು ಕೊಂಡಾಡಿ ಜನತೆಯು ಸಂತೋಷದಿಂದ ತಮ್ಮ ಕೃತಜ್ಞತೆಯನ್ನು ಸೂಚಿಸಿದೆ. ಶ್ರೀ ಶ್ರೇಷ್ಠಿಯವರ ಧರ್ಮಪತ್ನಿಯ ಹೆಸರು ಕನಕಲಕ್ಷ್ಮಮ್ಮ ಎಂದು ಶ್ರೀಮತಿಯವರು ಪತಿ ಸೇವೆಯನ್ನು ಮಾಡುತ್ತಾ ಎಲೆಮರೆಯಕಾಯಿಯಂತಿದ್ದರು. ಈ ದಂಪತಿಗಳಿಗೆ ಸಂತಾನವಾಗಿಲ್ಲ. ೧೯೪೦ರಲ್ಲಿ ಶ್ರೀಮತಿಯವರು ವಿಧಿವಶರಾದರು. ಬಡ ವಿದ್ಯಾರ್ಥಿಗಳಿಗೆ ಅನ್ನದಾನ ಮಾಡಬೇಕೆಂಬ ಆಸಕ್ತಿಯುಳ್ಳ ತಮ್ಮ ಧರ್ಮಪತ್ನಿಯ ಸವಿನೆನಪಿಗಾಗಿ ಶ್ರೀ ಶ್ರೇಷ್ಠಿಯವರು ಉಚಿತ ವೈಶ್ಯ ವಿದ್ಯಾರ್ಥಿ ನಿಯಮವನ್ನು ಸ್ಥಾಪಿಸಿದರು. ಅದೇ ಈಗ ಬೆಂಗಳೂರಿನ ಚಾಮರಾಜ ಪೇಟೆಯಲ್ಲಿರುವ ಪಿ.ಎಸ್.ಕೆ. ಹಾಸ್ಟಲ್. ಈ ವಿದ್ಯಾರ್ಥಿ ನಿಲಯದ ಆಶ್ರಮವನ್ನು ಪಡೆದು ಇದುವರೆಗೂ ನೂರಾರು ಜನ ವಿದ್ಯಾವಂತರಾಗಿರುವರು. ದೇಶದ ನಾನಾ ಭಾಗಗಳಲ್ಲಿ ನೆಲಸಿರುವರು. ಬಗೆಬಗೆಯ ಉದ್ಯೋಗದಿಂದ ಸುಖವಾಗಿ ಜೀವನ ಮಾಡುತ್ತಾ ಸತ್ಪ್ರಜೆಗಳಾಗಿರುವರು. ಅವರಲ್ಲಿ ನಾನೂ ಒಬ್ಬ. ಶ್ರೀ ಪಾಮಡಿಯವರು ೧೯೬೭ರಲ್ಲಿ ಪರಂಧಾಮವನ್ನು ಹೊಂದಿದರು. ಅವರ ೮೪ ವರ್ಷಗಳ ಜೀವನ ಸಾರ್ಥಕವಾಗಿರುವುದಲ್ಲದೇ ಜನತೆಗೆ ಆದರ್ಶ ಪ್ರಾಯವಾಗಿಯೂ ಇದೆ.

೫.೩. ಪ್ರಥಮ ಭಾರತೀಯ ವೈಮಾನಿಕ ಎಸ್.ವಿ.ಶೆಟ್ಟರು

ಶ್ರೀ ರಾಮ ವೆಂಕಟಸುಬ್ಬ ಶ್ರೇಷ್ಠಿಯವರು ೨೮.೧೨.೧೮೭೯ರಲ್ಲಿ ಜನಿಸಿದರು. ಅವರ ತಂದೆಯವರ ಹೆಸರು ಶ್ರೀರಾಮ ತಿಪ್ಪಯ್ಯ ಶ್ರೇಷ್ಠಿ. ತಾಯಿಯ ಹೆಸರು ಸಾವಿತ್ರಿ. ಆ ದಂಪತಿಗಳು ಮೈಸೂರು ನಗರದ ಶಿವರಾಮ ಪೇಟೆಯಲ್ಲಿ ವಾಸವಾಗಿದ್ದರು. ಬಡ ಕುಟುಂಬ ಬಹಳ ದಿನಗಳಾದರೂ ಮಕ್ಕಳಾಗಲಿಲ್ಲವೆಂಬ ಚಿಂತೆ. ಅವರ ಮನೆ ದೇವರಾದ ತಿರುಪತಿ ತಿಮ್ಮಪ್ಪನ ಅನುಗ್ರಹದಿಂದ ಒಂದು ಗಂಡು ಮಗುವಾಯಿತು. ಅವನಿಗೆ ವೆಂಕಟಸುಬ್ಬ ಎಂದು ನಾಮಕರಣವಾಯಿತು. ಮುದ್ದುಮಗುವನ್ನು ಪ್ರೀತಿಯಿಂದ ಸಾಕಿದರು.

ನಾಲ್ಕು ವರ್ಷವಾದ ಮೇಲೆ ಮಗನನ್ನು ಪ್ರಾಥಮಿಕ ಶಾಲೆಗೆ ಕಳುಹಿಸಿದರು. ಹುಡುಗ ಬಹಳ ಚುರುಕು, ಪ್ರತಿದಿನ ತಪ್ಪದೇ ಸಕಾಲಕ್ಕೆ ಶಾಲೆಗೆ ಹೋಗುತ್ತಿದ್ದನು. ಗುರುಗಳಿಗೆ ವಿಧೇಯನಾಗಿದ್ದನು. ಅವರು ಹೇಳಿದಂತೆ ವಿದ್ಯೆಯನ್ನು ಕಲಿತನು. ಎಲ್ಲಾ ವಾರ್ಷಿಕ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನವನ್ನು ಬಿಡದೆ ಉತ್ತೀರ್ಣನಾದನು. ಪ್ರಾಥಮಿಕ ಶಾಲೆ ದಾಟಿದನು ಹದಿನೇಳನೆಯ ವಯಸ್ಸಿನಲ್ಲಿ ೧೮೯೬ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಅದು ಪ್ರಥಮ ಶ್ರೇಣಿಯಾಗಿದ್ದಿತು.

ಮೈಸೂರು ಮಹಾರಾಜ ಕಾಲೇಜನ್ನು ಸೇರಿದನು. ಬಡತನ ತಂದೆಯ ಸಂಸಾರ ನಿರ್ವಹಣೆಯ ಕಷ್ಟವನ್ನು ಅರಿತು ಮಗನು ಮನೆಯಲ್ಲಿ ಪಾಠವನ್ನು ಹೇಳುವುದು. ಟೋಪಿಗಳನ್ನು ಹೆಣೆದು ಮಾರುವುದು ಹೀಗೆ ಅವನು ತಂದೆಗೆ ಸಹಾಯ ಮಾಡುತ್ತಾ ವಿದ್ಯಾಭ್ಯಾಸವನ್ನು ಮುಂದುವರಿಸಿದನು. ೧೯ನೇ ವರ್ಷ ವಯಸ್ಸಿನಲ್ಲಿ ೧೮೯೮ ಎಸ್.ಎ. ಪರೀಕ್ಷೆ ಮುಗಿಯಿತು. ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಯಿತೆಂದು ಸಂತೋಷ ಪಡೋಣವೆಂದರೆ ಆಗ ತಾಯಿಯ ಮರಣವಾಯಿತು. ಸ್ವಲ್ಪಕಾಲ ಗೋಳಾಡಿದ್ದು ಆಯಿತು. ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂಬ ತೀವ್ರ ಇಚ್ಛೆ ಇದ್ದರೂ ಪ್ಲೇಗಿನ ಹಾವಳಿ ಹೆಚ್ಚಾಗಿ ಶೆಟ್ಟಿಯು ಮೈಸೂರನ್ನು ಬಿಟ್ಟನು. ಮೈಸೂರು ಸರಕಾರದ ಸಹಾಯವನ್ನು ಪಡೆದು ಮದ್ರಾಸಿನಲ್ಲಿ ಕಾಲೇಜಿನ ವಿದ್ಯಾಭಾಸವನ್ನು ಮುಂದುವರಿಸಿದನು. ಎರಡು ವರ್ಷಕ್ಕೆ ೧೯೦೦ ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರು ಆಗ ಅವರಿಗೆ ೨೧ ವರ್ಷ ವಯಸ್ಸಾಗಿತ್ತು. ಎಲ್ಲಾ ಪರೀಕ್ಷೆಗಳಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದ ಮೇಧಾವಿಗಳಾದ ಶ್ರೀ ಶ್ರೇಷ್ಠಿಯವರಿಗೆ ಸರಕಾರದ ವಿದ್ಯಾರ್ಥಿ ವೇತನವು ತಪ್ಪದೇ ಬರುತ್ತಿದ್ದಿತು. ಮದ್ರಾಸಿನ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಧರ್ಮ ನಿಧಿಯ ವಿದ್ಯಾರ್ಥಿ ವೇತನವೂ ಬರುತ್ತಿದ್ದಿತು. ಆದ್ದರಿಂದ ಶ್ರೀ ಶ್ರೇಷ್ಠಿಯವರು ಮದ್ರಾಸಿನಲ್ಲಿ ಇಂಜಿನಿಯರಿಂಗ್ ಕಾಲೇಜಿಗೆ ಸೇರಿದರು. ಅಲ್ಲಿ ಅವರ ವಿದ್ಯಾಭ್ಯಾಸ ಮುಗಿಯುವ ಮುನ್ನ ಅವರ ತಂದೆಯವರು ದೈವಾದೀನರಾದರು. ಎಷ್ಟು ಕಷ್ಟಗಳು ಬಂದರೂ ಬಿಡದೆ ವಿದ್ಯಾಭ್ಯಾಸ ಮಾಡಿದರು. ಎರಡು ವರ್ಷದಲ್ಲಿ ಸಿವಿಲ್ ಇಂಜನಿಯರಿಂಗ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರು. ೧೯೦೫ರಲ್ಲಿ ಶ್ರೀ ಶ್ರೇಷ್ಠಿಯವರು ಮದುವೆಯಾದರು. ೧೯೦೬ ಸರಕಾರದ ಅಸಿಸ್ಟೆಂಟ್ ಇಂಜನಿಯರ್ ಆದರು. ಅವರ ದಕ್ಷತೆಯನ್ನು ಗಮನಿಸಿ ಮೂರು ವರ್ಷ ಎಕ್ಸಿಕ್ಯುಟಿವ್ ಇಂಜಿನಿಯರನ್ನಾಗಿ ಸರಕಾರವು ನಿಯಮಿಸಿತು. ಅನಂತರ ಅವರು ಚಿಕ್ಕಮಗಳೂರು, ಕಡೂರು, ಮೂಡುಗೆರೆಗಳಲ್ಲಿ ಕೆಲಸ ಮಾಡಿದರು. ಆದರೆ ಅವರ ವಿದ್ಯಾದಾಹ ಇನ್ನೂ ಅಡಗಿರಲಿಲ್ಲ. ಇಂಗ್ಲೆಂಡಿಗೆ ಹೋಗಿ ಉನ್ನತ ಶಿಕ್ಷಣವನ್ನು ಪಡೆಯಬೇಕೆಂದು ಸರಕಾರದ ಸಹಾಯವನ್ನು ಕೋರಿದರು. ಮೈಸೂರು ಸರಕಾರ ಒಪ್ಪಿತು. ಆದರೆ ಆಗ ವಿದೇಶಕ್ಕೆ ಹೋಗುವುದು ನಿಷಿದ್ಧವಾಗಿದ್ದಿತು. ಅನೇಕರು ಅವರ ಪ್ರಯಾಣಕ್ಕೆ ಅಡ್ಡಿಪಡಿಸಿದರು. ಆದರೆ ಅವರು ಅದಕ್ಕೆ ಹೆದರದೆ ಕುಲಾಭಾರವನ್ನು ಬಿಡದೆ ೧೯೦೯ರಲ್ಲಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಅಲ್ಲಿ ಅವರು ಅಪೂರ್ವವಾದ ವಿಮಾನ ವಿದ್ಯೆಯನ್ನು ಕಲಿತು ಪರಿಣಿತರಾದರು. ಕಂಪನಿಯ ಅಪ್ಪಣೆಯನ್ನು ಪಡೆದು ಸ್ವತಃ ಅವರೇ ವಿಮಾನವನ್ನು ತಯಾರಿಸಿ, ಅದನ್ನು ಆಕಾಶದಲ್ಲಿ ಹಾರಾಡಿಸಿ, ಸುರಕ್ಷಿತವಾಗಿ ಭೂಮಿಗೆ ಇಳಿಸಿದರು. ಇದನ್ನು ಕಂಡ ಕಂಪನಿಯವರು ಮೆಚ್ಚಿ ಇವರಿಗೆ ೧೯೧೨ರಲ್ಲಿ ಚಿನ್ನದ ಪದಕವನ್ನಿತ್ತು ಸನ್ಮಾನಿಸಿದರು. ಈ ವಿಷಯವನ್ನು ಕಲ್ಕತ್ತ ಮಾಡರನ್ ರೆವ್ಯೂ ಪತ್ರಿಕೆಯಲ್ಲಿ ಮೈಸೂರು ಮರಾಮತ್ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರಾದ ಶ್ರೀ ಎಸ್.ವಿ.ಶೆಟ್ಟರು ಒಂದು ವಿಮಾನವನ್ನು ತಯಾರಿಸಿ ಅದರಲ್ಲಿ ಕುಳಿತು ಆಕಾಶದಲ್ಲಿ ಸಂಚಾರ ಮಾಡಿದರೆಂಬ ವಿಚಾರ ಉತ್ತೇಜನಕಾರಿಯಾದರು. ಇವರು ಭಾರತ ಮಾತೆಯ

ಭವ್ಯ ಸಂತಾನರು ಎಂದು ಪ್ರಕಟಿಸಿ ಹೊಗಳಿದೆ. ವಿಮಾನ ನಿರ್ಮಾಣ ಹಾಗೂ ಅದನ್ನು ನಡೆಸುವ ವಿದ್ಯೆಯನ್ನು ಕಲಿತವರಲ್ಲಿ ಭಾರತ ದೇಶದಲ್ಲಿ ಶ್ರೀ ಎಸ್.ವಿ. ಶೆಟ್ಟರೆ ಮೊದಲಿಗರು.

೫.೪. ಚಂಗಯ್ಯ ಶ್ರೇಷ್ಠಿಯವರು (ವೈಶ್ಯ ಜಿಲ್ಲಾಧಿಕಾರಿ)

ಆಂಧ್ರದ ಮಾರ್ಗಾಪುರದಿಂದ ಬಂದು ಮದ್ರಾಸ್ ನಗರದಲ್ಲಿ ನೆಲಸಿದ್ದ ಶ್ರೀ ವೆಂಕಟಾಚಲ ಶ್ರೇಷ್ಠಿಯವರ ಪುತ್ರರಾಗಿ ೧೮೫೫ರಲ್ಲಿ ಇವರು ಜನಿಸಿ ೧೮೭೭ರಲ್ಲಿಯೇ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಅಕೌಂಟೆಂಟ್ ಆಗಿ ಕೆಲಸಕ್ಕೆ ಸೇರಿದ ಅವರು ಸ್ವಲ್ಪ ಕಾಲಾನಂತರ ಆ ಕೆಲಸವನ್ನು ಬಿಟ್ಟು ಇಂಜಿನಿಯರಿಂಗ್ ರೇಲ್ವೇ ಆಫೀಸ್‌ನ ಮ್ಯಾನೇಜರ್ ಆಗಿದ್ದರು. ೧೮೮೭ರಲ್ಲಿಯೇ ಮೈಸೂರು ರೆವಿನ್ಯೂ ಪರೀಕ್ಷೆಯಲ್ಲಿ ಎರಡನೆಯವರಾಗಿ ಉತ್ತೀರ್ಣರಾಗಿ ಮೈಸೂರು ತಾಲೂಕಿನ ಅಮಲ್ದಾರರಾಗಿ ನಿಯಮಿಸಲ್ಪಟ್ಟರು. ನಾಲ್ಕೇ ವರ್ಷಗಳಿಗೆ ಅಸಿಸ್ಟೆಂಟ್ ಕಮೀಷನರ್ ಆದ ಅವರು ನಂತರ ಜಿಲ್ಲಾಧಿಕಾರಿಗಳೂ ಆದರು. ನಂತರ ೧೯೧೦ ರಲ್ಲಿ ನಿವೃತ್ತರಾದರು. ಅಲ್ಲಿಯವರೆಗೆ ಜಿಲ್ಲೆಯ ಪ್ರಪ್ರಥಮ ಪ್ರಜೆಯಾಗಿ ಆಡಳಿತಾಧಿಕಾರಿಯಾಗಿ ಆಯ್ಕೆಯಾದುದು ವೈಶ್ಯರ ಇತಿಹಾಸದಲ್ಲಿ ಇದು ಪ್ರಪ್ರಥಮವಾಗಿದೆ.

೫.೫. ಪುಟ್ಟು ಗೋಪಾಲಕೃಷ್ಣ ಶ್ರೇಷ್ಠಿಯವರು

ಸಹಕಾರಿ ಕ್ಷೇತ್ರ, ರಾಜಕೀಯ ಕ್ಷೇತ್ರ, ಆಧ್ಯಾತ್ಮಿಕ ಕ್ಷೇತ್ರಗಳ ಜೊತೆಗೆ ಅವಿಚ್ಛಿನ್ನವಾಗಿ ೪೦ ವರ್ಷಗಳವರೆಗೆ ಸಾಹಸದಿಂದ ಸ್ಥಾಪಿಸಿ ಪ್ರಕಟಸಿದ 'ಮೈಸೂರು ವೈಶ್ಯ' ಪತ್ರಿಕೆಯ ಹಿನ್ನೆಲೆಯಲ್ಲಿ ವೈಶ್ಯ ಭಾಂದವರು ಎಂದಿಗೂ ಮರೆಯಲಾಗದ ವ್ಯಕ್ತಿಗಳಲ್ಲಿ ಮೈಸೂರಿನ ಪುಟ್ಟು ಗೋಪಾಲ ಕೃಷ್ಣ ಶ್ರೇಷ್ಠಿಯವರೂ ಒಬ್ಬರಾಗಿದ್ದಾರೆ. ಪಿ.ಜಿ.ಯವರೆಂದೇ ಪರಿಚಿತರಾಗಿದ್ದ ಅವರು ಸರಾಫ್ ವರ್ತಕರಾಗಿದ್ದ ಪುಟ್ಟು ಸೂರ್ಯನಾರಾಯಣ ಶ್ರೇಷ್ಠಿಯವರ ಹಿರಿಯ ಮಗನಾಗಿ ೧೯೦೫ರಲ್ಲಿ ಜನಿಸಿದರು. ೧೯೨೭ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿಗಳಿಸಿದರು. ೧೯೩೯ರಲ್ಲಿ ಮದ್ರಾಸ್ ವಿ.ವಿ.ಬಿ.ಎಲ್.ಪದವಿ ಪಡೆದರು. ಜ್ಞಾನಪೀಠ ಪ್ರಶಸ್ತಿ ಪಡೆದ ಕುವೆಂಪುರವರ ಸಹಪಾಠಿಗಳಾಗಿದ್ದ ಇವರು ಅವರ ಸಲಹೆಯ ಮೇರೆಗೆ ಆರ್ಯವೈಶ್ಯ ಹಾಸ್ಟೆಲ್‌ನಲ್ಲಿ ಸ್ಥಾಪಿಸಿ ಕಾರ್ಯದರ್ಶಿಯಾದರು. ಕಾಂಗ್ರೆಸ್ ಮಹಾಧಿವೇಶನದಲ್ಲಿ ಸ್ವಯಂ ಸೇವಕರಾಗಿ ದುಡಿದರು. ನಂತರ ವಕೀಲ ವೃತ್ತಿ ಆರಂಭಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಪಾಲ್ಗೊಂಡರು. ಮೈಸೂರಿನ ಪುರಸಭಾಧ್ಯಕ್ಷರಾಗಿ ೧೨ ವರ್ಷ, ನಾಲ್ಕು ವರ್ಷ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ ನಿಷ್ಠೆಯಿಂದ ದುಡಿದರು. ದಸರಾ ವಸ್ತು ಪ್ರದರ್ಶನದಲ್ಲಿಯೂ ವ್ಯವಸ್ಥೆಯ ಹಿನ್ನೆಲೆಯಲ್ಲಿ ಇವರ ಕೌಶಲವಿರುತ್ತಿತ್ತು. ೧೯೫೭ರಲ್ಲಿ ಸಹಕಾರ ಕ್ಷೇತ್ರವನ್ನು ಪ್ರತಿನಿಧಿಸಲು ವಿಧಾನ ಪರಿಷತ್ತಿಗೆ ನೇಮಕಗೊಂಡರು. ನಂತರ ಉಪಸಭಾಪತಿಯೂ ಆದರು. ಅವರ ದಕ್ಷತೆ ಆಡಳಿತ ವೈಶ್ಯ ಜನಾಂಗಕ್ಕೆ ಹಿತಕರವಾಗಿತ್ತು. ೧೯೪೦ರಲ್ಲಿ ವೈಶ್ಯ ಪತ್ರಿಕೆ ಸ್ಥಾಪಿಸಿ ಸ್ವಂತ ಮುದ್ರಣಾಲಯವನ್ನು ಹೊಂದುವಂತೆ ಮಾಡಿದರು. ೧೯೪೮ರಲ್ಲಿ ವಿಶ್ವವಾಣಿ ಪತ್ರಿಕೆ ಹುಟ್ಟು ಹಾಕಿ ೭ ವರ್ಷಗಳ ಕಾಲ ಗೌರವ ಸಂಪಾದಕರಾಗಿದ್ದರು.

೫.೬. ಟೀಕಾವೆಂಕಟಾಚಲ ಗುಪ್ತರು (ವೈಶ್ಯ ಶಿರೋಮಣಿ)

ಕರ್ನಾಟಕದ ಎಲ್ಲ ವೈಶ್ಯರ ಮನೆಮಾತಾಗಿದ್ದ ಚಿತ್ರದುರ್ಗದ ಟೀಕಾ ವೆಂಕಟಾಚಲ ಗುಪ್ತರವರನ್ನು ವೈಶ್ಯ ಸಾಹಿತ್ಯದ ಹರಿಕಾರರೆಂದು ಗುರುತಿಸಬಹುದಾಗಿದೆ. ಆರ್ಯವೈಶ್ಯ ಸಮಾಜದ ದೃವತಾರೆಯಂತೆ ಅವರ ಇಳಿ ವಯಸ್ಸಿನಲ್ಲಿಯೂ ಕುಗ್ಗದೆ ತಮ್ಮ ಲೇಖನಿಯ ಮೂಲಕ ವೈಶ್ಯ ಸಮಾಜದ ಜಾಗೃತಿಗಾಗಿ ವೀರ ಕಹಳೆ ಮೊಳಗಿಸಿದುದು ಈಗೊಂದು ಇತಿಹಾಸ. ಚಿತ್ರದುರ್ಗ ತಾಲ್ಲೂಕಿನ ಸಜ್ಜನಕೆರೆಯೇ ಇವರ ಹುಟ್ಟೂರು ೧೪.೦೯.೧೯೧೧ರಲ್ಲಿ ಜನಿಸಿದರು. ಟೀಕಾ ದೊಡ್ಡರಾಮಪ್ಪ, ನರಸಮ್ಮ ದಂಪತಿಗಳ ಕಿರಿಯ ಮಗ ಇವರು. ಬಾಲ್ಯದ ವಿದ್ಯಾಭ್ಯಾಸ ಊರಿನ ಚಾವಡಿಯಲ್ಲಿ ಪ್ರಾರಂಭವಾಗಿ, ಮನೆಯಲ್ಲಿಯೇ ಅಮರಕೋಶ, ಮಗ್ಗಿ ಕಲಿತರು. ನಂತರ ಪಕ್ಕದ ಹಳ್ಳಿಗೆ ಹೋಗಿ ಲೋಯರ್ ಸೆಕೆಂಡರಿಯಲ್ಲಿ ತೇರ್ಗಡೆ ಹೊಂದಿದರು. ಟೀಕಾರವರ ಮನೆತನದಲ್ಲಿ ಯಾರೂ ಈ ಪರೀಕ್ಷೆಯಲ್ಲಿ ಅಲ್ಲಿಯವರೆಗೆ ಉತ್ತೀರ್ಣರಾಗಿರದಿದ್ದದ್ದು ಅವರ ಹೆಮ್ಮೆಯ ವಿಷಯ.

೫.೭. ದರ್ಶಿ ಚಂಚಯ್ಯ (ಸ್ವಾತಂತ್ರ್ಯಯೋಧ)

ಭಾರತ ಮಾತೆಯ ಬಂಧ ಮುಕ್ತಿಗಾಗಿ ಹೋರಾಡಿದ ಮಹಾಪುರುಷರಲ್ಲಿ ಆರ್ಯವೈಶ್ಯ ಮಹಾನಾಯಕ ದರ್ಶಿ ಚಂಚಯ್ಯನವರು ಒಬ್ಬರು. ಇವರು ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ಗನಿಗೆರೆ ಗ್ರಾಮದಲ್ಲಿ ೧೮೯೦ರಲ್ಲಿ ಜನಿಸಿದರು. ಇವರ ತಂದೆ ಬಡವರಾಗಿದ್ದು ಕುಲ ವೃತ್ತಿಯಿಂದ ಧನಾರ್ಜನೆ ಮಾಡಿ ಧಾನಶೀಲರಾಗಿದ್ದರು. ಒಂದು ಸಲ ೧೯೦೩ರಲ್ಲಿ ಕನಕಗಿರಿಗೆ ಒಬ್ಬ ವೈಶ್ಯ ತಹಸೀಲ್‌ದಾರರು ಬಂದರು. ಅವರನ್ನು ನೋಡಿದ ಮೇಲೆ ತನ್ನ ಮಗನೂ ಇಂಗ್ಲೀಷ ವಿದ್ಯಾಭ್ಯಾಸ ಮಾಡಬೇಕು ಅವರಂತೆಯೇ ಉನ್ನತ ಪದವಿಯನ್ನು ಗಳಿಸಬೇಕೆಂಬ ಆಸೆ ತಂದೆಯ ಮನದಲ್ಲಿ ಮೂಡಿತು. ಮೂರನೇ ತರಗತಿಯಲ್ಲಿ ಓದಲು ಕನಕಗಿರಿಯಲ್ಲಿ ಅವಕಾಶವಿರಲಿಲ್ಲವಾಗಿ ಓಂಗೋಲುವಿಗೆ ಕಳಿಸಬೇಕಾಗಿತ್ತು. ಅಲ್ಲಿಯ ಮುಖ್ಯೋಪಾಧ್ಯಾಯ ಕಾಳಿದಾಸು ವೆಂಕಟಸುಬ್ಬಯ್ಯನವರು ಓದಿ ಉತ್ತರ ಕೊಡದವರನ್ನು ಉಗ್ರವಾಗಿ ದಂಡಿಸುತ್ತಿದ್ದರು. ಚಂಚಯ್ಯನವರು ಅವರ ಶಿಕ್ಷೆಯಿಂದ ತಪ್ಪಿಸಿಕೊಂಡು ಅವರ ಪ್ರೀತಿಗೆ ಪಾತ್ರರಾದರು. ಆ ಕಾಲದಲ್ಲಿ ಎಲ್ಲೆಲ್ಲೋ ರಾಜಕೀಯ ಚೈತನ್ಯವು ವಿಜೃಂಭಿಸುತ್ತಿತ್ತು. ಒಮ್ಮೆ ಬಿಪಿನ್ ಚಂದ್ರಪಾಲರು ಆ ಊರಿಗೆ ಬಂದು ಉಪನ್ಯಾಸ ವನ್ನಿತ್ತರು. ಇದು ಚಂಚಯ್ಯನವರ ಮೇಲೆ ತುಂಬಾ ಪ್ರಭಾವವನ್ನು ಬೀರಿತು. ಆದರೂ ವಿಧ್ಯಾಭ್ಯಾಸಕ್ಕೆ ಅಡ್ಡಿಯಾಗಲಿಲ್ಲ. ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂದಿನ ವ್ಯಾಸಂಗಕ್ಕಾಗಿ ಮದ್ರಾಸಿಗೆ ಬಂದು, ಪಚ್ಚೆಯಪ್ಪ ಕಲಾ ಶಾಲೆಗೆ ಸೇರಿದರು. ಇಲ್ಲಿ ಇಂಟರ್ ಉತ್ತೀರ್ಣರಾದರು. ಪ್ರೌಢಶಾಲೆಯಲ್ಲಿ ಓದುವಾಗ ಗಣಿತದಲ್ಲಿ ನೂರು ನಂಬರು ಬಂದುದರಿಂದ ಇಂಜಿನಿಯರಿಂಗ್ ಓದುವ ಅಭಿಲಾಷೆಯಿದ್ದಿತು. ದುರಾದೃಷ್ಟದಿಂದ ಇಂಜಿನಿಯರಿಂಗ್‌ನಲ್ಲಿ ಸ್ಥಳಾವಕಾಶ ದೊರಕದಿದ್ದುದರಿಂದ ಪಾಶ್ಚಿಮಾತ್ಯ ರಾಷ್ಟ್ರಗಳಿಗಾದರೂ ಹೋಗಬೇಕೆಂಬ ಸಂಕಲ್ಪ ಉಂಟಾಯಿತು. ಆ ದಿನಗಳಲ್ಲಿ ವಿದೇಶಕ್ಕೆ ಹೋಗಿ ಬಂದವರನ್ನು ವೈಶ್ಯ ಸಮಾಜ

ಬಹಿಷ್ಕರಿಸುತ್ತಿತ್ತು. ಆದರೂ ಚಂಚಯ್ಯನವರು ಅಮೇರಿಕಾ ದೇಶಕ್ಕೆ ಹೋಗುವ ಸಾಹಸ ಮಾಡಿದರು. ಇವರ ಮನೆಯವರಿಗೂ ಇದು ಇಷ್ಟವಿರಲಿಲ್ಲ. ಕೊನೆಗೆ ತಂದೆ ತಾಯಿಗಳನ್ನು ಒಪ್ಪಿಸಿ ಅಮೇರಿಕಾ ದೇಶಕ್ಕೆ ಹೊರಟರು. ಅವರು ಓದಬೇಕಾಗಿದ್ದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯವು ಬರ್ಕ್‌ಹಿಲ್ ಪಟ್ಟಣದಲ್ಲಿದ್ದುದರಿಂದ ಜಪಾನಿನ ಮಾರ್ಗವಾಗಿ ಹೋಗುವುದು ಸಮೀಪವಾಗಿದ್ದಿತು. ಅಂತೆಯೇ ಪ್ರಯಾಣಿಸಿ ೧೯೧೫ರ ಡಿಸೆಂಬರ್‌ನಲ್ಲಿ ಅಮೇರಿಕಾ ತಲುಪಿದರು.

ನಂತರ ವಿದ್ಯಾಭ್ಯಾಸ ಮುಗಿಸಿ ತಾಯ್ನಾಡಿಗೆ ಆಗಮಿಸಿದರು. ಬಂದ ನಂತರ ಸ್ವತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು. ಪ್ರತೀಕಾರ, ಹಿಂಸೆ, ದೌರ್ಜನ್ಯ, ಸಾವು ಸಾಯುಧ ಹೋರಾಟ, ಗಲ್ಲುಶಿಕ್ಷೆ ಮುಂತಾದುವನ್ನು ಹೊಂದಿದ್ದ "ಗದರ್" ಪಾರ್ಟಿಯಿಂದ ಅಹಿಂಸೆ, ಸತ್ಯಗಳಿಂದ ಕೂಡಿದ ಗಾಂಧೀಜಿಯವರ ಪ್ರಪಂಚಕ್ಕೆ ೧೯೧೯ ರಲ್ಲಿ ಚಂಚಯ್ಯನವರು ಪ್ರವೇಶಿಸಿದರು. ಆ ವೇಳೆಗೆ ಚಂಚಯ್ಯನವರು ನಾಲ್ಕೂವರೆ ವರ್ಷದ ಕಾರಾಗೃಹ ವಾಸವನ್ನು ಅನುಭವಿಸಿದರು. ಅವರಂತೆಯೇ ಅವರ ಮೊದಲ ಧರ್ಮಪತ್ನಿ ಅನ್ನಪೂರ್ಣಮ್ಮನವರು ದ್ವಿತೀಯ ಪತ್ನಿ ಸುಭದ್ರಮ್ಮನವರೂ ಗಾಂಧೀಜಿಯವರಲ್ಲಿ ಅತ್ಯಂತ ಭಕ್ತಿ ಗೌರವಗಳನ್ನು ತಳೆದವರಾಗಿದ್ದರು.

ಭಾರತ ಸ್ವಾತಂತ್ರ್ಯದ ಜೊತೆಗೆ ವೈಶ್ಯ ಸಮಾಜದಲ್ಲಿದ್ದ ಅನೇಕ ಅನ್ಯಾಯ ಮೂಢನಂಬಿಕೆಗಳ ಮೇಲೂ ಯುದ್ಧ ಘೋಷಿಸಿದರು. 'ಅರ್ಥಹೀನ ಪೌರೋಹಿತ್ಯವನ್ನು ಧಿಕ್ಕರಿಸಿದರು. ಬಾಲ್ಯ ವಿವಾಹವನ್ನು ವಿರೋಧಿಸಿ ರಜಸ್ವಲಾ ನಂತರದ ವಿವಾಹವನ್ನು ಪ್ರೋತ್ಸಾಹಿಸಿದರು. ವಿಧವಾ ವಿವಾಹಕ್ಕೆ ಆದ್ಯತೆಯಿತ್ತರು. ಅನಾಥ ಶಿಶು ಸಂರಕ್ಷಣಾ ಶಾಲೆಗಳನ್ನು ತೆರೆದರು. ಪತಿತ ಯುವತಿಯರ ಉದ್ಧಾರ ಕಾರ್ಯ, ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ, ಉಚಿತ ಪಾಠಶಾಲೆಗಳ ಸ್ಥಾಪನೆ, ಸಾಂಸ್ಕೃತಿಕ ಉತ್ಸವಗಳ ನಿರ್ವಹಣೆ, ವ್ಯಾಯಾಮ ಶಾಲೆಗಳ ಸ್ಥಾಪನೆ, ಹರಿಜನೋದ್ಧಾರ ಕಾರ್ಯಗಳ ಆದ್ಯತೆ ನೀಡಿದ್ದರು.

೧೯೩೫ರಲ್ಲಿ ಅವರ ಜೀವಿತದಲ್ಲಿ ಪರಿವರ್ತನೆ ಉಂಟಾಯಿತು, ಕೊಯ್ಯಮತ್ತೂರು ಜೈಲಿನಿಂದ ಬಿಡುಗಡೆ ಯಾಗಿ ಮದ್ರಾಸಿಗೆ ಬಂದರು. ಅವರ ಅಪೂರ್ವವಾದ ಧೈರ್ಯ ಸಾಹಸಗಳನ್ನು ಆಂಧ್ರಪ್ರದೇಶ ಗುರುತಿಸಿ, ಅನೇಕ ಸಭೆ ಸಮಾರಂಭಗಳಲ್ಲಿ ಅವರನ್ನು ಗೌರವಿಸಿತು. ಪುರಾತನ ಸಂಪ್ರದಾಯಗಳು ಮೂಢಾಚಾರಗಳು, ಅಭಿವೃದ್ಧಿಗೆ ವಿರೋಧಕಗಳೆಂದು ತಿಳಿದ ಚಂಚಯ್ಯನವರು, ಭಾರತ ಭೂಮಿಯಲ್ಲಿ ನಡೆಯುತ್ತಿದ್ದ ವಿಪ್ಲವಕರವಾದ ಬದಲಾವಣೆಗೆ ಹೆಗಲಿತ್ತರು. ೧೯೩೭ರಿಂದ ಚಂಚಯ್ಯನವರು ಕಾಂಗ್ರೆಸ್ ಸೋಷಿಯಲಿಸ್ಟ್ ಆಗಿಯೂ ೧೯೪೦ರ ನಂತರ ಕಮ್ಯೂನಿಷ್ಟರಾಗಿಯೂ ಕೆಲಸ ಮಾಡಿದರು. ಕಮ್ಯೂನಿಸ್ಟ್ ಪಾರ್ಟಿಯಲ್ಲಿ ೧೭ ವರ್ಷ ಸೇವೆ ಸಲ್ಲಿಸಿದ್ದಾರೆ.

೫.೮. ಪೊಟ್ಟಿ ಶ್ರೀರಾಮುಲು

ಆಂಧ್ರಪ್ರದೇಶದ ಗಣನೀಯ ಗೌರವಾನ್ವಿತ ನಿಸ್ವಾರ್ಥ ಸಮಾಜ ಸೇವಾಕರ್ತ ಶ್ರೀ ಶ್ರೀ ರಾಮಲುರವರು, ಇವರು ನಮ್ಮ ಆರ್ಯ ವೈಶ್ಯ ಜನಾಂಗಕ್ಕೆ ಸೇರಿದವರೆಂದು ಹೇಳಿಕೊಳ್ಳುವುದು ನಮ್ಮ ಜನಾಂಗದ ಹೆಮ್ಮೆ.

ಇವರು ೧೬.೦೩.೧೯೦೧ ರಲ್ಲಿ ಮದ್ರಾಸಿನಲ್ಲಿ ಜನಿಸಿ ಇಂಜನಿಯರ್ ಆಗಿ ಸೇವೆ ಸಲ್ಲಿಸಿದರು. ಆಗ ಭಾರತ ಸ್ವಾತಂತ್ರ್ಯ ಚಳುವಳಿಯ ಕಾಲ, ಮಹಾತ್ಮ ಗಾಂಧೀಜಿ ಅವರ ಸತ್ಯಾಗ್ರಹ, ಶಾಂತಿಯುತ ಚಳುವಳಿ ಅಗಾಧವಾಗಿ ನಡೆಯುತ್ತಿದ್ದ ಕಾಲ ಶ್ರೀ ರಾಮಲು ಅವರಿಗೆ ಗಾಂಧೀಜಿಯವರು ಕೂಗು, ಸತ್ಯಾಗ್ರಹದ ಒಲವಿನಿಂದ ಪ್ರೇರಣೆಯಾಗಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮಹಾತ್ಮಾಜಿಯವರ ಜೊತೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇಳಿದರು. ಆಗಿನ ಚಳುವಳಿಯಲ್ಲಿ ಕಾಯ, ವಾಚಾ, ಮನಸಾ, ತ್ರಿಕರ್ಣ ಶುದ್ಧಿಗಳಿಂದ ಹೋರಾಟದಲ್ಲಿ ತಮ್ಮನರ್ಪಿಸಿಕೊಂಡರು. ಇವರ ಸೇವೆಯ ಬಗ್ಗೆ ಮಹತ್ಮಾಜಿಯವರು ಹೇಳಿರುವ ಒಂದು ಮಾತು ನೆನಪಿಗೆ ಬರಬಹುದು. ಪೊಟ್ಟೆ ಶ್ರೀ ರಾಮಲು ಅವರಂತಹ ತ್ಯಾಗಿಗಳು ಹತ್ತು ಜನ ಆದರೆ ಸಾಕು ನಮಗೆ ಸ್ವಾತಂತ್ರ್ಯ ಸಿಕ್ಕಿದ ಹಾಗೆಯೇ. ಅಂದರೆ ಅವರ ತ್ಯಾಗ ಮನೋಭಾವ ಅವರ ಸೇವೆ ಕಳವಳ, ಕಾಳಜಿ, ದೇಶದ ಕಡೆ ಎಷ್ಟಿರಬೇಕು ಎಂಬುದಕ್ಕೆ ಸಾಕ್ಷಿ. ಶ್ರೀಯುತರು ದೇಶ ಸಂಗ್ರಾಮ, ಭಾಷಾವಾರು ರಾಜ್ಯ ವಿಭಜನೆಗಳಿಗೆ ಅಲ್ಲದೆ ಹರಿಜನ ದೀನ ದಲಿತರ ಸೇವೆಯಲ್ಲಿ ನಿರತರಾಗಿದ್ದರು. ಅವರ ಜೀವನ ಆದರಣೀಯ "ತ್ಯಾಗವಿಲ್ಲದ ಸೇವೆ ಸೇವೆಯಲ್ಲ" ಅಂತಹ ಸೇವೆ ಕೇವಲ ಬೂಟಾಟಿಕೆ. ಈ ಧೀಮಂತ ವ್ಯಕ್ತಿ ಭಾಷಾಧಾರಿತ ರಾಜ್ಯಗಳ ರಚನೆಗೋಸ್ಕರ ಅಂದರೆ ಈಗಿನ ಅಂಧ್ರಪ್ರದೇಶ ಎಂಬ ರಾಜ್ಯ ಉದಯಿಸಲು ಅವರ ಅಮರಣಾಂತ ಉಪವಾಸ ಸತ್ಯಾಗ್ರಹವೇ ಕಾರಣ. ಇದೇ ಸತ್ಯಾಗ್ರಹದಲ್ಲಿ ಕೊನೆಗೆ ೧೫.೧೨.೧೯೫೨ರಲ್ಲಿ ಕೊನೆಯ ಉಸಿರೆಳೆದರು. ಅದಕ್ಕೇ ಅವರನ್ನು "ಅಮರಜೀವಿ" ಎಂದು ಕರೆಯುತ್ತಾರೆ. ಇವರ ಸ್ಮರಣಾರ್ಥ ಗೌರವಕ್ಕೆ ದ್ಯೋತವಾಗಿ ಹೈದ್ರಾಬಾದ್‌ನಲ್ಲಿ ತೆಲುಗು ಭಾಷೆಗೆ ಮೀಸಲಾದ ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾನಿಲಯವನ್ನು ಆಂಧ್ರ ಸರ್ಕಾರ ತೆರೆದಿದೆ. ಇವರ ತ್ಯಾಗ ಸೇವೆ ಬಲಿದಾನ ಜೀವನ ಬಹಳವಾಗಿ ಅನುಕರಣೀಯ ಹಾಗೂ ಬಹುಸ್ಮರಣೀಯ. ಇಂಥ ಘನತೆವೆತ್ತ ಸ್ವಾತಂತ್ರ್ಯ ಹೋರಾಟಗಾರ ವೈಶ್ಯ ಕುಲದಲ್ಲಿ ಹುಟ್ಟಿ ತಂದ ಕೀರ್ತಿ ಶಿಖರ ಪ್ರಿಯವಾದುದು.

೫.೯. ಲಕ್ಷ್ಮೀನರಸಿಂಹ ಸೋಮಯಾಜಿಯವರು

ವೈಶ್ಯರ ಧಾರ್ಮಿಕ ಹಕ್ಕುಗಳಿಗಾಗಿ ನಿರಂತರ ಹೋರಾಟ ಮಾಡುತ್ತಾ ನಾನಾ ರೀತಿಯ ಕಷ್ಟಗಳನ್ನು ಅನುಭವಿಸಿದರೂ ಎದೆಗುಂದದೆ ದಿಟ್ಟತನದಿಂದ ವರ್ತಿಸಿ ಬಹುಮುಖ ಸೇವೆ ಮಾಡುತ್ತಾ ಅಹರ್ನಿಶಿ ದುಡಿದ ಲಕ್ಷ್ಮೀನರಸಿಂಹ ಸೋಮಯಾಜಿಯವರು ೨೫.೦೮.೧೮೭೫ ರ ಭಾನುವಾರ ಶ್ರಾವಣ ಬಹುಳ ಅಷ್ಟಮಿಯಂದು ಜನಿಸಿದರು. ತಂದೆ ಮುಠಾ ಜಮೀನ್ದಾರ್ ಆಗಿದ್ದ ಕೃಷ್ಣಮೂರ್ತಿಯವರು ತಾಯಿ ನ್ಯೂಜಿವೀಡು ಜಮೀನ್ದಾರ್ ಹಾಗೂ ತಹಶೀಲ್ದಾರ್ ಆಗಿದ್ದ ವೆಂಕಟರಾಜುರವರ ಪುತ್ರಿ ರಾಘವಾಂಬೆ. ಮುದ್ದು ಮಗನಾಗಿ ಬೆಳೆದ ಲಕ್ಷ್ಮೀನರಸಿಂಹರು. ೧೩ನೆಯ ವಯಸ್ಸಿನಲ್ಲಿ ವಿದ್ಯಾಭ್ಯಾಸ ಪ್ರಾರಂಭಿಸಿದರಾದರೂ ಮುಗಿಯುವ ಮೊದಲೆ ೧೮ನೆಯ ವಯಸ್ಸಿನಲ್ಲಿಯೇ ಯಶೋದಾಂಬೆಯೊಡನೆ ವಿವಾಹವಾಯಿತು. ವಿದ್ಯೆಯನ್ನು ಕುಂಠಿತಗೊಳಿಸದೇ ತಮ್ಮ ಅದ್ಭುತ ಮೇಧಾವಿತನದಿಂದ ಬಿ.ಎ.ಬಿ.ಎಲ್. ಪದವೀಧರರಾದರು. ಜೊತೆಗೆ ಆಂಗ್ಲ, ಸಂಸ್ಕೃತ, ಆಂಧ್ರ ಭಾಷೆಗಳ ಪರಿಣತಿಯೊಂದಿಗೆ ಗ್ರೀಕ್ ಭಾಷೆಯನ್ನೂ ಕಲಿತರು. ಮುನ್ಸೀಫ್ ನ್ಯಾಯವಾದಿ ಮೊದಲಾದ

ಸರ್ಕಾರಿ ಉದ್ಯೋಗದಲ್ಲಿ ನಿಸ್ಪೃಹತೆ, ದಕ್ಷತೆಗಳಿಂದ ದುಡಿದು ಜನಾನುರಾಗ ಗಳಿಸಿದುದರ ಫಲವಾಗಿ ಅಪಾರ ಕೀರ್ತಿ, ಪ್ರಶಸ್ತಿಗಳನ್ನು ಪಡೆದರು. ೧೮೯೨ರಲ್ಲಿ ಆಧಾನ ಆಚರಿಸಿ ದೀಕ್ಷಿತರೆಂದೂ ೧೮೯೭ರಲ್ಲಿ ಅಗ್ನಿಷ್ಟೋಮ ಆಚರಿಸಿದ ಫಲವಾಗಿ ಸೋಮಯಾಜಿಗಳೆನಿಸಿಕೊಂಡ ಅವರ ಮೊದಲ ಹೆಸರು ಲಕ್ಷ್ಮೀನರಸಿಂಹಾರ್ಯ ಎಂದಿದ್ದಿತು. ಅವರ ಹಿರಿಯ ಮಗ ಅಹಿಪತಿರಾಯರು ಬಿ.ಎ. ಓದುವಾಗಲೇ ಅಕಾಲ ಮೃತ್ಯುವಿಗೆ ಈಡಾದಾಗ ಅವರ ವಂಶದಲ್ಲಿ ಯಾರೂ ಮಾಡದ ಯಾಗವನ್ನು ಮಾಡಿದ ಪರಿಣಾಮವಾಗಿ ಮಗ ಸತ್ತನೆಂದೂ "ಮಾಡಬಾರದ್ದು ಮಾಡಿದಾಗ ಆಗಬಾರದ್ದು ಆಗುತ್ತದೆ" ಎಂದೂ ಜನ ಕುಚೋದ್ಯ ಮಾಡಿದರು. ಇದಾವುದಕ್ಕೂ ಕಿವಿಗೊಡದೆ ತಮ್ಮ ವೈಚಾರಿಕ ಚಿಂತನೆಗಳನ್ನು ಮುಂದುವರಿಸಿದರು. ಆಚರಿಸಿದರು ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡಿದ ಪರಿಣಾಮವಾಗಿ ಪುಷ್ಪಗಿರಿ ಮಠಾದೀಶರು ಅವರಿಗೆ ಬಹಿಷ್ಕಾರ ಪತ್ರ ಕಳಿಸಿದಾಗ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದರು. ಗುರುಪೀಠವೆಂಬ ಅಭಿಮಾನದಿಂದ ನ್ಯಾಯಾದೀಶರು ಇವರ ದೂರನ್ನು ತಳ್ಳಿ ಹಾಕಿದರೂ ಹೈಕೋರ್ಟಿನಲ್ಲಿ ಅದನ್ನು ದಾಖಲಿಸಿ ವಿಜಯಶೀಲರಾದರು. ಸ್ವಾಮಿಗಳವರಿಗೆ ೨೦೦ ರೂಪಾಯಿಗಳ ಜುಲ್ಮಾನೆ ವಿಧಿಸಿದಾಗ ಅದನ್ನು ಸೋಮಯಾಜಿಯವರೇ ಸಲ್ಲಿಸಿದರು. ಕೇವಲ ನ್ಯಾಯಪರಿಶೀಲನೆಗಾಗಿ ಮೊಕದ್ದಮೆಯೇ ಹೊರತು ಒಬ್ಬರನ್ನು ಅನುಮಾನಗೊಳಿಸಲಾಗಲೀ, ನಷ್ಟ ಉಂಟುಮಾಡಲಿಕ್ಕಾಗಲೀ, ಅವರು ಪ್ರಯತ್ನಿಸಲಿಲ್ಲ. ವಿಜಯನಗರದಲ್ಲಿ ಇವರು ಜಿಲ್ಲಾ ಮುನ್ಸಿಫ್‌ರಾಗಿದ್ದ ಅವಧಿ ೧೮೯೦ ಆಗ ಆನಂದ ಗಜಪತಿರಾಜರು ಕಳಿಂಗ ದೇಶದ ಅರಸರಾಗಿದ್ದರು. ಅವರೂ ಕವಿಗಳಾಗಿ, ಅಷ್ಟಭಾಷಾ ಪಂಡಿತರಾಗಿದ್ದರು. ಅವರನ್ನು ಸಂದರ್ಶಿಸಲು ಹಲವು ಬಾರಿ ಪ್ರಯತ್ನಿಸಿದರೂ ಸಾಧ್ಯವಾಗದ ಸೋಮಯಾಜಿಯವರು ತಮಗೆ ದೊರೆತಿದ್ದ ಸಕಲ ಬಿರುದಾವಳಿ, ಪದಕಗಳನ್ನು ಧರಿಸಿ, ನ್ಯಾಯಾದೀಶರ ಸಮವಸ್ತ್ರಧರಿಸಿ ನೇರವಾಗಿ ಧೈರ್ಯದಿಂದ ಆಸ್ಥಾನ ಪ್ರವೇಶಿಸಿ, ತಮ್ಮ ಪಾಂಡಿತ್ಯ ಪ್ರದರ್ಶಿಸಿ ಅನೇಕ ವಿದ್ವುತ್ ಪ್ರಶ್ನೆಗಳಿಗೆ ಸಮಾಧಾನ ಕೊಟ್ಟು, ರಾಜರ ವಿಶೇಷ ಪ್ರೀತಿಗೆ ಪಾತ್ರರಾದರು. ವೈಶ್ಯರು ಆಗಿನ ಕಾಲದಲ್ಲಿ ಯಾಗ ಮಾಡುವುದು ಸಾಮಾನ್ಯ ವಿಷಯವಾಗಿರಲಿಲ್ಲ. ಆದಾಗ್ಯೂ ಛಲದಿಂದ ಕೆಲವು ಬ್ರಾಹ್ಮಣ ಋತ್ವಿಕ್ ಜನರೂ ಪ್ರೋತ್ಸಾಹಿಸಿದ್ದರಿಂದ ಅದನ್ನು ಆಚರಿಸಲು ಉದ್ಯುಕ್ತರಾದರು. ರಾಮಲಕ್ಷ್ಮಣರು ಋಷಿಗಳ ಯಾಗ ರಕ್ಷಣೆ ಮಾಡಿದಂತೆ ಇವರ ಯಾಗಕ್ಕೆ ಸಕಲ ರಕ್ಷಣೆಯನ್ನು ಗಜಪತಿ ಮಹಾರಾಜರೇ ಏರ್ಪಡಿಸಿದರು. ಕಡು ಕಷ್ಟಗಳನ್ನು ಅನುಭವಿಸಿ ಅಪಾರ ಹಣ ಖರ್ಚು ಮಾಡಿ, ಎಲ್ಲ ವಿಘ್ನಗಳನ್ನು ದಾಟಿ, ಯಾಗವನ್ನು ವಿಧಿವತ್ತಾಗಿ ಆಚರಿಸಿದರು. ಯಾಗದಲ್ಲಿ ಪಶುವಧೆ ಬೇಡವೆಂದು ಅಹಿಂಸಾವಾದಿಗಳಾಗಿ ಅವರು 'ಪುರೋದಾಶಾ' ಯಾಗ ವನ್ನು ಮಾಡಿದರು.

ದುರ್ಭಾಕಲ ವೆಂಕಟಾಚಲ ಶಾಸ್ತ್ರಿಗಳವರು ವೈಶ್ಯರಲ್ಲಿ ಇಲ್ಲ ಸಲ್ಲದ ದೋಷಗಳನ್ನು ಆರೋಪಿಸಿ "ವೈಶ್ಯಶಾಂಕರೀ" ಎಂಬ ಗ್ರಂಥವನ್ನು ಸಂಸ್ಕೃತ ಭಾಷೆಯಲ್ಲಿ ವೈಶ್ಯರ ಧನ ಸಹಾಯದಿಂದಲೇ ಕಪಟ ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಸೋಮಯಾಜಿಗಳವರ ಕೈಗೆ ಹೇಗೋ ಈ ಪುಸ್ತಕ ದೊರೆತು, ನಾನಾ ರೀತಿಯಲ್ಲಿ

ಪ್ರಶ್ನೆಗಳ ಸುರಿಮಳೆಗರೆದಾಗ ಬೆಪ್ಪಾದ ಶಾಸ್ತ್ರಿಗಳು ಆ ಪುಸ್ತಕವನ್ನು ಆಧಾರ ರಹಿತವೆಂದು ಒಪ್ಪಿಕೊಂಡು ಗ್ರಂಥವನ್ನು ರದ್ದುಗೊಳಿಸಿದರು. ಕ್ಷಮಾಪಣಾ ಪತ್ರವನ್ನೂ ಬರೆದುಕೊಟ್ಟರು. ಹೀಗೆ ನಿರಂತರ ವೈಶ್ಯ ಸಮಾಜದ ಪುನರುತ್ಥಾನಕ್ಕಾಗಿ ದುಡಿದರು. ಹೋರಾಟದ ಬದುಕಿನಿಂದ ಹಿಂದೆ ಸಾಗಲಿಲ್ಲ. ಮೇಲೆ ಕಾಣಿಸಿದ ಮಹಾಮಹಿಮ ರೆಲ್ಲಾ ಹೈದ್ರಾಬಾದ್ ಕರ್ನಾಟಕದವರಾಗಿದ್ದಾರೆಂದು ಹೇಳಲು ಹೆಮ್ಮೆ ಎನಿಸುತ್ತದೆ.

ಅಧ್ಯಾಯ ೬

ಸಾಹಿತ್ಯ

೬.೧. ಕಥೆ

೬.೨. ಗಾದೆ

೬.೩. ಪುರಾಣ

ಅಧ್ಯಾಯ ೬

ಸಾಹಿತ್ಯ

ಜಾನಪದದಲ್ಲಿ ಉತ್ಕೃಷ್ಟವಾದ ಭಾಗ 'ಜನಪದ ಸಾಹಿತ್ಯ' ಇದು ಒಂದು ಪ್ರಮುಖ ಅಂಗ. ಒಂದು ರೀತಿಯಲ್ಲಿ ಜಾನಪದ ಅಧ್ಯಯನವೆಂದರೆ ಜನಪದದ ಸಾಹಿತ್ಯದ ಅಧ್ಯಯನವೇ ಆಗಿದೆ. ಇದು ಅನೇಕ ಸಿದ್ಧಾಂತ, ಅಧ್ಯಯನಗಳಿಗೆ ಅವಕಾಶ ಮಾಡಿಕೊಟ್ಟಿದ್ದಲ್ಲದೇ ತನ್ನಲ್ಲಿ ಅಡಗಿಸಿಕೊಂಡಿರುವ ಸಾಹಿತ್ಯಿಕ, ಸಾಂಸ್ಕೃತಿಕ, ಐತಿಹಾಸಿಕ, ಭಾಷಿಕ ಹಾಗೂ ಮನಃಶಾಸ್ತ್ರೀಯ ಮೌಲ್ಯದಿಂದ ಅನೇಕ ವಿದ್ವಾಂಸರ ಗಮನವನ್ನು ತನ್ನಡೆಗೆ ಸೆಳೆದುಕೊಂಡಿದೆ(ಪರಮಶಿವಯ್ಯ ೧೯೭೯, ಪು.೨೭೪). ಸಾಹಿತ್ಯವು ಜೀವನದ ಗತಿ ಬಿಂಬ. ಅದು ಶಿಷ್ಟವಾಗಿರಬಹುದು ಅಥವಾ ಪರಿಶಿಷ್ಟವಾಗಿರಬಹುದು. ಜನಾಂಗದ ಜೀವನಾನುಭವದ ಮಡು ಅಲ್ಲಿ ಕಾಣುತ್ತದೆ. ಅವರ ಗುಂಪಿನ ಆಚರಣೆ, ಜೀವನದ ವಿಧಾನ, ನಂಬಿಕೆಗಳ ಪರಿಚಯವಾಗಬೇಕಾದರೆ ಆ ಗುಂಪಿನ ಹಾಡುಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ, ವರ್ಗೀಕರಿಸಿ ನೋಡಿದರೆ ಮಾತ್ರ ಸಾಧ್ಯವಾಗುತ್ತದೆ (ಹಾ.ಮ.ನಾ. ೧೯೭೧, ಪು. ೨೭). ನಿತ್ಯಜೀವನ ಕರ್ಮಗಳ ಜೊತೆ ಜೊತೆಗೆ ನಿರಂತರ ಬೆಸೆದುಕೊಂಡಿರುವುದರಿಂದ ಇವು ಚಿರಪರಿಚಿತ. ಇವುಗಳ ಲಾವಣಿ, ಗೀತೆ, ಕೆಲಸದ ಹಾಡು ಸಾಂಪ್ರದಾಯಿಕ ಹಾಡು ಮುಂತಾದವುಗಳಾಗಿ ಮೂಡಿಬರುತ್ತವೆ. ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವ ಈ ಹಾಡುಗಳು ಅಮರ ಗೀತೆಗಳಾಗಿವೆ. ಇವು ಯಾವಾಗ ಸೃಷ್ಟಿಯಾದವು ಎಂದು ಗುರುತಿಸಲು ಸಾಧ್ಯವಿಲ್ಲ. ಹೀಗೆ ಅಕ್ಷರಸ್ಥ ಸಮಾಜದ ಸಾಹಿತ್ಯ ಸೃಷ್ಟಿ ವೈಯಕ್ತಿಕವೊ ಹಾಗೆ ಜನಪದ ಗೀತೆಗಳ ನಿರ್ಮಾಣದಲ್ಲಿ ತನ್ನ ಆರಂಭದಲ್ಲಿ ಸಾಮೂಹಿಕವಾಗಿದೆ. ಇವುಗಳ ನಿರ್ಮಾಣದಲ್ಲಿ ಯಾರು ಯಾವಾಗ ಹೆಗೆ ಭಾಗವಹಿಸಿದರು ಎಂದು ಹೇಳಲು ಬರುವುದಿಲ್ಲ. ಈ ಅಮರ ಗೀತೆಗಳು ಅಜ್ಞಾತ ಕವಿಗಳ ಸೃಷ್ಟಿಯಾಗಿವೆ. ಬಳಕೆಯಲ್ಲಿ ಮಾತ್ರ ವ್ಯಕ್ತಿಗತವಾಗುವುದು ಈ ಗೀತೆಗಳ ಮತ್ತೊಂದು ಮಹತ್ವದ ಅಂಶ. ಶ್ರಮಜೀವಿಗಳು, ಪ್ರಕೃತಿ ಪ್ರೇಮಿಗಳು ಆದ ಜನ ತಾವು ಹುಟ್ಟಿ ಬೆಳೆದ ನೆಲ ಜಲದ ಬಗೆಗೆ ಭಕ್ತಿ ಗೌರವವುಳ್ಳವರು, ನಾಗರಿಕ ಪ್ರಭಾವ ಆಗಿದ್ದಾಗ ಪರಂಪರಾನುಗತ ಸಂಪ್ರದಾಯ ನಂಬಿಕೆಗಳನ್ನು ನಿಷ್ಠೆಯಿಂದಾಚರಿಸುವ ಪ್ರವೃತ್ತಿಯನ್ನು ಉಳಿಸಿಕೊಂಡವರು. ಇವರ ಸಾಂಸ್ಕೃತಿಕ ಬದುಕನ್ನು ಚೆನ್ನಾಗಿ ನೋಡಲು ಗಾದೆ, ಒಗಟು, ಕತೆ ಹಾಗೂ ಗೀತೆಗಳು ಸಹಕಾರಿಯಾಗಿವೆ. ಇವೆಲ್ಲಕ್ಕಿಂತ ಗೀತೆಯೇ ಜಾನಪದ ಸಂಸ್ಕೃತಿಯನ್ನು ತೆರೆದು ತೋರುತ್ತದೆ. ಈ ಕಾರಣದಿಂದ ತನ್ನದೇ ಆದ ಸಾಂಸ್ಕೃತಿಕ ಹಿನ್ನೆಲೆ -ಪರಂಪರೆಯನ್ನು ಹೊಂದಿರುವ ಹೈದ್ರಾಬಾದ್ ಕರ್ನಾಟಕದ ವೈಶ್ಯರ ಸಮಾಜದ ಸಾಹಿತ್ಯದ ಅಧ್ಯಯನವೂ ತುಂಬ ಸೂಕ್ತವಾದುದಾಗಿದೆ.

೬.೧. ಕಥೆ

ಮಾನವನ ಪುರಾತನ ಸಂಸ್ಕೃತಿಯ ಹಾಗೂ ಸಂಪ್ರದಾಯದ ಮೇಲೆ ಹೆಚ್ಚು ಬೆಳಕನ್ನು ಬೀರಬಲ್ಲ ಜಾನಪದ ಪ್ರಕಾರಗಳಲ್ಲಿ ಕಥೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಅವು ಮಾನವನ ಹಾಗೂ ಸಮಾಜ ಮತ್ತು ಸಂಸ್ಕೃತಿ ನಾಗರಿಕತೆಗಳ ಬಗ್ಗೆ ಹೆಚ್ಚು ಪುರಾವೆಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿವೆ. ಅದ್ಭುತ ರಂಜಕತೆಯೇ ಅವುಗಳ ವಿಶಿಷ್ಟ ಗುಣವಾಗಿವೆ. ಆದರೆ ಅವುಗಳ ಇನ್ನೊಂದು ಮುಖ ಸಾಮಾಜಿಕ, ಭಾಷಿಕ, ಚಾರಿತ್ರಿಕ ಮನಃಶಾಸ್ತ್ರೀಯ ದೃಷ್ಟಿಕೋನಗಳ ಮೂಲಕ ಮನುಷ್ಯವರ್ಗದ ಇತ್ಯೋಪತಿಶಯಗಳನ್ನು ಗುರುತಿಸಲು ಕಾರಣವಾಗುವಂಥದು.

ವೈಶ್ಯರಲ್ಲಿ ಕಥೆಗಳು 'ಅಜ್ಜಿ ಕಥೆಗಳು' ಎಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಅಲ್ಲಿ ಅಜ್ಜಿಯರು ಕಥಾ ಭಂಡಾರಗಳಿದ್ದ ಹಾಗೆ. ಕಥೆಗಾಗಿ ಅವರನ್ನು ಪೀಡಿಸದ ಎಳೆಯರಿಲ್ಲ (ಪರಮಶಿವಯ್ಯ ಜಿ.ಶಂ., ೧೯೭೬ viii) ಹೀಗಿವೆ. ಕಥೆಗಳ ಮೇಲೆ ಅಜ್ಜಿ ಪ್ರಭುತ್ವವನ್ನು ಸ್ಥಾಪಿಸಲು ಕಾರಣ ಅವಳಿಗಿರುವ ಬಿಡುವು ಮತ್ತು ಮನೆಮಕ್ಕಳನ್ನು ಸಂಸ್ಕೃತಿಯ ಸಂಪ್ರದಾಯದ ಸರದಾರರನ್ನಾಗಿ ಮಾಡುವ ಸಾಮಾಜಿಕ ಹೊಣೆ ಹಾಗಾಗಿ ಕಥೆಗಳ ಮೂಲಕ ಅಜ್ಜಿಯು ಮಕ್ಕಳಿಗೆ ಸಾಹಸ ಧೈರ್ಯಗಳನ್ನು ತುಂಬುತ್ತಾಳೆ. ಶಿಕ್ಷಣವನ್ನು ನೀಡುತ್ತಾಳೆ. ಹೀಗೆ ಕಥೆ ಸಾಹಸ ಕಾರ್ಯಗಳ ಪ್ರಚೋದಕವೂ ಜ್ಞಾನ ಸಂಪಾದನೆಯ ಸಂಕೇತವೂ ಆಗಿದೆ. ಇದರಿಂದ ದೊರಕುವ ಮತ್ತೊಂದು ಪ್ರಯೋಜನವೆಂದರೆ ಬೇಸರ ತರುವಂಥ ಏಕಾತಾನತೆಯಿಂದ ಬಿಡುಗಡೆ ಒಂದು ರೀತಿಯ ದೈಹಿಕ ಹಾಗೂ ಮಾನಸಿಕ ಸುಖ ವಿಶ್ರಾಂತಿ, ಆನಂದವೇ ಪರಮೋಚ್ಛ ಗುರಿ.

ವೈಶ್ಯರಲ್ಲಿ ಇರುವ ಜನಪದ ಕಥೆಗಳ ಸಂಗ್ರಹ ಇನ್ನೂ ಆಗಿಲ್ಲ. ಇವರಿಗೆ ಪ್ರತ್ಯೇಕವಾದ ಕತೆಗಳೇನು ಇಲ್ಲ. ಎಲ್ಲಾ ಜನಾಂಗದ ಕಥೆಗಳಲ್ಲಿ ಕಂಡು ಬರುವ ರಮ್ಯ ಅತಿಮಾನುಷ, ಮಾಂತ್ರಿಕ, ಬುದ್ಧಿವಂತಿಕೆ, ವಿನೋದ, ಪ್ರಾಣಿ ವಾಸ್ತವಿಕ ಹಾಗೂ ಒಗಟು ಕಥೆಗಳು ಇಲ್ಲಿ ಕಂಡು ಬರುತ್ತವೆ. ವೈಶ್ಯರ ಕತೆಗಳು ಸಾಂಸ್ಕೃತಿಕ ಪರಿಸರದ ದೃಷ್ಟಿಯಿಂದ, ಗಮನಾರ್ಹವಾದುವುಗಳಾಗಿವೆ. ಭಿನ್ನ ಸಾಂಸ್ಕೃತಿಕ ಸ್ತರಗಳಲ್ಲಿ ಮಾನವನ ನಡವಳಿಕೆ ಭಿನ್ನವಾಗಿರುವ ದೃಷ್ಟಿಯಿಂದಲೂ ಈ ಕಥೆಗಳು ಅಭ್ಯಾಸಯೋಗ್ಯವಾಗಿವೆ. ಹೈದ್ರಾಬಾದ್ ಕರ್ನಾಟಕದ ಜನತೆಯ ಸಾಮಾಜಿಕ ಜೀವನದ ಮೂಲಾಂಶವಾಗಿರುವ ಕಥೆಗಳು ವೈಶ್ಯರ ಸೃಜನಶೀಲ ಶಕ್ತಿಯನ್ನೂ ಸಂಸ್ಕೃತಿ ಸಂಪನ್ನತೆಯನ್ನೂ ತೆರೆದು ತೋರಿಸುತ್ತವೆ. ಅವರ ಕಥೆಗಳಲ್ಲಿ ಅತಿಥಿ ಸತ್ಕಾರ ವಿಶೇಷತೆಯನ್ನು ಪರಿಚಯಿಸುವ ವಿವರಗಳಿವೆ. ಕಥೆಗಳು ಹೇಳುವವರ ಭಾಷೆ. ಅನುಭವ, ಅಭಿವೃದ್ಧಿ, ರೂಪ, ಸ್ವಭಾವ, ವರ್ತನೆಗಳ ಮಾದರಿಯನ್ನು ಬಿಂಬಿಸಿವೆ.

೬.೨. ಗಾದೆ

ಗಾದೆಗಳು ಜನಪದ ಸಾಹಿತ್ಯದ ಶ್ರೀಮಂತಿಕೆಯನ್ನು ಎತ್ತಿ ಹಿಡಿದಿದೆ. ಗಾದೆ ಜೀವನಾನುಭವದ ಸಾವತ್ರಿಕ ಸತ್ಯವಾಗಿರುತ್ತದೆ. ಗಾದೆ ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಮನುಷ್ಯನ ವಿವೇಕ

ದಾರಿತಪ್ಪಿದಾಗಲೆಲ್ಲ ಗಾದೆಗಳು ಹುಟ್ಟಿವೆ. ಅವನ ವಿವೇಕವನ್ನು ತಿದ್ದಿವೆ. ಗಾದೆ ಯಾವಾಗಲೂ ಸಾಂದರ್ಭಿಕವಾದುದು. ಗಾದೆಗಳು ಅನಾದಿ ಕಾಲದಿಂದ ಎಲ್ಲಾ ಜನಾಂಗಗಳಲ್ಲಿಯ ಬಳಕೆಯಲ್ಲಿದೆ. ಗಾದೆ ವಾಮನವಾದರೂ ಇದರ ಅರ್ಥ ವ್ಯಾಪ್ತಿ ತ್ರಿವಿಕ್ರಮವಾಗಿದೆ. ಹಲವರ ಅನುಭವ ಒಬ್ಬನ ವಿವೇಕಯುತವಾದ ಮಾತು ಗಾದೆ ಎನ್ನಬಹುದು. ಬದುಕಿನ ಓರೆಕೋರೆಗಳನ್ನು ತಿದ್ದುವ ಪ್ರಯತ್ನವನ್ನು ಗಾದೆ ಮಾಡುತ್ತವೆ. ಗಾದೆಗಳು ಜನಾಂಗದ ಜೀವನಕ್ರಮ, ಆರ್ಥಿಕ ಸ್ಥಿತಿ, ಪರಿಸರ ಎಲ್ಲವೂ ಮಿಳಿತವಾಗಿರುತ್ತದೆ. ಗಾದೆಗಳಲ್ಲಿ ಅಡಗಿರುವ ವಿಷಯವನ್ನು ಅರ್ಥಗರ್ಭಿತವಾದ ಕೆಲವಾರು ವಿಷಯಗಳ ಮೇಲೆ ಬಳಸುವ ವಿಚಾರಧಾರೆ ಯಾಗಿದೆ. ವೈಶ್ಯರ ಜನಾಂಗದ ಬದುಕಿನುದ್ದಕ್ಕೂ ಮತ್ತು ಅನ್ಯ ಜನಾಂಗದ ದೃಷ್ಟಿಕೋನಗಳು ಎಲ್ಲವೂ ಕೆಳಗಿನ ಗಾದೆಗಳಲ್ಲಿ ಮಿಳಿತವಾಗಿದೆ. ಈ ಜನಾಂಗದ ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಸ್ಥಿತಿಗಳನ್ನು ಗಾದೆಗಳು ಪ್ರತಿಬಿಂಬಿಸುತ್ತವೆ. ವೈಶ್ಯರನ್ನು ಕುರಿತೇ ಗಾದೆಗಳನ್ನು ನೋಡಬಹುದು.

ಎತ್ತ ಹೋದರೂ ಶೆಟ್ಟಿ ಲೆಕ್ಕ ಬಿಡೆ

ವೈಶ್ಯರು ಪುರಾತನ ಕಾಲದಿಂದಲೂ ವ್ಯಾಪಾರವನ್ನು ಮಾಡಿಕೊಂಡೇ ಬಂದಿದ್ದಾರೆ. ವೈಶ್ಯರು ಲೆಕ್ಕಚಾರದಲ್ಲಿ ಬಹಳ ಕಟ್ಟುನಿಟ್ಟಾಗಿ ಇರುತ್ತಾರೆ. ಮನೆಯಲ್ಲಿ ನೆಂಟಸ್ತನ ಇದ್ದರೂ ವ್ಯಾಪಾರದಲ್ಲಿ ಯಾವುದೇ ರೀತಿಯ ಸಡಿಲವನ್ನು ನೀಡುವುದಿಲ್ಲ. ಮಾತನಾಡಿದರೂ ವ್ಯಾಪಾರದ ಶಬ್ದಗಳನ್ನೇ ಉಪಯೋಗಿಸುತ್ತಾರೆ. ಇದನ್ನು ಕಂಡೇ ಈ ಗಾದೆಯನ್ನು ಸೃಷ್ಟಿಸಿರಬಹುದು.

ಸಂಕಟ ಬಂದಾಗ ವೆಂಕಟರಮಣ

ವೈಶ್ಯರು ಹೆಚ್ಚಾಗಿ ವೆಂಕಟೇಶ್ವರನ ಪೂಜೆಯನ್ನು ಮಾಡುತ್ತಾರೆ. ವೈಶ್ಯರು ತಮ್ಮ ಜೀವನದಲ್ಲಿ ಏನಾದರೂ ತೊಡಕು ಮತ್ತು ತೊಂದರೆಗಳು ಉಂಟಾದರೆ ಕೂಡಲೇ ತಿರುಪತಿಗೆ ಹೋಗಿ ತಮ್ಮ ಪೂಜೆಯನ್ನು ಮಾಡಿಸಿ ಕೊಂಡು ಬರುತ್ತಾರೆ. ಕೆಲಕುಟುಂಬಗಳು ಮನೆದೇವರಾಗಿ ವೆಂಕಟರಮಣನನ್ನು ಪೂಜಿಸುತ್ತಾರೆ. ಆದ್ದರಿಂದಲೇ ಇವರಿಗೆ ಕಷ್ಟಬಂದಾಗ ಈ ದೇವರನ್ನು ನೆನೆಯುವುದರಿಂದ ಈ ಗಾದೆಯನ್ನು ಸೃಷ್ಟಿಸಿದ್ದಾರೆ.

ಕೊಟ್ಟಿದ್ದನ್ನು ಕೊಟ್ರೆ ನನಗೇನು ಉಳಿದೀತು

ಈ ಜನಾಂಗದವರು ತಮ್ಮ ಜೀವನವನ್ನು ಹೆಚ್ಚಾಗಿ ವ್ಯಾಪಾರದಿಂದಲೇ ಸಾಗಿಸಿಕೊಂಡು ಬಂದಿದ್ದಾರೆ. ಈ ವ್ಯಾಪಾರದಲ್ಲಿ ಸಾಲ ಮತ್ತು ನಗದಿ ಸಾಮಾನ್ಯವಾಗಿ ಕಂಡು ಬರುತ್ತದೆ. ಗ್ರಾಹಕರಿಗೆ ಸಾಲವನ್ನು ನೀಡಿ ಹಿಂದಿರುಗಿಸದೇ ಇದ್ದ ಸಂದರ್ಭದಲ್ಲಿ ಇಂತಹ ಗಾದೆಯನ್ನು ಉಪಯೋಗ ಮಾಡುವುದನ್ನು ಕಾಣಬಹುದಾಗಿದೆ.

ವ್ಯಾಪಾರ ನಿಮಿಷ ಆರಂಭ ವರುಷ

ವೈಶ್ಯರ ಪ್ರತಿಯೊಂದು ಕುಟುಂಬದಲ್ಲಿ ತಮ್ಮ ಜೀವನಕ್ಕಾಗಿ ವ್ಯಾಪಾರವನ್ನೇ ಅಳವಡಿಸಿಕೊಂಡಿದ್ದಾರೆ. ಇವರು ವ್ಯಾಪಾರದಿಂದಲೇ ತಮ್ಮ ಅದ್ದೂರಿಯಾದ ಜೀವನವನ್ನು ನಡೆಸುತ್ತಾ ಬಂದಿದ್ದಾರೆ. ಜೀವನದ

ಒಂದು ನಿಮಿಷವನ್ನು ಹಾಳು ಮಾಡದೇ ವ್ಯಾಪಾರಕ್ಕಾಗಿ ಮೀಸಲಿಡುತ್ತಾರೆ. ಆದಕ್ಕೆ ಒಂದು ನಿಮಿಷ ವ್ಯಾಪಾರ ಮಾಡಿದರೆ ವರುಷ ಆರಂಭವಾಗುತ್ತದೆ ಎನ್ನುತ್ತಾರೆ.

ಅನೇಕ ಗಾದೆಗಳು ಈ ಜನಾಂಗದಲ್ಲಿ ಇಂದಿಗೂ ಬಳಕೆಯಾಗುತ್ತ, ಸಂದರ್ಭಕ್ಕೆ ತಕ್ಕಂತೆ ಒಂದು ಸನ್ನಿವೇಶವನ್ನು ಮೊನಚುಗೊಳಿಸುತ್ತಾ, ಸಮಾಜವನ್ನು ತಿದ್ದುವ, ನೈಜ ಸತ್ಯವನ್ನು ಪ್ರತಿಬಿಂಬಿಸುವ ವಿವೇಕ ಪೂರ್ಣ, ಅರ್ಥಪೂರ್ಣ ಶಕ್ತಿ ಈ ಚುಟುಕಾದ ಗಾದೆಗಳಲ್ಲಿವೆ.

೬.೩. ಪುರಾಣ

ನಡಿಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟು ಕತೆಗಳೇ ಐತಿಹ್ಯ ಗಳಾಗುತ್ತವೆ. ಆ ಘಟನೆಗಳನ್ನು ಸಂಪೂರ್ಣವಾಗಿ ಮರೆಸಿ, ದೈವಿಕಾಂಶಗಳು ಕೂಡಿಕೊಂಡು ಅದ್ಭುತವಾಗಿ ಬೆಳೆದು ಅವೆಲ್ಲ ಎಂದೋ ಒಂದು ಕಾಲದಲ್ಲಿ ನಡೆದುವೆಂಬಂತೆ ಭ್ರಮೆ ಹುಟ್ಟಿಸುವ ಕಥೆಗಳೇ ಪುರಾಣಗಳು (ದೇ.ಜ.ಗೌ, ೧೯೭೬- ೧೫೫) ಐತಿಹ್ಯಗಳಂತೆ ಪುರಾಣಗಳೂ ಮೊದಲಿಗೆ ಕತೆಗಳೇ ಆಗಿದ್ದವು. ಐತಿಹ್ಯಕ್ಕೆ ಆಧಾರ ಇತಿಹಾಸ ಘಟನೆಗಳಾದರೆ, ಪುರಾಣಕ್ಕೆ ಐತಿಹ್ಯವೇ ಮೂಲ. ಐತಿಹ್ಯಗಳಲ್ಲಿಯಂತೆ ಇಲ್ಲಿಯೂ ಚಿಂತನೆಯೇ ಪ್ರಧಾನ ಜಗತ್ತಿನ ಸೃಷ್ಟಿಗೆ ಸಂಬಂಧಿಸಿದ ಕಲ್ಪನೆಗಳು ಮತ್ತು ನಂಬಿಕೆಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ವೀರರಿಗೆ ಸಂಬಂಧಿಸಿದ ಕತೆಗಳು, ದೇವರಿಗೆ ಸಂಬಂಧಿಸಿದ ವಿಷಯಗಳೂ ಪುರಾಣಗಳ ಚೌಕಟ್ಟಿನಲ್ಲಿ ಬರುತ್ತವೆ. ಅನೇಕ ಸಂದರ್ಭಗಳಲ್ಲಿ ಐತಿಹ್ಯಗಳಿವೆ ವ್ಯತ್ಯಾಸವನ್ನು ಗುರುತಿಸುವುದು ಕಷ್ಟ. (Standard Dictionary of Folklore mythology and begerd. p.640) ಪುರಾಣಗಳು ರಚನೆಯ ದೃಷ್ಟಿಯಿಂದಾಗಿ ಐತಿಹ್ಯಗಳಿಗಿಂತಲೂ ಪ್ರಾಚೀನವೆಂದೂ ವಿದ್ವಾಂಸರು ಪ್ರತಿಪಾದಿಸಿದ್ದಾರೆ. ಅವು ಯಾರೂ ಕಂಡರಿಯದ ಸಂಗತಿಗಳನ್ನೊಳಗೊಂಡಿರುತ್ತವೆ. ಹಿಂದಿನ ಯುಗದಲ್ಲಿ ವಾಸ್ತವವಾಗಿ ನಡೆದದ್ದೆಂದು ಹೇಳುವ, ಸೃಷ್ಟಿ ಪ್ರಳಯಗಳನ್ನು, ಜನರ ಅವರ ನಾಯಕರ ಮತ್ತು ದೇವತೆಗಳ ಉಗಮ ವಿಕಾಸ ಮಹಿಮೆಗಳನ್ನು ಜೊತೆಗೆ ಅವರ ಸಾಂಸ್ಕೃತಿಕ ಮತ್ತು ಮತೀಯ ವಿಚಾರಗಳನ್ನು ವಿವರಿಸುವ ಕತೆಯೇ ಪುರಾಣ. ಆಚರಿಸುವ ಉಪಾಸನೆಗಳಿಗೆ, ಸಮಾಜದಲ್ಲಿ ಬೇರು ಬಿಟ್ಟಿರುವ ನಂಬಿಕೆಗಳಿಗೆ ಕಾರಣಗಳನ್ನು ಸೃಷ್ಟಿಸುವಲ್ಲಿ ಪುರಾಣಗಳು ಹುಟ್ಟುತ್ತವೆ. ಎಲ್ಲ ಆಖ್ಯಾನಗಳೂ ಪುರಾಣಗಳಾಗುವುದಿಲ್ಲ. ಅವುಗಳಿಗೆ ಮತೀಯ ಹಿನ್ನೆಲೆಯೇ ಬೇಕು. ಮುಖ್ಯ ಪಾತ್ರಗಳು ದೇವತೆಗಳಾಗಿರಬೇಕು.

ಪ್ರತಿಯೊಂದು ಧರ್ಮವೂ ಜನಪದ ವರ್ಗವೂ ತನಗೇ ಸಂಬಂಧಿಸಿದ ಪುರಾಣಗಳನ್ನು ಅಪಾರ ಸಂಖ್ಯೆಯಲ್ಲಿ ಹೊಂದಿವೆ. ವೈಶ್ಯರಲ್ಲೂ ಕೆಲವು ಪುರಾಣಗಳು ಉಳಿದು ಬಂದಿವೆ. ವೈಶ್ಯರು ಭೂಲೋಕದ ಗಮನ:

ವೈಶ್ಯರು ಮನಸ್ಸಂತಾಪದಿಂದ ಕೂಡಿದವರಾಗಿ, ಅಪರಾರ್ಕರ ಆಶ್ರಮಕ್ಕೆ ಹೋಗಿ ಬ್ರಹ್ಮನಂತಿದ್ದ ಆ ಮಹರ್ಷಿಗೆ ನಮಸ್ಕರಿಸಿ, ಓ ಸ್ವಾಮಿ ನಮ್ಮ ವಿಜ್ಞಾಪನೆಯನ್ನು ದಯೆಯಿಂದ ಕೇಳು. ಬ್ರಾಹ್ಮಣ ಶಾಪದಿಂದ

ತೇಜೋಹೀನರಾಗಿದ್ದೇವೆ. ಆ ಬ್ರಾಹ್ಮಣ ಶಾಪ ನಿವಾರಣೆಯನ್ನು ನಮಗೀಗ ನೀವೇ ತಿಳಿಸಬೇಕು. ದುಸ್ಸಾಹವಾದ, ನರಕದ ಸಮಾನವಾದ, ಸಕಲ ದುಃಖಕ್ಕೆ ಆಶ್ರಯವಾದ ಆಶಾ ನಿರ್ಭರವಾದ ಭೂಲೋಕದಲ್ಲಿ ನಾವು ಹೇಗೆ ಜನಿಸಬೇಕು? ಈ ಲೋಕದಲ್ಲಿ ಕ್ರೋಧಿಗಳು, ಕಪಟಿಗಳು, ನರಾಧಮರು, ಪರಧನವನ್ನು, ಪರಸ್ತ್ರೀಯರನ್ನು ಅಪಹರಿಸುತ್ತಿದ್ದಾರೆ. ಎಲ್ಲರೂ ದುಷ್ಟರಾಗಿ, ಪ್ರಭು ದ್ರೋಹ ಮಾಡುತ್ತಾ, ದಾಯಾದಿ ಮತ್ಸರಗಳಿಂದ ವೈರತ್ವವನ್ನು ಬೆಳೆಸುತ್ತಾ ಮಧ್ಯಪಾನ ಮಾಡುತ್ತಾ ಬದುಕುತ್ತಿದ್ದಾರೆ.

ಮುಂದೊಮ್ಮೆ ಇದಕ್ಕಿಂತ ದುಷ್ಟರಿಂದ ಕೂಡಿದ ಪಾಪ ಕಾಲವು ಬರುತ್ತದೆ. ಆಗ ನಿರಂತರವಾಗಿ ಜಾತಿ ಧರ್ಮವು ನಾಶವಾಗುವುದು. ವರ್ಣ ಕ್ರಮಗಳು ತಲೆಕೆಳಗಾಗುವವು. ಪಾಪಿಷ್ಟರೂ, ಅಧರ್ಮಿಗಳೂ ಗೌರವಿಸಲ್ಪಡುವರು, ಆಚಾರ್ಯ, ಇಂತಹ ಲೋಕದಲ್ಲಿ ನಾವು ಬಾಳುವುದೆಂತು. ಕಾಮವೆಂಬ ಅಲೆಗಳಿಂದ ಕೂಡಿದ್ದೂ, ಲೋಭವೆಂಬ ಕ್ಷಾರಯುಕ್ತವಾದದ್ದೂ, ಮದವೆಂಬ ಹಾಲಾಹಲ ವಿಷದಿಂದ ಕೂಡಿದ್ದೂ, ಮತ್ಸರವೆಂಬ ಜಲಚರಗಳನ್ನುಳ್ಳದ್ದು, ಸ್ತ್ರೀಯರೆಂಬ ಘೋರ ಸರ್ಪಗಳಿಂದ ಕೂಡಿದ ಪರ್ವತ ಪ್ರಾಂತ ಗಳ್ಳುಳ್ಳದ್ದೂ, ಆದ ಸಂಸಾರ ಸಾಗರವನ್ನು ನಾವು ದಾಟುವ ಬಗೆ ಹೇಗೆ? ಓ ಋಷಿವರ್ಯ, ಇಂತಹ ಕಲಿಯುಗದಲ್ಲಿ ದೋಷ ನಿವಾರಣೆಯ ಉಪಾಯವೇನು? ಎಂದು ಪ್ರಾರ್ಥಿಸಿದರು.

ಈ ಅಪರಾರ್ಕ ಋಷಿಯು "ಆರ್ಯರೇ ಈ ಕಲಿಯುಗದಲ್ಲಿ ಸಕಲ ಪಾಪ ಪರಿಹಾರಕವಾದ ಮಾರ್ಗವನ್ನು ಹೇಳುತ್ತೇನೆ. ಜಪ, ಯಜ್ಞ, ತಪಸ್ಸು, ವೇದಾಧ್ಯಯನ, ವ್ರತಗಳ ನಿಷ್ಠೆ ಮುಂತಾದವುಗಳನ್ನು ಮಾಡುವುದು ಕೆರೆ, ಬಾವಿ ಉದ್ಯಾನವನ ಇತ್ಯಾದಿಗಳನ್ನು ಕಟ್ಟಿಸುವುದು ದೇವ ಬ್ರಾಹ್ಮಣ ಗುರುಗಳನ್ನು ಪೂಜಿಸುವುದು, ತನ್ನ ವೃತ್ತಿಯಿಂದಲೇ ಜೀವಿಸುವುದು ಮಾಡಿದಾಗ ನೀವು ಉತ್ತಮರೆನಿಸುತ್ತೀರಿ ಎಂದು ಭೂ ಲೋಕಕ್ಕೆ ಕಳುಹಿಸಿದನಂತೆ. ಇಂತಹ ಅದ್ಭುತ ಕಲ್ಪನೆಗಳು ಇತಿಹಾಸ ಪೂರ್ವಕಾಲದ ಮಾನವನ ಸಂಸ್ಕೃತಿಯ ಸ್ವರೂಪವನ್ನು ತಿಳಿಯಲು ಸಾಹಾಯಕವಾಗಿವೆ.

ಅಧ್ಯಾಯ ೭

ವೃತ್ತಿ

ಅಧ್ಯಾಯ ೭

ವೃತ್ತಿ

೭.೧. ಸಾಂಪ್ರದಾಯಿಕ ವೃತ್ತಿ

ಮೂಲತಃ ವೈಶ್ಯರು ವ್ಯಾಪಾರದಿಂದಲೇ ಜೀವನವನ್ನು ಸಾಗಿಸುತ್ತಿದ್ದ ಜನಾಂಗ ವಾಗಿದೆ. ಮೊದಲು ಊರಿಂದ ಊರಿಗೆ ಹೋಗಿ ವ್ಯಾಪಾರವನ್ನು ಮಾಡಿ ಜೀವನವನ್ನು ಮಾಡುವಂತಹ ಜನಾಂಗವಾಗಿದೆ. ಪ್ರಾಚೀನ ಕಾಲದಲ್ಲಿ ನವಬಂದ ಮಹೀ ಮಂಡಲದ ಸಪ್ತ ಸಮುದ್ರಗಳಲ್ಲಿ 'ಫಣಿ' ಎಂಬ ವೈಶ್ಯರು ವ್ಯಾಪಾರ ಮಾಡು ತ್ತಿದ್ದರು. ಅದಕ್ಕೆ ಅನೇಕ ಪುರಾವೆಗಳು ದೊರಕಿವೆ. ಉಪಾಸಕ ದಶಸೂತ್ರವೆಂಬ ಹದಿನೈದನೆಯ ಶತಮಾನ ಕ್ಕಿಂತಲೂ ಹಿಂದಿನದಾದ ಜೈನ ಗ್ರಂಥದಲ್ಲಿ ಆನಂದನೆಂಬ ವೈಶ್ಯನ ಚರಿತ್ರೆಯಿದೆ. ಇವರ ಮನೆಯಲ್ಲಿ ನಾಲ್ಕು ಕೋಟಿ ಚಿನ್ನದ ನಾಣ್ಯಗಳು ನಗದಾಗಿದ್ದವಂತೆ. ಹದಿನಾರು ಕೋಟಿ ಚಿನ್ನದ ನಾಣ್ಯಗಳು ವ್ಯಾಪಾರಕ್ಕಾಗಿ ಇದ್ದವಂತೆ. ಮತ್ತು ಐದನೂರು ಕುದುರೆ ಗಾಡಿಗಳು, ಸ್ವದೇಶ ವ್ಯಾಪಾರಕ್ಕಾಗಿ ನಾಲ್ಕು ಹಡಗುಗಳು ವಿದೇಶೀ ವ್ಯಾಪಾರಕ್ಕಾಗಿ ನಾಲ್ಕು ಹಡಗುಗಳು ಇದ್ದವು. ಅಲ್ಲದೆ ಹತ್ತು ಸಾವಿರ ಹಸುಗಳಿದ್ದವು.

ವೈಶ್ಯರು ಜಾವಾ, ಸುಮತ್ರಾ, ಗ್ರೀಕ್, ಚೈನಾ, ರಷ್ಯಾ ಮೊದಲಾದ ದೇಶಗಳಲ್ಲಿ ಹಿಂದೆ ವೈಶ್ಯರು ಬೇಕಾದಷ್ಟು ವ್ಯಾಪಾರವನ್ನು ಮಾಡಿರುವುದರ ಜೊತೆಗೆ ಅನೇಕ ಧರ್ಮಶಾಲೆ ವಿದ್ಯಾಲಯಗಳನ್ನು ನಿರ್ಮಿಸಿ ಅವುಗಳಿಂದಲೇ ಜೀವನವನ್ನು ಸಾಗಿಸುತ್ತಾ ಬಂದಿದ್ದಾರೆ. ಹಾಗೂ ವೈಶ್ಯರು ರಾಜ್ಯಭಾರವನ್ನು ಮಾಡಿರುವುದಕ್ಕೆ ಅನೇಕ ಪುರಾಣೇತಿಹಾಸಗಳ ಆಧಾರವು ದೊರಕಿದೆ. ಅದಕ್ಕೆ ಉದಾಹರಣೆಯಾಗಿ ವೈಶ್ಯವರ್ಣಕ್ಕೆ ಸೇರಿದ ಕರಂದನ ಮಹಾರಾಜ ಮತ್ತು ಮರುತ್ತನೆಂಬ ಚಕ್ರವರ್ತಿಗಳಿದ್ದರೆಂದು ಭಾಗವತದ ನಮಸ್ಕಂದ ಎರಡನೆಯ ಅಧ್ಯಾಯದಿಂದಲೂ, ವಿಷ್ಣುಪುರಾಣದ ನಾಲ್ಕನೆಯ ಭಾಗ ಮೊದಲನೆಯ ಅಧ್ಯಾಯದಿಂದಲೂ ತಿಳಿದು ಬರುತ್ತದೆ.

ಸುಮಾರು ಶತಮಾನಗಳ ಹಿಂದೆ ವೈಶ್ಯ ರಾಜರು ಆಡಳಿತವನ್ನು ಮಾಡಿದ್ದಾರೆ. ಅದಕ್ಕೆ ಅನೇಕ ಆಧಾರಗಳು ಸಿಕ್ಕಿವೆ. ವಲ್ಲಭಿ ನಗರವು ಹಿಂದೆ ಗುಜರಾತಿನ ಮುಖ್ಯ ಪಟ್ಟಮದಲ್ಲಿ ವೈಶ್ಯ ರಾಜರು ಆಡಳಿತವನ್ನು ನಡೆಯಿಸಿದ್ದರು. ಅವರೊಬ್ಬರ ಮಗನಾದ ಕುಮಾರ ಗುಪ್ತನು ಸೌರಾಷ್ಟ್ರ ರಾಜ್ಯವನ್ನು ಗೆದ್ದಿದ್ದಾನೆ. ನಂತರ ಅವನ ತಂದೆಯು ಇಪ್ಪತ್ತುಮೂರು ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದಾರೆ. ಮತ್ತು ಸ್ಕಂದಗುಪ್ತನು ಸಿಂಹಾಸನವೇರಿ ಎರಡು ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದಾನೆ. ನಂತರ ಗುಪ್ತರ ರಾಜ್ಯವು ಅನ್ಯರ

ವಶವಾಯಿತು. ಈ ವಿಷಯವು ಸೌರಾಷ್ಟ್ರ ದೇಶದಲ್ಲಿ ಪರಂಪರೆಯಾಗಿ ಹೇಳುವ ಹಾಡು ಹಬ್ಬಗಳಿಂದ ತಿಳಿದು ಬರುತ್ತದೆ. ಥಾಮಸ್ ಎಂಬ ಇತಿಹಾಸಜ್ಞನು ಬರೆದ ವೈಶ್ಯ ರಾಜರ ಚರಿತ್ರೆಯಲ್ಲಿ ಉಲ್ಲೇಖವಾಗಿದೆ. ಒಟ್ಟಾಗಿ ವೈಶ್ಯರು ವ್ಯಾಪಾರದಿಂದ ಮುಖ್ಯವಾಗಿ ಜೀವನ ಸಾಗಿಸುತ್ತಾ ಬಂದಿದ್ದಾರೆ. ಅದರ ಜೊತೆಗೆ ಪಶುಸಂಗೋಪನೆ, ರಾಜ್ಯ ಆಡಳಿತ, ಕೈಗಾರಿಕೆ ಉದ್ದಿಮೆಗಳು, ವಾಣಿಜ್ಯ ಕೇಂದ್ರಗಳು ಜ್ಯೂಯಲರಿ ವರ್ಕ್ಸ್, ಬಟ್ಟೆ ವ್ಯಾಪಾರ ಅನೇಕ ಸಾಫ್ಟ್‌ವೇರ್ ಕೈಗಾರಿಕೆಗಳು ಇನ್ನೂ ಅನೇಕ ರೀತಿಯಾದ ವ್ಯಾಪಾರವನ್ನೇ ಮುಖ್ಯವಾಗಿಟ್ಟುಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಆರ್ಥಿಕತೆಯಲ್ಲಿ ಬಹಳ ಮುಂದುವರಿದ ಜನಾಂಗ ವಾಗಿದೆ.

೭.೨. ಅವಲಂಬಿತ ವೃತ್ತಿ

ಗುಪ್ತರ ಅವನತಿಯ ನಂತರ ವೈಶ್ಯರು ಸಂಪೂರ್ಣವಾಗಿ ರಾಜ್ಯಾಡಳಿತವನ್ನು ಬಿಟ್ಟು ಕೇವಲ ವ್ಯಾಪಾರವನ್ನೇ ಜೀವನಕ್ಕೆ ಬೇಕಾಗುವ ವಿವಿಧ ರೀತಿಯ ವ್ಯಾಪಾರಗಳನ್ನು ಪ್ರಾರಂಭಿಸಿದ್ದಾರೆ. ದೇವರಾಜು ಅರಸರ ಕಾಲದಲ್ಲಿ ಬಂದಂತಹ 'ಉಳುವವನೇ ಭೂಮಿಯ ಒಡೆಯ' ಎಂಬ ಕಾನೂನಿನಿಂದಾಗಿ ಮೇಲ್ ವರ್ಗದವರಾಗಿದ್ದ ವೈಶ್ಯರೇ ಹೆಚ್ಚಿನ ಮಟ್ಟದಲ್ಲಿ ಭೂಮಿ ಕಳೆದುಕೊಂಡರು. ಈ ಕಾನೂನಿನಿಂದಾಗಿ ಅಸಂಖ್ಯಾತ ಕುಟುಂಬಗಳು ಬೀದಿ ಪಾಲಾದವು. ಇದರಿಂದ ತಲೆತಲಾಂತರದಿಂದ ಶ್ರೀಮಂತರಾಗಿದ್ದ ಅನೇಕರು ಬಡವರಾದರು. ಇಂದಿನ ಆಗುನಿಕ ಯುಗದಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ ವೈಶ್ಯರು ಸುಮಾರು ೭೫ ಸಾವಿರ ಜನರನ್ನು ಒಳಗೊಂಡಿದೆ. ಇವರಲ್ಲಿ ೮೦%ರಷ್ಟು ವ್ಯಾಪಾರದಿಂದಲೇ ಜೀವನವನ್ನು ಸಾಗಿಸುತ್ತಿದ್ದಾರೆ. ಇನ್ನುಳಿದ ೨೦%ರಷ್ಟು ಜನರು ಪಶುಸಂಗೋಪನೆ, ರಾಜಕೀಯ, ಕೃಷಿ ಮತ್ತು ಕೈಗಾರಿಕಾ, ರೈಸ್ ಮಿಲ್‌ಗಳಿಂದ ಜೀವನವನ್ನು ಮಾಡುತ್ತಿದ್ದಾರೆ. ಇದರಲ್ಲಿ ಸ್ವಲ್ಪ ಜನರು ಮಾತ್ರ ಸರ್ಕಾರಿ ಕೆಲಸದಲ್ಲಿ ಸೇವೆಯನ್ನು ಮಾಡುತ್ತಿದ್ದಾರೆ. ಕೆಲವರು ಕೈಗಾರಿಕೆಗಳಲ್ಲಿ ಕೂಲಿಯನ್ನು ಮಾಡಿಯೂ ಜೀವನವನ್ನು ಮಾಡುತ್ತಿದ್ದಾರೆ. ಈಗಿನ ಕಾಲದಲ್ಲಿ ಎಲ್ಲಾ ಜನಾಂಗದವರೂ ವ್ಯಾಪಾರವನ್ನು ಮಾಡುವುದರಿಂದ ವೈಶ್ಯರು ಬೇರೆ ಬೇರೆ ವೃತ್ತಿಯಲ್ಲಿ ತೊಡಗುತ್ತಿದ್ದಾರೆ. ಮೂಲತಃ ಪುರಾತನ ಕಾಲದಿಂದಲೂ ಇವರ ವೃತ್ತಿ ವ್ಯಾಪಾರವೇ ಆಗಿದೆ. ಇಂದಿನ ಕಾಲದಲ್ಲಿಯೂ ಸಹ ಈ ವ್ಯಾಪಾರದಿಂದಲೇ ಜೀವನವನ್ನು ಮಾಡುತ್ತಿದ್ದಾರೆ. ವೈಶ್ಯರು ಆರ್ಥಿಕತೆಯಲ್ಲಿ ಬಹಳ ಮುಂದುವರಿದ ಜನಾಂಗವಾಗಿದೆ. ವಿಶೇಷವಾಗಿ ವೈಶ್ಯರ ವೃತ್ತಿ ವ್ಯಾಪಾರವೇ ಆಗಿದೆ. ಇವರು ವ್ಯಾಪಾರದಿಂದಲೇ ತಮ್ಮ ಜೀವನವನ್ನು ಸಾಗಿಸುತ್ತಾ ಬಂದಿದ್ದಾರೆ. ವೈಶ್ಯರ ಪ್ರತಿಯೊಂದು ಕುಟುಂಬದಲ್ಲಿಯೂ ವ್ಯಾಪಾರವೇ ಪ್ರಮುಖವಾಗಿ ಕಂಡುಬರುತ್ತದೆ. ವ್ಯಾಪಾರದ ಸಲಕರಣೆಗಳಾದಂತಹ ತಕ್ಕಡಿ ಮತ್ತು ತೂಕ ಮಾಡುವ ಕಲ್ಲುಗಳನ್ನು ಪ್ರತಿದಿನ ಮಡಿಯಿಂದ ಇವುಗಳಿಗೆ ಅರಿಶಿನ ಕುಂಕುಮ ಲೇಪಿಸಿ ಪೂಜೆಯನ್ನು ಮಾಡುತ್ತಾರೆ. ಅಮಾವಾಸ್ಯೆ ಮತ್ತು ಹುಣ್ಣಿಮೆಯ ದಿವಸ ಇವುಗಳ ಜೊತೆಗೆ ಅಂಗಡಿಯಲ್ಲಿ ಲಕ್ಷ್ಮೀಪೂಜೆ ಯನ್ನು ಮಾಡಿದ ನಂತರ ವ್ಯಾಪಾರವನ್ನು ಆರಂಭಿಸುತ್ತಾರೆ.

ಅಧ್ಯಾಯ ೮

ಸಮಾರೋಪ

ಅಧ್ಯಾಯ ೮

ಸಮಾರೋಪ

ಶ್ರೇಣೀಕೃತ ವಿಷಮ ಸಮಾಜದಲ್ಲಿ ಅನೇಕ ವರ್ಗ ಬೇದಗಳಿದ್ದರೂ ಸಹ ಅಪಾರ ಜ್ಞಾನವನ್ನು ಕಟ್ಟಿಕೊಂಡು ಅನೇಕಾನೇಕ ಸಮುದಾಯಗಳು ಇನ್ನೂ ನಮ್ಮ ಮಧ್ಯದಲ್ಲಿ ಅನನ್ಯತೆಯನ್ನು ಕಾಯ್ದುಕೊಂಡಿವೆ. ಆಧುನಿಕ ಜಗತ್ತಿನ 'ಅಭಿವೃದ್ಧಿ' ಚಕ್ರಕ್ಕೆ ಸಿಲುಕಿದ ಸಮುದಾಯಗಳು ಬದಲಾಗುವುದು ಸಹಜ ಕ್ರಿಯೆಯಾಗಿದೆ. 'ಬದಲಾವಣೆ' ಎಂಬುದು ಆರ್ಥಿಕ ವೃತ್ತದ ನೀತಿಯೇನು ನಿಜ. ಆದರೆ ಸಮುದಾಯಗಳ ಪಾರಂಪರಿಕ ಜ್ಞಾನ, ಪಾಂಡಿತ್ಯ, ಕಲೆ ಮುಂತಾದ ವಿಷಯಗಳ ಸ್ಥಿತ್ಯಂತರವೇನಾಯಿತು ಎಂಬುದನ್ನು ತಿಳಿಯಲು ಸಮುದಾಯಗಳ ಅಧ್ಯಯನದ ಅವಶ್ಯಕತೆ ಇದೆ. ಭೌತಿಕ ಸಮಾಜವನ್ನು ಸುಂದರವಾಗಿ ನಿರ್ಮಿಸಿದ್ದು ಕೌಶಲ್ಯಗಳನ್ನು ಹೊಂದಿದ್ದ ಶ್ರಮಿಕ ಸಮಾಜಗಳು, ಈ ಶ್ರಮಿಕ ವರ್ಗವನ್ನು ನಿರಂತರವಾಗಿ ದೇಶವನ್ನು ಆಳಿದ ವಿವಿಧ ಪ್ರಭುತ್ವಗಳು ಅತ್ಯಂತ ಕ್ರೂರವಾಗಿ ನೆಡೆಸಿಕೊಂಡಿವೆ. ಅದರಲ್ಲೂ ಸ್ವಾತಂತ್ರ್ಯ ಪೂರ್ವದಲ್ಲಿ ಇಂತವರ ದಬ್ಬಾಳಿಕೆಗೆ ನಲುಗಿದ ಸಮುದಾಯಗಳು ಇಂದು ಪ್ರಜಾಪ್ರಭುತ್ವದ ನಿರ್ಧಾರದಿಂದಾಗಿ ಶ್ರಮಿಕ ವರ್ಗದ ಕೈಯಲ್ಲಿ ಅಧಿಕಾರ ಹಸ್ತಾಂತರಗೊಂಡಿತು. ಭಾರತದ ಶ್ರೇಣೀಕೃತ ಸಮಾಜವನ್ನು ಸೃಷ್ಟಿಸಿದ ಧರ್ಮಶಾಸ್ತ್ರಗಳು ಅಚ್ಚರಿಪಡುವಂತ ವಿದ್ಯಮಾನಗಳು ನಡೆದು ಹೋದವು. ಸ್ವಾತಂತ್ರ್ಯ ಪರಿಸರದಲ್ಲಿ ಅನೇಕ ಘಟನೆಗಳು ಜರುಗಿ 'ಪ್ರಜಾಪ್ರಭುತ್ವ' ನೀತಿಯಿಂದಾಗಿ ಎಲ್ಲಾ ಸಮುದಾಯಗಳು ಆರ್ಥಿಕ ಮತ್ತು ಶೈಕ್ಷಣಿಕ ಸವಲತ್ತುಗಳನ್ನು ಪಡೆದುಕೊಂಡವು. ಲೌಕಿಕ ಅಧಿಕಾರದ ಹಸ್ತಾಂತರದಿಂದಾಗಿ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಅನೇಕ ಮಾರ್ಪಾಟುಗಳಾದವು.

ನಾನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ 'ವೈಶ್ಯರ ಜನಾಂಗ'ದ ಬದುಕನ್ನು ಸಾಧ್ಯವಾದಷ್ಟು ಮಟ್ಟಿಗೆ ತೆರೆದಿಟ್ಟಿದ್ದೇನೆ. ಇಂದಿನ ಆಂಧ್ರದಿಂದ ವಲಸೆ ಬಂದರೆಂದ ವೈಶ್ಯರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ನೆಲೆಗೊಂಡರು. ಸ್ವಾತಂತ್ರ್ಯ ಬಂದು ೬೦ ವರ್ಷಗಳು ಕಳೆದರೂ ಸರಕಾರದ ಅಭಿವೃದ್ಧಿ ಯೋಜನೆಗಳು ಸಮರ್ಪಕವಾಗಿ ವೈಶ್ಯರಿಗೆ ತಲುಪಿಲ್ಲ ಏಕೆಂದರೆ ಮೇಲ್ಜಾತಿಯವರು ಎಂಬ ಕಾರಣದಿಂದ ವೈಶ್ಯರಿಗೆ ಯಾವೊಂದು ಯೋಜನೆಯಲ್ಲೂ ಮೀಸಲಾತಿಯನ್ನು ನೀಡಿಲ್ಲ. ಭಾರತದ ಎಲ್ಲಾ ಪ್ರದೇಶಗಳಲ್ಲೂ ಒಂದಲ್ಲ ಒಂದು ಸಮಸ್ಯೆಯಿಂದ ಬಳಲುತ್ತಿರುವ ಈ ಸಂದರ್ಭದಲ್ಲಿ ವೈಶ್ಯ ಜನಾಂಗದ ಸ್ವಾಯತ್ತ ಜೀವನದ ಕನಸುಗಳು ಇನ್ನೂ ಕನಸಾಗಿಯೇ ಉಳಿದಿವೆ. ಇಂದಿನ ಜಾಗತೀಕರಣವು ಅಭಿವೃದ್ಧಿ ನೀತಿಯನ್ನು ತನ್ನ ತೆಕ್ಕೆಯಲ್ಲಿಯೇ ರೂಪುಗೊಳ್ಳುವಂತೆ ಮಾಡಿದೆ.

ಈ ಅಧ್ಯಯನದಲ್ಲಿ ವೈಶ್ಯರ ಬದುಕಿನ ಚಿತ್ರಣವಿದೆ. ಬಹುತೇಕ ಮಾಹಿತಿಗಳು ಕ್ಷೇತ್ರಕಾರ್ಯ ಮುಖಾಂತರ ಪಡೆದವುಗಳು, ನಾನು ಕೂಡ ಅದೇ ಸಮುದಾಯದಿಂದ ಬಂದವನಾದುದರಿಂದ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳನ್ನು ನೋಡುತ್ತಾ ಅದರಲ್ಲಿ ತೊಡಗಿಸಿಕೊಂಡು ಬಂದವನಾದುದರಿಂದ ಮಾಹಿತಿಗಳು ಅಧಿಕೃತವಾಗಿವೆ. ಮೊದಲ ಬಾರಿಗೆ ವೈಶ್ಯ ಸಮುದಾಯವನ್ನು ಅಧ್ಯಯನಕ್ಕೆ ಒಳಪಡಿಸಿ, ಸಮುದಾಯದ ಏಳು ಬೀಳುಗಳನ್ನು ಅಭಿವೃದ್ಧಿ ತೊಡಕುಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಹೈದ್ರಾಬಾದ್ ಕರ್ನಾಟಕದ ವೈಶ್ಯರ ಜಾನಪದ ಎಂಬ ಶೀರ್ಷಿಕೆಯಡಿಯಲ್ಲಿ ರೂಪುಗೊಂಡಿರುವ ಈ ಮಹಾಪ್ರಬಂಧವು ಎಂಟು ಅಧ್ಯಾಯಗಳನ್ನು ಹೊಂದಿದೆ.

ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಅಧ್ಯಯನದ ಮಹತ್ವವನ್ನು ನೀಡಲಾಗಿದೆ. ಸಂಶೋಧನೆಯ ಶೀರ್ಷಿಕೆಯ ವಿಷಯಕ್ಕೆ ತಕ್ಕಂತೆ ಸಂಶೋಧನೆ ನಡಸಲಾಗಿದೆ. ಹಾಗಾಗಿ ಅಧ್ಯಯನಕ್ಕೆ ಉದ್ದೇಶವಿರುತ್ತದೆ. ವಿಧಾನ ಮತ್ತು ವ್ಯಾಪ್ತಿ ಇರುತ್ತದೆ. ಇವುಗಳಿಗೆ ಸಂಬಂಧಿಸಿದಂತೆ ಅಧ್ಯಾಯ ಒಂದರಲ್ಲಿ ಪ್ರಸ್ತಾಪಿಸಲಾಗಿದೆ.

ಅಧ್ಯಾಯ ಎರಡರಲ್ಲಿ ವೈಶ್ಯರ ಬದುಕಿನ ವಿವರಗಳು ಪ್ರಾಚೀನತೆ ಇದಕ್ಕೆ ಪೂರಕವಾಗಿ ದಂಥಕತೆಗಳೇನು, ದಾಖಲೆಗಳಲ್ಲೇನಿದೆ, ಸಾಹಿತ್ಯ ಕೃತಿಗಳಲ್ಲೇನಿದೆ, ವೈಶ್ಯರ ಬಗ್ಗೆ ಯಾವ ವಿವರಣೆ ಇದೆ, ಎಂಬುದರ ಬಗ್ಗೆ ಹಾಗೂ ಭಾರತದಲ್ಲಿ ಹಿಂದೆ ಆಳಿದ ವೈಶ್ಯರಾಜರುಗಳು ಯಾರು, ವೈಶ್ಯರ ಕುಲದೇವತೆಯಾದ ಶ್ರೀವಾಸವಿ ಯನ್ನು ಕುರಿತಾಗಿ ಕತೆಗಳು ಮತ್ತು ವೈಶ್ಯರ ಭೌಗೋಳಿಕ ಪರಿಸರವನ್ನು, ವೆಶ್ಯ ಪದದ ಅರ್ಥವೇನು ಅರ್ಥ ಕೋಶದಲ್ಲಿ ಏನೆನ್ನುವರು ಎಂಬುದರ ಬಗ್ಗೆ ವಿಮರ್ಶಿಸಲಾಗಿದೆ.

ವೈಶ್ಯರ ಸಾಮಾಜಿಕ ಬದುಕು ಎನ್ನುವ ಅಧ್ಯಾಯದಲ್ಲಿ ಕುಟುಂಬ ಪದ್ಧತಿ, ಒಳ ಪಂಗಡಗಳು, ಹಾಗೂ ವೈಶ್ಯರ ೧೦೨ ಗೋತ್ರಗಳ ವಿವರ ಮತ್ತು ಗೋತ್ರಕ್ಕೆ ಸಂಬಂಧಿಸಿದ ಋಷಿಗಳನ್ನು ತಿಳಿಸಲಾಗಿದೆ. ಮನೆಗಳ ರಚನೆ ಹೇಗಿರಬೇಕು, ನ್ಯಾಯ ಪದ್ಧತಿ, ಆಹಾರ ಪದ್ಧತಿ, ಉಡುಗೆ ತೊಡುಗೆ ಇನ್ನಿತರ ವಿಷಯಗಳ ಬಗ್ಗೆ ಅಧ್ಯಾಯ ಮೂರರಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ವೈಶ್ಯರ ಜೀವನ ಶೈಲಿ ಯಾವ ರೀತಿ ಇದೆ. ಇವರ ಜೀವನಾವರ್ತನದ ಆಚರಣೆಗಳು ಎಂತಹದು. ಜನನ, ಪ್ರೌಢ, ಮದುವೆ, ಸೀಮಂತ, ಮರಣಗಳ ವಿಶೇಷತೆಯೇನು ಇವುಗಳ ಬಗೆಗೆ ವೈಶ್ಯ ಸಮುದಾಯ ರೂಪಿಸಿಕೊಂಡ ಸಾಮಾಜಿಕ ಚೌಕಟ್ಟು ಎಂತಹದು ಎಂಬುದನ್ನು ವಿವರಿಸಲು ಶ್ರಮಿಸಿದ್ದೇನೆ.

ವೈಶ್ಯರ ಸಾಂಸ್ಕೃತಿಕ ಬದುಕು ಎಂತಹದು ಆಚರಿಸುವ ವಾರ್ಷಿಕಾವರ್ತನದ ಆಚರಣೆಗಳಾದ ಹಬ್ಬಗಳ ಬಗ್ಗೆ ಮತ್ತು ಆಚರಿಸುವ ಹಬ್ಬಗಳಿಗೂ ಅವರ ಜೀವನಕ್ಕೂ ಯಾವ ರೀತಿಯಾದಂತಹ ಸಂಬಂಧವಿದೆ ಎಂಬುದನ್ನು ತಿಳಿಸಲಾಗಿದೆ. ಹಾಗೂ ಶ್ರೀ ವಾಸವಿ ಜಯಂತಿಯನ್ನು ವೈಶ್ಯರು ಏಕೆ ಆಚರಿಸುತ್ತಾರೆ ಎನ್ನುವ ಸಂಪೂರ್ಣ ವಿವರವನ್ನು ನೀಡಲಾಗಿದೆ.

ಅಧ್ಯಾಯ ಐದರಲ್ಲಿ ವೈಶ್ಯ ಕುಲೋದ್ಧಾರಕರಾದ ಲಕ್ಷ್ಮೀನರಸಿಂಹ ಸೋಮಯಾಜಿ, ಶ್ರೀ ವೆಂಕಟ ಸುಬ್ಬಯ್ಯ, ಪೊಟ್ಟಿರಾಮಲು, ಶ್ರೀ ಎಸ್.ವಿ.ಶೆಟ್ಟಿಯವರು ವೈಶ್ಯರ ಉದ್ಧಾರಕ್ಕಾಗಿ ಮತ್ತು ಇವರ ಅಭಿವೃದ್ಧಿಗಾಗಿ ದುಡಿದಂತ ಮಹಾನ್ ವ್ಯಕ್ತಿಗಳ ಪರಿಚಯವನ್ನು ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ಸಾಹಿತ್ಯ ವೈಶ್ಯರ ಕತೆ, ಗಾದೆ, ಪುರಾಣ ಸಂಗ್ರಹ ಹಾಗೆ ವೈಶ್ಯರು ಸಂದರ್ಭಕ್ಕನು ಗುಣವಾಗಿ ಹಾಡುವ ಹಾಡುಗಳು, ಪೂಜೆ ಸಮಯದಲ್ಲಿನ ಆರತಿ, ಮಂಗಳಾರತಿ ಹಾಡುಗಳನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದ್ದೇನೆ.

ಅಧ್ಯಾಯ ಏಳರಲ್ಲಿ ವೈಶ್ಯರ ವೃತ್ತಿಯ ಬಗ್ಗೆ ಪ್ರಸ್ತಾಪಿಸಲಾಗಿದೆ. ಸಾಂಪ್ರದಾಯಿಕ ವೃತ್ತಿಯಿಂದ ವೈಶ್ಯರು ಅವಲಂಬಿತ ವೃತ್ತಿಗೆ ಹೇಗೆ ಬದಲಾದರು ಎಂಬುದರ ವಿವರಗಳನ್ನು ನೀಡಲಾಗಿದೆ.

ಅಧ್ಯಾಯ ಎಂಟರಲ್ಲಿ ಸಮಾರೋಪ ನಂತರ ಗ್ರಂಥಋಣ, ಛಾಯಾಚಿತ್ರ, ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಿದ ಮುಖ್ಯ ವಕೃಗಳ ವಿವರ ಮತ್ತು ಕೆಲವು ಕೋಷ್ಟಕಗಳನ್ನು ಕೊಡಲಾಗಿದೆ. ಈ ಎಲ್ಲಾ ವಿಷಯ ಗಳನ್ನು ಕ್ಷೇತ್ರಕಾರ್ಯದ ಮೂಲಕ ಪ್ರತ್ಯಕ್ಷವಾಗಿ ನೋಡಿ ಗಮನಿಸಿ, ದಾಖಲಿಸಿದ್ದೇನೆ. ಛಾಯಾಚಿತ್ರಗಳು, ವೈಶ್ಯರು ಆಚರಿಸುವ ಹಬ್ಬಗಳು, ಮುಖ್ಯವಾದ ಶ್ರೀವಾಸವಿ ಜಯಂತಿಯ ಕಾರ್ಯಕ್ರಮ, ಮದುವೆ, ಚಿತ್ರಗಳನ್ನು ಹಾಕಲಾಗಿದೆ.

ನನ್ನ ಈ ಅಧ್ಯಯನದಲ್ಲಿ ಎಂಟು ಅಧ್ಯಾಯಗಳಲ್ಲಿ ವೈಶ್ಯರ ಬದುಕನ್ನು ಕೊಡಲು ಪ್ರಯತ್ನಿಸಿದ್ದೇನೆ. ಈ ಅಧ್ಯಯನದಲ್ಲಿ ನನ್ನ ಗಮನಕ್ಕೆ ಬಾರದ ಹಾಗೂ ವ್ಯಕ್ತಪಡಿಸಲಾಗದ ಅನೇಕ ವಿಷಯಗಳು ಇವೆ. ಇದೇ ಸಮುದಾಯವನ್ನು ಕುರಿತ ಮುಂದಿನ ಸಂಶೋದನೆಗಳಿಗೆ, ಅಧ್ಯಯನಗಳಿಗೆ ಇದು ಸಹಕಾರಿಯಾಗಬಲ್ಲದೆಂಬ ಅಪೇಕ್ಷೆ ಈ ಅಧ್ಯಯನಕ್ಕಿದೆ.

ಅಧ್ಯಯನದ ಫಲಿತಗಳು

೦೧. ವೈಶ್ಯರ ಮೂಲ ಪುರುಷ ಉಧ್ವಾಹ.

೦೨. ವೈಶ್ಯರಿಗೆ ಮೊದಲಿನಿಂದಲೂ ಕೋಮಟಿ, ಶ್ರೇಷ್ಠಿ, ಗುಪ್ತ ಎಂಬ ನಾಮಗಳಿದ್ದವು.

೦೩. ದೇವತೆಗಳಲ್ಲಿ ಮರುತ್ತರು, ವಸುಗಳು, ರುದ್ರರು, ಆದಿತ್ಯರು, ವಿಶ್ವದೇವತೆಗಳು ಮೊದಲಾದವರು ವೈಶ್ಯರು.

೦೪. ವೇದ ಮಂತ್ರಗಳನ್ನು ರಚಿಸಿದ ಋಷಿಗಳಲ್ಲಿ ಭಲಂದ ವತ್ಸ, ಸಂಕೀಲರು ವೈಶ್ಯರು.

೦೫. ರಾಜರಲ್ಲಿ ಚಂದ್ರಗುಪ್ತ, ಸಮುದ್ರಗುಪ್ತ, ಕುಮಾರಗುಪ್ತ, ಸ್ಕಾಂದಗುಪ್ತ, ಬುಧಗುಪ್ತ, ಮೊದಲಾದವರು ವೈಶ್ಯರು.

೦೬. ವೈಶ್ಯರ ಬಗ್ಗೆ ಋಗ್ವೇದದಲ್ಲಿ ಉಲ್ಲೇಖವಿದೆ.

೦೭. ಪಶುಪಾಲನೆ, ವ್ಯವಸಾಯ, ವ್ಯಾಪಾರ ಇವು ವೈಶ್ಯರಪ ವಿಶೇಷ ವೃತ್ತಿಗಳು.

೦೮. ವೈಶ್ಯರಲ್ಲಿ ೭೧೪ ಗೋತ್ರಗಳಿದ್ದವು.

೦೯. ಗೋತ್ರ ಎಂದರೆ ವಂಶ ಕುಲ ಎಂದರ್ಥ.

೧೦. ಗೋವು ತನ್ನ ಗರ್ಭದಲ್ಲಿ ವೈಶ್ಯರನ್ನು ಧರಿಸಿದ ಕಾರಣ ಅವರಿಗೆ ಗೋಮಠರು ಎಂದು ಹೆಸರು ಬಂತು.

೧೧. ಕಾಲಕ್ರಮೇಣ ಗೋಮಠರು ಗೋಮಠಿಯಾಗಿ ಪರಿವರ್ತನೆಗೊಂಡು ಈಗ ಕೋಮಠಿಯಾಗಿ ಬಳಕೆಯಾಗುತ್ತಿದೆ.

೧೨. ವೈಶ್ಯ ಯೋಗಿಗಳು ಭೂ ಲೋಕದಲ್ಲಿ ಭಗವನ್ನಾಮ ಸಂಕೀರ್ತನೆ ಮಾಡುತ್ತಾ ಅನೇಕ ವ್ರತಗಳನ್ನು ಮಾಡಿದರು.

೧೩. ಕೆಲಕಾಲದ ನಂತರ ಪ್ರಪಂಚದಲ್ಲಿನ ದುರ್ಭರವಾದ ಸ್ಥಿತಿಗಳನ್ನು ಕಂಡು ಬೇಸತ್ತು ತಪಸ್ಸು ಮಾಡಲು ಮೇರು ಪರ್ವತಕ್ಕೆ ಹೋದರು.

೧೪. ವೈಶ್ಯ ಯೋಗಿಗಳ ತಪಸ್ಸಿಗೆ ಶಿವನು ಮೆಚ್ಚಿ ಪ್ರತ್ಯಕ್ಷನಾದನು.

೧೫. ವೈಶ್ಯ ಮಹಾಪುರುಷರು ಪರಮ ವೈರಾಗ್ಯಶಾಲಿಗಳಾಗಿದ್ದುದರಿಂದ ಪ್ರಾಪಂಚಿಕವಾದ ರಾಜೈಶ್ವರ್ಯ ಸುಖ ಭೋಗಗಳನ್ನು ಬೇಡಲಿಲ್ಲ.

೧೬. ವೈಶ್ಯ ಮಹಾಪುರುಷರು ನಿನ್ನ ಸಾನಿಧ್ಯವನ್ನು ಅನುಗ್ರಹಿಸು ಎಂದು ಶಿವನನ್ನು ಕೇಳಿಕೊಂಡರು.

೧೭. ವೈಶ್ಯರು ಹಲವು ವರ್ಷಗಳವರೆಗೆ ಉಮಾಶಂಕರನನ್ನು ಆರಾಧಿಸಿದರು.

೧೮. ವೈಶ್ಯ ಯೋಗಿಗಳು ತ್ರಿಲೋಕಗಳಿಗೂ ಹೋಗಿ ಸೇವೆ ಸಲ್ಲಿಸುತ್ತಾ ಬಹಳ ಕಾಲ ಆನಂದದಿಂದ ಕಳೆದರು.

೧೯. ಗೋವು ಕಾಮದೇನುವಿನ ಸ್ವರೂಪ.

೨೦. ವೈಶ್ಯರು ಕಾಮದೇನುವಿನ ಗರ್ಭ ಹೊಕ್ಕು ಕಾಮದೇನುವಿನ ಕಿವಿಯಿಂದ ಜನ್ಮ ತಾಳಿದರು.

೨೧. ವೈಶ್ಯರ ಭಾಷೆ ಇಂತಹದ್ದು ಎಂದು ನಿರ್ಧರಿಸುವ ಹಾಗಿಲ್ಲ, ಇವು ಆಯಾಯ ಪ್ರದೇಶಗಳಿಗೆ ತಕ್ಕಂತ ಆಯಾಯ ಪ್ರದೇಶದ ಭಾಷೆಯನ್ನು ಮಾತನಾಡುತ್ತಾರೆ.

೨೨. ಮೂಲತಃ ಆಂಧ್ರದಿಂದ ವಲಸೆ ಬಂದವರು.

೨೩. ವೈಶ್ಯರು ಆರ್ಥಿಕತೆಯಲ್ಲಿ ಅಭಿವೃದ್ಧಿಯನ್ನು ಹೊಂದದಂತಹ ಜನಾಂಗ.

ಈ ಎಲ್ಲಾ ಫಲಿತಗಳು ಹೈದ್ರಾಬಾದ್ ಕರ್ನಾಟಕದ ಕ್ಷೇತ್ರಕಾರ್ಯ ನಡೆಸಿ ಮಹಾಪ್ರಬಂಧವನ್ನು ಸಿದ್ಧಪಡಿಸಿದಾಗ ಅಧ್ಯಯನದಿಂದ ದೊರೆತ ಫಲಿತಗಳು.

ಅನುಬಂಧಗಳು

೧. ಕಥೆಗಳು

೨. ಹಾಡುಗಳು

೩. ಛಾಯಾಚಿತ್ರಗಳು

೪. ನಕ್ಷೆ

೫. ಸಾಂಸ್ಕೃತಿಕ ಪದಗಳ ಪ್ರಾದೇಶಿಕ ಭಾಷೆಯಲ್ಲಿಯ ಹೆಸರು

೬. ಗ್ರಂಥಋಣ

೭. ವಕ್ತೃಗಳ ವಿವರ

೧. ಕಥೆಗಳು

೧. ಬಂಗಾರವತಿ

ಒಂದು ಊರಿನಲ್ಲಿ ಪಟ್ಟಣಶೆಟ್ಟಿ ಎಂಬುವನು ತನ್ನ ಹೆಂಡತಿಯೊಡನೆ ಸುಖದಲ್ಲಿದ್ದನು. ಅವನಿಗೆ ಒಬ್ಬ ಮಗನಿದ್ದನು. ಅವನ ಹೆಸರು ಗೋಪಾಲಕೃಷ್ಣ. ಗೋಪಾಲಕೃಷ್ಣನು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಮದುವೆಯಾಗಿ ಮನೆಯಲ್ಲೇ ಇದ್ದನು. ಪಟ್ಟಣಶೆಟ್ಟಿಯು ಒಂದು ದಿನ ಮಗನ ಹತ್ತಿರ ಹೀಗೆ ಹೇಳಿದನು. 'ಮಗನೇ, ನಾನು ಎಷ್ಟೋ ವರ್ಷಗಳಿಂದ ವ್ಯಾಪಾರ ಮಾಡಿ, ಅದರಿಂದ ಲಾಭ-ನಷ್ಟ ಎರಡನ್ನೂ ನೋಡುತ್ತಾ ಬಂದಿದ್ದೇನೆ. ಇದು ನಮ್ಮ ಆದ್ಯಕರ್ತವ್ಯ. ಅದಕ್ಕಾಗಿ, ನೀನು ಈ ರೀತಿ ಸುಖವಾಗಿ ಮನೆಯಲ್ಲೇ ಇದ್ದರೆ ಸಾಧ್ಯವಿಲ್ಲ, ನನಗಂತೂ ವಯಸ್ಸಾಯಿತು. ನೀನು ನನ್ನಂತೆಯೇ ದುಡಿದು ವ್ಯಾಪಾರ ನಡೆಸಲೇ ಬೇಕು'.

ಮಗನು, 'ನಾನು ವ್ಯಾಪಾರ ಮಾಡಬೇಕಾದರೆ, ಹಡಗಿನ ಮೇಲೆ ಹೋಗಿ ದೇಶದಲ್ಲಿ ಸಾಮಾನುಗಳನ್ನು ವಿಕ್ರಯ ಮಾಡಿ ಬರಲಿಕ್ಕೆ ನಾಲ್ಕಾರು ತಿಂಗಳು ತಡವಾಗಬಹುದು. ಅಲ್ಲಿಯ ತನಕ ನನ್ನ ಹೆಂಡತಿ ಪತಿವ್ರತೆಯಾಗಿಯೇ ಉಳಿಯಬಹುದೋ ಹೇಗೆ ಎನ್ನುವ ಸಂಶಯ ನನಗೆ ಕಾಡುತ್ತಿದೆ' ಎಂದು ಹೇಳಿದನು.

ಇದನ್ನು ಕೇಳಿದ ಅವನ ಹೆಂಡತಿ ರುಕ್ಮಿಣಿ, 'ನನ್ನ ಪಾತಿವ್ರತ್ಯದ ಬಗ್ಗೆ ನಿಮಗೆ ಖಾತ್ರಿಯಾಗುವುದಕ್ಕೆ ನಾನು ನಿಮಗೆ ಒಂದು ಮಲ್ಲಿಗೆ ಹೂವಿನ ಕರಡಿಗೆಯನ್ನು ಕೊಡುತ್ತೇನೆ. ಮಲ್ಲಿಗೆ ಹೂವು ನಾನು ಕೊಡುವಾಗ ಇದ್ದಂತೆಯೇ ಇದ್ದು ಬಾಡದಿದ್ದರೆ ನೀವು ನಾನು ಪತಿವ್ರತೆಯೆಂದು ತಿಳಿಯುವುದಕ್ಕೆ ಸಂಶಯವೇ ಇಲ್ಲ-ಅಲ್ಲದಿದ್ದರೆ ತಾನಾಗಿಯೇ ಆ ಹೂವು ಬಾಡಿ ಬಸವಳಿದು ಹೋಗುತ್ತದೆ' ಎಂದು ಹೇಳಿದಳು.

ಅದನ್ನು ಕೇಳಿ ಗೋಪಾಲಕೃಷ್ಣನು ತಂದೆಯ ಹತ್ತಿರ, 'ಅಪ್ಪಾ, ನಾಳೆ ಬೆಳಗಿನಲ್ಲಿ ನಿನ್ನ ಉದ್ಯೋಗವನ್ನು ಮುಂದುವರಿಸಲಿಕ್ಕೆ ನಾನು ಹೊರಡಲು ಸಿದ್ಧನಿದ್ದೇನೆ' ಎಂದು ಹೇಳಿದನು. ಆ ಮೇಲೆ ಹಡಗನ್ನು ತಯಾರು ಮಾಡಿಕೊಂಡು, ಹಡಗನ್ನು ನಡೆಸಲಿಕ್ಕೆ ಕೂಲಿ ಮಂದಿಯನ್ನು ಸಹ ಕೂಡಿಸಿಕೊಂಡು, ಹಡಗಿಗೆ ಬೇಕಷ್ಟು ಸಾಮಾನುಗಳನ್ನು ತುಂಬಿಸಿದನು. ತಂದೆ-ತಾಯಿಗಳ ಹತ್ತಿರವೂ ಹೆಂಡತಿ ರುಕ್ಮಿಣಿಯ ಹತ್ತಿರವೂ 'ನಾನು ಹೋಗಿ ಬರುತ್ತೇನೆ' ಎಂದು ಹೇಳಿದನು. ಕೂಡಲೆ ರುಕ್ಮಿಣಿ ಮೂರು ಮಲ್ಲಿಗೆ ಹೂವುಗಳನ್ನು ಬೆಳ್ಳಿಯ ಕರಡಿಗೆಯಲ್ಲಿ ಹಾಕಿ, ತನ್ನ ಗಂಡನ ಹತ್ತಿರ ಕೊಟ್ಟಳು. ಅದನ್ನು ತೆಗೆದುಕೊಂಡು, ಅವನು ಕೂಲಿ ಮಂದಿ ಸಮೇತ ಹಡಗಿಗೆ ಹೋದನು.

ಕೂಲಿಗಳು ಹಡಗನ್ನು ನಡೆಸುತ್ತ ಸಮುದ್ರದಲ್ಲಿ ಸಾಗಿದರು. ಸಮುದ್ರದ ದಂಡೆಯ ಮೇಲೆ ಒಂದು ದೊಡ್ಡ ಊರು ಕಂಡಿತು. ಗೋಪಾಲಕೃಷ್ಣನ ಹೇಳಿಕೆಯಂತೆ ಕೂಲಿಗಳು ಹಡಗನ್ನು ಅಲ್ಲಿಯ ಧಕ್ಕೆಗೆ ತಾಡಿದರು. ಗೋಪಾಲಕೃಷ್ಣನು ಪದ್ಧತಿಯ ಪ್ರಕಾರ ಬಂದೂಕುಗಳನ್ನು ಬಾರುಮಾಡಿಸಿ, ಸದ್ದಿನ ಕೋವಿಯನ್ನು ಹೊಡೆದನು.

ಆ ಸಪ್ಪಳವನ್ನು ಕೇಳಿದ ಆ ಊರಿನ ಮುಖಂಡಳಾದ ಬಂಗಾರವತಿಯೆಂಬ ವೇಶ್ಯೆಯು ತನ್ನ ಗೆಳೆಯರಾದ ಗಂಪಶೆಟ್ಟಿ, ಪಟೇಲ ಬೋಳಗೌಡ ಮತ್ತು ಪಂಪಾಶಾಸ್ತ್ರಿ ಇವರನ್ನು ಕೂಡಿಕೊಂಡು ಹಡಗಿನ ಹತ್ತಿರ ಬಂದಳು. ಗೋಪಾಲಕೃಷ್ಣ ಶೆಟ್ಟಿಯ ಹತ್ತಿರ, 'ಸಾವುಕಾರರೇ, ನಿಮ್ಮ ಹಡಗಿನಲ್ಲಿ ಬಹಳಷ್ಟು ಸಾಮಾನು ಇದ್ದ ಹಾಗೆ ಕಾಣುತ್ತದೆ. ನಾವು ಕೇಳುವ ಸಾಮಾನುಗಳೆಲ್ಲ ಇವೆಯೋ ಹೇಗೆ?' ಎಂದು ಕೇಳಿದಳು. ಗೋಪಾಲಕೃಷ್ಣನು, 'ಎಲ್ಲ ಸಾಮಾನುಗಳೂ ಉಂಟು. ನೀವು ಯಾವುದೇ ಸಾಮಾನು ಕೇಳಿದರೂ ಅದು ನಮ್ಮ ಹತ್ತಿರ ಉಂಟು' ಎಂದನು.

ಬಂಗಾರವತಿಯು, 'ನಾವು ಒಂದು ಶರ್ತವನ್ನಿಡುತ್ತೇವೆ. ನಾವು ಕೇಳುವ ಸಾಮಾನುಗಳನ್ನು ನೀವು ಕೊಡದೆ ಹೋದರೆ, ನಿಮ್ಮ ಹಡಗೂ, ನಿಮ್ಮ ಕೂಲಿಗಳೂ, ಹಡಗಿನಲ್ಲಿರುವ ಸಾಮಾನುಗಳೂ ಎಲ್ಲ ನಮ್ಮ ಸೊತ್ತಾಗಬೇಕು. ಒಂದು ವೇಳೆ ಆ ಸಾಮಾನುಗಳನ್ನೆಲ್ಲ ನೀವು ಕೊಟ್ಟಲ್ಲಿ, ನನ್ನ ಮನೆಯೂ ನನ್ನದೇ ಆದ ಎಲ್ಲ ಸೊತ್ತೂ ನಿಮ್ಮದೇ ಆಗುತ್ತದೆ. ಇದಕ್ಕೆ ನಿಮ್ಮ ಒಪ್ಪಿಗೆಯೋ?' ಎಂದು ಕೇಳಿದಳು. ಗೋಪಾಲಕೃಷ್ಣನು ಇದಕ್ಕೆ ಒಪ್ಪಿದ ಅನಂತರ ಈ ರೀತಿ ಲೇಖೀಪೂರ್ವಕ ಕರಾರನ್ನು ಬರೆದುಕೊಂಡರು.

ಬಂಗಾರವತಿಯು ಕೇಳಿದ ಸಾಮಾನು ಯಾವದೆಂದರೆ, ಒಂದು ಮಣ ಆಪಿ ಅಡಕೆ ಕೇಳಿದ ಕೂಡಲೆ ಗೋಪಾಲಕೃಷ್ಣನು ಇಡೀ ಹಡಗನ್ನು ಹುಡುಕಹತ್ತಿದನು. ಆದರೆ, ಉಳಿದ ಸಕಲ ಸಾಮಾನುಗಳು ಇದ್ದರೂ ಆಪಿ ಅಡಕೆಯಿರಲಿಲ್ಲ. ಬಂಗಾರವತಿಯು ಅವನಿಗೆ ಅದನ್ನು ಹುಡುಕಲಿಕ್ಕೆ ಆರು ಗಂಟೆ ಸಮಯವನ್ನು ಕೊಟ್ಟಳು. ಅಷ್ಟು ಹೊತ್ತಿನವರೆಗೆ ಹುಡುಕಿದರೂ ಸಹ ಆಪಿ ಅಡಕೆ ಸಿಗಲಿಲ್ಲ. ಕೊನೆಗೆ ಬರೆದುಕೊಟ್ಟ ಲೇಖಿಯ ಪ್ರಕಾರ, ತನ್ನ ಹಡಗು, ಹಡಗಿನ ಕೂಲಿಗಳು, ಹಡಗಿನಲ್ಲಿದ್ದ ಎಲ್ಲಾ ಸಾಮಾನುಗಳ ಸಮೇತ ಅವನು ಬಂಗಾರವತಿಯ ಸ್ವಾಧೀನನಾದನು.

ಅವಳ ಮನೆಯಲ್ಲಿ ಹೇಳಿದ ಕೆಲಸ ಮಾಡುತ್ತ ಗೋಪಾಲಕೃಷ್ಣನು ಉಳಿದನು. ಅವಳ ಕೊಟ್ಟಿಗೆಯ ಸಗಣಿ ತೆಗೆಯುವ ಕೆಲಸವೂ ಅವನ ಪಾಲಿಗೆ ಬಂದಿತು. ಹೀಗೆ ಎಷ್ಟೋ ದಿವಸಗಳು ಕಳೆದು ಹೋದವು.

ಒಂದು ದಿನ ಅವನು ಅವಳ ಕೊಟ್ಟಿಗೆಯ ಸಗಣಿ ತೆಗೆಯುವಾಗ ಹೆಂಡತಿ ರುಕ್ಮಿಣಿ ತನಗೆ ಕೊಟ್ಟಿದ್ದ ಬೆಳ್ಳಿಯ ಕರಡಿಗೆಯ ನೆನಪು ಅವನಿಗಾಯಿತು. ಆ ಮಲ್ಲಿಗೆ ಹೂವಿನ ಕರಡಿಗೆಯ ಮುಚ್ಚಳವನ್ನು ತೆಗೆದು ನೋಡಿದನು. ಆಗ ಅವನ ಜೊತೆಯಲ್ಲಿದ್ದವನು 'ಅದೇನು?' ಎಂದು ವಿಚಾರಮಾಡಿದನು.

'ನನ್ನ ಹೆಂಡತಿ ಪತಿವ್ರತಾ ಗುಣವನ್ನು ಕಾದುಕೊಂಡು ಇದ್ದದ್ದೇ ಹೌದಾದರೆ, ಈ ಕರಡಿಗೆಯಲ್ಲಿದ್ದ ಮಲ್ಲಿಗೆ ಹೂವುಗಳು ಇದೇ ರೀತಿ ಯಾವಾಗಲೂ ತಾಜಾ ಹೂವಿನ ಹಾಗೆಯೇ ಇರುತ್ತವೆ. ಒಂದಾನುವೇಳೆ, ಏನಾದರೂ ಅಡ್ಡ ಹಾದಿ ಹಿಡಿದರೆ, ಈ ಹೂವುಗಳು ಬಾಡಿ, ಬಸವಳಿದು ಹೋಗುತ್ತವೆ' ಎಂದು ಗೋಪಾಲಕೃಷ್ಣನು ಹೇಳಿದನು.

ಅದನ್ನು ಕೇಳಿದ ಮನುಷ್ಯನು ಆ ಮಾತನ್ನು ಬಂಗಾರವತಿ ವೇಶ್ಯೆಯ ಹತ್ತಿರ ಹೋಗಿ ಹೇಳಿದನು. 'ಅಮ್ಮಾ, ಮೊನ್ನೆ ನೀವು ಆ ಹಡಗನ್ನು ನಿಮ್ಮ ವಶ ಮಾಡಿಕೊಂಡಿರಲ್ಲ? ಆ ಹಡಗಿನ ಮ್ಯಾನೇಜರನ

ಹತ್ತಿರ ಒಂದು ಬೆಳ್ಳಿಯ ಕರಡಿಗೆಯಿದೆ. ಅದರಲ್ಲಿ ಏನೋ ಅಪರೂಪದ ವಸ್ತುವಿದೆ. ಅದನ್ನು ತರಿಸಿಕೊಂಡು ನೋಡಿಯೇ ಅದರ ಮಹತ್ವವನ್ನು ತಿಳಿದುಕೊಳ್ಳಿರಿ' ಎಂದು ಹೇಳಿದನು. ಅದನ್ನು ಕೇಳಿದ ಬಂಗಾರವತಿ ಒಂದು ದಿನ, 'ಬೆಳ್ಳಿ ಕರಡಿಗೆಯಿದೆಯಂತೆ, ಅದನ್ನು ನೀನು ನನಗೆ ಕೊಡಲೇ ಇಲ್ಲ, ನಮ್ಮ ನಮ್ಮಲ್ಲಿ ಆದ ಲೇಖಿಯ ಪ್ರಕಾರ ನೀನು ನಿನ್ನ ಪ್ರತಿಯೊಂದು ಸೊತ್ತನ್ನು ನನ್ನ ವಶ ಮಾಡುವೆಯೆಂದು ಬರೆದು ಕೊಟ್ಟಿದ್ದಿಯಲ್ಲವೋ? ನೀನು ಆ ಕರಡಿಗೆಯನ್ನು ಯಾಕೆ ಕೊಡಲಿಲ್ಲ?' ಎಂದು ಕೇಳಿ, ಅವನ ಕಯ್ಯಿಂದ ಆ ಕರಡಿಗೆಯನ್ನು ತೆಗೆದುಕೊಂಡಳು.

ಕರಡಿಗೆಯ ಮುಚ್ಚಳವನ್ನು ತೆಗೆದು ನೋಡುವವರೆಗೆ ಅದರಲ್ಲಿ ಮೂರು ಮಲ್ಲಿಗೆ ಹೂವುಗಳನ್ನು ಕಂಡಳು. ಸೂರ್ಯೋದಯದಲ್ಲಿ ಅರಳಿದ ಹೂವು ಹೇಗೆ ಇರುತ್ತದೆಯೋ ಹಾಗೆಯೇ ಆ ಹೂವುಗಳು ಅರಳಿಕೊಂಡಿದ್ದವು, ಅದನ್ನು ನೋಡಿ ಅವನ ಹತ್ತಿರ ಕೇಳಿದಳು. 'ನೀನು ಈ ಕರಡಿಗೆಯಲ್ಲಿ ಮೂರು ಮಲ್ಲಿಗೆ ಹೂವುಗಳನ್ನು ಹಾಕಿ ಇಟ್ಟುಕೊಂಡ ಕಾರಣವೇನು? ಅವು ಇದೇ ಈಗ ಕೊಯ್ದ ಹೂವುಗಳಂತೆ ಅರಳಿರುವುದರ ವಿಶೇಷವೇನು?'

ಗೋಪಾಲಕೃಷ್ಣನು, 'ನಾನು ಊರಲ್ಲಿಲ್ಲದಾಗ ನನ್ನ ಹೆಂಡತಿಯು ಪಾತಿವ್ರತ್ಯವನ್ನು ಕಾದುಕೊಂಡು ಬಂದಿದ್ದಕ್ಕೆ ಸಾಕ್ಷಿಯಾಗಿ ಅವಳು ನನಗೆ ಕೊಟ್ಟ ಹೂವುಗಳು ಇವು. ನಾನು ಮನೆಯಿಂದ ಹೊರಟು ಬಂದು ಇಂದಿಗೆ ಒಂದು ವರ್ಷವಾಯಿತು. ಆಕೆಯು ಈ ಹೂವುಗಳನ್ನು ಆಗ ಕೊಡಬೇಕಾದರೆ ಇವು ಹೇಗೆ ಅರಳಿ ಕೊಂಡು ಪರಿಮಳ ಬೀರುತ್ತಿದ್ದವೋ ಈಗಲೂ ಹಾಗೆಯೇ ಇವೆ. ಸ್ವಲ್ಪ ಸಹ ಅಕ್ಕುಮುಕ್ಕಾಗಲಿಲ್ಲ. ಇವು ಬಾಡಿ ಬಸವಳಿದು ಹೋದರೆ ಮಾತ್ರ ಅಡ್ಡದಾರಿ ಹಿಡಿದಳು ಎಂದು ಹೇಳಲಿಕ್ಕೆ ಏನೂ ಸಂಶಯವಿಲ್ಲ'.

ಇದನ್ನು ಕೇಳಿದ ವೇಶ್ಯೆಯು, 'ಇನ್ನು ನಿನ್ನ ಕೆಲಸಕ್ಕೆ ನೀನು ಹೋಗು' ಎಂದು ಹೇಳಿ ಹೂಗಳ ಕರಡಿಗೆಯನ್ನು ಕೊಟ್ಟು ಅವನನ್ನು ಕಳಿಸಿದಳು. ಮನಸ್ಸಿನಲ್ಲೇ ಬಹಳ ಆಲೋಚನೆ ಮಾಡಿದಳು. 'ಇವಳ ಪಾತಿವ್ರತ್ಯವನ್ನು ಕೆಡಿಸಲೇಬೇಕು. ಅದಲ್ಲದಿದ್ದರೆ, ನಾನು ಎಷ್ಟೋ ರಾಜರ ಹಾಗೂ ಶ್ರೀಮಂತರ ಹಡಗುಗಳನ್ನೆಲ್ಲಾ ಸಂಪಾದಿಸಿಟ್ಟಿದ್ದು ವ್ಯರ್ಥವೇ ಸರಿ. ಇದಕ್ಕೆ ಏನು ಮಾಡಬೇಕಾಯಿತು?' ಎಂದು ವಿಚಾರ ಮಾಡಿ, 'ನಮ್ಮೂರಿನಲ್ಲಿ ಪ್ರಾಯಕ್ಕೆ ಬಂದ ಹುಡುಗರು ಯಾರು ಯಾರು? ಪಟೇಲರ ಮಗನೊಬ್ಬ, ಗಂಪಶೆಟ್ಟಿಯ ಮಗನೊಬ್ಬ ಮತ್ತು ಶಾಸ್ತ್ರಿಯವರ ಮಗನೊಬ್ಬ, ನಮ್ಮ ಗೆಳೆಯರ ಗುಂಪಿನ ಒಳಗೇ ಇದ್ದಾರೆ. ಇವರು ಮೂರು ಮಂದಿಯನ್ನು ಕಳಿಸಿ, ಅವಳ ಪಾತಿವ್ರತ್ಯವನ್ನು ಕೆಡಿಸದೆ ಹೋದರೆ, ನಾನು ಹುಟ್ಟಿಯೂ ನಿಷ್ಪ್ರಯೋಜನ' ಎಂದು ನಿರ್ಧಾರಮಾಡಿ, ಮರುದಿನ ಪಟೇಲರಿಗೂ ಗಂಪಶೆಟ್ಟಿಗೂ ಶಾಸ್ತ್ರಿಯವರಿಗೂ ಬರುವಂತೆ ಹೇಳಿಕಳಿಸಿದಳು.

ಅವರು ಮೂರು ಜನರೂ ಬಂದರು. 'ನೋಡಿ ಈಗ ಒಂದು ಕೆಲಸವಾಗಬೇಕಾಗಿದೆ. ಮೊನ್ನೆ ನಾನೊಂದು ಹಡಗನ್ನು ಒತ್ತೆ ಮಾಡಿಕೊಂಡೆನಲ್ಲಾ? ಆ ಹಡಗಿನ ಮ್ಯಾನೇಜರ್ ಗೋಪಾಲಕೃಷ್ಣನ ಹೆಂಡತಿಯ ಪಾತಿವ್ರತ್ಯದ ಮಹಿಮೆ ಈ ಲೋಕದಲ್ಲೇ ಇಲ್ಲದಂಥದು. ಅವಳ ಪಾತಿವ್ರತ್ಯವನ್ನು ಕೆಡಿಸಲೇಬೇಕು. ಆ ಬಗ್ಗೆ ನಿಮ್ಮ

ಮೂರು ಜನರ ಮಕ್ಕಳನ್ನು ಅವನ ಊರಿಗೆ ನೀವು ಕಳಿಸಿಕೊಡಬೇಕು. ನಾನು ಅವರ ಹತ್ತಿರ ಎಲ್ಲ ವಿಷಯವನ್ನು ಹೇಳಿ ಕಳಿಸುತ್ತೇನೆ. ಆ ಮೇಲೆ ಅವಳ ಪಾತಿವ್ರತ್ಯ ಹೇಗೆ ಉಳಿಯುವದೋ ನೋಡೋಣ' ಎಂದು ಹೇಳಿದಳು. ಅದಕ್ಕೆ ಆ ಮೂರು ಜನರು ಒಪ್ಪಿಕೊಂಡು ಹೋದರು.

ಬಂಗಾರವತಿಯು ಅವರನ್ನು ಕಳಿಸಲಿಕ್ಕಾಗಿ ಒಂದು ಹಡಗನ್ನು ತಯಾರು ಮಾಡಿಸಿದಳು. ನಾಲ್ಕು ಮಂದಿ ಕೂಲಿಗಳನ್ನು ಗೊತ್ತು ಮಾಡಿ, ಹಡಗಿನಲ್ಲಿ ಅವರೆಲ್ಲರ ಊಟ ಉಪಚಾರದ ಬಗ್ಗೆ ಸಾಮಾನು ಸಂಗ್ರಹವನ್ನೆಲ್ಲಾ ಸಿದ್ದ ಮಾಡಿಸಿದಳು.

ಮರುದಿವಸ ಮೂರು ಜನ ಪ್ರಾಯ ಸಮರ್ಥರು ಬಂದರು. ವೇಶ್ಯೆಯು ಅವರ ಹತ್ತಿರ 'ಗೋಪಾಲಕೃಷ್ಣ ಪಟ್ಟಣಶೆಟ್ಟಿಯ ಊರಿಗೆ ಹೋಗಿ ನೀವು ಆ ಪಟ್ಟಣಶೆಟ್ಟಿ ಸಾವಕಾರರ ಮನೆಯೆಲ್ಲಿದೆಯೆಂದು ಕೇಳಬೇಕು. ಆ ಮೇಲೆ ಆ ಗೋಪಾಲಕೃಷ್ಣನ ಹೆಂಡತಿಯ ಪಾತಿವ್ರತ್ಯವನ್ನು ಕೆಡಿಸಲಿಕ್ಕೆ ಏನೇನು ಉಪಾಯ ಮಾಡಬಹುದೋ ಆ ಎಲ್ಲ ಉಪಾಯಗಳನ್ನು ಮಾಡಬೇಕು. ಹಲವು ಪ್ರಯತ್ನ ಮಾಡಿಯಾದರೂ ಕಾರ್ಯಸಾಧನೆ ಮಾಡಿಕೊಂಡು ಬರಬೇಕು. ಆ ಮೇಲೆ ನಾನು ನಿಮಗೆ ಯೋಗ್ಯ ಮರ್ಯಾದೆಯನ್ನು ಸಲ್ಲಿಸುತ್ತೇನೆ' ಎಂದು ಹೇಳಿದಳು.

ಅವರು ಅದಕ್ಕೆ ಸಂತೋಷದಿಂದ ಒಪ್ಪಿ, ನಾಲ್ಕು ಜನ ಕೂಲಿಯವರ ಸಮೇತ ಹಡಗಿಗೆ ಬಂದರು. ಆ ಮೇಲೆ ಹಡಗಿನ ಮೇಲೆ ಎಷ್ಟೋ ದೂರ ಹೊರಟು, ಪಟ್ಟಣ ಶೆಟ್ಟಿಯ ಊರಿಗೆ ಬಂದರು. ಅಲ್ಲಿ ಹಡಗದಿಂದ ಇಳಿದುಕೊಂಡು, ಸಿಕ್ಕಿದ ಜನರ ಹತ್ತಿರ, 'ಇಲ್ಲಿ ಗೋಪಾಲಕೃಷ್ಣ ಶೆಟ್ಟರ ಮನೆ ಯಾವುದು?' ಎಂದು ಕೇಳಿಕೊಂಡು, ಅವನ ಮನೆಗೆ ಬಂದು ತಲುಪಿದರು.

ರುಕ್ಮಿಣಿಯು, 'ನೀವು ಯಾವೂರಿನವರು? ಈಗ ಎಲ್ಲಿಂದ ಬಂದಿರಿ? ನಿಮಗೆ ತೃಷೆಗೆ ಬೇಕೋ?' ಎಂದು ಕೇಳಿದಳು. ಅವರು, ನಾವು ನಿನ್ನ ಗಂಡನ ಮಿತ್ರರು. ಅವನು ನೀವು ತನ್ನ ಊರಿಗೆ ಹೋದರೆ, ತನ್ನ ಮನೆಗೆ ಹೋಗಿ ನಾಲ್ಕು ದಿನ ಉಳಿದು ಹೋಗಿ ಎಂದು ನಮ್ಮ ಹತ್ತಿರ ಹೇಳಿದ್ದಾನೆ. ಈ ಕಡೆಗೆ ಬರುವ ಕೆಲಸವಿತ್ತು ಬಂದೆವು' ಎಂದರು.

ಗೋಪಾಲಕೃಷ್ಣನ ತಂದೆ ತಾಯಿ ಬಹಳ ಮುದುಕರಾಗಿದ್ದರು. ಅವರು ತಮ್ಮ ಮಗನ ಕ್ಷೇಮ ಸಮಾಚಾರವನ್ನು ಕೇಳಿ, 'ಅವನು ಈಗ ಯಾವ ಊರಿನಲ್ಲಿದ್ದಾನೆ? ಊರಿಗೆ ಯಾವಾಗ ಬರುತ್ತಾನೆ?' ಎಂದು ಕೇಳಿದರು. ಇವರು, 'ನಮ್ಮ ಬಂಗಾರವತಿ ಬಂದರದಲ್ಲೇ ವ್ಯಾಪಾರ ಮಾಡಿಕೊಂಡಿದ್ದಾನೆ. ಸದ್ಯ, ಅವನಿಗೆ ಈ ಕಡೆಗೆ ಬರುವ ವಿಚಾರವಿಲ್ಲ' ಮುಂತಾಗಿ ಹೇಳಿದರು.

ಅವರು ಆ ದಿವಸ ಆರಾಮವಾಗಿ ಊಟ ಮಾಡಿ ಉಪಚಾರದಲ್ಲಿ ಕಳೆದರು. ಅವರು ತಮ್ಮ ತಮ್ಮೊಳಗೆ ಮಾತಾಡಿಕೊಂಡರು. 'ಮುದುಕ ಅತ್ತೆ-ಮಾವಂದಿರನ್ನು ಬಿಟ್ಟರೆ, ಇಡೀ ಮನೆಗೆ ಮನೆಯವಳಾಗಿ ಇರುವವಳು ಇವಳೊಬ್ಬಳೇ. ಇವಳ ಪಾತಿವ್ರತ್ಯವನ್ನು ಕೆಡಿಸುವುದು ಹೆಚ್ಚು ಕಷ್ಟದ ಕೆಲಸವಲ್ಲ. ನೋಡೋಣ, ಅವಳ ಮನಸ್ಸಿನ ಲಗು-ಬಿಗು ಹೇಗಿದೆಯೆಂದು' ಎರಡು ದಿನ ಕಳೆದರು. 'ನಾವು ಬಂದ ಕೆಲಸ ಏನು ಎಂದು

ಇತ್ಯರ್ಥವಾಗಲಿಲ್ಲ. ಅದರ ಬಗ್ಗೆ ಏನು ಮಾಡಬೇಕಾಯಿತು?' ಎಂದು ಅವರೊಳಗೇ ಮಾತಾಡಿಕೊಂಡರು. ಅವರೊಳಗೊಬ್ಬನು, 'ಇಂದು ಸ್ನಾನಕ್ಕೆ ಹೋದ ಸಮಯದಲ್ಲಿ ಅವಳನ್ನು ಕರೆಯಬೇಕು. ಆಗ ನಾವು ಮೂರು ಜನರೂ ಇಂಥ ಕೆಲಸದ ಹೊರೆ ಹೊತ್ತುಕೊಂಡು ಬಂದವರು ಎಂದು ಹೇಳಿಬಿಡಬೇಕು. ಆಗ ಅವಳ ಉತ್ತರ ಏನು ಬರುತ್ತದೆಯೆನ್ನುವುದು ತಿಳಿದು ಹೋಗಿಬಿಡುತ್ತದೆ' ಎಂದು ಹೇಳಿದರು.

ಹಾಗೆಯೇ ಸ್ವಲ್ಪ ವೇಳೆಯಲ್ಲಿ ಸ್ನಾನಕ್ಕೆ ಹೋದರು. ಆಗ, 'ನೀರು ಬಿಸಿಯಾಗಿ ಹೋಗಿದೆ. ಕೊಡ ತೆಗೆದುಕೊಂಡು ಬಾ' ಎಂದು ರುಕ್ಮಿಣಿಯನ್ನು ಕರೆದರು. ಆಗ ಅವಳು ಕೊಡ ತೆಗೆದುಕೊಂಡು ಬಂದಳು. 'ರುಕ್ಮಿಣೀ, ನಾವು ಮೂರು ಮಂದಿಯೂ ಯಾಕೆ ಬಂದವರು ಎನ್ನುವುದು ನಿನಗಿನ್ನೂ ಗೊತ್ತಾಗಲಿಲ್ಲ. ನಿನ್ನ ಗಂಡನು ನಮ್ಮೂರಿಗೆ ಹೋಗಿ ಬಂಗಾರವತಿ ವೇಶ್ಯೆಯ ಹತ್ತಿರ ಜಿದ್ದಿನಲ್ಲಿ ಸೋತು ಅವಳ ವಶವಾಗಿ ಹೋಗಿದ್ದಾನೆ. ಅವನು ಪುನಃ ನಿನ್ನನ್ನು ನೋಡಲು ಬರುವುದಿಲ್ಲ. ಅವನು ಇಲ್ಲಿಂದ ಹೋದಾಗ ನೀನು ಅವನ ಹತ್ತಿರ ಕೊಟ್ಟಿದ್ದ ಮಲ್ಲಿಗೆ ಹೂವಿನ ಕರಡಿಗೆಯನ್ನೂ ಅವಳು ಪತ್ತೆಮಾಡಿದಳು. ಆ ಮೇಲೆ ನಿನ್ನ ಪ್ರಾಯವನ್ನು ಸುಮ್ಮನೆ ಕೆಡಿಸಿಕೊಳ್ಳಬೇಡ' ಎಂದರು.

ರುಕ್ಮಿಣಿಯು, 'ನೀವೇ ಇಷ್ಟು ದೂರ ನನ್ನನ್ನು ಅರಸಿಕೊಂಡು ಬಂದು ಕೇಳಿದ ಬಗ್ಗೆ ಏನೂ ತೊಂದರೆಯಿಲ್ಲ. ನಾಳೆ ದಿವಸ ನನ್ನ ಹತ್ತಿರ ಬರುವುದಕ್ಕೆ ನಿಮಗೆ ಸಮಯವನ್ನು ಗೊತ್ತು ಮಾಡಿಕೊಡುತ್ತೇನೆ. ಟ್ಯಾಮಿನ ಪ್ರಕಾರ ನೀವು ಒಬ್ಬೊಬ್ಬರಾಗಿ ಮೂರು ಜನರು ಬರಬಹುದು. ಒಬ್ಬನು ರಾತ್ರಿ ಒಂಬತ್ತು ಗಂಟೆಗೆ ಬರಲಿ ಇನ್ನೊಬ್ಬನು ಮಧ್ಯರಾತ್ರಿಗೆ, ಮೂರನೆಯವನು ನಾಲ್ಕು ಗಂಟೆ ರಾತ್ರಿಗೆ ಬರಬೇಕು' ಎಂದು ಹೇಳಿ ಹೋದಳು.

ಅವಳು ಆ ಮೇಲೆ ತನ್ನಲ್ಲಿಯೇ ವಿಚಾರ ಮಾಡಿದಳು. ಅವರು ಮೂರು ಜನರೂ ಪೇಟೆಗೆ ಹೋದ ಸಮಯದಲ್ಲಿ ಆಳುಗಳನ್ನು ಕರೆಸಿಕೊಂಡು ನಡುಮನೆಯ ಬಾಗಿಲಿನ ಹತ್ತಿರ ಮೂರು ಆಳು ಕಂದಕ ಹೊಡೆಸಿದಳು. ಅದರ ಮೇಲೆ ಯೋಗ್ಯವಾದ ರೀತಿಯಲ್ಲಿ ಹಲಗೆ ಮುಚ್ಚಿಸಿದಳು. ಆ ಹಲಗೆಗೆ ಸರಿಯಾದ ಗೇಟನ್ನು ಇಡಿಸಿ, ಅದೇ ದಿವಸ ರಾತ್ರಿಯೊಳಗೆ ಪೂರ್ಣವಾಗಿ ಸಿದ್ಧಮಾಡಿಸಿದಳು.

ಮರುದಿವಸ ಸಾಯಂಕಾಲ ಊಟ ಉಪಚಾರ ಮುಂಚೆಯೇ ಮುಗಿಯಿತು. ಆ ಮೇಲೆ ಒಂಬತ್ತು ಗಂಟೆ ರಾತ್ರಿಗೆ ಗಂಪಶೆಟ್ಟಿಯ ಮಗನು ಹೊರಟನು. ನಡುಮನೆಯ ಬಾಗಿಲು ದಾಟಿದ ಸಮಯದಲ್ಲಿ ಸೀದಾ ಕಂದಕದಲ್ಲಿ ಬಿದ್ದನು. ಹನ್ನೆರಡು ಗಂಟೆ ರಾತ್ರಿಯ ಸುಮಾರಿಗೆ ಶಾಸ್ತ್ರಿಯ ಮಗನು ಹೊರಟನು. ಹುರುಪಿನಿಂದಲೇ ಹೋದ ಅವನೂ ಮೊದಲನೆಯವ ಹೋದ ಕಂದಕಕ್ಕೇ ಹೋಗಿ ತಲುಪಿದನು. ನಾಲ್ಕು ಗಂಟೆ ರಾತ್ರಿಗೆ ಹೊರಟ ಪಟೇಲನ ಮಗನೂ ನಡುಮನೆಯ ಬಾಗಿಲು ದಾಟುವುದೇ ತಡ ಅದೇ ಕಂದಕದಲ್ಲಿ ಬಿದ್ದು ಬಿಟ್ಟನು. ಮೂವರೂ ಒಟ್ಟಾಗಿ ಒಂದು ಕಂದಕದಲ್ಲಿ ಜೀವ ಹೋಗದೆ ಉಳಿದುಕೊಂಡರು.

ಬೆಳಗಾದ ಮೇಲೆ ರುಕ್ಮಿಣಿಯು ಹೋಗಿ ಆ ಕಂದಕದಲ್ಲಿ ಬೆಳಕು ಬಿಟ್ಟು ನೋಡಿದಳು. ಯಾರೂ ಸತ್ತಿರಲಿಲ್ಲ ಎಂದು ತಿಳಿದುಕೊಂಡು ಬಂದು, ತನ್ನ ಕೆಲಸವನ್ನು ತಾನು ಮಾಡುತ್ತ ಉಳಿದಳು. ಮಧ್ಯಾಹ್ನದ ಸಮಯಕ್ಕೆ ನಾಲ್ಕು ಜನ ಕೂಲಿ ಮಂದಿಯನ್ನು ಕರೆಸಿ, ಅವರನ್ನು ಮೇಲೆ ತೆಗೆಯಿಸಿ ಆ ಮೂವರ ಹತ್ತಿರವೂ ಹೇಳಿದಳು.

'ಈಗ ನೀವು ನಾನು ಹೇಳಿದ ಹಾಗೆ ಕೇಳುವಿರೆಂದು ಮಾತುಕೊಟ್ಟರೆ, ನಿಮ್ಮ ಜೀವನಕ್ಕೆ ಯೋಗ್ಯ ವ್ಯವಸ್ಥೆ ಮಾಡುತ್ತೇನೆ ಇಲ್ಲದಿದ್ದರೆ ನಿಮ್ಮ ಜೀವಗಳ ವ್ಯವಸ್ಥೆಯೇ ಅವ್ಯವಸ್ಥೆಯಾಗಬಹುದು' ಎಂದು ಹೇಳಿದಳು. ಅವರು ಮೂವರೂ, 'ನಮ್ಮ ಜೀವ ಉಳಿಸಿಕೊಟ್ಟರೆ, ನೀವು ಹೇಳಿದ ಹಾಗೆ ಕೇಳುತ್ತೇವೆ' ಎಂದು ಕೈಮುಗಿದು ಹೇಳಿಕೊಂಡರು. ಆ ಮೇಲೆ ಒಂದು ಕೋಣೆಯಲ್ಲಿ ಅವರನ್ನಿಟ್ಟು, ಅವರಿಗೆ ಆಹಾರ ಇತ್ಯಾದಿ ಉಪಚಾರಕ್ಕೆ ಸರಿಯಾದ ಜನರನ್ನಿಟ್ಟು ನಡೆಸಿದಳು.

ಆ ಮೇಲೆ ಒಬ್ಬ ಬಡಿಗನನ್ನು ಕರೆಸಿ, ಅವನ ಹತ್ತಿರ ಹೇಳಿದಳು. 'ನೋಡು, ನನಗೆ ನೀನು ಮೂರು ಪೆಟ್ಟಿಗೆ ಮಾಡಿಕೊಡಬೇಕು. ಪುರುಷ ಪ್ರಮಾಣದಷ್ಟು ಎತ್ತರವಿದ್ದು ಅಡ್ಡಗಲ ಒಂದು ಮಾರು ಉದ್ದವಿದ್ದು ಚಚ್ಚೌಕಾದ ಪೆಟ್ಟಿಗೆಯಾಗಬೇಕು. ಇದೇ ವಾರದಲ್ಲೇ ಅಂಥ ಮೂರು ಪೆಟ್ಟಿಗೆಗಳನ್ನು ತಯಾರುಮಾಡಿ ಕೊಡಬೇಕು' ಎಂದು ತಿಳಿಸಿದಳು.

ಬಡಿಗನು, 'ಅಡ್ಡಿಯಿಲ್ಲ'ವೆಂದು ಹೇಳಿಹೋದವನು ಅದೇ ವಾರದಲ್ಲೇ ಮೂರೂ ಪೆಟ್ಟಿಗೆಗಳನ್ನು ತಯಾರುಮಾಡಿಸಿ ಬಂದು ರುಕ್ಮಿಣಿಗೆ ತಿಳಿಸಿದನು. 'ಪೆಟ್ಟಿಗೆಗಳು ತಯಾರಾಗಿವೆ ನಾಳೆ ತರಿಸಿಕೊಳ್ಳಿ ಏನೂ ತೊಂದರೆಯಿಲ್ಲ'. ರುಕ್ಮಿಣಿ ಆತನ ಮನೆಗೆ ಕೂಲಿ ಜನರನ್ನು ಕಳಿಸಿ, ಮೂರೂ ಪೆಟ್ಟಿಗೆಗಳನ್ನು ತರಿಸಿದಳು. ಮರುದಿನ ಒಂದು ಹಡಗನ್ನು ತಯಾರು ಮಾಡಿಸಿದಳು. ಆ ಹಡಗನ್ನು ನಡೆಸುವುದಕ್ಕಾಗಿ ಹದಿನಾರು ಜನ ಕೂಲಿಗಳನ್ನು ಗೊತ್ತು ಮಾಡಿಸಿದಳು. ಅದರಲ್ಲಿ ನಾಲ್ಕಾರು ವರ್ಷ ಸಾಲುವಷ್ಟು ಸಾಮಾನುಗಳನ್ನು ತುಂಬಿಸಿದಳು.

ಮತ್ತು ಮೂರು ಜನರನ್ನು ಕರೆದು ಕೇಳಿದಳು. 'ಏನು? ನಿಮಗೆ ಮೂರೂ ಜನರಿಗೂ ಊರಿಗೆ ಹೋಗ ಬೇಕೆಂದಿದೆಯೋ? ಇಲ್ಲವಾದರೆ ಇಲ್ಲಿಯೇ ಉಳಿಯುವಿರೋ?' ಎಂದು ಕೇಳಿದಳು. ಆಗ ಮೂರು ಜನರೂ ಹೇಳಿಕೊಂಡರು; 'ನಮ್ಮನ್ನು ನಮ್ಮ ನಮ್ಮ ಮನೆಗೆ ನೀನು ಕಳಿಸಿಕೊಟ್ಟರೆ, ನಿನ್ನಂಥ ಪುಣ್ಯಾತ್ಮೆ ಈ ಲೋಕದಲ್ಲಿಯೇ ಇಲ್ಲ. ನಮ್ಮನ್ನು ನಮ್ಮ ನಮ್ಮ ಮನೆಗೆ ನೀನು ಕಳಿಸಿದರೆ ನಿನಗೆ ಸಾವಿರ ಸಲ ಕೈಮುಗಿಯು ತ್ತೇವೆ'. ಆಗ ಅವಳು ಹೇಳಿದಳು. ನಾನು ಹೇಳಿದ ಹಾಗೆ ನೀವು ಕೇಳಬೇಕು. ನಿಮಗೆ ಮೂರು ಮೂರು ತಿಂಗಳು ಸಾಲುವಷ್ಟು ಆಹಾರವನ್ನು ಅದರಲ್ಲಿ ಇಡುತ್ತೇನೆ. ಆಹಾರ ತೆಗೆದುಕೊಳ್ಳುತ್ತಾ ಸುಖವಾಗಿ ನೀವು ಪೆಟ್ಟಿಗೆಯಲ್ಲಿ ಇದ್ದರೆ ಸರಿ. ಮತ್ತು ಒಬ್ಬನ ಹತ್ತಿರ ಒಂದು ಸಾವಿರ ರೂಪಾಯಿ, ಮತ್ತೊಬ್ಬನ ಹತ್ತಿರ ಎರಡು ಸಾವಿರ ರೂಪಾಯಿ. ಇನ್ನೊಬ್ಬನ ಹತ್ತಿರ ಮೂರು ಸಾವಿರ ರೂಪಾಯಿ, ಹೀಗೆ ನಿಮ್ಮ ನಿಮ್ಮ ಹತ್ತರ ಎಣಿಸಿ ನಾನು ಹಣ ಕೊಡುತ್ತೇನೆ. ಪೆಟ್ಟಿಗೆಯ ಪೂಜೆ ಮಾಡಿ ನಾನು ಕೊಟ್ಟಷ್ಟು ರೂಪಾಯಿಗಳನ್ನು ನಾನು ಕೇಳುವ ಪ್ರಸಂಗ ಒಂದು ಸಮಯದಲ್ಲಿ ಬರಬಹುದು. 'ಬಹಳ ಅಗತ್ಯದ ಪ್ರಸಂಗ ಬಂದಿದೆ, ಕೊಡಿ' ಎಂದು ಬಿಟ್ಟು ಕೇಳುತ್ತೇನೆ. ಆ ಸಮಯದಲ್ಲಿ ಹಣವನ್ನು ಎಣಿಸಿ ಹೊರಗೆ ಒಗೆಯಬೇಕು. ಇದಕ್ಕೆ ಒಪ್ಪುವುದಾದರೆ, ನಿಮ್ಮನ್ನು ಸುಖವಾಗಿ ನಿಮ್ಮ ನಿಮ್ಮ ಮನೆಗೆ ಕಳಿಸುತ್ತೇನೆ' ಎಂದು ಹೇಳಿದಳು. 'ಅಡ್ಡಿಯಿಲ್ಲ' ಎಂದು ಅವರು ಮೂರು ಜನರೂ ಒಪ್ಪಿಕೊಂಡರು.

ಆ ನಂತರ ಪಟೇಲನ ಮಗನನ್ನು ಒಂದು ಪೆಟ್ಟಿಗೆಯಲ್ಲಿ ಕೂಡಿಸಿದಳು. ಅವನ ಹತ್ತಿರ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಳು. ಮೂರು ತಿಂಗಳು ಸಾಲುವಷ್ಟು ಆಹಾರವನ್ನು ಇರಿಸಿದಳು. ಹಾಗೆಯೇ ಗೇಟ್ ಹಾಕಿ ಕೀಲಿಯನ್ನು ಹಾಕಿದಳು. ಆ ಮೇಲೆ ಶಾಸ್ತ್ರಿಯ ಮಗನನ್ನು ಇನ್ನೊಂದು ಪೆಟ್ಟಿಗೆಯಲ್ಲಿ ಹಾಕಿ, ಅವನ ಹತ್ತಿರ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟು ಅದರಂತೆ ಚಾವಿ ಹಾಕಿದಳು. ಇನ್ನು ಗಂಪಶೆಟ್ಟಿಯ ಮಗನೊಬ್ಬನುಳಿದನು. ಅವನನ್ನು ಸಹ ಮತ್ತೊಂದು ಪೆಟ್ಟಿಗೆಯಲ್ಲಿ ಕೂಡಿಸಿ, ಅವನ ಹತ್ತಿರ ಮೂರು ಸಾವಿರ ರೂಪಾಯಿ ಕೊಟ್ಟು, ಅದರಂತೆ ಗೇಟ್ ಹಾಕಿ ಕೀಲಿ ಹಾಕಿದಳು. ಮೂರೂ ಪೆಟ್ಟಿಗೆಗಳನ್ನು ಹೊರಿಸಿ ಹಡಗಿಗೆ ಹಾಕಿಸಿದಳು.

ಆ ಮೇಲೆ ಮನೆ ಕೆಲಸ ಜವಾಬ್ದಾರಿಯ ಬಗ್ಗೆ ಮತ್ತು ಅತ್ತೆ ಮಾವಂದಿರ ಉಪಚಾರದ ಸಲುವಾಗಿ ಕೂಲಿ ಜನರನ್ನು ಗೊತ್ತು ಮಾಡಿ, ಮನೆಯ ವ್ಯವಸ್ಥೆಗೆ ನೇಮಿಸಿದಳು. ಮತ್ತು ಅತ್ತೆ ಮಾವಂದಿರ ಹತ್ತಿರ, 'ನನ್ನ ಗಂಡನ ಪತ್ರ ಬಂದಿದೆ; ಒಂದು ಸಲ ಬಂದು ಹೋಗಬೇಕಂತೆ. ನಾನು ಎಂಟು ದಿನಗಳ ಮಾತಿಗೆ ಹೋಗಿ ಬರುತ್ತೇನೆ'ಎಂದು ಹೇಳಿ ಹೊರಟು ಹಡಗಿಗೆ ಬಂದಳು. ಹಡಗಿನ ಹದಿನಾರು ಕೂಲಿಗಳ ಹತ್ತಿರ ಇವಳು ಏನು ಇನ್ನೂ ಮೇಲೆ ನೀವೆಲ್ಲರೂ ನನ್ನನ್ನು ರುಕ್ಮಿಣಿಯಮ್ಮ ಎಂದು ಹೇಳಿ ಕರೆಯಬಾರದು. 'ಸಣ್ಣ ಸಾವುಕಾರರೇ', ಎಂದು ಹೇಳಬೇಕು. ನಾನು ಗಂಡು ಡ್ರೆಸ್ ಮಾಡಿಕೊಳ್ಳುತ್ತೇನೆ. ನಾನು ಹೆಣ್ಣಾಳೆಂಬ ಮಾತು ಒಂದೇ ಒಂದು ಬಾರಿಯೂ ಬರಬಾರದು. ನನ್ನ ಗುಟ್ಟೇನಿದೆಯೋ ಇನ್ನು ಒಬ್ಬ ಮನುಷ್ಯ ವ್ಯಕ್ತಿಗೂ ಹೇಳಬಾರದು. ಮೇಲಾಗಿ, ನಿಮ್ಮ ಪಗಾರು ಈಗ ದಿನಕ್ಕೆ ರೂಪಾಯಿ ಇದ್ದರೆ, ಡಬಲ್ ಪಗಾರ ಕೊಡುತ್ತೇನೆ' ಎಂದು ಹೇಳಿ ಅಪ್ಪಣೆ ಮಾಡಿದಳು.

ಆ ಮೇಲೆ ಅಲ್ಲಿಂದ ಹಡಗು ಹೊರಟಿತು. ಎಷ್ಟೋ ದೂರ ಬಂದ ಮೇಲೆ, ಆ ಸಮುದ್ರದ ಅಂಚಿಗೆ ಒಂದು ಮಾರುತಿ ದೇವಸ್ಥಾನವಿತ್ತು. ಅಲ್ಲಿ ಬಂದು ಹಡಗು ತಲುಪಿತು. ಆ ದೇವಸ್ಥಾನಕ್ಕೆ ಹೋಗಿ ನಮ್ಮ ಸಣ್ಣ ಸಾವುಕಾರರು ಪ್ರಾರ್ಥನೆ ಮಾಡಿಕೊಂಡರು. ಆಮೇಲೆ ಅಲ್ಲಿಯ ಅರ್ಚಕರ ಹತ್ತಿರ, ನಮ್ಮ ದೇವಸ್ಥಾನದಲ್ಲಿ ಅಮೂಲ್ಯವಾದ ವಸ್ತು ಯಾವುದಾದರೂ ಇದೆಯೋ ಹ್ಯಾಗೆ'? ಎಂದು ಕೇಳಿದಳು. ಆಗ ಆ ಅರ್ಚಕರು ಹೇಳಿದರು. 'ಅಮೂಲ್ಯವಾದ ವಸ್ತು ಎಂದರೆ ಒಂದು ಆಟದ ಮೇಳವಿದೆ. ಮನುಷ್ಯವರ್ಗದ್ದಲ್ಲ ಅದು. ಪೂರ್ಣ ಮಂಗಗಳೇ ಬಿಳಿ ಮಂಗಗಳು ಆ ಮೇಳದಲ್ಲಿವೆ. ಆ ಮಂಗಗಳೇ; ವೇಷ ಹಾಕಿಕೊಂಡು ದಶಾವತಾರ ಆಟಗಳನ್ನು ಕುಣಿಯುತ್ತವೆ. ಇದೊಂದು ಆಟದ ಮೇಳದ ಹೊರತಾಗಿ, ಅಮೂಲ್ಯವಾದದ್ದು ಮತ್ತೆ ಯಾವುದೂ ಕಾಣುವುದಿಲ್ಲ'.

'ಹಾಗಿದ್ದರೆ, ಆ ಮೇಳವನ್ನು ನನ್ನ ಸಂಗಡ ಕಳಿಸುವಿರೋ ಹೇಗೆ? ದಿನಾಲು ಏನು ಪಗಾರು ಕೊಡಬೇಕು? ಅಥವಾ ಒಂದೊಂದು ಆಟಕ್ಕೆ ಏನು ಕೊಡಬೇಕು?' ಎಂದು ಸಣ್ಣ ಸಾವುಕಾರರು ಕೇಳಿದರು. ಅದಕ್ಕೆ ಅರ್ಚಕರು, 'ದಿನ ಪಗಾರವೆಂದೇನಲ್ಲ. ಒಂದು ಆಟಕ್ಕೆ ಎಷ್ಟು ಎಂತಲೂ ಅಲ್ಲ. ಒಂದು ತಿಂಗಳಿಗೆ ಮೂರು ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಇಂದು ನೀವು ಕರೆದುಕೊಂಡು ಹೋಗಿ, ೨-೩ ದಿನಗಳಲ್ಲೇ ಹಿಂತಿರುಗಿ

ಕರೆದುಕೊಂಡು ತಂದುಬಿಟ್ಟರೂ ಸಹಾ ಒಂದು ತಿಂಗಳ ಪಗಾರ ಕೊಡಬೇಕಾಗುತ್ತದೆ. ಹೀಗೆ ತಿಂಗಳ ಪಗಾರ ಲೆಕ್ಕ ಕೊಡಬೇಕು. ಎರಡು ಸಾವಿರ ರೂಪಾಯಿ ಮುಂಗಡ ಕೊಡಬೇಕು. ಹಾಗಿದ್ದರೆ ಕಳಿಸಿಕೊಡಲಿಕ್ಕೆ ಅಡ್ಡಿಯಿಲ್ಲ. ಆಟವನ್ನು ಮಾತ್ರ ಅಪೂರ್ವವಾಗಿ ಮಾಡುತ್ತಾರೆ. ಯಾವುದೇ ಆಖ್ಯಾನವನ್ನು ಹೇಳಿದರೂ ಅವರು ಮಾಡುತ್ತಾರೆ' ಎಂದು ಹೇಳಿದರು.

ಅದಕ್ಕೆ ಒಪ್ಪಿಕೊಂಡು ಸಣ್ಣ ಸಾವುಕಾರರು ಅರ್ಚಕರಿಗೆ ಎರಡು ಸಾವಿರ ರೂಪಾಯಿ ಮುಂಗಡ ಕೊಟ್ಟರು. ಆ ಮೇಳದ ಮಂಗಜಾತಿಯ ಜನಗಳನ್ನೆಲ್ಲ ಕರೆಸಿ, ಅವರ ಹತ್ತಿರ ಎಲ್ಲ ವಿಷಯ ತಿಳಿಸಿದರು. ಆ ಮೇಲೆ ಎಲ್ಲರೂ ಸೇರಿ ಹಡಗಿಗೆ ಬಂದರು. ಆ ಮೇಲೆ ಹೊರಟ ಹಡಗು ನೇರವಾಗಿ ಈ ಬಂಗಾರವತಿ ಸೂಳೆಯ ರಾಜ್ಯಕ್ಕೆ ಬಂದು ತಲುಪಿತು. ತಲ್ಪಿದ ಕೂಡಲೇ ಒಸಗೆಯ ಕೋವಿಯನ್ನು ಹೊಡೆಸಿ, ಆ ಊರ ಜನರಿಗೆ ತಿಳಿಯುವ ಹಾಗೆ ಶಂಖನಾದ ಮಾಡಿದರು.

ಇದನ್ನು ಕೇಳಿದ ಬಂಗಾರವತಿ ವೇಶ್ಯೆಯೂ ಅವಳ ಸ್ನೇಹಿತರೂ ಎಲ್ಲರೂ ಸೇರಿಕೊಂಡು ಹಡಗಿಗೆ ಬಂದರು. ಬಂದವರು, 'ಯಾವೂರಾಯಿತು ನಿಮಗೆ? ಏನು ಸಮಾಚಾರ? ಮತ್ತೆ ಹಡಗಿನಲ್ಲಿ ಏನೇನು ಸಾಮಾನು ಬಂದಿದೆ?' ಎಂದೆಲ್ಲ ಕೇಳಿದರು.

ಸಣ್ಣ ಸಾಹುಕಾರರು, 'ನಾವೇನು ಕಾಳುಕಡಿ ಸಾಮಾನು ಇತ್ಯಾದಿ ವ್ಯಾಪಾರದವರಲ್ಲ. ನಮ್ಮದೊಂದು ದಶಾವತಾರದ ಮೇಳವಿದೆ. ತಿಂಗಳು, ಎರಡು ತಿಂಗಳು ದಶಾವತಾರ ಮಾಡಿಕೊಂಡು ಪಾವತಿಯಾದ ಹಣವನ್ನು ತೆಗೆದುಕೊಂಡು, ನಮ್ಮ ದಾರಿಯನ್ನು ನಾವು ನೋಡುವವರು' ಎಂದರು.

'ದಶಾವತಾರ ಮೇಳವೆಂದು ನೀವು ಹೇಳುತ್ತೀರಿ. ಆದರೆ ಸಾವುಕಾರರೇ, ನಿಮ್ಮ ಹಡಗಿನಲ್ಲಿ ಆ ಜನರು ಮಾತ್ರ ಕಾಣುವುದಿಲ್ಲ. ದಶಾವತಾರದ ಮೇಳದವರು ಯಾರ್‍ರೀ ಅವರು?' ಬಂಗಾರವತಿ ಕೇಳಿದಳು.

ಆಗ ಸಣ್ಣ ಸಾವುಕಾರರು, 'ದಶಾವತಾರದ ಮೇಳದವರೆಂದರೆ, ನಮ್ಮ ಮನುಷ್ಯ ಜನರಲ್ಲ. ಅವರೆಲ್ಲರೂ ಮಂಗನ ಜಾತಿಯವರು. ಆದಿಯಿಂದ ಅಂತ್ಯದವರೆಗೂ ದಶಾವತಾರದಲ್ಲಿ ಕೆಲಸ ಮಾಡುವವರು ಪೂರಾ ಮಂಗಗಳೇ. ಮತ್ತು ನಮ್ಮ ಕಡೆಗೆ ಅವರು ಬಹಳ ಹೆಸರುವಾಸಿಯಾಗಿದ್ದಾರೆ' ಎಂದು ಹೇಳಿದರು.

'ಹಾಗಾದರೆ ಇವತ್ತೇ ಒಂದು ಆಟ ಆಡಿಸಿ ಬಿಡಿ. ಒಂದು ಆಟಕ್ಕೆ ಏನು ಕೊಡಬೇಕು ಎಂದು ಹೇಳುವುದಕ್ಕೇನು ತೊಂದರೆಯಿಲ್ಲ'.

'ಒಂದೇ ಆಟ ಆಡಿಸುವುದಕ್ಕಾದರೂ, ನಾವು, ಕಮ್ಮಿ ಎಂದರೆ, ಸಾವಿರದ ಒಂದು ರೂಪಾಯಿಗಳಿಗಿಂತ ಕಡಿಮೆಯಾದರೆ ಆಟವನ್ನೇ ಆಡುವುದಿಲ್ಲ. ಇನ್ನು ದೊಡ್ಡ ಆಖ್ಯಾನವಾದರೆ, ಎಂಟು ಗಂಟೆ ರಾತ್ರಿಯಿಂದ ಬೆಳಗಿನವರೆಗೆ ಆಡುವುದಿದ್ದರೆ, ಎರಡು ಸಾವಿರದ ಐದು ರೂಪಾಯಿ ಆಗುತ್ತದೆ -ಹೀಗೆ ಎರಡು ರೀತಿ ಉಂಟು'.

'ಹಾಗಿದ್ದರೆ, ಇವತ್ತು ನಮ್ಮೂರಿನಲ್ಲಿ ನಾನು ಒಂದು ಆಟ ಆಡಿಸುತ್ತೇನೆ. ನೀವು ಬಾಕಿ ಏರ್ಪಾಟು ಮಾಡಿಕೊಳ್ಳಲಿಕ್ಕೆ ತೊಂದರೆಯಿಲ್ಲ' ಎಂದು ಬಂಗಾರವತಿ ಹೇಳಿದಳು. 'ಏನಡ್ಡಿಯಿಲ್ಲ, ನಾವು ಆ ಬಗ್ಗೆಯೇ ಬಂದವರು' ಎಂದು ಒಪ್ಪಿಕೊಂಡು ಥಿಯೇಟರು ತಯಾರ ಮಾಡಿಸಿದರು.

ಬಂಗಾರವತಿಯು ಬಹಳ ಕಡೆಗೆ ಈ ಮಂಗಗಳ ದಶಾವತಾರದ ಆಟದ ವರ್ತಮಾನವನ್ನು ತಿಳಿಸಿದ್ದಳು. ಆ ದಿನದ ಆಖ್ಯಾನವೆಂದರೆ, 'ಮಾರುತೀಪ್ರತಾಪ' ಅದು ಎಷ್ಟು ಚಲೋ ರೀತಿಯಿಂದ ನಡೆಯಬೇಕೋ ಅಷ್ಟು ಚಲೋ ರೀತಿಯಿಂದ ನಡೆಯಿತು. ಪ್ರೇಕ್ಷಕರು, ಬಾಲ್ಯದವರಿಂದ ಹಿಡಿದು ವೃದ್ಧಾಪ್ಯದವರೆಗಿನ ಜನರೂ, 'ಇಂಥ ಮಂಗಗಳು ಮಾಡುವ ದಶಾವತಾರ ಆಟವನ್ನು ಈ ಹಿಂದೆ ನೋಡಿದ್ದಿಲ್ಲ. ಇನ್ನು ಮುಂದೆ ನೋಡುವೆವೋ ಇಲ್ಲವೋ' ಎಂದು ಆಶ್ಚರ್ಯದಿಂದ ಹೊಗಳಿದರು.

ಮಾರನೆದಿನ ಬಂಗಾರವತಿ ಆಟಕ್ಕೆ ಬಂದಿದ್ದ ತನ್ನ ಆಪ್ತೇಷ್ಟರನ್ನೆಲ್ಲಾ ಕರೆಸಿಕೊಂಡು 'ನಮ್ಮೂರಿಗೆ ಬಂದ ದಶಾವತಾರ ಮೇಳದವರು ದಶಾವತಾರದ ಕೆಲಸದ ಮಟ್ಟಿಗೆ ಏನು ಕೆಲಸ ಮಾಡುತ್ತಾರೆ! ನನಗಂತೂ 'ಇನ್ನೂ ನೋಡೋಣ; ಮತ್ತೂ ನೋಡೋಣ ಎಂದು ಕಾಣುತ್ತದೆ. ನೋಡಿದರೆ ಮಂಗ ಜಾತಿ, ನಮ್ಮ ಮನುಷ್ಯ ಜಾತಿಯ ಹತ್ತಿರ ಸಾಧ್ಯವಿಲ್ಲ. ಆ ರೀತಿ ಹಾವ-ಭಾವ, ಕುಣಿತ, ಪದ್ಯಗಳ ಹಾಡುಗಾರಿಕೆ ಅಲ್ಲದೆ ಮಾತಿನ ಚಟುವಟಿಕೆಗಳನ್ನು ತೋರಿಸಲಿಕ್ಕೆ ಅವಶ್ಯಕವೇ ಸರಿ. ನೀವು ಮೊದಲು ಇಂಥ ಆಟವನ್ನು ನೋಡಿದ್ದೀರೋ? ನಾನಂತೂ ಎಲ್ಲಿಯೂ ನೋಡಲಿಲ್ಲ' ಎಂದಳು. ಆಪ್ತೇಷ್ಟರು, ನಾವು ನೋಡಿರಲಿಲ್ಲ, 'ನಾವು ನೋಡಿದ್ದು ಈಗಲೇ' ಎಂದು ಹೇಳಿದರು.

ಗಂಪಶೆಟ್ಟರು, 'ನಾನೊಂದು ಆಖ್ಯಾನ ಆಡಿಸಿ ಬಿಡುತ್ತೇನೆ. ದೂರ ದೂರದವರಿಗೆಲ್ಲಾ ವರ್ತಮಾನ ಕಳಿಸಬೇಕು. ನಾಳೆಗೆ ಆಡಿಸಿದರಾಯಿತು. ಚಲೋ ದೊಡ್ಡ ಕತೆಯನ್ನು ಆಡಿಸಬೇಕು' ಎಂದರು. ಬಂಗಾರವತಿಯು, 'ದೊಡ್ಡ ಕತೆ ಎಂದರೆ, ಎರಡು ಸಾವಿರದ ಐದು ರೂಪಾಯಿ ವೀಳ್ಯ. ಅದನ್ನು ಕೇಳಿ ಕೊಂಡಿದ್ದೀರೋ?' ಎಂದು ಕೇಳಿದಳು. 'ಎರಡು ಸಾವಿರದ ಐದಾದರೆ ಐದು- ಇರಲಿ ಬಿಡಿ' ಎಂದು ಗಂಪಶೆಟ್ಟರು ಹೇಳಿದರು. ಮರುದಿನದ ಆಟ ಆಡುವುದಕ್ಕೆ ಮಾತಾಡಿಕೊಂಡು ನಿಶ್ಚಯ ಮಾಡಿದರು. ಸಣ್ಣ ಸಾವುಕಾರರು, 'ಯಾವ ಆಟ ಆಡಬೇಕು?' ಎಂದು ಕೇಳಿದರು. 'ಭಾರತದ ಶ್ರೀಕೃಷ್ಣಸಂಧಾನ' ಮತ್ತು 'ಭೀಷ್ಮವಿಜಯ' ಇವೆರಡೂ ಆಖ್ಯಾನ ಆಡಬೇಕು. ಎಂದು ಗಂಪಶೆಟ್ಟರು ಹೇಳಿದರು. 'ಏನೂ ಪರವಾಯಿಲ್ಲ' ಎಂದು ಸಣ್ಣ ಸಾವುಕಾರರು ಒಪ್ಪಿದರು. ಅವರೆಲ್ಲಾ ತಂತಮ್ಮ ಮನೆಗೆ ಹೋದರು.

ಆಟದ ವರ್ತಮಾನವನ್ನು ಎಲ್ಲ ಕಡೆಗೆ ಕಳಿಸಿದರು. ಎಂಟು ದಿಕ್ಕುಗಳಿಂದಲೂ ಆ ಹೊತ್ತಿನ ದಶಾವತಾರಕ್ಕೆ ಜನರು ಬಂದು ಸೇರಿದರು. ಆ ಎರಡೂ ಆಖ್ಯಾನಗಳನ್ನು ಸಾಂಗವಾಗಿ ಬೆಳತನಕ ಆಡಿ ತೋರಿಸಿದರು. ಅದನ್ನು ನೋಡಿದ ಸಾವಿರಾರು ಜನರು, ಬಹಳ ಚಲೋ ಆಯಿತು. ಮನುಷ್ಯ ವರ್ಗದಲ್ಲಿ ಈ ರೀತಿ ಕೆಲಸ ಮಾಡಿ ಎಲ್ಲರಿಗೂ ತೃಪ್ತಿ ಮಾಡಿಸಲಿಕ್ಕೆ ಸಾಧ್ಯವಿಲ್ಲ, ಅಂಥ ಕೆಲಸವನ್ನು ಈ ಕೋತಿಯ ಜಾತಿಯಾದರೂ ಮಾಡಿ ತೋರಿಸಿತು ಎಂದು ಹೇಳಿದರು. ಬಹಳ ಜನರು ಮೇಳದ ಮುಖ್ಯ ಮುಖ್ಯ ಪಾತ್ರಗಳನ್ನು ವಹಿಸಿದ ಮಂಗಗಳಿಗೆ ಬಹುಮಾನಗಳನ್ನು ಹಂಚಿದರು.

ಅಂದಿನ ಆಖ್ಯಾನ ಮುಗಿದ ಒಂದೆರಡು ದಿವಸಗಳ ಅನಂತರ, ಸಣ್ಣ ಸಾಹುಕಾರರ ಹಡಗಿಗೆ ಬಂಗಾರವತಿ ಸೂಳೆಯೂ ಆ ಊರ ಪಟೇಲರೂ, ಗಂಪಶೆಟ್ಟರೂ, ಶಾಸ್ತ್ರಿಯವರೂ ಎಲ್ಲ ಸೇರಿ ಬಂದರು. ಸಣ್ಣ ಸಾವುಕಾರರ

ಹತ್ತಿರ ಮಾತನಾಡುತ್ತ ಕುಳಿತವರು ಒಮ್ಮೆಲೇ, 'ನೋಡಿ, ಈ ನಿಮ್ಮ ಹಡಗಿನಲ್ಲಿ ದೊಡ್ಡ ದೊಡ್ಡ ಪೆಟ್ಟಿಗೆಗಳು ಕಾಣುತ್ತವೆ. ಇವುಗಳಲ್ಲಿ ಯಾವ ಮಾಲುಗಳಿವೆ! ಏನನ್ನು ತುಂಬಿಟ್ಟಿದ್ದೀರಿ?' ಎಂದು ಕೇಳಿದರು.

'ಪೆಟ್ಟಿಗೆಗಳು ದೇವರ ಪೆಟ್ಟಿಗೆಗಳು ನಮಗೇನಾದರೂ ಹಣದ ಅನಾನುಕೂಲ ಆದ ಹೊತ್ತಿನಲ್ಲಿ ಭಕ್ತಿ ಭಾವದಿಂದ ಐದು ನಿಮಿಷ ಪೂಜೆಯನ್ನು ನೆರವೇರಿಸಿದ ನಂತರ, ನಾವು ಕೇಳುವುದೊಂದೇ ತಡ, ಕೇಳಿದಷ್ಟು ರೂಪಾಯಿಗಳು ಹೊರಗೆ ಬಂದು ತಾವಾಗಿಯೇ ಬೀಳುತ್ತವೆ. ಆ ಪೆಟ್ಟಿಗೆಗಳು ಮೂರು ರೀತಿಯವು; ಉತ್ತಮ, ಮಧ್ಯಮ, ಕನಿಷ್ಠ ಎಂದು ಹೇಳುವ ತೆರದಲ್ಲಿವೆ. ನೋಡಿ, ಈ ಪೆಟ್ಟಿಗೆಯಲ್ಲಿ ಬಹಳ ಶಕ್ತಿಯುಳ್ಳ ದೇವರಿದೆ. ಪೂಜೆಯ ಕೆಲಸವೂ ದೊಡ್ಡ ಪ್ರಮಾಣದ್ದೇ. ಒಂದು ವೇಳೆ ಮೂರು ಸಾವಿರ ರೂಪಾಯಿಗಳನ್ನು ಕೇಳಿದರೂ ಆ ಪೆಟ್ಟಿಗೆಯಿಂದ ಸಿಗುತ್ತದೆ. ಈ ಎರಡನೇ ಪೆಟ್ಟಿಗೆ ಮಧ್ಯಮತರದ್ದು. ಇದರಲ್ಲಿ ಎರಡು ಸಾವಿರ ಸಿಗುತ್ತದೆ. ಇದು ಮೂರನೆಯ ಬಣ್ಣದ್ದು. ಪೂಜೆ-ಪುನಸ್ಕಾರಗಳೂ ಸ್ವಲ್ಪ ಕಡಿಮೆ ಪ್ರಮಾಣದ್ದು. ಒಂದು ಸಾವಿರ ರೂಪಾಯಿಗಳನ್ನು ಈ ಪೆಟ್ಟಿಗೆ ಕೊಡುತ್ತದೆ. ಈ ಪೆಟ್ಟಿಗೆಗಳ ಗುಣವೆಲ್ಲಾ ಹೀಗೆ ಇದ್ದರೂ, ಹಣ ಕೊಡುತ್ತವೆ ಎಂದು ಪ್ರತಿ ದಿನ ಪೂಜೆ ಮಾಡಿ ಹಣ ಕೇಳಿದರೆ ಸಾಧ್ಯವಿಲ್ಲ. ಆ ಹೊತ್ತು ಸಹ ಅಂಥಾದ್ದೇ ಇರಬೇಕಾಗುತ್ತದೆ. ಬೇಡುವವನಿಗೆ ನಿಜವಾಗಿಯೂ ಹಣದ ಅಗತ್ಯ ಇಷ್ಟು ಇರಬೇಕಾಗುತ್ತದೆ. ಅಂದರೆ ಆ ದೇವರಿಗೆ ತಾನೇ ಗೊತ್ತಾಗುತ್ತದೆ' ಎಂದು ಸಣ್ಣ ಸಾವುಕಾರರು ಹೇಳಿದರು. ಅದನ್ನೆಲ್ಲಾ ಕೇಳಿಕೊಂಡು ನಾಲ್ಕು ಜನರೂ ಹಡಗಿನಿಂದ ತಿರುಗಿ ಹೊರಟರು. ದಾರಿಯ ಮೇಲೆ ಬಂಗಾರವತಿಯು ಹೀಗೆ ಆಲೋಚನೆ ಮಾಡಿದಳು. 'ನಮ್ಮೂರಿನಲ್ಲಿ ಯಾವುದಕ್ಕೂ ಕೊರತೆಯಿಲ್ಲ. ಇಂಥ ಒಳ್ಳೆಯ ವಸ್ತುಗಳು ನಮ್ಮ ಆಪ್ತೇಷ್ಟರ ಮನೆಯಲ್ಲಿದ್ದರೆ ನಮ್ಮ ಮನೆಯಲ್ಲಿ ಇದ್ದ ಹಾಗೆಯೇ. ಇದರಿಂದ ನಮ್ಮ ಆಪ್ತೇಷ್ಟರಿಗೆ ಇವನ್ನು ಕೊಡಿಸಲೇಬೇಕು' ಹೀಗೆ ಮನಸ್ಸಿನಲ್ಲಿ ನಿರ್ಧಾರ ಮಾಡಿದಳು.

ಶಾಸ್ತ್ರಿಯವರು ಆ ಊರಿನ ದೊಡ್ಡ ಶ್ರೀಮಂತರು. ಅವರ ಹತ್ತಿರ ಅವಳು ಹೇಳಿದಳು 'ನೋಡಿ ಶಾಸ್ತ್ರಿಯವರೆ, ಆ ಉತ್ತಮ ಪೆಟ್ಟಿಗೆ ಎನ್ನುವುದನ್ನು ನೀವು ತಕ್ಕೊಳ್ಳಬೇಕು. ಯಾಕೆಂದರೆ, ಅದನ್ನು ಭಕ್ತಿಯಿಂದ ಪೂಜೆ ಮಾಡಬೇಕಂತೆ. ಅದು ಬಹಳ ಶಕ್ತಿಯುಳ್ಳ ದೇವರಂತೆ-ಹಾಗಾಗಿ, ನೀವೇ ತೆಗೆದುಕೊಂಡರೆ, ಯಾವ ಹೊತ್ತಿಗೂ ಪೂಜೆ ನಡೆಯುತ್ತದೆ. ಬೇಕಾದ ವೇಳೆಗೆ ಸರಿಯಾಗಿ ಹಣಕಾಸಿಗೂ ತೊಂದರೆಯಾಗುವುದಿಲ್ಲ. ನಿಮಗೆ ಅದರ ಹಡಂಗಿದೆ. (ಹಡಂಗ: ಯೋಗ್ಯತೆ) ಎಂದು ಹೇಳಿ ದೊಡ್ಡ ಶೆಟ್ಟರ ಹತ್ತಿರ ಹೇಳಿದಳು., 'ಶೆಟ್ಟರೇ, ಆ ಮಧ್ಯಮ ತರಗತಿಯ ಪೆಟ್ಟಿಗೆಯೆಂದರೆಲ್ಲಾ ಸಣ್ಣ ಸಾವುಕಾರರು? ಆ ಪೆಟ್ಟಿಗೆಯನ್ನು ನೀವು ಖರೀದಿ ಮಾಡಬೇಕು. ಯಾವ ಸಮಯ ಹೇಗೆ ಬರುತ್ತದೆಯೆಂದು ಹೇಳಲಿಕ್ಕಾಗುವುದಿಲ್ಲ. ಒಂದು ಸಮಯದಲ್ಲಿ ಹಣದ ತೊಂದರೆಯೂ ಆಗಬಹುದು. ಆಗ ಪೂಜೆ ಮಾಡಿಕೊಂಡು ಹೇಳಿಕೆ ಮಾಡಿಕೊಂಡರೆ ತೊಂದರೆಯನ್ನು ಪೂರೈಸಿಕೊಳ್ಳಬಹುದು. ನೀವು ಅದನ್ನು ತಗೊಳ್ಳಲೇ ಬೇಕು' ಎಂದಳು.

ಮೂರನೆಯದಾಗಿ, ಪಟೇಲರ ಹತ್ತಿರ, 'ಪಟೇಲರೇ, ನೋಡಿ; ಇನ್ನೊಂದು ಪೆಟ್ಟಿಗೆಯಿದೆಯಲ್ಲಾ? ಅದನ್ನು ನೀವು ತೆಗೆದುಕೊಳ್ಳಬೇಕು. ಒಳ್ಳೇ ವಸ್ತು ಮನೆಯಲ್ಲಿ ಉಳಿಯುತ್ತದೆ. ಹಣದ ತೊಂದರೆಯೂ ಪೂರೈಸುತ್ತದೆ'

ಎಂದು ಹೇಳಿ ಅವರನ್ನು ಒಪ್ಪಿಸಿದಳು. ಆ ಊರಿನಲ್ಲಿ ಬಂಗಾರವತಿಯ ಮಾತನ್ನು ಮೀರುವವರು ಯಾರೂ ಇರಲಿಲ್ಲ.

ಮರುದಿನ ಈ ಆಪ್ತೇಷ್ಟರೆಲ್ಲಾ ಸೇರಿ, 'ಈ ಹೊತ್ತು ಹಡಗಿಗೆ ಹೋಗಬೇಕು; ಸಾವುಕಾರರ ಹತ್ತಿರ ಆ ಪೆಟ್ಟಿಗೆಯ ವಿಕ್ರಯದ ರಕಂ ಏನು ಎಂದು ಕೇಳಿಕೊಂಡು ಬರಬೇಕು' ಎಂದು ಆಲೋಚನೆ ಮಾಡಿ ಹೊರಟರು. ದಾರಿಯಲ್ಲಿ ಬರುವಾಗ, 'ನೋಡಿ, ಸ್ವಲ್ಪ ಹೆಚ್ಚು ಕಡಿಮೆ ದರ ಹೇಳಿದರೂ ವ್ಯಾಪಾರವನ್ನು ಮಾತ್ರ ಬಿಡಬಾರದು, ನೋಡಿ, ಮೊದಲೇ ನಾನು ತಿಳಿಸಿ ಬಿಡುತ್ತೇನೆ. ನಾನಾಡಿದ್ದಕ್ಕೆ ಯಾರೂ ತಪ್ಪುವಹಾಗಿಲ್ಲ. ನಾನೆಲ್ಲಾ ಆಡಿ ಮುಗಿಸಿ ಬಿಡುತ್ತೇನೆ' ಹೀಗೆ ಬಂಗಾರವತಿ ಹೇಳಿದ್ದಳು.

ಎಲ್ಲರೂ ಸೇರಿ ಹಡಗಿಗೆ ಬಂದರು. ಆ ಮೇಲೆ ಇವರಿವರೊಳಗೆ ಬಹಳಷ್ಟು ಮಾತುಕತೆ ನಡೆಯಿತು. ಕೊನೆಗೆ ಸಣ್ಣ ಸಾವುಕಾರರ ಹತ್ತಿರ 'ಹೌದ್ರೀ, ನಿನ್ನೆ ನೀವು ಆ ಪೆಟ್ಟಿಗೆಗಳ ಗುಣಧರ್ಮವನ್ನು ಎಲ್ಲಾ ಹೇಳಿದ್ದೀರಿ. ಒಂದೊಂದು ಪೆಟ್ಟಿಗೆಯ ವಿಕ್ರಯದ ರಕಮನ್ನು ಮಾತ್ರ ಹೇಳಲಿಲ್ಲ. ಆ ವಿಷಯ ತಿಳಿದುಕೊಂಡು ಹೋಗ ಬೇಕೆಂದು ನಾವು ಬಂದಿದ್ದೇವೆ' ಎಂದು ಬಂಗಾರವತಿ ಹೇಳಿದಳು.

ಆಗ ಸಣ್ಣ ಸಾವುಕಾರರು. 'ಹೌದ್ರೀ, ಆ ಉತ್ತಮ ಪೆಟ್ಟಿಗೆಗೆ ನಾಲ್ಕು ಸಾವಿರದ ಒಂದು ರೂಪಾಯಿ ದರವಾಗುತ್ತದೆ. ಇನ್ನು ಎರಡನೇ ಪೆಟ್ಟಿಗೆಗೆ ಮೂರು ಸಾವಿರದ ಐದು ರೂಪಾಯಿ ಆಗುತ್ತದೆ. ಮೂರನೆಯ ಪೆಟ್ಟಿಗೆಯ ದರ ಎರಡು ಸಾವಿರದ ಒಂದು ರೂಪಾಯಿ' ಎಂದು ಹೇಳಿದರು.

ಆ ಮಾತು ಕೇಳಿದ ಬಂಗಾರವತಿ, 'ನಮ್ಮ ಈ ಶಾಸ್ತ್ರಿಯವರಿಗೆ ನಾಲ್ಕು ಸಾವಿರದ ಐದು ರೂಪಾಯಿಗಳ ಈ ಪೆಟ್ಟಿಗೆಯನ್ನು ಕೊಡಿ. ಎರಡನೆಯದಾಗಿ ಮೂರು ಸಾವಿರದ ಐದು ರೂಪಾಯಿಗಳ ಈ ಪೆಟ್ಟಿಗೆಯನ್ನು ನಮ್ಮ ದೊಡ್ಡ ಶೆಟ್ಟರಿಗೆ ಕೊಡಿ. ಉಳಿದ ಒಂದು ಪೆಟ್ಟಿಗೆಯನ್ನ ನಮ್ಮೂರ ಪಟೇಲರಿಗೆ ಕೊಡಿ; ಅಲ್ಲದೇ, ನಿನ್ನೆ ನೀವು ಹೇಳಿದಂತೆ ನಮ್ಮ ಇದಿರಿನಲ್ಲೇ, ಆ ಪೂಜೆಯನ್ನು ಯಾವ ರೀತಿ ಮಾಡಬೇಕು ಯಾವರೀತಿಯಿಂದ ದೇವರ ಹತ್ತಿರ ಕೇಳಿಕೊಳ್ಳಬೇಕು. ಇದನ್ನೆಲ್ಲ ನಮ್ಮ ಪ್ರತ್ಯಕ್ಷದಲ್ಲಿ ತೋರಿಸಿಬಿಡಿ. ಆ ಮೇಲೆ ನಾಳಿನ ದಿವಸ ನಮ್ಮ ಹಣವನ್ನು ನೀವು ಎಣಿಸಿಕೊಂಡು ಆ ಪೆಟ್ಟಿಗೆಗಳನ್ನು ಬಿಟ್ಟುಕೊಡಬಹುದು ಎಂದು ಹೇಳಿದಳು.

ಸಣ್ಣ ಸಾವುಕಾರರು, 'ನೀವೆಲ್ಲರೂ ಬಂದವರೇ, ಇದ್ದೀರಿ. ನಿಮ್ಮ ಎದುರಿನಲ್ಲೇ ಈ ಪೆಟ್ಟಿಗೆಗಳ ನಿಜವಾದ ಗುಣಧರ್ಮವನ್ನು ತೋರಿಸುತ್ತೇನೆ. ಸ್ವಲ್ಪ ನಿಲ್ಲಿ' ಎಂದು ಹೇಳಿ, ಮೊದಲನೆಯ ಪೆಟ್ಟಿಗೆಯ ಪೂಜೆ ಮಾಡಿ, 'ಮೂರು ಸಾವಿರದ ಐದು ರೂಪಾಯಿಗಳನ್ನು ಎಣಿಸಿ ಒಗೆಯುವ ಕೃಪೆಯಾಗಬೇಕು' ಎಂದು ಹೇಳಿದರು. ಮೂರು ಸಾವಿರದ ಐದು ರೂಪಾಯಿಗಳು ಹೊರಗೆ ಬಂದು ಬಿದ್ದವು. ಹೀಗೆ ಮತ್ತೆರಡು ಪೆಟ್ಟಿಗೆಗಳನ್ನೂ ಪೂಜೆ ಮಾಡಿ, ಹಣ ಕೇಳಿದರು. ಬಂದ ಹಣವನ್ನು ಎಣಿಸಿ ತೋರಿಸಿದರು. ಒಂದರಲ್ಲಿಂದ ಎರಡು ಸಾವಿರ, ಇನ್ನೊಂದರಲ್ಲಿ ಒಂದು ಸಾವಿರ ರೂಪಾಯಿಗಳು ಬಂದು ಬಿದ್ದವು ಅದನ್ನು ನೋಡಿದವರೆಲ್ಲಾ ಬಹಳ ಆಶ್ಚರ್ಯವನ್ನೂ, ಸಂತೋಷವನ್ನೂ ಹೊಂದಿದರು. ಆಮೇಲೆ ತಮ್ಮ ತಮ್ಮ ಮನೆಗೆ ಅವರು ಹೊರಟು ಹೋದರು.

ಮಾರನೇ ದಿನ ಅವರೆಲ್ಲರೂ ಬಂದು ಪೆಟ್ಟಿಗೆಗಳಿಗೆ ನಿಕ್ಕಿಮಾಡಿದ ರಕಂಕೊಟ್ಟು ಆ ಪೆಟ್ಟಿಗೆಗಳನ್ನೆಲ್ಲ ಒಯ್ದರು. ಸಣ್ಣ ಸಾವುಕಾರರು ಪೆಟ್ಟಿಗೆ ಒಯ್ಯುವಾಗ, ನೋಡಿ, ಇವತ್ತು ಪೆಟ್ಟಿಗೆ ಒಯ್ದಿದ್ದೇವೆ ಎಂತ ದಿನಾ ದಿನಾ ಪೂಜೆ ಮಾಡುವದು, ಹಣ ಕೇಳುವದು ಈ ರೀತಿ ಮಾಡಬೇಡಿ. ನಾಳೆ ಇಂಥ ಮೋಸ ಮಾಡಿದರೆಂದು ನನಗೊಂದು ಮಾತು ತರಬೇಡಿ. ನಿಮಗೆ ನಿಜವಾದ ಅಂಥ ಹೊತ್ತೇ ಬಂದಿರಬೇಕು. ಆ ವೇಳೆಗೆ ಆ ಪೂಜೆ ಮಾಡಿ, ನಿಮ್ಮ ಪ್ರಾರ್ಥನೆ ಮಾಡಿ ಕೇಳಬೇಕು. ಆ ವೇಳೆಗೆ ಕೊಡದಿದ್ದರೆ ನಿಜವಾಗಿ ನಾನು ಮೋಸ ಮಾಡಿದೆನೆಂದು ಆಗುತ್ತದೆ. ಒಮ್ಮೆ ಕೊಡದೆ ಹೋದರೆ, ನೀವು ಪೆಟ್ಟಿಗೆ ಒಡೆದು ನೋಡಲಿಕ್ಕೂ ಅಡ್ಡಿಯಿಲ್ಲ. ಅದರೊಳಗೆ ಮಾತ್ರ ನೀವು ಪೆಟ್ಟಿಗೆ ಒಡೆಯಬೇಡಿ' ಎಂದು ಹೇಳಿದರು.

ಅದಕ್ಕೆಲ್ಲಾ ಒಪ್ಪಿಕೊಂಡು ಪೆಟ್ಟಿಗೆಗಳನ್ನು ಒಯ್ದವರು ನಾಲ್ಕು ದಿನಗಳ ಅನಂತರ ಬಂಗಾರವತಿಯ ಮನೆಯಲ್ಲಿ ಅವಳ ಮಿತ್ರರೆಲ್ಲಾ ಕೂಡಿ ಮಾತುಕತೆ ನಡೆಸಿದರು. ಏನೆಂದರೆ, 'ನಮ್ಮೂರ ವೈಶಿಷ್ಟ್ಯ ಎಂದರೆ, ಇದುವರೆಗೂ ಒಂದೇ ಒಂದು ಕಾಸು ಹೊರಗೆ ಹೋಗಲು ಕೊಡದೆ' ನಾವು ಈ ದಿವಸದ ವರೆಗೂ ನೋಡುತ್ತ ಬಂದಿದ್ದೇವೆ. ಆದರೆ ಈ ಸಲ ಅದರ ವಿರುದ್ಧವಾಗಿ, ಊರಿಗೆ ಊರನ್ನೇ ಈ ಸಾವುಕಾರನಿಗೆ ಕೊಟ್ಟು ಕೈಮುಗಿಯಬೇಕಾಗುವದೋ ಏನೋ, ಏನಿದ್ದಿರಬಹುದು ಇದರ ಮಹತ್ತು. ಯಾಕೆಂದರೆ, ಮೊದಲನೆಯದಾಗಿ, ಅವನ ಆಟದ ಮಂಗಗಳ ಕುಣಿತವಾಯಿತು. ಎರಡನೆಯದಾಗಿ ಮರದ ಪೆಟ್ಟಿಗೆಗಳು, ದೇವರ ಪೆಟ್ಟಿಗೆ ಗಳೆಂದಾಯಿತು. ಇದಿಷ್ಟಕ್ಕೇ ಆದರೂ ಹದಿನೈದಿಪ್ಪತ್ತು ಸಾವಿರ ರೂಪಾಯಿಗಳಾಗಿ ಹೋದವು. ಇನ್ನು ನೇರವಾಗಿ ಅವನು ತನ್ನ ಮನೆಗೆ ಹೋಗುತ್ತಾನೆ. ಈವರೆಗೂ ಇಲ್ಲಿಗೆ ಬಂದವರಲ್ಲಿ ಹಿಂತಿರುಗಿ ಹೋದವರಾರೂ ಯಾರಿದ್ದಾರೆ?' ಇದೇ ರೀತಿ, ಬಹಳ ಮಾತುಕತೆ ನಡೆಯಿತು.

ಆಗ ಗಂಪಶೆಟ್ಟಿ ಹೇಳಿದನು. 'ಇದಕ್ಕೆ ಒಂದು ಉಪಾಯ ಮಾಡಬೇಕು. ಬರೀ ಹೀಗೆ ಬಿಟ್ಟರೆ ಸಾಧ್ಯವಿಲ್ಲ. ಜೂಜಾಟವಾಡಬೇಕು. ಸುರಳೀತ ಸೋಲುತ್ತಾರೆ. ಆ ಹತ್ತಿಪ್ಪತ್ತು ಸಾವಿರ ರೂಪಾಯಿಗಳೂ ಸಿಕ್ಕುತ್ತವೆ. ಹಡಗು, ಸಾವುಕಾರರು ಎಲ್ಲಾ ಸಿಕ್ಕುತ್ತಾರೆ ನೋಡಿ'. ಆಗ ಬಂಗಾರವತಿಯು, 'ನೀವು ಹೇಳುವುದು ಸರಿಯಾದ ಉಪಾಯ. ಆ ಬಗ್ಗೆ ಇಂದು ಹೋಗಿ ಮಾತುಕತೆ ಆಡಿಕೊಂಡು ಬಂದು ಬಿಡೋಣ' ಎಂದಳು. ಅವರೆಲ್ಲಾ ಅದಕ್ಕೆ ಒಪ್ಪಿದರು.

ಅದೇ ದಿವಸ ಮಧ್ಯಾಹ್ನದ ಮೇಲೆ ಇವರೆಲ್ಲ ಸೇರಿ ಹಡಗಿಗೆ ಹೋಗಿ, ಸಣ್ಣ ಸಾವುಕಾರನ ಹತ್ತಿರ ಮಾತುಕತೆ ಪ್ರಾರಂಭಮಾಡಿದರು. 'ನೀವು ಬಂದು ಬಹಳ ದಿನಗಳಾದವು. ದಶಾವತಾರ ಆಟವೂ ಆಯಿತು. ನಿಮ್ಮ ದೇವರ ಪೆಟ್ಟಿಗೆಗಳ ವ್ಯಾಪಾರವೂ ಆಯಿತು. ನಮ್ಮೂರಿನಲ್ಲಿ ಜೂಜಾಟ ಆಡುವ ಸಂಪ್ರದಾಯವಿದೆ. ನಮ್ಮೂರಿಗೆ ಬಂದವರೊಬ್ಬರೂ ಜೂಜಾಟವಾಡದೆ ಹೋಗುವಂತಿಲ್ಲ. ಜೂಜಾಟ ಆಡಿಕೊಂಡು ಆರೆಂಟು ದಿವಸ ಉಳಿದುಕೊಂಡು ಆ ಮೇಲೆ ಹೋಗಬೇಕು.'

ಆಗ ಸಣ್ಣ ಸಾವುಕಾರರು, 'ಏನಡ್ಡಿಯಿಲ್ಲ, ಆ ಬಗ್ಗೆ ಯಾವಾಗ ಏರ್ಪಾಡು ಮಾಡುತ್ತೀರಿ?' ಎಂದು ಕೇಳಿದರು. 'ನಾಳೆ ಮುಂಜಾನೆಯಿಂದ ಸುರುಮಾಡಿಬಿಡೋಣ ಎಂದು ಬಂಗಾರವತಿ ಹೇಳಿದಳು. ಆಗ ಸಣ್ಣ

ಸಾವುಕಾರರು, ನೋಡಿ, ಜೂಜಾಟ ಎಂದರೆ, ಹೀಗೆಯೇ ಆಟದ ಮಜಾಕ್ಕೆ ಆಡುವುದಲ್ಲ. ಪಣ ಇಟ್ಟುಕೊಳ್ಳಬೇಕಾಗುತ್ತದೆ. ಅದಕ್ಕೆ ಲೇಖಿಯನ್ನು ಯಾವಾಗ ಮಾಡಿಕೊಳ್ಳೋಣ? ಎಂದು ಕೇಳಿದರು.

'ಬಂಗಾರವತಿಯು, 'ಈಗಲೇ ಬರೆದು ಮುಗಿಸಿಬಿಡೋಣ' ಎಂದು ಹೇಳಿದಳು. ಆಗ, 'ಜೂಜಿನಲ್ಲಿ ಯಾರೇ ಸೋತರೂ ಅವರ ಸರ್ವಸ್ವವೂ ಗೆದ್ದವರಿಗೆ' ಎಂಬ ಕರಾರನ್ನು ಗೊತ್ತು ಮಾಡಿ, ಸಣ್ಣ ಸಾವುಕಾರರಿಂದ ಬಂಗಾರವತಿ ಸೂಳೆಗೆ ಒಂದು, ಅವಳಿಂದ ಸಣ್ಣ ಸಾವುಕಾರರಿಗೊಂದು ಹೀಗೆ ಸಹಿನಿಶಿ ಲೇಖಿಯನ್ನು ಮಾಡಿಸಿಕೊಟ್ಟರು.

ಮೂರನೇ ದಿವಸ ಜೂಜಾಟಕ್ಕೆ ಸುರುವಾಯಿತು. ಜೂಜಾಟ ಸರಿಯಾಗಿ ಒಂದು ವಾರ ನಡೆಯಿತು. ಕೊನೆಗೆ ಬಂಗಾರವತಿ ಸೋತಳೆಂದಾಯಿತು. ಆಗ ಬಂಗಾರವತಿಯ ಆಪ್ತೇಷ್ಟರೆಲ್ಲ ಸೇರಿದರು. ಅವರು, 'ಬಂಗಾರವತಿ ಸೋಲಲಿಕ್ಕಂತೂ ಸೋತಳು. ಆದರೆ ಅವಳ ಸರ್ವಸ್ವಸೊತ್ತನ್ನೆಲ್ಲಾ ಒಯ್ಯಲಿಕ್ಕೆ ಅಡ್ಡಿಯಿಲ್ಲ, ಆದರೆ ಅವಳ ಖಾಲಿ ಮನೆಯನ್ನೂ ಅವಳನ್ನೂ ಮಾತ್ರ ಬಿಡಬೇಕು' ಎಂದು ಹೇಳಿ, ಅವರೆಲ್ಲಾ ಕ್ಷಮೆಯನ್ನು ಬೇಡಿಕೊಂಡರು. ಸಣ್ಣ ಸಾವುಕಾರರು, 'ನೀವು ಹೇಳಿದ್ದಕ್ಕೆ ಅಡ್ಡಿಯಿಲ್ಲ. ಆದರೆ ನಮ್ಮ ಲೇಖಿಯ ಪ್ರಕಾರ ಬಿಡಲಿಕ್ಕೆ ಬರುವುದಿಲ್ಲವಾಗಿತ್ತು. ನಿಮ್ಮಲ್ಲಿಯ ರೀತಿ ನೀತಿ ನೋಡಿದಾಗ, ಬಹಳ ಅನ್ಯಾಯದ ಹಾಗೇ ಕಾಣುತ್ತದೆ. ಆದರೆ, ಇನ್ನು ಒಂದಾದರೂ ನ್ಯಾಯವಾದ ರೀತಿಯಲ್ಲಿ ನೀವು ನಡೆಸಿಕೊಡಬೇಕು. ಈ ಹಿಂದೆ ಎಷ್ಟೋ ಹಡಗು, ಎಷ್ಟೋ ಸಾವಿರ ಕೂಲಿ ಜನರು, ಎಷ್ಟೋ ವಸ್ತು ಒಡವೆ ಇವನ್ನೆಲ್ಲಾ ಬಂಗಾರವತಿ ವಶಮಾಡಿಕೊಂಡಿದ್ದಾಳೆ. ಅವನ್ನೆಲ್ಲಾ ಹೊರಗೆ ಹಾಕಿ' ಎಂದು ಹೇಳಿದರು.

ಆಗ ಅವರನ್ನೂ ಸಾಮಾನುಗಳನ್ನೂ ಅವರವರು ತಂದ ಹಡಗುಗಳ ಮೇಲೆ ಏರಿಸಿದರು. 'ನೀವು ನಿಮ್ಮ ನಿಮ್ಮ ಸಾಮಾನುಗಳು ನಿಮ್ಮ ಹಡಗುಗಳಲ್ಲಿ ಸರಿಯಾಗಿ ಬಂದಿವೆಯೋ ಏನೆಂದು ನೋಡಿಕೊಳ್ಳಿ' ಎಂದು ಸಣ್ಣ ಸಾವುಕಾರರು ಅವರಿಗೆಲ್ಲ ಹೇಳಿದರು. ಅವರು, 'ನೀವು ನಮಗೆ ಹೊಸ ಸ್ವಾತಂತ್ರ್ಯವನ್ನು ದೊರಕಿಸಿ ಕೊಟ್ಟಿರಿ. ನಮ್ಮ ವಸ್ತು ಒಡವೆಗಳನ್ನು ನಾವು ಕಳೆದುಕೊಂಡರೂ ಅನಾಯಾಸವಾಗಿ ನಮಗೆ ಪುನಃ ದೊರಕಿಸಿ ಕೊಟ್ಟಿರಿ. ನಮ್ಮ ತಂದೆ-ತಾಯಿಗಳು ಮಾಡಿದ್ದಕ್ಕಿಂತ ಹೆಚ್ಚಿನ ಉಪಕಾರ ಮಾಡಿದಿರಿ' ಎಂದು ನಮಸ್ಕಾರ ಮಾಡಿ ಹೊರಟರು.

ತನ್ನ ಗಂಡನು ತಂದ ಹಡಗನ್ನು ತನ್ನ ಹಡಗಿಗೆ ಜಾಯಿಂಟ್ ಮಾಡಿಸಿ, ಬಂದ ಕೂಲಿ ಜನರು ಮತ್ತು ತನ್ನ ಪತಿ ಇವರನ್ನೆಲ್ಲಾ ತನ್ನ ಹಡಗಿಗೆ ತೆಗೆದುಕೊಂಡು, ಸಣ್ಣ ಸಾವುಕಾರರ ವೇಷ ಹೊರಟಿತು. ದಾರಿಯ ಮೇಲೆ ತನ್ನ ಡ್ರೆಸ್ಸನ್ನು ಬದಲು ಮಾಡಿ ಸಣ್ಣ ಸಾವುಕಾರರು ಸ್ತ್ರೀವೇಷವನ್ನು ಹಾಕಿಕೊಂಡರು. ತನ್ನ ಗಂಡನಿಗೆ ನಮಸ್ಕಾರ ಮಾಡಿ, ಹಿಂದಿನಿಂದ ನಡೆದ ಸಂಗತಿಗಳನ್ನೆಲ್ಲಾ ಹೇಳಿ, ತಾನು ಇಂಥಿಂಥ ರೀತಿಗಳಲ್ಲಿ ಕೆಲಸ ಮಾಡಿದೆ. 'ನಿಮ್ಮನ್ನು ನೋಡುವ ಋಣ ನನಗಿತ್ತು. ಆದ್ದರಿಂದ ನಾನು ನಿಮ್ಮ ಪಾದವನ್ನು ಸೇರಿಕೊಂಡೆನು' ಎಂದು ರುಕ್ಮಿಣಿ ಹೇಳಿದಳು.

ಬಂಗಾರವತಿಯು ಹಣ ವಸ್ತು ಒಡವೆಗಳನ್ನೆಲ್ಲಾ ಕಳೆದುಕೊಂಡು, ಬಡತನದಲ್ಲಿ ಇರಲಾರದೆ, ಶಾಸ್ತ್ರಿಯವರ ಮನೆಗೆ ಬಂದು, 'ನಿಮ್ಮ ದೇವರ ಪೆಟ್ಟಿಗೆಯನ್ನು ಪೂಜೆ ಮಾಡಿ, ದೇವರ ಹತ್ತಿರ ಹಣವನ್ನು ಕೇಳಿಕೊಂಡು ನನಗೆ ಸಾವಿರ ರೂಪಾಯಿ ಕೊಡಿ' ಎಂದು ಬೇಡಿಕೊಂಡಳು. ಅವರು ದೇವರ ಪೂಜೆ ಮಾಡಿ, ಹಣ ಕೇಳಿಕೊಂಡರು, ಹಣ ಬರಲಿಲ್ಲ. ಬಾಯಿ ಬಡಿದುಕೊಂಡರೂ ಹಣ ಸಿಗಲಿಲ್ಲ. ಹಾಗೆಯೇ ಪೆಟ್ಟಿಗೆ ಒಡೆದು ನೋಡಲಾಗಿ, ಒಳಗೆ ಇರುವ ವಸ್ತು ಎಂದರೆ, ಅವರದೇ ಆದ ಮಗ. ಆ ಮಗ ಸೊರಗಿ ಹೋಗಿದ್ದನು. ಅವನಿಗೆ ವೈದ್ಯರಿಂದ ಯೋಗ್ಯ ಉಪಚಾರ ಮಾಡಿದರು.

ಆನಂತರ ಗಂಪಶೆಟ್ಟರ ಪೆಟ್ಟಿಗೆಯನ್ನೂ ಇದೇ ರೀತಿ, ಪೂಜೆ ಮಾಡಿ ಕೇಳಿಕೊಂಡರೂ ಹಣ ಸಿಗದೆ, ಪೆಟ್ಟಿಗೆ ಒಡೆದು ನೋಡಿದರೆ ಅವರದೇ ಮಗ; ಅವರೂ ಇದೇ ರೀತಿ ಮಗನಿಗೆ ಉಪಚಾರ ಮಾಡಿದರು.

ಪಟೇಲರು ಒಂದು ದಿನ ಪೂಜೆಮಾಡಿ ಹಣ ಸಿಗದೆ ಹೋದಾಗ ಪೆಟ್ಟಿಗೆಯನ್ನು ಒಡೆದು ನೋಡಿದರು. ಅವರದೇ ಮಗ; ಅವನಿಗೂ ಉಪಚಾರ ಮಾಡಿಸಿ, ಅವನ ಹತ್ತಿರ ಆದ ಸಂಗತಿಯನ್ನು ಕೇಳಿದರು. ಆ ಮೂವರೂ ತಮಗೆ ಆದ ಅವಮಾನ ದುರವಸ್ಥೆಗಳನ್ನು, ತಂದೆಗಳಿಗೆ ಹೇಳಿಕೊಂಡರು. 'ನಾವು ಬಂಗಾರವತಿಯ ಮಾತು ಕೇಳಿ ಕಷ್ಟ-ನಷ್ಟ-ಭ್ರಷ್ಟ ಅನುಭವಿಸಿದೆವು' ಎಂದು ನೊಂದುಕೊಂಡರು.

ಇತ್ತ ಹಡಗು ನಡೆಸುತ್ತ ಗೋಪಾಲಕೃಷ್ಣ ಸಾವುಕಾರನೂ ರುಕ್ಮಿಣಿಯೂ ಸುಖವಾಗಿ ಮಾರುತಿ ದೇವಸ್ಥಾನಕ್ಕೆ ಬಂದು ತಲ್ಪಿದರು. ಹಿಂದೆ ಮಾತಾಡಿದಂತೆ ಆಟದ ಮೇಳದ ತಿಂಗಳ ಪಗಾರವನ್ನು ಅರ್ಚಕರ ಕೈಗೆ ಕೊಟ್ಟು, ಮಾರುತಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ವಿಶೇಷ ಕಾಣಿಕೆಗಳನ್ನೂ ಸಹ ಮಾಡಿ, ಮೇಳದ ಆ ಮಂಗಗಳೆಲ್ಲವನ್ನೂ ಅಲ್ಲಿ ಒಪ್ಪಿಸಿ, ತಮ್ಮ ಊರಿಗೆ ತಿರುಗಿ ಹೊರಟರು. ತಂದೆ ನಡೆದ ಸಂಗತಿಗಳನ್ನೆಲ್ಲಾ ಮಾತಾಡುತ್ತಾ ಎಲ್ಲರೂ ಸಂತೋಷದಿಂದ ಊರಿಗೆ ತಲ್ಪಿದರು.

ಮನೆಗೆ ಬಂದು ತಾಯಿ-ತಂದೆ, ಅತ್ತೆ-ಮಾವ ಇವರಿಗೆ ಎಲ್ಲ ಸಂಗತಿಯನ್ನು ಹೇಳಿ, ಆಪ್ತೇಷ್ಟರನ್ನು ಕಂಡು ಬಂದು ಆನಂದದಿಂದ ಕಾಲ ಕಳೆಯ ಹತ್ತಿದರು.

೨. ಏಳು ಮಲ್ಲಿಗೆ ತೂಕದ ರಾಜಕುಮಾರಿ

ಒಂದಾನೊಂದು ರಾಜ್ಯದಲ್ಲಿ ಸೂರ್ಯಶೇಖರನೆಂಬ ರಾಜನಿದ್ದ. ಅವನಿಗೆ ಏಳು ಜನ ಗಂಡು ಮಕ್ಕಳು. ಅವರಿಗೆ ಮದುವೆ ಮಾಡಬೇಕಾದರೆ ಬೇರೆ ಬೇರೆ ಕಡೆಗಳಿಂದ ಹೆಣ್ಣು ತಂದರೆ ಹುಡುಗರು ಬೇರೆ ಬೇರೆ ಕಡೆ ಹೋಗಬೇಕಾಗುತ್ತದೆ. ಆದ್ದರಿಂದ ಒಂದೇ ಕಡೆ ಏಳು ಜನ ಹೆಣ್ಣುಮಕ್ಕಳಿದ್ದ ರಾಜನ ರಾಜ್ಯದಿಂದಲೇ ಸೊಸೆಯರನ್ನು ತರಬೇಕೆಂದು ರಾಜ ನಿಶ್ಚಯಿಸಿದನು.

ಮತ್ತೊಂದು ರಾಜ್ಯ. ಅಲ್ಲಿನ ರಾಜ ಚಂದ್ರಶೇಖರ. ಅವನಿಗೆ ಏಳು ಜನ ಹೆಣ್ಣುಮಕ್ಕಳು. ಅವರೆಲ್ಲರನ್ನೂ ಒಂದೇ ಕಡೆಗೆ ಕೊಡಬೇಕೆಂದು ಅವನ ಯೋಚನೆ. ಯಾಕೆಂದರೆ ಅವನಿಗೆ ಒಬ್ಬನೇ ಮಗ. ಅಕ್ಕ-ತಂಗಿಯರನ್ನು ಕರೆದು ತರಲು ಬೇರೆ ಬೇರೆ ರಾಜ್ಯಗಳಿಗೆ ಮಗನು ಹೋಗುವ ತೊಂದರೆ ತಪ್ಪಿಸಬೇಕೆಂದು ರಾಜನ ಆಸೆ.

ಸೂರ್ಯಶೇಖರ ರಾಜನ ಚಾರರು ಚಂದ್ರಶೇಖರನಿಗೆ ಏಳು ಹೆಣ್ಣುಮಕ್ಕಳಿದ್ದ ಶುಭ ಸಮಾಚಾರವನ್ನು ತಂದರು. ಚಂದ್ರಶೇಖರ ರಾಜನ ಸೇವಕರು ಸೂರ್ಯಶೇಖರ ರಾಜನಿಗೆ ಏಳು ಜನ ಗಂಡು ಮಕ್ಕಳಿರುವ ವರ್ತಮಾನವನ್ನೂ, ಆ ರಾಜನು ಒಂದೇ ಕಡೆ ಏಳು ಹೆಣ್ಣು ಮಕ್ಕಳಿರುವ ರಾಜಮನೆತನವನ್ನು ಅರಸುತ್ತಿದ್ದ ವರ್ತಮಾನವನ್ನೂ ತಮ್ಮ ರಾಜನಿಗೆ ಬಂದು ನಿವೇದಿಸಿದರು.

ಸೂರ್ಯಶೇಖರನು ಪರಿವಾರ ಸಮೇತ ಚಂದ್ರಶೇಖರ ರಾಜನ ರಾಜ್ಯದ ಕಡೆಗೆ ಹೋದನು. ಚಂದ್ರಶೇಖರ ರಾಜನು ತನ್ನ ಪರಿವಾರ ಸಮೇತ ಸೂರ್ಯಶೇಖರ ರಾಜನ ರಾಜ್ಯದ ಕಡೆಗೆ ಸಾಗಿದನು. ರಾಜ್ಯಗಳ ಮೇರೆಯಲ್ಲಿ ನದಿಯು ಹರಿಯುತ್ತಿತ್ತು. ಸೂರ್ಯಶೇಖರ ರಾಜನ ಪರಿವಾರದವರು ನದಿ ದಾಟಿ ಚಂದ್ರಶೇಖರ ರಾಜನ ದರ್ಶನಕ್ಕೆ ಬಂದರು. ಕುಶಲ ಪ್ರಶ್ನೆಗಳಾದವು. ಚಂದ್ರಶೇಖರ ರಾಜನು ಸೂರ್ಯಶೇಖರನ ಪರಿವಾರದವರನ್ನೂ, ರಾಜನನ್ನೂ ಯಥೋಚಿತವಾಗಿ ಸತ್ಕರಿಸಿದನು.

ಸೂರ್ಯಶೇಖರ ರಾಜನು ಚಂದ್ರಶೇಖರ ರಾಜನಿಗೆ ಉಡುಗೊರೆಯನ್ನಿತ್ತು ಅವರ ಕನ್ಯೆಯರನ್ನು ತನ್ನ ಗಂಡುಮಕ್ಕಳಿಗೆ ಲಗ್ನ ಮಾಡಿಕೊಡಬೇಕೆಂದು ಪ್ರಾರ್ಥಿಸಿದ. ಚಂದ್ರಶೇಖರ ರಾಜನು ಅದಕ್ಕೊಪ್ಪಿದನು. ಕರಿ ಬುಧವಾರ (ಕೃಷ್ಣ ಪಕ್ಷದ ಬುಧವಾರ) ಲಗ್ನವನ್ನು ನಿಶ್ಚಯಿಸಿ, ಚಂದ್ರಶೇಖರ ರಾಜನು ವರರನ್ನು ಕರೆತರಬೇಕೆಂದು ಸೂರ್ಯಶೇಖರ ರಾಜನಿಗೆ ಕೇಳಿಕೊಂಡನು. ಪರಸ್ಪರ ಒಪ್ಪಿ ಲಗ್ನ ನಿಷ್ಕರ್ಷೆಯಾಗಿ ಈರ್ವರೂ ತಮ್ಮ ಪರಿವಾರಗಳೊಡನೆ ತಮ್ಮ ತಮ್ಮ ರಾಜ್ಯಗಳಿಗೆ ಮರಳಿದರು.

ಇತ್ತ ಕರಿ ಬುಧವಾರದಂದು ರಾಜಕುಮಾರರು, 'ಅಪ್ಪ ಅಬ್ಬೆ ಬರಬೇಕು' ಎಂದು ತಂದೆ-ತಾಯಿಯರನ್ನು ಪ್ರಾರ್ಥಿಸಿದರು. 'ನೀವೇ ಹೋಗಿ ಮದುವೆ ಆಗಿ ಬನ್ನಿ' ಎಂದು ರಾಜನು ಹೇಳಿದನು. ರಾಜಕುಮಾರರಲ್ಲಿ ಕಿರಿಯವನು, 'ನಾನು ಮನೆಯಲ್ಲಿಯೇ ಇರುತ್ತೇನೆ. ನನ್ನ ಬದಲಾಗಿ ಕತ್ತಿ ಒರೆಯನ್ನು ಕೊಡುತ್ತೇನೆ. ಒರೆ ತೆಗೆಯದೆ ಕತ್ತಿಗೆ ಮದುವೆಮಾಡಿಕೊಂಡು ಬನ್ನಿ' ಎಂದು ಹೇಳಿ ಮತ್ತೆ ಕೆಲವು ಮಾತುಗಳನ್ನು ಅಣ್ಣಂದಿರಿಗೆ ಹೇಳಿದನು.

'ದಾರಿಯಲ್ಲಿ ನಿಮಗೆ ಸುಂದರವಾದ ಕಲ್ಲಿನ ತೋರಣ ಸಿಗುತ್ತದೆ. ನೀವು ಆ ಕಲ್ಲಿನ ತೋರಣದ ಕೆಳಗೆ ಹೋಗಬೇಡಿ. ತೋರಣದ ಮೇಲಿಂದ ಕುದುರೆಗಳನ್ನು ಹಾರಿಸಿಕೊಂಡು ಹೋಗಿ' ಎಂದು ಹೇಳಿದನು.

ಹಾಗೆಯೇ ಮುಂದೆ ಹೋದಾಗ ಒಂದು ದೊಡ್ಡ ಆಲದ ಮರ ಸಿಗುತ್ತದೆ. ಅಲ್ಲಿ ತಂಪಾದ ಗಾಳಿ ಬೀಸುತ್ತದೆಯೆಂದು ಕೆಳಗೆ ಕುಳಿತುಕೊಳ್ಳಬೇಡಿ. ಆಲದ ಮರದ ಮೇಲಿಂದ ಕುದುರೆಗಳನ್ನು ಹಾರಿಸಿಕೊಂಡು ಹೋಗಿ.

'ಮುಂದೆ ಒಂದು ದೇವಸ್ಥಾನ ಸಿಗುತ್ತದೆ. ಹೋಗುವಾಗಲೂ, ಮದುವೆ ಮುಗಿಸಿಕೊಂಡು ಮರಳಿ ಬರುವಾಗಲೂ ದೇವಸ್ಥಾನದ ಒಳಕ್ಕೆ ಹೋಗದೆ ಹೋಗಿ. ಈ ಮಾತುಗಳಂತೆಯೇ ನಡೆದುಕೊಂಡರೆ ನಿಮಗೆ ತೊಂದರೆಯಿಲ್ಲ' ಎಂದು ಹೇಳಿದ. ಅವನ ಅಣ್ಣಂದಿರು, 'ಹಾಗೆಯೇ ಮಾಡುತ್ತೇವೆ' ಎಂದು ಆಶ್ವಾಸನೆ ನೀಡಿ ಅಲಂಕೃತರಾಗಿ ಕುದುರೆಗಳನ್ನೇರಿಕೊಂಡು ಹೊರಟರು.

ದಾರಿಯಲ್ಲಿ ತಮ್ಮನು ಹೇಳಿದಂತೆ ಕಲ್ಲು ತೋರಣ ಸಿಕ್ಕಿತು. ತಮ್ಮನ ಮಾತಿನಂತೆ ಎಲ್ಲರೂ ಒಟ್ಟಾಗಿ ಕುದುರೆಗಳನ್ನು ತೋರಣದ ಮೇಲೆ ಹಾರಿಸಿ ದಾಟಿ ಹೋದರು. ಕೂಡಲೆ ಕಲ್ಲಿನ ತೋರಣವು ದಡದಡ ಶಬ್ದಮಾಡುತ್ತ ಮುರಿದು ಬಿತ್ತು. 'ತಮ್ಮನ ಮಾತಿನಂತೆ ನಡೆದದ್ದು ಚೆನ್ನಾಯಿತು, ಇಲ್ಲದಿದ್ದರೆ ಕಲ್ಲುಗಳ ಮಧ್ಯದಲ್ಲಿ ನಮ್ಮ ಮದುವೆಯಾಗುತ್ತಿತ್ತು' ಎಂದು ಅವರು ಆನಂದಪಡುತ್ತಾ ಮುಂದೆ ಹೋದರು.

ಮುಂದೆ ಒಂದು ಪರ್ವತಾಕಾರದ ಆಲದ ಮರವು ಹತ್ತು ಖಂಡುಗ ಬೀಜ ಬಿತ್ತುವಷ್ಟು ವಿಸ್ತಾರವಾದ ಹೊಲದಲ್ಲಿ ಸುತ್ತಲೂ ತನ್ನ ಟೊಂಗೆಗಳನ್ನು ಪಸರಿಸಿಕೊಂಡಿತ್ತು. ತಮ್ಮನ ಮಾತಿನಂತೆ ಎಲ್ಲರೂ ಕುದುರೆಗಳನ್ನು ಆಲದ ಮರದ ಮೇಲಿಂದ ಹಾರಿಸಿ ದಾಟಿದರು. ಆಗಲೇ ಐದು ಖಂಡುಗ ಬತ್ತ ಬಿತ್ತುವಷ್ಟು ದೊಡ್ಡದಾದ ಹೊಲದ ತುಂಬ ಆಲದ ಟೊಂಗೆಗಳು ಲಟ ಲಟ ಎಂದು ಮುರಿದು ಬಿದ್ದವು. 'ಹೌದು! ತಮ್ಮ ಹೇಳಿದ್ದನ್ನು ಕೇಳಿ ಜೀವದಿಂದ ಉಳಿದೆವು! ಆಲದ ಮರದ ಮನೆಯೇ ಯಮನ ಮನೆಯಾಗುತ್ತಿತ್ತು!' ಎಂದು ಆನಂದದಿಂದ ಮುಂದೆ ಹೋದರು.

ಮುಂದೆ ಒಂದು ಸುಂದರವಾದ ದೇವಾಲಯವು ಕಂಡಿತು. ಆಗ ತಮ್ಮನ ಮಾತಿನಂತೆ ಅವರು ದೇವಾಲಯವನ್ನು ಹೊಕ್ಕದೆ ಕುದುರೆ ಓಡಿಸಿಕೊಂಡು ಹೊರಟು ಚಂದ್ರಶೇಖರ ರಾಜನ ಅರಮನೆಯಲ್ಲಿ ನಿರ್ಮಿಸಿದ ಸುಂದರವಾದ ವಿವಾಹ ಮಂಟಪವನ್ನು ಪ್ರವೇಶಿಸಿದರು. ವರಪೂಜೆಯ ಕಾಲಕ್ಕೆ, 'ಮತ್ತೊಬ್ಬ ರಾಜಕುಮಾರನೆಲ್ಲಿ?' ಎಂದು ಚಂದ್ರಶೇಖರ ರಾಜನು ಕೇಳಿದನು. ಆಗ 'ಅವನು ಮನೆಯಲ್ಲಿಯೇ ಇದ್ದಾನೆ. ಅವನ ಕತ್ತಿಗೆ ಕನ್ಯೆಯನ್ನು ಧಾರೆ ಎರೆದು ಕೊಡಿ' ಎಂದು ಕತ್ತಿಯ ಒರೆಯನ್ನು ತೋರಿದರು.

ಆಗ ಜನರು, 'ಏಳು ಜನ ಹೆಣ್ಣು ಮಕ್ಕಳು. ಆರು ಜನ ವರಗಳು ಬಾಸಿಂಗ ಕಟ್ಟಿಕೊಂಡು ಬಂದವರು. ಏಳನೆಯ ಸಣ್ಣ ಹುಡುಗಿಯ ಗಂಡ ಬರಲಿಲ್ಲ!' ಎಂದು ತಮ್ಮ ತಮ್ಮಲ್ಲಿ ಹೇಳಿಕೊಂಡರು.

ಏಳನೆಯ ಹುಡುಗಿಯು ಬಾಸಿಂಗ ಕಟ್ಟಿದ ಪೆಟ್ಟಿಗೆ ಹೊತ್ತು ತಿರುಗಿದಳು.

ಮದುವೆ ಮುಗಿಯಿತು. ರಾಜಕುಮಾರರು ವಧುಗಳೊಡನೆ ದಿಬ್ಬಣವನ್ನು ಏಳಿಸಿಕೊಂಡು ಹೊರಟರು. ದಾರಿಯಲ್ಲಿ ಸಂಜೆ ಆಯಿತು. 'ದಾರಿಯಲ್ಲಿ ಮಲಗುವುದು ಏಕೆ? ದೇವಸ್ಥಾನ ವಿಶಾಲವಾಗಿದೆ. ಮತ್ತು ತಮ್ಮನು ಅಲ್ಲಿ ಹೊಕ್ಕ ಬೇಡ ಅಂದಂತೆ ನಾವು ಬರುವಾಗ ಅಲ್ಲಿ ಹೊಕ್ಕಲಿಲ್ಲ. ಆದರೂ ಕಲ್ಲು ತೋರಣದಂತೆ ದೇವಸ್ಥಾನ ಮುರಿದು ಬೀಳಲಿಲ್ಲ. ಇಲ್ಲೇನೂ ಅಪಾಯವಿಲ್ಲ' ಎಂದು ರಾಜಕುಮಾರರು ದೇವಸ್ಥಾನಕ್ಕೆ ಹೋಗಿ ಪರಿವಾರದವರೊಡನೆ ದೇವಸ್ಥಾನ ಚಂದ್ರಶಾಲೆಯಲ್ಲಿ ಮಲಗಿಕೊಂಡರು. ಬೆಳಗಾಗುವುದರೊಳಗೆ ಏಳು ಹೆಡೆಗಳ ಮಹಾಶೇಷ ದಾರಿಯಲ್ಲಿ ತಲೆ ಹಾಕಿ ಮಲಗಿತ್ತು. ದೇವಸ್ಥಾನದ ಬಾಗಿಲು ತೆಗೆದಾಗ ಭುಸ್ಸೆಂದು ಏಳು ಹೆಡೆಗಳನ್ನು ಎತ್ತಿ ನಿಂತಿತು.

ಆಗ ರಾಜಕುಮಾರರು, 'ತಮ್ಮನು ಮೊದಲೇ ದೇವಸ್ಥಾನದಲ್ಲಿ ಹೋಗುವಾಗಲೂ ಬರುವಾಗಲೂ ಹೊಕ್ಕಬೇಡಿ ಎಂದು ಹೇಳಿದ್ದನು' ಎಂದು ದುಃಖಿಸಿ, 'ಮಹಾಶೇಷ, ನಮ್ಮನ್ನು ನೀನು ಯಾಕೆ ತಡೆದು

ನಿಲ್ಲಿಸಿದೆ? ನಾವೇನೂ ಮಾಡಲಿಲ್ಲ ನಿನಗೆ. ನಮಗೆ ಹೋಗಲು ದಾರಿ ಬಿಟ್ಟು ಬೇಕಾದರೆ ಮತ್ತೆ ಮೊದಲಿನಂತೆ ಮಲಗಿಕೊ' ಎಂದು ಅವರು ಹೇಳಿದರು.

ಆಗ ಮಹಾಶೇಷನು, 'ನಿಮ್ಮಲ್ಲಿ ನಾಲ್ವರು ಹೋಗಿ ಕಿರಿಯ ರಾಜಕುಮಾರನನ್ನು ಕರೆದು ತಂದರೆ ಎಲ್ಲರನ್ನೂ ಹೊರಗೆ ಹೋಗಲು ಬಿಡುತ್ತೇನೆ ಇಲ್ಲದಿದ್ದರೆ ಇಲ್ಲ' ಎಂದು ಹೇಳಿತು. ಆ ನಾಲ್ವರು ರಾಜಕುಮಾರರು ಮಹಾಶೇಷನು ಹೆಡೆಗಳನ್ನು ತಗ್ಗಿಸಿದಾಗ ದಾಟಿದರು. ಮತ್ತೆ ಹೆಡೆ ಎತ್ತಿ ಮೊದಲಿನಂತೆ ನಿಂತಿತು ಮಹಾಶೇಷ.

ಕಿರಿಯ ರಾಜಕುಮಾರನು ದಿಬ್ಬಣದ ಬರವನ್ನು ನಿರೀಕ್ಷಿಸುತ್ತ, 'ಅವರು ಏಕೆ ಇನ್ನೂ ಬರಲಿಲ್ಲ?' ಎಂದು ವಿಚಾರ ಮಾಡುತ್ತಿದ್ದನು. ದೇವಸ್ಥಾನದಲ್ಲೇ ಹೊಕ್ಕು ಅಲ್ಲಿ ಸಿಕ್ಕು ಬಿದ್ದರೋ?' ಎಂದು ಚಿಂತಿಸುತ್ತಿದ್ದಾಗ ಅಣ್ಣಂದಿರು ಬಂದು ಮಹಾಶೇಷನು ಕರೆದ ವರ್ತಮಾನ ಹೇಳಿದರು. ತಮ್ಮನು ಕೂಡಲೇ ಹೊರಟು ದೇವಸ್ಥಾನಕ್ಕೆ ಬಂದನು. ಆಗ, 'ಸಣ್ಣ ಕೂಸಿನ ಗಂಡ ಬಂದ!' ಎಂದು ದಿಬ್ಬಣದಲ್ಲೆಲ್ಲ ಸಂಭ್ರಮ ಏರ್ಪಟ್ಟಿತು.

ಮಹಾಶೇಷನು, 'ತಮ್ಮಾ, ನನ್ನ ಬಳಿ ಬಾ' ಎಂದು ಕರೆದ. ಕಿರಿ ರಾಜಕುಮಾರನು ಬಂದನು. ಶೇಷನು ಬಾಗಿಲಿನಿಂದ, 'ನನ್ನ ಹಿಂದೆಯೇ ಬಾ' ಎಂದು ಕರೆದನು. ಕಿರಿಯ ರಾಜಕುಮಾರನು ಅವನನ್ನು ಅನುಸರಿಸಿದನು. ಮಹಾಶೇಷನು ಅವನನ್ನು ಹೊರಗೆ ಕರೆದುಕೊಂಡು ಹೋಗಿ, 'ನನ್ನ ಹೆಡೆಯನ್ನು ಹತ್ತಿ ನಿಂತು ನೋಡು' ಎಂದನು. ಆಗ ಅವನ ಹೆಡೆಯನ್ನು ಹತ್ತಿ ನಿಂತನು. ಮಹಾಶೇಷನು ತನ್ನ ಹೆಡೆಗಳನ್ನು ಮೇಲಕ್ಕೆ ಎತ್ತಿದನು. ರಾಜಕುಮಾರನು ಹೆಡೆಗಳ ಮೇಲೆ ನಿಂತ ಕೃಷ್ಣನಂತೆ ಕಾಣಿಸಿದನು. ಹೆಡೆಗಳು ಮರಗಳಿಗಿಂತ ಮೇಲಕ್ಕೆ ಹೋದವು; ಗುಡ್ಡಕ್ಕಿಂತ ಎತ್ತರವಾದವು. ಪರ್ವತ ಶಿಖರಕ್ಕಿಂತ ಮೇಲಕ್ಕೇರಿದವು. ಆಕಾಶದಲ್ಲಿ ನಿಂತು ರಾಜಕುಮಾರನು ದೂರಕ್ಕೆ ಕಣ್ಣು ಹಾಯಿಸಿದನು. ಭೂಮಿಯನ್ನು ಸುತ್ತುವರಿದು ಏಳು ಸಮುದ್ರಗಳು ಕಾಣಿಸಿದವು. ಆ ಏಳು ಸಮುದ್ರಗಳ ಆಚೆ ಒಂದು ಸಮುದ್ರವಿತ್ತು. ಅಲ್ಲಿ ಒಬ್ಬ ಸುಂದರಿಯಾದ ರಾಜಕುಮಾರಿ ಕಾಣಿಸಿದಳು. 'ಅಲ್ಲೊಬ್ಬ ರಾಜಕುಮಾರಿ ಕಾಣಿಸುತ್ತಾಳೆ' ಎಂದ ಮಹಾಶೇಷನು, 'ಅವಳೇ ಏಳು ಮಲ್ಲಿಗೆ ತೂಕದ ಹೆಣ್ಣು. ಆ ಹೆಣ್ಣನ್ನು ನೀನು ತಂದರೆ ನನ್ನ ಕಳೆದು ಹೋದ ಕಣ್ಣುಗಳು ಬರುತ್ತವೆ. ನಾನು ಮೂರು ಮಂತ್ರಿಸಿದ ಕಲ್ಲುಹರಳು ಕೊಡುತ್ತೇನೆ. ಒಂದು ಹರಳು ಹೊಡೆದಾಗ ಏಳು ಸಮುದ್ರಗಳು ದಾರಿ ಕೊಡಲಿ' ಎಂದು ಹೇಳು. ಆಗ ಹೋಗಿ ದ್ವೀಪಸೇರು. ಅಲ್ಲಿ ಎರಡನೆಯ ಹರಳು ಹೊಡೆದಾಗ ಏಳು ಸಮುದ್ರಗಳು ಒಂದಾಗಲೆಂದು ಎರಡನೆಯ ಹರಳು ಹೊಡೆ ಎಂದಿತು. ಮೂರನೆಯ ಹರಳನ್ನು ಕಾದಿಟ್ಟುಕೊಂಡು ತಿರುಗಿ ಏಳು ಮಲ್ಲಿಗೆ ತೂಕದ ಹೆಣ್ಣನ್ನು ತರುವಾಗ ಸಮುದ್ರ ದಾಟಿಸಿ ಮಹಾಶೇಷನಮನೆ ಮುಟ್ಟಿಸು ಎನ್ನು ಎಂದು ಹೇಳಿತು. ರಾಜಕುಮಾರನು 'ಆಗಲಿ' ಎಂದು ಹೇಳಿ, ಹಾಗೆಯೇ ಸಮುದ್ರಗಳನ್ನು ದಾಟಿ ಹೋಗಿ ದ್ವೀಪಕ್ಕೆ ಹೋದನು. ಅಲ್ಲಿ ಒಂದು ಕೆರೆಯನ್ನು ಕಾದುಕೊಂಡು ಒಬ್ಬ ಕುಳಿತಿದ್ದನು.

'ಏನೋ ತಮ್ಮ, ಇಲ್ಲಿ ಯಾಕೆ ಕುಳಿತಿದ್ದಿ?' ಎಂದು ರಾಜಕುಮಾರನು ಕೇಳಿದನು. ಅವನು, ನಾನು ಒಡ್ಡಣ್ಣ ಸ್ವಾಮಿ, ಈ ಕೆರೆ ಕಾದರೆ ಒಂದು ವರ್ಷಕ್ಕೆ ಒಂದು ಕೊಡ ನೀರು ಕೊಡುತ್ತಾರೆ' ಎಂದನು.

ರಾಜಕುಮಾರನು, 'ಇಷ್ಟೇಯೋ? ನಿನಗೆ ನಿತ್ಯ ನೀರು ಕೊಡುವೆ. ನನ್ನ ಜೊತೆ ಬರುವೆಯಾ?' ಎಂದು ಕೇಳಿದನು. 'ಹೋ, ಹಾಗಾದರೆ ನಿನ್ನ ದಾಸನಾಗುವೆ' ಎಂದ ಒಡ್ಡಣ್ಣ.

ಮುಂದೆ ದಾರಿಯಲ್ಲಿ ಒಬ್ಬನು ಗದ್ದೆ ಕಾಯುತ್ತಲಿದ್ದನು. 'ಏನೋ, ಈ ಗದ್ದೆ ಕಾಯ್ದುದ್ದಕ್ಕೆ ಸಂಬಳ ಏನು ಕೊಡುತ್ತಾರೆ?'

'ಸ್ವಾಮೀ, ಒಂದು ವರ್ಷಕ್ಕೆ ಒಂದು ಊಟ ಹಾಕ್ತಾರೆ'

'ನನ್ನ ಸಂಗಡ ಬರುವೆಯಾ? ನಿತ್ಯ ಅನ್ನ ಕೊಡ್ತೇನೆ' 'ಹಾಗಾದರೆ ನಿನ್ನ ದಾಸನಾಗಿ ಬರುವೆ' ಎಂದು ಅವನೂ ರಾಜಕುಮಾರನನ್ನು ಅನುಸರಿಸಿದನು.

ಮುಂದೆ ಬರುತ್ತ ಇರುವೆಗಳು ಎಲೆಗಳನ್ನು ತಮ್ಮ ದಾರಗಳಲ್ಲಿ ಕೂಡಿಸಿ ಮಾಡಿದ ಕೊಟ್ಟೆ (ಗೂಡು) ಸಮೇತ ನೀರಿನ ಮೇಲೆ ಸಿಕ್ಕಿಕೊಂಡಿದ್ದವು. 'ನಮ್ಮನ್ನು ಇಲ್ಲಿಂದ ತಪ್ಪಿಸು ನಿನಗೆ ಬೇಕಾದ ಉಪಕಾರ ಮಾಡುತ್ತೇವೆ' ಎಂದವು. ಇರುವೆಗಳ ಗೂಡನ್ನು ನೀರಿನಿಂದ ತೆಗೆದನು. ಆಗ 'ಕಷ್ಟದಲ್ಲಿ ನಮ್ಮನ್ನು ನೆನೆ, ನಾವು ಬರುವೆವು' ಎಂದವು ಇರುವೆಗಳು.

ಮುಂದೆ ಹೋಗಲು ಒಂದು ಬಲೆಯಲ್ಲಿ ಗೂಗೆಯೊಂದು ಸಿಕ್ಕಿ ಬಿದ್ದಿತ್ತು. ಗೂಗೆ 'ನನಗೆ ಮರಿಗಳು ಉಂಟು. ನನ್ನನ್ನು ಬಲೆಯಿಂದ ತಪ್ಪಿಸು, ನಿನಗೆ ಬೇಕಾದ ಉಪಕಾರ ಮಾಡಿತೀರಿಸುತ್ತೇನೆ' ಎಂದಿತು. ಅವನು ಗೂಗೆಯನ್ನು ತಪ್ಪಿಸಿದನು. 'ಕಷ್ಟದಲ್ಲಿ ನಮ್ಮನ್ನು ನೆನೆ ಬರುತ್ತೇನೆ' ಎಂದಿತು ಗೂಗೆ.

ಹಾಗೆಯೇ ಒಬ್ಬ ಮುದುಕಿಯ ಮನೆಗೆ ಹೋದನು. ಅಲ್ಲಿ ತಾನು ತಂದ ರತ್ನಗಳನ್ನು ತೂರಿ ಸಾಮಾನು ತಂದು ಅಜ್ಜಿ ಮಾಡಿದ ಅಡಿಗೆಯಲ್ಲಿ ಒಡ್ಡಣ್ಣನಿಗೂ, ಗದ್ದೆ ಕಾಯುವನಿಗೂ ಊಟ ಕೊಟ್ಟು ತಾನೂ ಉಂಡನು.

'ಅಜ್ಜೀ, ನೀನು ಹೂದಂಡೆ ತಕ್ಕೊಂಡು ಎಲ್ಲಿ ಹೊರಟಿರುವೆ?' ಎಂದು ಕೇಳಿದ ರಾಜಕುಮಾರ. 'ನಾನು ರಾಜನ ಮಗಳ ಮಂಡೆ ಬಾಚಿ ಹೆರಲು ಹಾಕಿ ಹೂ ಮುಡಿಸಿ ದಿನಾ ಒಂದು ಪಡಿ ಅಕ್ಕಿ ತರುತ್ತೇನೆ' ಎಂದಳು. 'ಹಾಗಾದರೆ ರಾಜನ ಮಗಳನ್ನು ನಾನು ಮದುವೆಯಾಗಬೇಕು. ನನಗೆ ಅವಳನ್ನು ಮದುವೆ ಮಾಡಿಕೊಡುವರೋ ಏನೆಂದು ಕೇಳು' ಎಂದು ಹೇಳಿದನು.

ಮುದುಕಿಯು, 'ತಮ್ಮಾ, ನೀನು ರಾಜನ ಮಗನ ಹಾಗೇ ಕಾಣುತ್ತೀ, ಆದರೆ ಅವಳನ್ನು ಮದುವೆ ಯಾಗುವವರು ಬಹಳ ಕಠಿಣ ಕೆಲಸ ಮಾಡಬೇಕು. ಯಾರಿಂದಲೂ ಇದುವರೆಗೂ ಆ ಕೆಲಸ ಮಾಡುವು ದಕ್ಕಾಗಲಿಲ್ಲ' ಎಂದಳು.

'ಏನದು ಕೆಲಸ? ನಾನು ಮಾಡುವೆ. ಅವಳನ್ನೇ ಕೇಳಿಬಾ' ಎಂದನು. ಅಜ್ಜಿ ರಾಜಕುಮಾರಿಯ ಹೆರಲು ಹಾಕುವಾಗ 'ತಂಗೀ, ನಿನ್ನ ರೂಪಕ್ಕೆ ಸರಿಯಾದ ಮಲ್ಲಿಗೆ ಬಣ್ಣದ ರಾಜಕುಮಾರನು ಬಂದಿದ್ದಾನೆ. ನಿನ್ನನ್ನು ಮದುವೆಯಾಗಬೇಕು ಎನ್ನುತ್ತಾನೆ' ಎಂದಳು.

ರಾಜಕುಮಾರಿಯು, "ಹಾಗಾದರೆ, ಮೊದಲು ಅರವತ್ತು ಖಂಡುಗ ಗದ್ದೆ ಹೊಲದಲ್ಲಿ ರಾಗಿಯನ್ನು ಚೆಲ್ಲಿಸುತ್ತೇನೆ. ರಾಗಿಯನ್ನು ಮರಳಿನಿಂದ ಬೇರೆ ಮಾಡಬೇಕು. ನಂತರ ಅರವತ್ತು ಮಾಳಗಳಲ್ಲಿದ್ದ ಜನರೊಡನೆ

[illegible]

ಒಮ್ಮೆಲೇ 'ಹೂಂ' ಎಂದು ಹೇಳಬೇಕು'' ಎಂದಳು ಅಜ್ಜಿಯು ಬಂದು ಅದನ್ನು ಹೇಳಿದಳು. ರಾಜಕುಮಾರನು 'ಆಗಲಿ' ಎಂದನು.

ಹೊಲಕ್ಕೆ ಬಂದನು. ಅರವತ್ತು ಖಂಡುಗ ರಾಗಿಯನ್ನು ಮರಳಿನಿಂದ ಬೇರೆ ಮಾಡಲು ಇರುವೆಗಳನ್ನು ನೆನೆದನು. ಕೋಟಿಗಟ್ಟಲೆ ಇರುವೆಗಳು ಬಂದು ರಾತ್ರಿ ಬೆಳಗಾಗುವುದರಲ್ಲಿ ರಾಗಿ ಕಾಳುಗಳನ್ನು ಆರಿಸಿ ಒಂದು ಕಡೆ ರಾಶಿ ಹಾಕಿದವು. ರಾಗಿಯನ್ನು ಮರು ದಿನ ಅಳೆದಾಗ ಅರವತ್ತು ಖಂಡುಗಕ್ಕಿಂತ ಒಂದು ಕೊಳಗ ರಾಗಿಯು ಹೆಚ್ಚಿಗೆ ಇತ್ತು.

ಅರವತ್ತು ಖಂಡುಗ ಹೊಲಕ್ಕೆ ಅರವತ್ತು ಮಾಳಗಳನ್ನು ಹಾಕಿಸಿದ್ದರು. ಎಲ್ಲ ಮಾಳಗಳಲ್ಲಿದ್ದವರೂ ಯಾರು ಯಾರು? ಎಂದ ಕೂಡಲೇ 'ಹೂಂ' ಎನ್ನಬೇಕು. ಎರಡನೆಯ ದಿನ ರಾತ್ರಿಯಲ್ಲಿ ಗೂಗೆಗಳನ್ನು ನೆನೆದನು. ಆಗ ಗೂಗೆಗಳ ಹಿಂಡು ಹಿಂಡೇ ಬಂದವು. 'ಯಾರು? ಯಾರು?' ಎಂದು ಕೇಳಿದವರಿಗೆಲ್ಲಾ 'ಹೂಂ' ಎಂದು ಉತ್ತರ ಕೊಟ್ಟವು. ಆಮೇಲೆ ಗೂಗೆಗಳು ಹಾರಿ ಹೋದವು.

'ರಾಜಕುಮಾರೀ, ಇನ್ನು ನನ್ನನ್ನು ಮದುವೆಯಾಗಲು ನಿನ್ನ ಸಮ್ಮತಿಯಿದೆಯಲ್ಲ? ನೀನು ಹೇಳಿದ ಕೆಲಸಗಳಲ್ಲಿ ಯಶಸ್ಸು ಗಳಿಸಿದ್ದೇನೆ' ಎನ್ನಲು ಅವಳು ಇಷ್ಟರಲ್ಲಿ ಮುಗಿಯಲಿಲ್ಲ. 'ಏಳು ಕೊಪ್ಪರಿಗೆ ತುಂಬಾ ಬಿಸಿ ಬಿಸಿ ನೀರನ್ನು ಮೂರೂ ಮುಕ್ಕಾಲು ಗಳಿಗೆಗಳಲ್ಲಿ ಮೀಯಬೇಕು' ಎಂದಳು.

ನೀರು ಕಾದು ಮೀಯುವವನಿಗಾಗಿ ಕಾದಿತ್ತು. ರಾಜಕುಮಾರನು ವರ್ಷಕ್ಕೊಂದು ಕೊಡ ನೀರು ಮೀಯುವ ವನನ್ನು ನೆನೆದನು. ಆತನು ಬಚ್ಚಲಿನ ಮಾಡಿನ ಹಂಚನ್ನು ಹತ್ತಿ ಅದನ್ನು ತೆಗೆದು ಒಳಗೆ ಇಳಿದನು. ನೀರನ್ನೆಲ್ಲ ಮಿಂದು ಮುಗಿಸಿ ಆತನು ಮೇಲಿನ ಹಂಚನ್ನು ತೆಗೆದುಕೊಂಡು ಹತ್ತಿ ಹೋಗಿ ಹೊರಟು ಹೋದನು. ನೀರು ಕಾದ ಧಗೆಗೇ ರಾಜಕುಮಾರನ ಮೈ ಕೆಂಪಾಯಿತು. ಬೆವರಿನ ಹನಿಗಳಿಂದ ಮೈಮಿಂದಂತಾಯಿತು.

'ಇನ್ನು ಎರಡು ಕೆಲಸ ಉಂಟು ಅರವತ್ತು ಖಂಡುಗ ಅಕ್ಕಿಯ ಅನ್ನವನ್ನು ಅರವತ್ತು ಕುಂಬಳಕಾಯಿಗಳ ಪಲ್ಯವನ್ನು ಒಬ್ಬನೇ ಉಣ್ಣಬೇಕು. ಇದು ಒಂದು. ನಂತರ ಕಾಮಧೇನುವಿನ ಹಾಲನ್ನು ಕರೆಯುವುದು, ಆಗ ನಾನು ಆ ಕೆಲಸದಲ್ಲಿ ಸಹಾಯಮಾಡಿ ಉಪಾಯ ಹೇಳಿಕೊಡುತ್ತೇನೆ' ಎಂದು ರಾಜಕುಮಾರಿಯು ಹೇಳಿದಳು.

ಅನ್ನದ ದಿನ್ನೆಯು ಭೋಜನ ಶಾಲೆಯಲ್ಲಿ ರಾಶಿಯಾಯಿತು. ಕುಂಬಳ ಪಲ್ಯದ ಕೊಳತಪ್ಪಲೆಗಳು ಹತ್ತಿರ ಬಂದು ಕುಳಿತವು. ರಾಜಕುಮಾರನು ವರ್ಷಕ್ಕೊಂದು ಊಟ ಉಣ್ಣುವವನನ್ನು ನೆನೆದನು. ಅವನು ಬಂದನು. 'ನನಗೆ ದೃಷ್ಟಿ ಬಿದ್ದೀತು, ಇವನೊಬ್ಬನು ಮಾತ್ರ ಊಟ ಬಡಿಸಲು ಭೋಜನ ಶಾಲೆಯಲ್ಲಿರಲಿ, ಎಲ್ಲರೂ ಹೊರಟು ಹೋಗಿರಿ' ಎಂದು ರಾಜಕುಮಾರನು ಹೇಳಿ ಭೋಜನ ಶಾಲೆಯ ಬಾಗಿಲು ಹಾಕಿದನು. ಆಗ ಆ ತಿಪ್ಪಣ್ಣನು ಅರವತ್ತು ಖಂಡುಗ ಅಕ್ಕಿಯ ಅನ್ನವನ್ನೂ ಅರವತ್ತು ಕುಂಬಳಕಾಯಿಗಳ ಪಲ್ಯವನ್ನೂ ತಿಂದುದಲ್ಲದೇ ಒರಳು ಕಲ್ಲಿನ ಗುಂಡನ್ನೂ ತಿಂದನು. ನಂತರ ಬಾಗಿಲು ತೆರೆದನು. ಆಗ ಎಲ್ಲ ಅನ್ನವನ್ನೂ ತಿಂದುದನ್ನೂ ನೋಡಿ ಎಲ್ಲರೂ ಆಶ್ಚರ್ಯಪಟ್ಟರು. ಒರಳು ಕಲ್ಲು ಕಾಣದೆ ಅಡಿಗೆ ಭಟ್ಟನು, 'ಒರಳು

ಕಲ್ಲುಕಳವಾಗಿ ಹೋಗಿದೆ' ಎಂದು ಬೊಬ್ಬೆ ಇಟ್ಟನು. 'ಆಗ ರಾಜಕುಮಾರನು ಬಂದವರಿಲ್ಲ, ಹೋದವರಿಲ್ಲ, ಯಾರು ಕದ್ದರು?' ಎಂದು ಕೇಳಿದನು ಆ ಕಲ್ಲನ್ನು ನಿನ್ನ ಭೂತ ಹೊಟ್ಟೆ ನುಂಗಿದೆಯೋ ಎಂದು ಅಡಿಗೆ ಭಟ್ಟನು ಕೇಳಲು, 'ಕಲ್ಲು ತಿನ್ನಲು ನಾನು ಭೂತನೋ? ಒರಳು ಕಲ್ಲು ಗುಂಡನ್ನು ಮಾತ್ರ ಅನ್ನದ ಜೊತೆ ಉಪ್ಪಿನಕಾಯಿ ಲೆಕ್ಕಕ್ಕೆ ಕಚ್ಚಿ ತಿಂದೆನು' ಎಂದು ಉತ್ತರ ಕೊಟ್ಟನು. ಆಗ ರಾಜಕುಮಾರಿಯೂ ಬಹಳ ಸೋಜಿಗ ವಾಗಿ ಎಲ್ಲರೊಡನೆ ಅವಳೂ ನಕ್ಕಳು.

ರಾಜಕುಮಾರನು ಅಜ್ಜಿ ಮುದುಕಿಯ ಹತ್ತಿರ ಒಂದು ಪತ್ರಕೊಟ್ಟು, 'ಕಾಮಧೇನುವನ್ನು ಕರೆಯಲು ನಾಲ್ಕು ದಿನ ಹೋಗಲಿ, ಉಂಡ ಅನ್ನವನ್ನೆಲ್ಲಾ ಜೀರ್ಣಿಸಿಕೊಳ್ಳುತ್ತೇನೆ' ಎಂದು ಬರೆದನು.

ರಾಜಕುಮಾರಿಯು ಎರಡು ಕೊಳಗ ಅಕ್ಕಿಯಲ್ಲಿ ಮುದ್ರೆಯುಂಗುರವನ್ನು ಹಾಕಿ ಅಜ್ಜಿ ಮುದುಕಿಗೆ ಕೊಟ್ಟಳು. 'ನೆಲ್ಲನ್ನು ಆಯುವುದಕ್ಕೆ ನಿನ್ನ ರಾಜಕುಮಾರನಿಗೆ ಹೇಳು' ಎಂದಳು. ನೆಲ್ಲನ್ನು ಆಯ್ದಾಗ ಮುದ್ರೆಯುಂಗುರವೂ ರಾಜಕುಮಾರಿಯು ಬರೆದ ಪತ್ರವೂ ಸಿಕ್ಕವು. ಪತ್ರದಲ್ಲಿ ಕಾಮಧೇನುವನ್ನು ಕರೆಯುವ ಮೊದಲು ಬೆರಳಿಗೆ ಉಂಗುರ ಹಾಕಿಕೊಂಡು ಹೋಗು. ಆಗ ಕಾಮಧೇನು ಕೂಗುತ್ತ ಬಾಯಿ ತೆಗೆದುಕೊಡು ನಿನ್ನ ತಿನ್ನಲು ಬರುವುದು. ಆಗ ಉಂಗುರ ಕೈಲಿ ಬೀಸಿ, 'ಸಮಾಧಾನ ಮಾಡು' ಆಗ ಅದು ಸುಮ್ಮನೇ ನಿಂತುಕೊಳ್ಳುವುದು. ಆಗ ಹಾಲು ಕರೆದುಕೊ' ಎಂದು ಬರೆದಿದ್ದಳು.

ಹಾಗೆಯೇ ಮಾಡಿ ಆತನು ಕಾಮಧೇನುವಿನ ಹಾಲುಕರೆದನು. ಇನ್ನು ರಾಜಕುಮಾರಿಯ ಲಗ್ನ ನಿಶ್ಚಯವಾಯಿತು. ಕೇಳೂರಿಗೆ ಡಂಗುರ ಸಾರಿ ಕೇಳದೂರಿಗೆ ಓಲೆಗಳನ್ನು ಬರೆದರು. ಬಳುವಳಿ ಸಾಮಾನು ಗಳನ್ನು ಪರ್ವತೋಪಮವಾಗಿ ರಾಶಿ ಹಾಕಿದರು. ಒಡ್ಡಣ್ಣ ಹಾಗೂ ಕಾಯೋ ತಿಪ್ಪ ಇಬ್ಬರೂ 'ಇದೆಂತಾ ಹೊರೆ' ಎಂದು ಬಳುವಳಿ ಸಾಮಾನು ಹೊತ್ತರು. 'ಮತ್ತೂ ಸಾಮಾನು ಬರಲಿ' ಎಂದರು ರಾಣಿಯ ಆಭರಣಗಳನ್ನು ತಂದುಕೊಟ್ಟರು. ಅದೂ ಸಾಲದೆ ಕಾಯೋ ತಿಪ್ಪನು ರಾಣಿಯ ಮೂಗುತಿ ಕಳಚಲು ಹೊರೆ ಹೊತ್ತುಕೊಂಡೇ ಹೋದನು. ಆಗ ರಾಜಕುಮಾರನು ಗದರಿಸಿ ಅವನ ತಲೆಯ ಮೇಲೆ ಒಂದು ಎಮ್ಮೆಯನ್ನು ಹೊರಿಸಿದನು. ಹಾಗೇ ಮತ್ತೊಂದು ಹರಳನ್ನು ಹೊಡೆದು 'ನನ್ನ ಪರಿವಾರದವರೆಲ್ಲ ಶೇಷನ ಮನೆಯ ಮುಂದೆ ಹೋಗಲಿ' ಎಂದನು ರಾಜಕುಮಾರ. ಎಲ್ಲರೂ ಮಹಾಶೇಷನ ಮನೆಗೆ ಬಂದರು. ಆಗ ಆ ಏಳು ಮಲ್ಲಿಗೆ ತೂಕದ ಹೆಣ್ಣು ಮಹಾಶೇಷನನ್ನು ಮುಟ್ಟಲು ಅದಕ್ಕೆ ಕಣ್ಣು ಬಂದವು.

ಮಹಾಶೇಷನು, 'ಇನ್ನು ನಾನು ಹುಟ್ಟಿದ್ದಕ್ಕೆ ಧನ್ಯ. ನಿಮ್ಮನ್ನು ಕಣ್ಣು ತುಂಬಾ ನೋಡಿ ಪ್ರಾಣಬಿಡುತ್ತೇನೆ. ನನ್ನ ಹುತ್ತದ ದ್ರವ್ಯವೆಲ್ಲಾ ನಿಮಗೆ ಸೇರಲಿ' ಎಂದು ಹೇಳಿ ಹೆಡೆಗಳನ್ನು ಬಡಿದುಕೊಂಡು ಪ್ರಾಣ ಬಿಟ್ಟಿತು. ಅದಕ್ಕೆ ಯೋಗ್ಯ ಸಂಸ್ಕಾರ ಮಾಡಿಸಿ ಎಲ್ಲರಿಗೂ ಸಂತರ್ಪಣೆ ಮಾಡಿಸಿ, ರಾಜಕುಮಾರನು ಮಹಾಶೇಷನ ದ್ರವ್ಯವನ್ನೆಲ್ಲ ಒಡ್ಡಣ್ಣ ಹಾಗೂ ಕಾಯೋ ತಿಪ್ಪನ ಹತ್ತಿರ ಹೊರಿಸಿಕೊಂಡು ರಾಜ್ಯಕ್ಕೆ ಬಂದನು.

ಅಣ್ಣಂದಿರೊಡನೆಯೂ ತನ್ನ ಎರಡು ಜನ ಹೆಂಡಂದಿರೊಡನೆಯೂ ರಾಜಕುಮಾರನು ಸುಖ ಸಂತೋಷದಿಂದ ಉಳಿದನು.

೩. ದೀವಗಿ ಬುಡ್ಡಿ

ಒಂದು ರಾಜ್ಯದಲ್ಲಿ ಶ್ರೀನಿವಾಸ ಸೆಟ್ಟಿಯೆಂಬ ಒಬ್ಬ ಸಾವುಕಾರನಿದ್ದನು. ಅವನಿಗೆ ಏಳು ಜನ ಗಂಡು ಹುಡುಗರು. ಸೆಟ್ಟಿಯು ಆರು ಜನ ಹುಡುಗರಿಗೆ ಶ್ರೀಮಂತರ ಮನೆಗಳ ಹುಡುಗಿಯನ್ನು ನಿಶ್ಚಯಮಾಡಿ ಒಬ್ಬೊಬ್ಬರಿಗೆ ಹತ್ತು ಸಾವಿರ ರೂಪಾಯಿ ವರದಕ್ಷಿಣೆ ತೆಗೆದುಕೊಂಡು ಕ್ರಮವಾಗಿ ಅವರೆಲ್ಲರ ಮದುವೆಯನ್ನೂ ಮಾಡಿದನು.

ಏಳನೆಯ ಹುಡುಗ ಚಿಕ್ಕ ಪ್ರಾಯದವನು. ಅವನ ಹೆಸರು ಲಕ್ಷ್ಮೀಶ. ಅವನಿಗೆ ತಂದೆಯು ಆಡುವುದಕ್ಕೆ ಮುತ್ತಿನ ಚೆಂಡನ್ನು ತಂದು ಕೊಟ್ಟಿದ್ದನು. ಅವನು ಮುತ್ತಿನ ಚೆಂಡನ್ನಾಡುವ ಕಾಲಕ್ಕೆ ಚೆಂಡು ಹೋಗಿ ಅವನ ನಾಲ್ಕನೆಯ ಅತ್ತಿಗೆಯ ಮೈಮೇಲೆ ಬಿತ್ತು. ಅವಳು ಚೆಂಡು ತಾಗಿದ ನೋವಿನ ಸಿಟ್ಟಿನಿಂದ ಚೆಂಡನ್ನು ಕೊಡಲಿಲ್ಲ.

ಲಕ್ಷ್ಮೀಶನಿಗೆ ಸಿಟ್ಟು ಬಂತು. 'ತೊಳೆದಿಟ್ಟ ಯಜ್ಞೇಶ್ವರನಂಥ ಕರಿಮರದ ಬೊಂಬೆ, ನನ್ನ ಮುತ್ತಿನ ಚೆಂಡು ನಿನಗೆ ಯಾಕೆ?' ಎಂದು ಕೇಳಿದನು.

'ಹೌದೋ, ನೀನು ಯಾವ ಕಮ್ಮಾರ ಮಾಡಿದ ಮನ್ಮಥ? ನೀನು ಮದುವೆಯಾಗುವ ಚದುರೆ ಯಾರು ಅಂತ ನೋಡೋಣ' ಎಂದು ಹೇಳಿ ಹಂಗಿಸಿದ್ದಲ್ಲದೆ ತನ್ನ ಅಕ್ಕಂದಿರಿಗೂ, 'ನಿಮಗೂ ಕರಿಬೊಂಬೆಗಳೆಂದು ಹೇಳಿ ಲಕ್ಷ್ಮೀಶ ಬಯ್ದ. ಅವನಿಗೆ ದೀವಗಿ ಬುಡ್ಡಿಯನ್ನು ಗಂಟು ಹಾಕಿಸೋಣ' ಎಂದು ಹೇಳಿಕೊಟ್ಟಳು. ಅವರು ತಮ್ಮ ಗಂಡಂದಿರಿಗೆ ಹಾಗೆ ಹೇಳಿದರು. ಅವರೆಲ್ಲ ಕೂಡಿ ತಂದೆಗೆ, 'ಲಕ್ಷ್ಮೀಶನಿಗೆ ದೀವಗಿ ಬುಡ್ಡಿಯನ್ನು ಮದುವೆ ಮಾಡಿಸು. ಅವಳ ಕೈ ಹಿಡಿದವನು ಲಕ್ಷಾಧಿಕಾರಿಯಾಗುತ್ತಾನೆ. ಅವಳು ಬಹುಭಾಗ್ಯವಂತೆ' ಎಂದು ತಂದೆಯ ಮನವೊಲಿಸಿದರು. ಲಕ್ಷ್ಮೀಶನಿಗೆ ಲಕ್ಷ್ಮಿ ಎಂಬ ಶ್ರೀಮಂತರ ಹುಡುಗಿಯನ್ನು ನಿಶ್ಚಯ ಮಾಡಿದ್ದೇವೆ ಎಂತ ಸುದ್ದಿ ಹಾಕಿ ಅವನಿಗೆ ದೀವಗಿ ಬುಡ್ಡಿಯನ್ನು ಮದುವೆ ಮಾಡಿದರು. ದೀವಗಿ ಬುಡ್ಡಿಯ ಹೆಸರು ಲಕ್ಷ್ಮಿ. ಆದರೆ ಅವಳು ಗಿಡ್ಡವಾಗಿ ದೀಪದ ಬುಡ್ಡಿಯ ಹಾಗೆ ಕಾಣುತ್ತಿದ್ದರಿಂದ ಅವಳಿಗೆ ದೀವಗಿ ಬುಡ್ಡಿ ಎಂದು ಅಡ್ಡ ಹೆಸರು ಬಿದ್ದಿತು.

ಲಕ್ಷ್ಮೀಶನು ದೀವಗಿ ಬುಡ್ಡಿಯ ಮದುವೆ ಮಾಡಿದ ಮೇಲೆ ಬೇಸರದಿಂದ ಮನೆಯಿಂದ ಹೊರಬಿದ್ದು ಹೋಗಿ ಅರಣ್ಯಕ್ಕೆ ಹೋದನು. ಅಲ್ಲಿ ತಿರುಗುತ್ತ ಹೋದವನು ರಾತ್ರಿ ಹೊತ್ತಿನಲ್ಲಿ ಬಾವಿಯನ್ನು ಕಾಣದೆ ಅದರಲ್ಲಿ ಬಿದ್ದು ಬಿಟ್ಟನು. ಆ ಹಾಳು ಬಾವಿಯಲ್ಲಿ ಒಂದು ಘಟಸರ್ಪವಿತ್ತು. ಅವನು ಅದರ ಮೇಲೆ ಬಿದ್ದ ಹೊಡೆತಕ್ಕೆ ಅದರ ಮೈ ಮೇಲೆ ಬಹಳ ವೇದನೆ ಕೊಡುತ್ತಿದ್ದ ಕುರು ಒಡೆದು ಹೋಯಿತು. ಅದರಿಂದ ಅದರ ವ್ಯಾಧಿ ಕಡಿಮೆಯಾಯಿತು. ಅದರಿಂದ ಘಟಸರ್ಪ ಬಹಳ ಸಂತೋಷಪಟ್ಟು ಲಕ್ಷ್ಮೀಶನನ್ನು ನಾಗಲೋಕಕ್ಕೆ ಕರೆದುಕೊಂಡು ಹೋಯಿತು. ಅಲ್ಲಿ ನಾಗಿಣಿಯೆಂಬ ಸರ್ಪರಾಜ ಕನ್ಯೆಯನ್ನು ಮದುವೆ ಮಾಡಿಕೊಟ್ಟಿತು.

ಇತ್ತ ದೀವಗಿ ಬುಡ್ಡಿಗೆ ಅವಳ ಅಕ್ಕಂದಿರು ಬಹಳ ತ್ರಾಸು ಕೊಡುತ್ತಿದ್ದರು. ಬೆಳಿಗ್ಗೆ ನಾಲ್ಕು ಗಂಟೆಗೆ ಮನೆವಾರ್ತೆ ಕೆಲಸಕ್ಕೆ ತೊಡಗಿದ ದೀವಗಿ ಬುಡ್ಡಿಗೆ ರಾತ್ರಿ ಹನ್ನೆರಡು ಘಂಟೆಯವರೆಗೂ ಆ ಕೆಲಸ ಈ ಕೆಲಸ

ಮಾಡು ಎಂದು ಬಯ್ಯುತ್ತಿದ್ದರು. ಅಷ್ಟು ಸಾಲದೆ ಅವಳನ್ನು ಹೊಡೆದು ಬಡೆದು ಒಂದು ದಿನ ಮಧ್ಯಾಹ್ನ ಹೊರಗೆ ಹಾಕಿಬಿಟ್ಟರು. ದೀವಗಿ ಬುಡ್ಡಿ ಹೊರಟು ಹೋದ ಮೇಲೆ ಇಳಿಗಾಲ ಬಂತು. ಬೆಳೆ ನಷ್ಟವಾಯಿತು. ವ್ಯಾಪಾರದಲ್ಲಿ ಲುಕ್ಸಾನಾಗುತ್ತ ಬಂತು. ಹಣದಾಗಿನ, ಪಾತ್ರೆಪಗಡಿ ಎಲ್ಲ ಕರಗುವ ಹೊತ್ತು ಬಂತು. ಆರೂ ಜನ ಗಂಡು ಮಕ್ಕಳು ಒಂದೊಂದು ದಿಕ್ಕಿಗೆ ಹೋಗಿ ದುಡಿದರೂ ಖರ್ಚಿಗೆ ಸಾಲದಾಯಿತು.

ಇತ್ತ ದೀವಗಿ ಬುಡ್ಡಿ ಊರೂರು ತಿರುಗಿ ಗಂಡನನ್ನರಸಬೇಕೆಂದು ಭಿಕ್ಷೆ ಬೇಡಿ ಕಾಡಿಕೊಂಡು ಅಲ್ಲಲ್ಲಿ ಊಟ ಸಿಕ್ಕಲ್ಲಿ ಊಟ ಮಾಡಿ, ಇಲ್ಲದಿದ್ದರೆ ಉಪವಾಸವಿದ್ದು ತಿರುಗಹತ್ತಿದಳು.

ಲಕ್ಷ್ಮೀಶನು ನಾಗಲೋಕದಿಂದ ಬಹಳ ಚಿನ್ನ, ಮುತ್ತು ರತ್ನಗಳನ್ನು ತೆಗೆದುಕೊಂಡು ಹಾಳು ಬಾವಿಯಿಂದ ಮೇಲಕ್ಕೆ ಬರುವಾಗ ತನ್ನ ಹೆಂಡತಿ ನಾಗಿಣಿಯನ್ನು ತೆಗೆದುಕೊಂಡು ಹೊರಗೆ ಬಂದನು. ಚಿನ್ನ ಮಾರಾಟಮಾಡಿ ಬಂದ ಹಣದಿಂದ ಏಳು ಊರುಗಳಲ್ಲಿ ತನ್ನ ಹೆಸರಿನಿಂದ ಛತ್ರಗಳನ್ನು ಸ್ಥಾಪಿಸಿದನು. ದಕ್ಷಿಣದ ನಾಟಕೋಟ ಶೆಟ್ಟಿಯ ಛತ್ರಗಳ ಹಾಗೆ ಲಕ್ಷ್ಮೀಶಶೆಟ್ಟಿಯ ಛತ್ರಗಳ ಹೆಸರು ಪ್ರಸಿದ್ಧವಾಯಿತು. ದೀವಗಿ ಬುಡ್ಡಿಯು ಈ ಛತ್ರಗಳ ಹೆಸರಿನಿಂದ ತನ್ನ ಗಂಡನೇ ಇವುಗಳನ್ನು ನಡೆಸುತ್ತಿರಬಹುದು ಎಂದು ಊಹೆಮಾಡಿ ಒಂದೊಂದು ಛತ್ರವನ್ನು ಹೊಕ್ಕು ನೋಡಬೇಕೆಂದು ಒಂದನೆಯ ಛತ್ರವನ್ನು ಸೇರಿದಳು. ಅಲ್ಲಿ ಅಡಿಗೆ ಕೆಲಸಕ್ಕೆ ಸೇರಿಕೊಂಡು ಹದಿನೈದು ಇಪ್ಪತ್ತು ದಿನ ಗಂಡನ ದಾರಿ ಕಾದಳು. ಆದರೂ ಗಂಡ ಬಾರದೆ ಹೋದುದರಿಂದ ಇನ್ನೊಂದು ಊರಿನ ಛತ್ರಕ್ಕೆ ಹೋಗಿ ಅದೇ ರೀತಿ ಕೆಲಸಕ್ಕೆ ಸೇರಿದಳು. ಅಲ್ಲಿಯೂ ಅನೇಕ ದಿವಸ ಕೆಲಸಮಾಡಿ ಗಂಡನನ್ನು ಕಾಣದೆ ಮತ್ತೊಂದು ಊರಿನ ಛತ್ರಕ್ಕೆ ಹೋದಳು. ಕೊನೆಗೆ ಏಳನೆಯ ಛತ್ರದಲ್ಲಿ ಊಟ ಮಾಡಿಕೊಂಡು ಕೈತೊಳೆಯಲು ಬಂದಾಗ ಗಂಡನ ಗುರ್ತು ಹಿಡಿದಳು.

